ಜನಪ್ರಿಯ ಪುಸ್ತಕ ಮಾಲೆ

ಬಹುರೂಪಾ ವಸುಂಧರಾ

ಗುರುಮೂರ್ತಿ ಪೆಂಡಕೂರು

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಜನಪ್ರಿಯ ಪುಸ್ತಕ ಮಾಲೆ

ಬಹುರೂಪಾ ವಸುಂಧರಾ

ಗುರುಮೂರ್ತಿ ವಿರುಪಣ್ಣ ಪೆಂಡಕೂರು ಅವರು (ಜನನ ೧೯೩೮) ಕರ್ನಾಟಕ ವಿಶ್ವವಿದ್ಯಾಲಯದ ಬಿ.ಎ (ಆನರ್ಸ್) ಮತ್ತು ಬಿ. ಕಾಂ, ಪದವೀಧರರು. 'ಕೆನಡಾದಲ್ಲಿ ಕನ್ನಡಿಗ' ಪತ್ರಸಂಕಲನವನ್ನೂ ಅನುವಾದಗಳನ್ನೂ ಪ್ರಕಟಿಸಿದ್ದಾರೆ. ಸ್ನೇಹಿತರೊಂದಿಗೆ ಕಥಾಸಂಕಲನ, ಕವನ ಸಂಕಲನಗಳನ್ನು ಸಂಪಾದಿಸಿದ್ದಾರೆ. ಹಲವು ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದಾರೆ. ಈಗ ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು. ಭಾರತದಲ್ಲಿ ವಿಸ್ತಾರವಾಗಿ ಪ್ರವಾಸ ಮಾಡಿರುವುದಲ್ಲದೆ ಯೂರೋಪ್. ಅಮೇರಿಕ, ದಕ್ಷಿಣ ಏಷ್ಯಾ, ಜಪಾನ್ ಮೊದಲಾಗಿ ಜಗತ್ತಿನ ಹಲವು ಭಾಗಗಳಿಗೆ ಭೇಟಿ ನೀಡಿದ್ದಾರೆ. ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯ ರಾಮನಗರದಲ್ಲಿ ಶ್ರೀ ವಿರೂಪಾಕ್ಷ ಎಂಟರ್‌ಪ್ರೈಸಸ್ ವ್ಯವಹಾರ ನಡೆಸುತ್ತಿದ್ದಾರೆ.

ಜನಪ್ರಿಯ ಪುಸ್ತಕ ಮಾಲೆ

ಬಹುರೂಪಾ ವಸುಂಧರಾ

ಗುರುಮೂರ್ತಿ ಪೆಂಡಕೂರು

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು ೫೬೦ ೦೧೮

BAHUROOPA VASUNDHARA : a travellogue (giving an account of the author's visit to several countries) by Gurumurthy Pendakur Published by Kannada Pustaka Pradhikara (Kannada Book Authority), Kannada Sahitya Parishat Premises, Pampa Mahakavi Road, Chamarajpet, Bangalore-560 018 1994

Pages 192+X

ಬೆಲೆ : ರೂ. 16/-

ಮುದ್ರಣ : "ನಿರ್ಮಲರ ನೆರವು ಸ್ಯಾಸ"
ಮಹಿಳೆಯರ ಮುದ್ರಣ ತರಬೇತಿ ವಿದ್ಯಾಲಯ
೪೬/೨, ಔದ್ಯೋಗಿಕ ಷೆಡ್ಡುಗಳ ಸಂಕೀರ್ಣ
ಜಯನಗರ ಪೂರ್ವ, ಬೆಂಗಳೂರು - ೬೯

ಮುನ್ನುಡಿ

ಮೊದಲನೆಯ ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವು ಒಂದು ಅತ್ಯಂತ ಉಪಯುಕ್ತವಾದ ಹೆಜ್ಜೆಯನ್ನಿಟ್ಟಿತು. ಒಂದು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಸುಲಭ ಬೆಲೆಗೆ ದೊರೆಯುವಂತೆ ಪ್ರಕಟಿಸಿತು.

ಈ ಘನವಾದ ಕಾರ್ಯವನ್ನು ಕರ್ನಾಟಕ ಸರ್ಕಾರವು 'ಜನಪ್ರಿಯ ಪುಸ್ತಕ ಮಾಲೆ'ಯ ಮೂಲಕ ಮುಂದುವರೆಸಿತು. "ಕನ್ನಡ ಓದುಗರಲ್ಲಿ ಉತ್ತಮ ವಾಚನಾಭಿರುಚಿಯನ್ನು ಮೂಡಿಸುವ ಹಾಗೂ ಕನ್ನಡ ಪುಸ್ತಕಗಳನ್ನು ಎಲ್ಲರಿಗೂ ಸುಲಭ ಬೆಲೆಯಲ್ಲಿ ಲಭ್ಯವಾಗುವಂತೆ ಮಾಡುವ ದೃಷ್ಟಿಯಿಂದ ೧೯೬೯-೭೦ರ ಸಾಲಿನಿಂದ 'ಜನಪ್ರಿಯ ಪುಸ್ತಕ ಮಾಲೆ'ಯ ಯೋಜನೆಯನ್ನು ಕಾರ್ಯಗತ ಮಾಡಿತು. ೧೯೭೩-೭೪ರ ವರ್ಷದ ಹೊತ್ತಿಗೆ ಈ ಮಾಲೆಯಲ್ಲಿ ೭೮ ಪುಸ್ತಕಗಳು ಪ್ರಕಟವಾದವು.

ಕನ್ನಡ ಪುಸ್ತಕ ಪ್ರಾಧಿಕಾರವು 'ಜನಪ್ರಿಯ ಪುಸ್ತಕ ಮಾಲೆ' ಯ ಮೂಲ ಉದ್ದೇಶವನ್ನು ಕಣ್ಣ ಮುಂದಿರಿಸಿಕೊಂಡು ಮುಂದುವರೆಯುತ್ತಿದೆ. ಜನಪ್ರಿಯತೆಯನ್ನು ಗಳಿಸಿದ ಮೌಲಿಕವಾದ ಕೃತಿಗಳು ಹಲವು ಇಂದು ಓದಬಯಸುವವರಿಗೆ ಲಭ್ಯವಿಲ್ಲ. ಇಂತಹ ಕೃತಿಗಳನ್ನು ಆರಿಸಿ, ಒಂದು ಆವೃತ್ತಿಯ ಪ್ರಕಟಣೆಯ ಹಕ್ಕನ್ನು ಪಡೆಯಲು ಸಾಧ್ಯವಾದ ಸಂದರ್ಭದಲ್ಲಿ ಅವನ್ನು ಆದಷ್ಟು ಸುಲಭ ಬೆಲೆಗೆ ಓದುಗರಿಗೆ ಲಭ್ಯಮಾಡಿಕೊಡಲು ಕನ್ನಡ ಪುಸ್ತಕ ಪ್ರಾಧಿಕಾರವು ಉದ್ದೇಶಿಸಿದೆ.

ಈ ಮಾಲೆಯಲ್ಲಿ ಪುಸ್ತಕಗಳು ಅರಳಲು ನೆರವಾದವರು, ನಾವು ಆರಿಸಿದ ಪುಸ್ತಕಗಳ ಕೃತಿಸ್ವಾಮ್ಯವನ್ನು ಪಡೆದಿದ್ದು ಅದನ್ನು ಈ ಮಾಲೆಯಲ್ಲಿ ಸೇರಿಸಲು ಅನುಮತಿ ನೀಡಿದ ಮಿತ್ರರು. ಈ ಪುಸ್ತಕವನ್ನು ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸಲು ಒಪ್ಪಿಗೆಯನ್ನು ನೀಡಿದ ಶ್ರೀ ಗುರುಮೂರ್ತಿ ಪೆಂಡಕೂರು ಅವರಿಗೆ ನಾವು ಕೃತಜ್ಞರು. ಪುಸ್ತಕವನ್ನು ಅಂದವಾಗಿ ಸಕಾಲಕ್ಕೆ ಮುದ್ರಿಸಿಕೊಟ್ಟ ಮಹಿಳೆಯರ ಮುದ್ರಣ ತರಬೇತಿ ವಿದ್ಯಾಲಯ, ಅವರಿಗೂ ನಮ್ಮ ವಂದನೆಗಳು. ಈ ಮಾಲೆಯ ನಿರ್ವಹಣೆಯಲ್ಲಿ ನೆರವಾದ ಕನ್ನಡ

ಪುಸ್ತಕ ಪ್ರಾಧಿಕಾರದ ಸದಸ್ಯರಿಗೂ ಜನಪ್ರಿಯ ಪುಸ್ತಕ ಮಾಲೆಯ ಉಪ ಸಮಿತಿಯ ಸದಸ್ಯರಿಗೂ ನಾನು ಕೃತಜ್ಞ.

ಸಹೃದಯ ಕನ್ನಡಿಗರು ಈ ಪುಸ್ತಕವನ್ನು ಸ್ವಾಗತಿಸುವರೆಂಬ ವಿಶ್ವಾಸ ನಮಗಿದೆ.

ಎಲ್. ಎಸ್ ಶೇಷಗಿರಿ ರಾವ್
ಕನ್ನಡ ಪುಸ್ತಕ ಪ್ರಾಧಿಕಾರ
ಅಧ್ಯಕ್ಷರು

ಬೆಂಗಳೂರು.
೧೯-೯-೧೯೯೪

ಲೇಖಕನ ಮಾತು

ನಾನು ೧೯೬೯ರಲ್ಲಿ ಮಾಡಿದ ವಿಶ್ವಪರ್ಯಟನೆಯ ಕಥೆಯು ನಾಲ್ಕು ವರುಷಗಳನಂತರವಾದರೂ ಪ್ರಕಟವಾಗುತ್ತಿರುವುದು ಸಂತೋಷವೆನಿಸಿದೆ.

ಈ ಪ್ರವಾಸವನ್ನು ಏರ್ಪಡಿಸಿದ ನನ್ನ ಅಣ್ಣನಿಗೂ, ಈ ಪುಸ್ತಕಕ್ಕೆ ಮುನ್ನುಡಿಯ ಹೊನ್ನಕಳಶವಿಟ್ಟ ಪೂಜ್ಯ ಶ್ರೀ ಹೊ. ವೆ. ಶೇಷಾದ್ರಿ ಅವರಿಗೂ, ಅಂದವಾಗಿ ಮುದ್ರಿಸಿಕೊಟ್ಟ ರಾಷ್ಟ್ರೋತ್ಥಾನ ಮುದ್ರಣಾಲಯದವರಿಗೂ, ಪ್ರಕಟಣೆಯ ಹೊರೆ ಹೊತ್ತ ರಾಮನಗರದ ಯುವಕರ ಸಂಘ (ರಿ) ಅವರಿಗೂ, ನನ್ನ ಬೆಂಬಿಡದೆ ಈ ಕಥನವನ್ನು ಬರೆಸಿದ ಗೆಳೆಯರಾದ ಶ್ರೀ ಕೆ. ವಿರೂಪಾಕ್ಷ ಗೌಡರಿಗೂ ನಾನು ಚಿರಋಣಿ.

ಕನ್ನಡ ಓದುಗರು ಈ ಕೃತಿಯನ್ನು ಔದಾರ್ಯದಿಂದ ಸ್ವಾಗತಿಸುವರೆಂದು ಆಶಿಸುವೆ.

ಶ್ರೀನಿವಾಸ'
ರಾಮನಗರ
3-3-73

ತಮ್ಮ
ಗುರುಮೂರ್ತಿ ವಿ. ಪೆಂಡಕೂರು

ಮೊದಲ್ನುಡಿ

ಹೋದ ವರ್ಷ ಗೆಳೆಯ ಶ್ರೀ ಗುರುಮೂರ್ತಿ ಪೆಂಡಕೂರರು ಟಂಕಪ್ರತಿ ಯೊಂದನ್ನು ನನ್ನ ಕೈಲಿಟ್ಟರು. ಓದಿ ಮರಳಿ ಅವರಿಗೆ ಕೊಡುವಾಗ 'ನಿಮ್ಮ ಅಭಿಪ್ರಾಯ ಏನು ?' ಎಂದರು ಸಹಜವಾಗಿ. ನಾನು 'ಏಕೆ ಅಚ್ಚುಹಾಕಿಸ ಬಾರದು ?' ಎಂದೆ. ಅನಂತರ ಈಚೆಗೆ ಮತ್ತೆ ಸಂಧಿಸಿದಾಗ 'ಅಚ್ಚಿಗೆ ಹೋಗಿದೆ, ಮೊದಲ್ನುಡಿ ನಿಮ್ಮದೇ ಇರಬೇಕು' ಎಂದರು! ನಾನು ಹಳ್ಳಕ್ಕೆ ಬಿದ್ದುದು ಆಗ ನನಗೆ ಗೋಚರಕ್ಕೆ ಬಂದಿತು !

ವಿಶ್ವಸಂಚಾರಿಯ ಕತೆಯ ಕುರಿತು ದೇಶಸಂಚಾರದ ಅನುಭವವೂ ಇಲ್ಲದಂತಹ ನನ್ನಿಂದ ಮೊದಲ್ನುಡಿ ಕೇಳಿದ್ದು ನೋಡಿ ನಾನು ಅವಾಕ್ಕಾದೆ. ಬಹುಶಃ ಅದೇ ಕಾರಣಕ್ಕೇ, ಇಂತಹ ಒಬ್ಬ ವ್ಯಕ್ತಿಯ ಪ್ರತಿಕ್ರಿಯೆ ಏನೆಂಬುದೂ ಈ ಪುಸ್ತಕದಲ್ಲಿ ಬೆಳಕು ಕಾಣಲಿ ಎನ್ನುವ ಕಾರಣಕ್ಕೇ ಇದ್ದರೂ ಇರಬಹುದು ಎಂದು ನಾನೆಣಿಸಿದೆ. ಅಲ್ಲದೆ, ಮನುಷ್ಯನ ಮೊದಲ್ನುಡಿ ಯಾವಾಗಲೂ ತೊದಲ್ನುಡಿಯಾಗಿಯೇ ಇರುತ್ತದೆ, ಎನ್ನುವ ವಾಸ್ತವಾಂಶವೂ ನನಗೆ ಧೈರ್ಯ ಕೊಟ್ಟಿತು !

ಇಲ್ಲಿ ಶ್ರೀ ಪೆಂಡಕೂರರು ನಮ್ಮನ್ನು ಅಕ್ಷರಶಃ ಪ್ರಪಂಚದ ಪ್ರದಕ್ಷಿಣೆಗೆ ಕರೆದೊಯ್ಯುತ್ತಾರೆ. ಪರ್ಷಿಯ, ಅರಬ ದೇಶಗಳಿಂದ ಪ್ರಾರಂಭಿಸಿ ಯುರೋಪಿನ ಹಲವಾರು ದೇಶಗಳಲ್ಲಿ ಸುತ್ತಾಡಿಸಿ, ಇಂಗ್ಲೆಂಡಿನಿಂದ ಅಮೇರಿಕೆಗೆ ಸಾಗರದ ಮೇಲೆ ಹಾರಿಸಿ, ಕೆನಡಾದಿಂದ ಮತ್ತೆ ಸಾಗರೋಲ್ಲಂಘನ ಮಾಡಿಸಿ ಜಪಾನಿನಲ್ಲಿ ನಮ್ಮನ್ನು ಇಳಿಸುತ್ತಾರೆ. ಅಲ್ಲಿಂದ ಕಂಭೋಜ, ಸಯಾಮ ಥೈಲೆಂಡ್‌ಗಳಂತಹ ಆಗ್ನೇಯ ಏಷಿಯಾ ದೇಶಗಳನ್ನು ತೋರಿಸಿ ಸ್ವದೇಶಕ್ಕೆ ಮರಳಿ ಕರೆತರುತ್ತಾರೆ. ಅಂದರೆ ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಒಂದು ಭೂ ಸುತ್ತು ಪ್ರದಕ್ಷಿಣೆ.

ದಾರಿಯುದ್ದಕ್ಕೂ ಭೂದೇವಿಯ ಅನಂತ ಭಾವ ಭಂಗಿಗಳನ್ನು ಅವರು ತೋರಿಸುತ್ತಾರೆ. ಆಯಾ ಭೂಮಿಯೊಂದಿಗೆ ಬೆರೆತ ಅಲ್ಲಲ್ಲಿನ ಜನರ ನಿನ್ನಿನ ಇಂದಿನ ಬದುಕಿನ ಹತ್ತು ಹಲವು ಮುಖಗಳ ಮೇಲೆ ಬೆಳಕು ಚೆಲ್ಲುತ್ತಾರೆ. ಆ ಜನರೊಂದಿಗೆ ನಾವೂ ಒಮ್ಮೊಮ್ಮೆ ಎದೆಯುಬ್ಬಿಸುವಂತೆ ಅನಿಸುತ್ತದೆ. ಕಣ್ಣೀರು ಮಿಡಿಯುವಂತೆಯೂ ಅನಿಸುತ್ತದೆ. ಯಾವ ಪೂರ್ವಗ್ರಹವೂ ಇಲ್ಲದ ಲೇಖಕರ ಸಹಾನುಭೂತಿಯ ಹೃದಯದ ಸ್ಪಂದನವನ್ನು ಕಥನದ ಉದ್ದಕ್ಕೂ ನಾವು ಆಲಿಸುತ್ತೇವೆ. ಅಲ್ಲಲ್ಲಿ ಹಾಸ್ಯದ ನವಿರೂ ಬೆರೆತಿದೆ. (ಅದು ಇನ್ನೂ ಸ್ವಲ್ಪ ಇರಬಹುದಾಗಿತ್ತೇನೋ.) ಹೊರಗಣ್ಣು ಒಳಗಣ್ಣು ಎರಡರಿಂದಲೂ ಕಂಡ ಪ್ರಪಂಚದ ನೋಟ ಇಲ್ಲಿದೆ. ಆದರಿಂದ ವಸುಂಧರೆಯ ಬಹುರೂಪ ಜೀವತಾಳಿ ಕಣ್ಮುಂದೆ ನಿಲ್ಲುತ್ತದೆ.

ಆದರೆ ಇಷ್ಟೆಲ್ಲ ಹೊರಜಗತ್ತಲ್ಲಿ ಸಂಚರಿಸುವಾಗಲೂ ತಾವು ಹೊರಟ ನೆಲವನ್ನು ಮಾತ್ರ ಮರೆಯದ ಲೇಖಕರ ಉಜ್ವಲ ಮನೋಧರ್ಮ ಉದ್ದಕ್ಕೂ ಮಿಂಚುತ್ತದೆ. ಭಾರತದ ಮಣ್ಣಿನ ವಾಸನೆ ಜೊತೆಜೊತೆಗೇ ಬರುತ್ತದೆ.

ಇವೆಲ್ಲಕ್ಕೂ ಜೀವಕಳೆ ತುಂಬಿದೆ ಶೈಲಿಯ ಸಹಜತೆ.

ತೀರ್ಥಯಾತ್ರೆ ಮಾಡಿಬಂದ ನಂತರ ಬಂಧುಮಿತ್ರರನ್ನು ಕರೆದು 'ಗಂಗಾಸಮಾರಾಧನೆ' ಮಾಡಿಸುವುದು ನಮ್ಮ ಸಂಪ್ರದಾಯ. ಶ್ರೀ ಪೆಂಡ ಕೂರರು 'ಸಾಹಿತ್ಯ ಸಮಾರಾಧನೆ' ಮಾಡಿಸಿ ಆ ಪರಂಪರೆಗೆ ಹೊಸ ಮೆರಗು ನೀಡಿದ್ದಾರೆ. ಅವರ ಈ 'ಸಮಾರಾಧನೆ' ಅಖಂಡವಾಗಿ ಮುಂದು ವರೆಯಲಿ, 'ಲಿಖೇಚ ಶರದಶ್ಶತಂ' ಎನ್ನುವಂತೆ ಸಾರ್ಥಕ್ಯ ಕಾಣಲಿ ಎಂಬುದೇ ನನ್ನ ಮನಃಪೂರ್ವಕ ಹಾರೈಕೆ, ಪ್ರಭುಚರಣದಲ್ಲಿ ಪ್ರಾರ್ಥನೆ.

ಹೊ. ವೆ. ಶೇಷಾದ್ರಿ

'ಕೇಶವಕೃಪಾ'
ಬೆಂಗಳೂರು
ಮಾಘ ಬಹುಳ ಪಂಚಮೀ
ಪರೀಧಾವಿ ಸಂವತ್ಸರ

೧ ಆರಂಭ . . .

ಎಂದಿನಂತೆ ಅದೂ ಒಂದು ಬೆಳಗು. ಸೂರ್ಯಪಥವನ್ನನುಸರಿಸಿ ಉದ್ಯೋಗದ ಪರಿಭ್ರಮಣದಲ್ಲಿ ಸಿಲುಕಿ ನನ್ನಲ್ಲಿ ನಾನು ಲೀನವಾಗಿದ್ದೆ. ಬೆಳಗಿನ ಟಪಾಲು ನನಗಾಗಿ ಕಾದಿತ್ತು. ನಾಲ್ಕಾರು ಕಾಗದಗಳಲ್ಲಿ ಕೆನಡಾದಿಂದ ಬಂದ ಅಣ್ಣನ ಲಕೋಟೆ ನನ್ನ ಲಕ್ಷ್ಯವನ್ನು ಸೆಳೆಯಿತು. ಆತುರದಿಂದ ಹರಿದೆ......... ಮತ್ತೆ ಮತ್ತೆ ಓದಿದೆ.

ಈ ಕಾಗದದ ಒಡಲಲ್ಲಿ ಅಡಗಿತ್ತು ನನ್ನ ವಿಶ್ವಪ್ರವಾಸದ ಹಂಚಿಕೆ. 1955 ರಿಂದ ಕೆನಡಾದಲ್ಲೇ ವಾಸಿಸುತ್ತಾ ಬ್ರಿಟಿಷ್ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿರುವ ನನ್ನ ಅಣ್ಣ ತನ್ನ ಪರಿಶ್ರಮದಿಂದ ನನ್ನನ್ನು ಪ್ರಪಂಚ ಪರ್ಯಟನೆಗೆ ತೊಡಗಿಸಲು ಹವಣಿಸಿದ್ದ. ಇಂತಹ ಅನೇಕ ಸೂಚನೆಗಳನ್ನು ಈ ಮೊದಲು ಅನೇಕ ಬಾರಿ ಆತನಿಗೇಕೆ ಹೊರೆಯಾಗಬೇಕೆಂಬ ಭಾವನೆಯಿಂದ ಆ ಈ ಕಾರಣ ಮುಂದೆ ಮಾಡಿ ಹಿಂದೆ ಸರಿಸಿದ್ದೆ. ಆದರೆ ಈ ಬಾರಿ ಆತನ ಬರವಣಿಗೆ ಬಿಗುವಾಗಿತ್ತು. "ನಿನ್ನಿಂದ ನನಗೆ ನಕಾರಾತ್ಮಕ ಉತ್ತರ ಬೇಕಾಗಿಲ್ಲ. ನೀನು ಕೂಡಲೇ ಪಾಸ್‌ಪೋರ್ಟಿಗೆ ಅರ್ಜಿ ಹಾಕು. ಪ್ರಯಾಣದ ಸಕಲ ಏರ್ಪಾಟನ್ನೂ ನಾನು ಅನಂತರ ಮಾಡುತ್ತೇನೆ" ಎಂದು ಆಜ್ಞಾಪಿಸಿದ್ದ.

ಆತನ ಮಾತಿಗೆ 'ಸರಿ' ಎಂದೊಡನೆ ಪ್ರಾರಂಭವಾಯಿತು ಕೆಲಸ. ಎಲ್ಲ ಮುಗಿದು ಪ್ರಯಾಣಕ್ಕೆ ಸಿದ್ಧವಾಗುವ ಹೊತ್ತಿಗೆ ಆರು ತಿಂಗಳೇ ಆಯಿತು. ಆದರೆ ಹೊರಟು ನಿಂತಾಗ ನನಗೆ ನನ್ನ ಸನ್ನಾಹ ಕನಸೋ ನನಸೋ ತಿಳಿಯದಂತಾಯ್ತು. ಒಮ್ಮೊಮ್ಮೆ ನೆನಸಿಕೆಗಳು ನಿಜವಾಗುತ್ತವೆ.

ಕನ್ನಡದ ಅನೇಕ ಮಹನೀಯರ ಸಾಗರದಾಚೆಯ ಪಯಣಗಳ ಕಥನಗಳನ್ನು ಓದಿದಾಗಲೆಲ್ಲ ನನ್ನಲ್ಲಿ ಆ ನಾಡುಗಳಲ್ಲಿ ಸಂಚರಿಸಬೇಕೆಂಬ ಹಂಬಲದ ಕಾರಂಜಿ ಪುಟಿದದ್ದುಂಟು. ಆದರೆ ವಾಸ್ತವತೆಯ ಅರಿವಾದಾಗಲೆಲ್ಲ ಈಡೇರದ ಆಶೆಯೆಂದು ತಿಳಿದು ನಿರ್ಲಿಪ್ತನಾದದ್ದೂ ಉಂಟು. ಮುಖ್ಯವಾಗಿ ನನ್ನ ಪ್ರವಾಸದ ಉದ್ದೇಶವಾಗಿ ನಾನೆಣಿಸಿದ್ದು – ಮಾನವತೆಯ ಸಾಧನೆಯನ್ನು ಅರಿಯುವುದು ಮತ್ತು ಬಹುರೂಪಿ ವಸುಂಧರೆಯನ್ನು ಅರ್ಚಿಸುವುದು. ಭಿನ್ನ ಭಿನ್ನ ಸಂಸ್ಕೃತಿಗಳ, ಇತಿಹಾಸಗಳ ನಾಡುಗಳಲ್ಲಿ ಸಂಚರಿಸಿದಾಗ ನಮ್ಮ ನಾಡಿನ ಕುರಿತು ನಾವು ತಿಳಿಯುತ್ತೇವೆ. ಪ್ರಪಂಚದ ಸುಂದರ ತಾಣಗಳಲ್ಲಿ ಸಂಚರಿಸಿದಾಗ ಜೀವನ ಆನಂದಮಯವೆನಿಸುತ್ತದೆ. ಇಂತಹ ಸಂಚಾರದಲ್ಲಿ ಉಂಟಾಗುವ ಭಾವಸ್ಪಂದನಗಳನ್ನು ಬರೆದಿಟ್ಟು ಸಹೃದಯರಿಗೆ ನೀಡುವುದು ಇನ್ನೊಂದು ಹಂಬಲ.

ಈ ಉದ್ದೇಶದಿಂದ ನನ್ನ ಪ್ರಯಾಣದ ಹಂಚಿಕೆಯನ್ನು ಮಾಡಿದಾಗ ಕೆಲ ಸಂಸ್ಕೃತಿಕೇಂದ್ರಗಳನ್ನು ಮಧ್ಯಬಿಂದುವಾಗಿ ಮಾಡಿಕೊಂಡು ನನ್ನ ಪ್ರಯಾಣದ ಹಂದರವನ್ನು ನಿರ್ಮಿಸಿದೆ. ಐಗುಪ್ತ, ಪರ್ಶಿಯಾ, ಯೂರೋಪ್, ಅಮೇರಿಕಾ, ಜಪಾನ್, ಕಾಂಬೋಡಿಯಾ, ಮುಂತಾದೆಡೆಯ ಕೇಂದ್ರಗಳನ್ನು ಸಂದರ್ಶಿಸಿ ನಾನು ಕಂಡಂತೆ, ನನಗನಿಸಿದಂತೆ ಬರೆಯಬೇಕೆಂದು ನಿಯೋಜಿಸಿಕೊಂಡೆ.

ನನ್ನ ವಾಸ್ತವ್ಯದ ಕ್ಲುಪ್ತತೆಯಿಂದಲೂ, ಬದುಕಿನಲ್ಲಿರುವ ಸಂಕರತೆ, ಅಗಾಧತೆಗಳಿಂದಲೂ ನಾನು ಆಯಾ ಜನಾಂಗಗಳ ಜೀವನದ ಯಾವುದೇ ಮಹತ್ತರ ಸ್ತರಗಳ ಅಳತೆಯನ್ನು ಮಾಡಲು ಹವಣಿಸಿಲ್ಲ. ಆದರೆ ಅವರ ಮಧ್ಯದಲ್ಲಿ ಭಾರತೀಯನಾಗಿ ನಿಂತು ನೋಡಿ ಅವರಲ್ಲಿ ಎದ್ದುಕಾಣುವ ವಿಶೇಷಗಳನ್ನು, ವಸ್ತುವಿಶೇಷಗಳನ್ನು ಬರೆಯಲು ಪ್ರಯತ್ನಿಸಿದ್ದೇನೆ. ಇದು ಇಂದಿನ

ಮಾನುಕುಲದ ಬಗೆಗೆ ಕೆಲವರ ಅಂತರಂಗವನ್ನಾದರೂ ತಲುಪೀತೆಂದು ಭಾವಿಸುವೆ. ದೇಶ ತಿರುಗುವುದರಿಂದ ಮನಸ್ಸು ಹಣ್ಣಾಗುತ್ತದೆಂಬ ಕನ್ನಡ ಗಾದೆಮಾತು ಸತ್ಯಸ್ಯ ಸತ್ಯವಾದುದು. ಭಾರತೀಯರು ಹೆಚ್ಚು ಹೆಚ್ಚು ಪರ್ಯಟನೆ ಮಾಡಬೇಕು. ಅಂತಹ ಪರ್ಯಟನೆಯು ಭಾರತೀಯತೆಯನ್ನೂ ಸ್ವಾಭಿಮಾನವನ್ನೂ ಉದ್ದೀಪನಗೊಳಿಸುತ್ತದೆ. ಇದರಿಂದ ನಾಡಿಗೆ ಭದ್ರಂ ಶುಭಂ ಆದೀತು.

ಅಂತರಂಗದ ಪರಿಧಿಯಲ್ಲಿ ...

ಮೂರು ತಿಂಗಳವರೆಗೆ ಬದುಕಿನ ಜಂಜಾಟವನ್ನು ಬಿಟ್ಟು ಪರ್ಯಟನೆಗೆ ಹೊರಟಾಗ ನಾನು ಅನೇಕರ ಅಂತಃಕರಣದ ಮಗುವಾದೆ. ಮೊದಲನೆಯದಾಗಿ ನನ್ನನ್ನು ಸಂತೋಷದಿಂದ ಹರಸಿ ಕಳಿಸಿಕೊಟ್ಟ ನನ್ನ ತಂದೆ ತಾಯಿಯರು, ಅನಂತರ ನನಗೆ ಆಸರೆಯಾಗಿ ನಿಂತ ಸೋದರರು. ಕೊನೆಗೆ ಮುಗುಳ್ನಗೆಯಿಂದ ಕಳಿಸಿಕೊಟ್ಟ ಸಹಧರ್ಮಿಣಿ ಮತ್ತು ಮಕ್ಕಳು.

ಇವರೆಲ್ಲರನ್ನು ಬಿಟ್ಟು ಕೈ ಬೀಸಿ 'ಟಾಟಾ' ಮಾಡಿ ಮುನ್ನಡೆದಾಗ ಸಾಂತ್ವನಕ್ಕೆ ಜೊತೆಯಾಗಿ ಬಂದದ್ದು ಸೋದರ ಮಂಜುನಾಥ. ಮಂಜುನಾಥ ತನ್ನ ಮುಂದಿನ ಶಿಕ್ಷಣಕ್ಕಾಗಿ ಕೆನಡಾಕ್ಕೆ ನಡೆದಿದ್ದನು.

ಕೊನೆಗೊಮ್ಮೆ ನಮ್ಮ ಚಿಕ್ಕ 'ಫಿಯಟ್'ನಲ್ಲಿ ಹಗರಿಬೊಮ್ಮನಹಳ್ಳಿ-ರಾಮನಗರದಿಂದ ನಾನು, ಮಂಜುನಾಥ, ಆನಂದ, ವಿಠೋಬ (ಮತ್ತಿಬ್ಬರು ಸೋದರರು) ಬೆಂಗಳೂರಿಗೆ ಹೊರಟೆವು. ಸಾಯಂಕಾಲ ಬೆಂಗಳೂರು ಸೇರಿ ನಮ್ಮ ಪ್ರವಾಸದ ಏಜೆಂಟ್ ಥಾಮಸ್ ಕುಕ್ ಅವರಲ್ಲಿ ಹೋಗಿ ನಮ್ಮ ಪಾಸ್‌ಪೋರ್ಟ್, ವೀಸಾ, ದಾರಿಯ ವೆಚ್ಚದ ಹಣ ವಗೈರೆ ತೆಗೆದುಕೊಂಡ ಮೇಲೆ ನಮ್ಮ ಸನ್ನಾಹ ಮುಗಿಯಿತು.

ಮಾರನೆಯ ಮುಂಜಾನೆ ಗೆಳೆಯ ಶ್ರೀ ಆದೆಣ್ಣನವರಲ್ಲಿ ಹೋಳಿಗೆ ಊಟ ಮಾಡಿ ಪ್ರಾಚಾರ್ಯ ವಿ.ಕೃ. ಗೋಕಾಕರ ಹರಕೆ ಪಡೆದು ವಿಮಾನ ನಿಲ್ದಾಣ ಸೇರುವ ಹೊತ್ತಿಗೆ ವಿಮಾನ ಕಾದಿತ್ತು. ಗೆಳೆಯರಾದ ಆದೆಣ್ಣ, ಸರ್ವಜ್ಞ, ರಾಜಶೇಖರ, ಗಿಡ್ಡಯ್ಯ, ಪ್ರಭಾತ್ ಮುಂತಾದವರೂ ಅಲ್ಲಿ ಬಂದು ಸೇರಿದ್ದರು. ಎಲ್ಲರ ಹರಕೆಯನ್ನು ರಕ್ಷೆಯಾಗಿ ಹೊತ್ತು ವಿಮಾನವೇರಿದಾಗ ಹೃದಯ

ಹನಿಗೂಡಿತು. ಆನಂದ ಕಣ್ಣೀರು ಸುರಿಸುತ್ತಿದ್ದೆ. ಬಿಡುಗಡೆಯಿಲ್ಲದ ವಿರಹ.

ಕರ್ಣಾಟಕದ ಆಕಾಶದಲ್ಲಿ ವಿಮಾನ ಪುಷ್ಪಕದಂತೆ ತೇಲುತ್ತಿರುವಾಗ ನನ್ನ ಮನಸ್ಸು ಲೋಲಕದಂತೆ ಹಿಂದೊಮ್ಮೆ ಮುಂದೊಮ್ಮೆ ಓಲಾಡಿತು. ಜಿಗಟೇರಿಯ ಹಿರಿಯರಾದ ಮುದೇನೂರ ಸಂಗಣ್ಣನವರ ಔತಣ, ಹಳ್ಳಿಯ ಕಿರಿಗೆಳೆಯರ ತೋಟದ ಊಟ. ಯುವಕರ ಸಂಘದಿಂದ ಪಾನ ಸಮಾರಂಭ. ಹೀಗೆ ಒಂದೊಂದೇ ಒಂದೊಂದೇ ಚಿತ್ತಭಿತ್ತಿಯ ಮೇಲೆ ಸ್ಫುಟವಾಗಿ ಮೂಡಿದವು. ಇದರ ಜೊತೆಜೊತೆಗೆ ಮುಂದೆ ನೋಡಲಿರುವ ನಾಡುಗಳ ಕನಸು ಮಾಲೆ ಮಾಲೆಯಾಗಿ ಮನಸ್ಸಿನಲ್ಲಿ ಮೂಡುತ್ತಿತ್ತು. ಆದರೆ ಆಗಲೇ ಮುಂಬಯಿಯ ಸಾಂತಾಕ್ರೂಜ್ ವಿಮಾನತಾಣ ಬಂದಿತ್ತು.

ವಿಮಾನದಿಂದ ಇಳಿದಕೂಡಲೇ ದೀಪಾಲಿ ಬಂಧುಗಳು ಕಂಡರು. ಅವರೊಡನೆ ಗೋರೆಗಾಂವದ ಅವರ ಮನೆಗೆ ಹೋದೆವು. ಮನಸ್ಸಿಗೆ ತಂಪಾಗುವಂತೆ ತಮ್ಮ ಟೇಪ್ ರಿಕಾರ್ಡರ್‌ನಲ್ಲಿಯ ಕೆಲ ಕನ್ನಡ ಹಾಡುಗಳನ್ನು ಕೇಳಿಸಿದರು; ಉದರಕ್ಕೆ ಶಾಂತಿಯಾಗುವಂತೆ ಮೃಷ್ಟಾನ್ನ ಭೋಜನ ಮಾಡಿಸಿದರು. ದಾರಿಯ ಬುತ್ತಿಗೆಂದು ಚೆನ್ನಾದ ಮಾವಿನಹಣ್ಣು ಮತ್ತು ರುಚಿಗೆಂದು ಅಡಿಕೆಯಪುಡಿ ಕಟ್ಟಿಕೊಟ್ಟರು. ರಾತ್ರಿ ಅವರಿಂದ ಬೀಳ್ಕೊಟ್ಟು ಏರ್ ಇಂಡಿಯಾದವರ ಬೋಯಿಂಗ್ 707 ಹತ್ತಿದಾಗ ಒಂದು ಗಂಟೆಯಾಗಿತ್ತು. ಏರ್ ಇಂಡಿಯಾದವರ ಈ ವಿಮಾನದ ಹೆಸರು – ಗೌರೀ ಶಂಕರ. ಒಳಗಿನ ಅಲಂಕಾರ ವ್ಯವಸ್ಥೆ ಪ್ರತಿಯೊಂದೂ ಭಾರತೀಯವಾಗಿತ್ತು.

ಒಂದು ಮೋಜಿನ ಸಂಗತಿಯೆಂದರೆ ನಾನು ನನ್ನ ತಮ್ಮ ಬೆಂಗಳೂರಿನಿಂದ ಮುಂಬಯಿಗೆ ಪಯಣಿಸಿದ ಮೇಲೆ ಏರ್ ಇಂಡಿಯಾದವರ ಕಡೆ ಹೋಗಿ ನಮ್ಮ ಮುಂದಿನ ಪಯಣದ ವಿಚಾರ – ಸಮಯ ವಗೈರಾ ಕೇಳಿದೆವು. ಅಲ್ಲಿದ್ದ ಮಹಿಳೆ ಆಶ್ಚರ್ಯದಿಂದ ನನ್ನ ಕಡೆ ನೋಡಿ "ಬೆಂಗಳೂರಿನಿಂದ ನಮ್ಮ ಯಾದಿಯ ಪ್ರಕಾರ ಒಬ್ಬರೇ ಪೆಂಡಕೂರ್ ಪಯಣಿಸಿದ್ದಾರೆ. ಅದು ಹೇಗೆ ನೀವು ಇಬ್ಬರೆಂದು ಹೇಳುತ್ತೀರಿ?" ಎಂದಳು. ಆಗ ನಾವು "ಸರಿ, ನಮ್ಮ ಕಡೆ ನೀವಿತ್ತ ಬೋರ್ಡಿಂಗ್ ಪಾಸ್ ಇವೆ. ನಮ್ಮ ಲಗೇಜ್ ಇನ್ನೂ ನಿಮ್ಮ ಕಡೆಯೇ ಇದೆ. ಕೊಂಚ ಪರಿಶೀಲಿಸಿರಿ" ಎಂದೆವು. ಆಕೆ ಒಳಗೆ ಹೋಗಿ

ಪರಿಶೀಲಿಸಿ ತೆಪ್ಪಗಾದಳು. ನಮ್ಮ ಕಾರ್ಯರೀತಿ ನಡೆದರೆ ವಾಲ್‌ಕಾಟ್ ಆಗಲೀ ಧರ್ಮತೇಜಾ ಆಗಲೀ ಇವರ ಕಣ್ಣಿಗೆ ಮಣ್ಣೆರಚಿದ್ದು ಆಶ್ಚರ್ಯ ವೇನಲ್ಲ.

ಎರಡನೆಯದೆಂದರೆ ನಾವಿಬ್ಬರೂ ಸೋದರರಾದ ಕಾರಣ ನಮ್ಮ ಮನೆ ಹೆಸರು ಒಂದೇ. ಟಿಕೆಟ್‌ನಲ್ಲಿ ಸ್ಪಷ್ಟವಾಗಿ ನಮ್ಮ ಹೆಸರು ಬರೆದು ಕೊಟ್ಟಿದ್ದಾರೆ. ಆದರೂ ಇವರ ಯಾದಿಗಳಲ್ಲೆಲ್ಲಾ ನಾವು ಶ್ರೀ ಮತ್ತು ಶ್ರೀಮತಿ ಪೆಂಡಕೂರು ಆಗಿದ್ದೆವು.

ಗೌರೀಶಂಕರದ ಒಳಗೆ ನಮಗೆ ಚಿಕ್ಕ ಉಪಾಹಾರ ನೀಡಿದರು. ಅನಂತರ ಪ್ರತಿಯೊಬ್ಬರಿಗೆ ಉಡುಗೊರೆಯೆಂದು ಚಂದವಾದ ರಟ್ಟಿನ ಮಡಿಕೆಯ ಒಳಗಡೆ ಕೆಲವು ಮಾಹಿತಿಯ ಪುಸ್ತಿಕೆ, ಚಿತ್ರಮಯ ಅಂಚೆಕಾರ್ಡು ನೀಡಿದರು. ಆದರಲ್ಲಿ ನಮ್ಮ ಸಲಹೆ ಸೂಚನೆಗಳಿಗೆಂದು ಚಿಕ್ಕ ಪತ್ರವನ್ನು ಇಟ್ಟಿದ್ದರು. ಸರಿ, ನಾವು ಕೆಲ ಸೂಚನೆಗಳನ್ನು ಬರೆದು ಗಗನ ಸಖಿಯ ಕಡೆ ನೀಡಿದೆವು.

ವಿಮಾನದ ಕ್ಯಾಪ್ಟನ್ "ತೆಹರಾನ್ ಬಂದಿದೆ. ನಾವು ಇನ್ನು ಕೊಂಚ ವೇಳೆಯಲ್ಲೆ 'ಮೆಹರಾಬಾ' ವಿಮಾನತಾಣದಲ್ಲಿ ಇಳಿಯುತ್ತೇವೆ". ಎಂದಾಗ ನಮ್ಮ ಗಡಿಯಾರಗಳು ಬೆಳಗಿನ 4–30 ತೋರಿಸುತ್ತಿದ್ದವು. ಆದರೆ ತೆಹರಾನ್ ವೇಳೆ ಆಗ 2–55 ಆಗಿತ್ತು. ರಾತ್ರಿಯ ರೋಮಾಂಚಕಾರಕ ಜಗತ್ತಿನಲ್ಲಿ ತೆಹರಾನ್ ಕನಸು ಕಾಣುತ್ತಿತ್ತು. ರಂಗು ರಂಗಿನ ದೀಪಾಲಂಕಾರದಿಂದ ಬೀದಿ ಗಳು ಝಗಝಗಿಸುತ್ತಿದ್ದವು. ರಸ್ತೆಯ ಪಕ್ಕದಲ್ಲಿ ಚೀನಾರಿ ಗಿಡಗಳು ಕೈಮಾಡಿ ಸುಸ್ವಾಗತ ನೀಡಿದವು. ನಮ್ಮ ಗಮ್ಯಸ್ಥಾನವಾದ ತೆಹರಾನ್ ಹಿಲ್ಟನ್ ಹೋಟಲ್ ಸೇರಿದಾಗ ಪೂರ್ವ ದಿಕ್ಕಿನಲ್ಲಿ ಬೆಳ್ಳಿ ಮೂಡಿತು.

ತೆಹರಾನ್ ರಾಯಲ್ ಹಿಲ್ಟನ್ ಸೇರಿದೊಡನೆ ನಮಗೆ ಮೊದಲನೆಯ ದಾಗಿ ಒದಗಿದ ಸಂಕಟ ಪಾಯಖಾನೆಯದು. ಹುಟ್ಟಿದಂದಿನಿಂದ ಬಹಿರ್ದೇಶಕೆ ಹೋದಾಗ ನೀರನ್ನು ಮಾತ್ರ ಉಪಯೋಗಿಸಿದ ನಮಗೆ ಇದ್ದಕ್ಕಿದ್ದಂತೆ ಕಾಗದ ಉಪಯೋಗಿಸುವ ಸಂದರ್ಭ ತುಂಬಾ ಮುಜುಗರಕ್ಕೆ ಕಾರಣವಾಯಿತು. ಆದರೆ ಆವಶ್ಯಕತೆಯೇ ಆವಿಷ್ಕಾರಗಳಿಗೆ ಕಾರಣವೆಂಬ ಮಾತಿನಂತೆ—ನಾವು ಕೊಂಚ ಯೋಚಿಸಿದೆವು. ಇಲ್ಲಿಯ ಪಾಯಖಾನೆಗಳಲ್ಲಿ ಹೆಂಗಸರ ಉಪಯೋಗಕ್ಕೆಂದು

ಡ್ಯೂಷ್ ವ್ಯವಸ್ಥೆ ಇರುತ್ತದೆ. ನಾವು ಮುಂಜಾನೆಯ ಕಾರ್ಯ ಕ್ರಮಕ್ಕೆ ಈ ಡ್ಯೂಷ್ ಉಪಯೋಗಿಸಬಾರದೇಕೆ ? ಎಂದು ಕಾರ್ಯಪ್ರವೃತ್ತರಾದೆವು. ಪಾಶ್ಚಾತ್ಯ ರೀತಿಯ ಪಾಯಖಾನೆಯನ್ನು ಮತ್ತು ಈ ಡ್ಯೂಷನ್ನು ಉಪಯೋಗಿಸಿ ನಾವು ನಿಜವಾಗಿ ಮನಶ್ಶಾಂತಿ ಪಡೆದೆವು.

ತೆಹರಾನಿನ ಮೊದಲ ಸುಪ್ರಭಾತದ ಫಲಾರಕ್ಕೆ ಬೇರೆಲ್ಲ ತಿಂಡಿಯ ಜೊತೆಗೆ ನಾವು ಬಾಯಲ್ಡ್ ಎಗ್ ಕೂಡಾ ಕೇಳಿದ್ದೆವು. ನಮ್ಮಲ್ಲಿಯ ಈ ತಿನಿಸು —ಎಂದರೆ ಚೆನ್ನಾಗಿ ಉಗಿಯಲ್ಲಿ ಬೇಯಿಸಿ ಅನಂತರ ಅದರ ಚಿಪ್ಪನ್ನು ತೆಗೆದು ತಿನ್ನಲು ತಯಾರಾಗಿರುತ್ತದೆ. ಆದರೆ ತೆಹರಾನಿನ ಈ ಹೋಟಲ್‌ನವರು ಕೊಟ್ಟದ್ದೇ ಬೇರೆ. ಇಲ್ಲಿ ಇವರು ಮೊಟ್ಟೆಯನ್ನು ಪೂರ್ತಿಯಾಗಿ ಬೇಯಿಸಿಯೂ —ಅದರ ಮೇಲಿನ ಟೊಕಳೆಯನ್ನು ತೆಗೆದೂ ಇಲ್ಲ. ಈ ಟೊಕಳೆಯನ್ನು ತೆಗೆದು ಈ ಅಮೃತ ಆರೋಗಣೆಯನ್ನು ಮುಗಿಸುವ ಹೊತ್ತಿಗೆ ನಮಗೆ ಸಾಕಾಯಿತು. ಅದೇ ಮೊದಲು, ಅದೇ ಕಡೆ. ಅನಂತರ ನಾವು ಬಾಯಲ್ಡ್ ಎಗ್‌ನ್ನು ಎಲ್ಲಿಯೂ ನೆನಸಲಿಲ್ಲ.

೬ ಪರ್ಶಿಯಾದ ಹೊಸ್ತಿಲು-ತೆಹರಾನ್ :

ಭಾರತದಂತೆ ಅನಂತ ಇತಿಹಾಸಭರಿತ ದೇಶ ಇರಾನ್. ಕಲೆ, ಸಂಸ್ಕೃತಿ, ವೀರ, ಸೌಂದರ್ಯದ ತವರೆನಿಸಿ ಏಶಿಯಾ ಮತ್ತು ಯುರೋಪ್ ಖಂಡಗಳನ್ನು ಆಳಿದ ಪರ್ಶಿಯಾದ ಆಧುನಿಕ ರೂಪ ಇರಾನ್. ಮುಸ್ಲಿಮ್ ತತ್ವ ಮತ್ತು ಪ್ರಸಾರದ ಬಿರುಗಾಳಿಗೆ ಸಿಕ್ಕು ಹಳೆಯ ಪಾರ್ಸಿ ಮತ ಇರಾನ್ ಬಿಟ್ಟು ಬೆಚ್ಚನೆಯ ದೂರದ ನಾಡುಗಳಿಗೆ ಓಡಿತು. ಇರಾನ್ ಇಸ್ಲಾಂ ರಾಜ್ಯವೆನಿಸಿತು. ಇರಾನಿನ ರಾಜಧಾನಿ ತೆಹರಾನ್. ಈ ರಾಜ್ಯಕ್ಕೆ ಪ್ರಭು ಪಹೆಲವಿ ವಂಶದ ಷಾ ರೇಜಾ ಪಹಲವಿ ಆರ್ಯಮೆಹರ್. ಇರಾನಿನ ಅರಸರು ಅತ್ಯಂತ ಸೌಂದರ್ಯಾಭಿಲಾಷೆ ಯಿಂದ ನಗರವನ್ನು ಕಟ್ಟಿ ಬೆಳೆಸಿಕೊಂಡು ಬಂದಿದ್ದಾರೆ. ಎಂತಹ ಬಿಸಿಲುಕಾಲ ದಲ್ಲಿಯೂ ಹಿಮ ಹೊತ್ತು ನಿಂತಿರುವ ಪರ್ವತಗಳ ತಪ್ಪಲಿನಲ್ಲಿ ಕಾಲು ಚಾಚಿದೆ ತೆಹರಾನ್. ಬೆಟ್ಟದ ಮೇಲಿನಿಂದ ಕರಗಿ ಕರಗಿ ಹರಿದು ಬರುವ ಜುಳುಜುಳು ನೀರೇ ಊರಿನ ಸಸ್ಯಕ್ಕೆ, ಜೀವಕ್ಕೆ ಆಧಾರ. ಹೆಚ್ಚಿನ ನೀರು ಪ್ರತಿಯೊಂದು ರಸ್ತೆಯ ಇಕ್ಕೆಲಗಳಲ್ಲಿ ಹರಿಯುತ್ತದೆ. ಸ್ವಚ್ಛ ಸ್ಫಟಿಕದಂತೆ ಹರಿವ ನೀರಿನ ದಾರಿಯಲ್ಲಿ ಚೀನಾರಿ ಗಿಡಗಳನ್ನು ನಾಟಿದ್ದಾರೆ. ಪ್ರತಿ ರಸ್ತೆಯ ಎಡಬಲದಲ್ಲಿ ಕಾಲುದಾರಿಯ ಮೇಲೆ ಪಥಿಕನಿಗೆ ನೆರಳಾಗಿ ಚೀನಾರಿ ಗಿಡಗಳು ಬೆಳೆದಿವೆ.

ಇರಾನೀ ಜನರು ತುಂಬಾ ಸುಂದರರು. ನಮ್ಮಲ್ಲಿಯ ಪಠಾಣರಂತೆ ದೃಢ ಕಾಯರು. ನೂರಕ್ಕೆ ೬೦ ರಷ್ಟು ಜನರು ಮುಸ್ಲಿಮರು. ಮಿಕ್ಕವರು ಪಾರ್ಸಿಗಳು, ಕ್ರಿಸ್ತೀಯರು, ಮಾತ್ರಿತರರು. ಇವರ ಪ್ರಮುಖ ಭಾಷೆ ಪರ್ಶಿಯನ್. ಯಾರಿಗೂ ಇಂಗ್ಲಿಷ್ ಅಥವಾ ಬೇರೆ ಯುರೋಪಿಯನ್ ಭಾಷೆಯ ಪರಿಚಯ ವಿಲ್ಲ. ಶಾಲೆಯಿಂದ ವಿಶ್ವವಿದ್ಯಾಲಯದವರೆಗೆ ಅವರ ಶಿಕ್ಷಣ ಪರ್ಶಿಯನ್‌ನಲ್ಲಿಯೇ ನಡೆಯುತ್ತದೆ. ಕೆಲವರಿಗೆ ಉರ್ದು ಮತ್ತು ಅರಾಬಿಕ್ ಬರುತ್ತದೆ. ಜನರು ತುಂಬಾ ಸರಳರೂ ಕಷ್ಟಜೀವಿಗಳೂ ಆಗಿದ್ದಾರೆ.

ರಸ್ತೆಯಲ್ಲಿ ಹೊರೆ ಹೊರೆ ಸಾಮಾನುಗಳನ್ನು ಅನಾಯಾಸವಾಗಿ ಒಬ್ಬನೇ ಹೊತ್ತು ತರುವುದನ್ನು ಕಾಣಬಹುದು. ತೆಹರಾನಿನ ಮಾರ್ಕೆಟ್ ತುಂಬಾ ರಂಗಾದ ಸ್ಥಳ. ಇಲ್ಲಿ ಸಿಗದ ಪರ್ಶಿಯನ್ ವಸ್ತುವೇ ಇಲ್ಲ. ತುಂಬಾ ಚೌಕಾಸಿ ಮಾಡಲೇಬೇಕಾಗುತ್ತದೆ. ಅಲ್ಲೊಬ್ಬ ನಮ್ಮನ್ನು ನೋಡಿ ನಾವು ಪಾಕಿಸ್ತಾನಿಗಳೆಂದು ಭಾವಿಸಿ "ನಾನೂ ಪಾಕಿಸ್ತಾನಿ" ಎಂದು ಹೇಳಿಕೊಂಡ. ಆಗ ನಾವು ಭಾರತೀಯರೆಂದ ಕೂಡಲೇ "ಓಹ್, ನನಗೆ ದಿಲ್ಲಿಯೆಂದರೆ ಪ್ರೀತಿ. ನನ್ನ ಹೆಂಡತಿ ದಿಲ್ಲಿಯಲ್ಲಿದ್ದಾಳೆ" ಎಂದ. "ಸರಿ, ಇವನೊಬ್ಬ ಮಂಕ" ಎಂದುಕೊಂಡೆವು. ಪುರಾತನ ಪರ್ಶಿಯದ ಕಲೆ ಇನ್ನೂ ಈ ಜನರಲ್ಲಿ ಜೀವಂತವಿದೆ. ಅಮೋಘವಾದ ಕಲಾಮಯ ಪರ್ಶಿಯನ್ ಜಮಖಾನೆಗಳು ಈಗಲೂ ತಯಾರಾಗುತ್ತವೆ. ಬೆಳ್ಳಿಯ ಕುಸುರಿನ ಕೆಲಸ, ಚಾಕು, ಕತ್ತಿ ಮುಂತಾದ ಉಪಕರಣಗಳ ತಯಾರಿ, ಕಸೂತಿ ಮತ್ತು ಉಣ್ಣೆಯ ವಸ್ತುಗಳ ತಯಾರಿಯಲ್ಲಿ ಇರಾನೀಯರು ಮುಂದುವರಿದಿದ್ದಾರೆ.

ನಾವು ಇಳಿದುಕೊಂಡಿದ್ದು ರಾಯಲ್ ತೆಹರಾನ್ ಹಿಲ್ಟನ್ ಹೋಟಲ್. ಪ್ರಪಂಚದಲ್ಲಕಡೆ ಹಿಲ್ಟನ್ ಹೋಟಲ್‌ಗಳ ಜಾಲ ಹರಡಿದೆ. ಭಾರತ ಸರಕಾರ ಅನುಮತಿಸಿದರೆ ಭಾರತದೆಲ್ಲ ಕಡೆ ತಮ್ಮ ಜಾಲ ಹರಡಲು ಅವರು ತಯಾರು. ಅಮೇರಿಕೆಯ ಟ್ರಾನ್ಸ್‌ವರ್ಲ್ಡ್ ಏರ್‌ಲೈನ್ಸ್ ಕಂಪನಿಯು ಅಮೇರಿಕೆಯ ಹೊರತು ಉಳಿದ ದೇಶಗಳಲ್ಲಿರುವ ಹಿಲ್ಟನ್ ಹೋಟಲ್‌ಗಳನ್ನು ಒಂದು ಕಾರ್ಪೊರೇಷನ್ ನಡೆಸುತ್ತದೆ. ಈ ಹೋಟಲ್ ಒಂದು ಸಂಚಿತ ಬ್ರಹ್ಮಾಂಡ. ಇಲ್ಲಿ ಸಿಗದ ವಸ್ತುವೇ ಇಲ್ಲ. ಬ್ಯಾಂಕು, ಪೋಸ್ಟ್‌ಆಫೀಸ್, ಫೋಟೋ

ಸ್ಟುಡಿಯೋ. ಟ್ರಾವಲ್ ಏಜೆನ್ಸಿ, ಉಡುಗೊರೆಗಳ ಅಂಗಡಿ, ಕ್ಷೌರಿಕ, ಅಗಸ, ಬಾರ್, ಕಾಫಿ ಅಂಗಡಿ, ಡೈನಿಂಗ್, ಡ್ಯಾನ್ಸಿಂಗ್, ಮ್ಯೂಜಿಕ್ ಹಾಲ್, ಏನೆಲ್ಲಾ ಅಲ್ಲದೆ ಈಜುವ ಕೊಳ, ಹಿತ್ತಲು ಪಕ್ಕದಲ್ಲಿ ಬೆಟ್ಟ, ವ್ಯಾಯಾಮಕ್ಕೆ ಟೆನಿಸ್ ಮತ್ತು ಗೋಲ್ಫ್, ತೋಟ, ಕೊಂಚ ದುಬಾರಿಯೆನಿಸಿದರೂ ಕೂಡಾ ಉತ್ಕೃಷ್ಟ ಸೇವೆ ಮತ್ತು ಅನುಕೂಲ.

ತೆಹರಾನಿನ ಪುರಾತನ ಅರಮನೆ ಗುಲಿಸ್ತಾನ್. ಅನೇಕ ರಾಜವಂಶಗಳು ಈ ಅರಮನೆಯನ್ನು ಕಟ್ಟಿ, ಅಲಂಕರಿಸಿ ಬೆಳೆಸಿವೆ. ಆದರೆ ಪಹಲವಿ ವಂಶದ ಅರಸರು ಇಲ್ಲಿ ವಾಸಿಸುವುದಿಲ್ಲ. ಅವರ ಈಗಿನ ಅರಮನೆ ಆಧುನಿಕವಾಗಿ ವಿಸ್ತರಣದಲ್ಲಿದೆ. ಗುಲಿಸ್ತಾನ್ ಅರಮನೆಯ ಒಳಗಡೆ ಮಾಡಿರುವ ಕನ್ನಡಿ ಕೆಲಸ ಅದ್ಭುತವಾಗಿದೆ. ಅದನ್ನು ನೋಡುತ್ತಿರುವಾಗ ಕಲ್ಕತ್ತೆಯ ಗ್ಲಾಸ್ ಮಂದಿರದ (ಜೈನ ಮಂದಿರ) ನೆನಪಾಗುತ್ತದೆ. ಇಲ್ಲಿಯ ದರ್ಬಾರ್ ಹಾಲ್ ಮತ್ತು ಇತರ ಖಾಸಗಿ ದಿವಾಣಖಾನೆಗಳು ಮನೋಜ್ಞವಾಗಿವೆ. ನೂರಾರು ವರುಷಗಳ ಹಿಂದಿನ ಪರ್ಶಿಯನ್ ಜಮಖಾನೆಗಳೂ, ಅನೇಕ ರಾಜ ಮಹಾ ರಾಜರುಗಳು ನೀಡಿದ ಉಡುಗೊರೆಗಳೂ ಅಸಂಖ್ಯಾತವಾಗಿವೆ. ಅರಮನೆಯ ಕಮಾನುಗಳು ಇರಾನಿ ಮಾದರಿಯ 'ಜೇನುಗೂಡಿನ' ಕಮಾನುಗಳು. ಅಪ್ಪಟ ಜೇನುಗೂಡಿನಂತೆ ಕಾಣುವುದಲ್ಲದೆ ಜೇನು ತೊಟ್ಟಿಕ್ಕುತ್ತದೆಯೇನೋ ಎಂಬಂತೆ ಕಾಣುವ ಈ ಕಮಾನುಗಳ ಕೆಲಸ ಮನೋಜ್ಞವಾದುದು. ಒಂದೊಂದು ಕಮಾನೂ ನೂರಾರು ತುಂಡುಗಳಿಂದ ಕೂಡಿದೆ. ಕಮಾನಿನ ಮುಚ್ಚಣಿಕೆ ಯಿಂದ ಇಳಿಬಿಟ್ಟ ಸರಪಳಿಗಳಿಗೆ ಒಂದೊಂದು ತುಂಡನ್ನು ಕೂಡಿಸಿರುತ್ತಾರೆ. ಅಕಸ್ಮಾತ್ ಜೋಡಿಕೆ ಉಚ್ಚಿದರೂ ಕೂಡ ಈ ಜೇನುಗೂಡು ಕೆಳಗೆ ಬೀಳುವುದಿಲ್ಲ. ಸರಪಳಿಯ ಆಧಾರದ ಮೇಲೆ ನಿಂತಿರುತ್ತದೆ. ಅರಮನೆಯಲ್ಲಿ ಅನೇಕ ಸುಂದರ ವರ್ಣಚಿತ್ರಗಳಿವೆ. ಗೋಡೆಗಳ ಮೇಲೆ ಮಾಡಿರುವ ಸೆರಾಮಿಕ್ ಕೆಲಸ ಮತ್ತು ಇನ್‌ಲೇ ಕೆಲಸ ನೂರಾರು ವರುಷಗಳಾದರೂ ಕೂಡ ಆಕರ್ಷಕವಾಗಿವೆ. ಇಲ್ಲಿಯ ಶಿಲ್ಪದಲ್ಲಿ ಕಾಂಚೀಪುರದ ಪಲ್ಲವ ಶೈಲಿಯ ಪ್ರಭಾವ ವನ್ನು ಕಾಣಬಹುದು. ಮುಖ್ಯವಾಗಿ ಆವಾರದ ಮುಂದಿರುವ ಆ ಸಿಂಹಾಧಾರಿತ ಕಂಬಗಳು ಕಾಂಚಿಯವೇ. ಇಲ್ಲಿರುವ ಅಮೃತಶಿಲೆಯ ಮಯೂರಸಿಂಹಾಸನ ನೋಡುವಂತಿದೆ. ನಮ್ಮ ಮೊಗಲರ ಮಯೂರಸಿಂಹಾಸನ ಬೇರೆಡೆ ಭದ್ರ ವಾಗಿದೆ. ಇದು ಅದರ ಪ್ರತಿಕೃತಿಯಷ್ಟೆ. 1967ರಲ್ಲಿ ಷಾ ಅವರ ಪಟ್ಟಾಭಿಷೇಕ

ಇಲ್ಲಿಯು ದರ್ಬಾರ್ ಹಾಲ್‌ನಲ್ಲಿಯೇ ನಡೆಯಿತ್ತಂತೆ. ಆಗ ಷಾ ಕುಳಿತ ಜಾಗ, ರಾಣಿ ಮತ್ತು ರಾಜಕುವರ ಕುಳಿತ ಜಾಗ ತೋರಿಸುತ್ತಾರೆ. ನಮ್ಮಲ್ಲಿಯ ಬಡೋದೆಯ ಅರಮನೆಯಾಗಲೀ, ಮೈಸೂರು ಒಡೆಯರ ಅರಮನೆಯಾಗಲೀ ಇದಕ್ಕಿಂತ ವೈಭವದಲ್ಲಿಯಾಗಲೀ ಕಲಾತ್ಮಕತೆಯಲ್ಲಿಯಾಗಲಿ ಕಡಿಮೆ ಇಲ್ಲ.

ರಾಜಮನೆತನದ ಆಭರಣಗಳನ್ನು ಈ ಮುಂಚಿನ ಷಾ ಅವರು ರಾಷ್ಟ್ರಕ್ಕೆ ಅರ್ಪಿಸಿದ್ದಾರೆ. ಈ ಅಮೂಲ್ಯವಾದ ಧನ, ಕನಕ, ರತ್ನ, ಮೌಕ್ತಿಕ, ಆಭರಣಾದಿಗಳನ್ನು ಬ್ಯಾಂಕ್ ಆಫ್ ಇರಾನ್‌ನವರು ತಮ್ಮ ಪಾತಾಳ ಗೃಹದಲ್ಲಿ ಭದ್ರಪಡಿಸಿದ್ದಾರೆ. ಆಧುನಿಕ ಇರಾನಿನ ನಾಣ್ಯಚಲಾವಣೆಗೆ ಅಂದರೆ ಆರ್ಥಿಕ ವ್ಯವಸ್ಥೆಗೆ ಈ ಭಂಡಾರವೇ ಆಧಾರ. ಫ್ರೆಂಚ್ ಅಲಂಕಾರ ನಿಪುಣರ ಸಹಾಯದಿಂದ ಈ ಅಮೌಲ್ಯ ವಸ್ತುಗಳನ್ನು ಅಂದವಾಗಿ ಪ್ರದರ್ಶಿಸಿದ್ದಾರೆ. ಈ ಪ್ರದರ್ಶನಕ್ಕೆ ಪ್ರವೇಶಧನವಿದೆ. ಆಭರಣಗಳ ಕುರಿತು ಪುಸ್ತಿಕೆ, ಕಾರ್ಡು ಮತ್ತು ಮಾಯಾಲಾಂದ್ರದ ಸ್ಲೈಡ್ ಮಾರುತ್ತಾರೆ. ಈ ಗಳಿಕೆಯಿಂದ ಬಂದೋಬಸ್ತಿನ ಖರ್ಚು ಉಳಿದುಹೋಗುತ್ತದೆ. ಆಭರಣಗಳನ್ನು ಪ್ರದರ್ಶಿಸುವ ಗಾಜಿನ ಕಪಾಟುಗಳನ್ನು ಏನಾದರೂ ಸ್ವಲ್ಪ ಗಟ್ಟಿಯಾಗಿ ಒತ್ತಿದರೆ, ಅಪಾಯ ಸೂಚಕ ಸೈರನ್ ಕೇಳಿಬರುತ್ತದೆ. ಕೂಡಲೇ ಪಾತಾಳಗೃಹದ ಬಾಗಿಲು ಮುಚ್ಚುತ್ತವೆ. ಹೊರಗೆ ಕಂಟ್ರೋಲ್ ಕೋಣೆಯಿಂದ ಭದ್ರತಾ ಪಡೆಯವರು ಇಂತಹದೇ ನಂಬರಿನ ಕೇಸ್ ಹತ್ತಿರ ಗಾಜಿನ ಕಪಾಟನ್ನು ದಬ್ಬಲಾಗಿದೆ ಎಂದು ಆ ನಿಮಿಷದಲ್ಲಿಯೇ ಕಂಡುಹಿಡಿಯುತ್ತಾರೆ. ಮತ್ತು ಜನರಿಗೆ ದೂರ ಸರಿಯಲು ಸೂಚನೆ ನೀಡುತ್ತಾರೆ. ಇದೆಲ್ಲ ಕಣ್ ಮುಚ್ಚಿ ತೆಗೆಯುವುದರೊಳಗೆ ನಡೆಯುತ್ತದೆ. ಈ ಆಭರಣಗಳ ಪೈಕಿ ಕೆಲವನ್ನು ರಾಜಮನೆತನದ ಉಪಯೋಗಕ್ಕೆಂದು ನಿರ್ದಿಷ್ಟಗೊಳಿಸಲಾಗಿದೆ. ರಾಜನ ಆಭರಣಗಳು, ರಾಣಿಯ ಆಭರಣಗಳು, ಯುವರಾಜನ ಅಲಂಕಾರಗಳು, ಪಟ್ಟಾಭಿಷೇಕ ಸಮಯದ ವಿಶೇಷ ಅಲಂಕಾರಗಳನ್ನು ಆಯಾ ಸಂದರ್ಭಗಳಲ್ಲಿ ರಾಜಮನೆತನದವರು ಉಪಯೋಗಿಸಬಹುದು. ಆದರೆ ಮೂಲ ಮಾಲೀಕತ್ವ ರಾಷ್ಟ್ರದ್ದು. ಅದೃಷ್ಟವಶಾತ್ ಆ ದಿವಸ ಫ್ರೆಂಚ್ ವಿಶ್ವಕರ್ಮ ಪಿಯರೆ ಆರೆಲ್ ಅಲ್ಲಿ ಬಂದಿದ್ದರು. ಇವರೇ 1967ರ ಪಟ್ಟಾಭಿಷೇಕ ಮಹೋತ್ಸವಕ್ಕೆ ಇರಾನಿನ ಮಹಾರಾಣಿ ಫಾರಾಳಿಗೆ ಹೊಸ ಕಿರೀಟವನ್ನು ನಿರ್ಮಿಸಿದವರು. ತಮ್ಮ ತೃಪ್ತಿಗನುಸರಿಸಿ ತಾವು ಡಿಸೈನ್ ಆರಿಸಿದರು. ಮುತ್ತುಗಳನ್ನು ಆಯ್ಕೆ

ಮಾಡುವ ಮುಂತಾದ ವಿಷಯಗಳನ್ನು ಅವರ ಬಾಯಿಂದ ಕೇಳಿದಾಗ, ಅವರ ಮೊಗದ ಮೇಲಿನ ಸಂತೋಷದ ಗೆರೆಗಳನ್ನು ಕಂಡಾಗ ಎಷ್ಟೋ ಸಂತೋಷವೆನಿಸಿತು. ಅವರು ನಿರ್ಮಿಸಿದ ರಾಣಿಯ ಕಿರೀಟ ಪ್ರಪಂಚ ಪ್ರಖ್ಯಾತಿ ಪಡೆದಿದೆ .

ನಮ್ಮ ಹೃದಯ ಹಿಂಡುವ ವಿಷಯವೆಂದರೆ ಈ ಅಮೂಲ್ಯ ಸಂಪತ್ತಿನ ಬಹು ದೊಡ್ಡ ಮತ್ತು ಅಮೂಲ್ಯ ಭಾಗ ಕೊಳ್ಳೆಗಾರ ನಾದಿರಷಾ ದಿಲ್ಲಿಯಿಂದ ಸುಲಿದು ತಂದದ್ದು. ಪ್ರಪಂಚಪ್ರಸಿದ್ಧವಾದ ಮಯೂರ ಸಿಂಹಾಸನ, ಸಾಟಿ ಇಲ್ಲದ ದರ್‍ಯಾ-ಎ-ನೂರ್ ಕಂಠಮಣಿ , ಛತ್ರ, ಚಾಮರ , ಕತ್ತಿ , ಡಾಲು , ರಾಜರಾಜರ ಅಸಂಖ್ಯ ರತ್ನಗಳು , ಮುತ್ತಿನ ಹಾರಗಳು , ಇದಕ್ಕೆ ಕೊನೆಯಿಲ್ಲ. ನಮ್ಮಲ್ಲಿ ತಿಳಿವಳಿಕೆ , ರಾಷ್ಟ್ರೀಯತೆ , ಏಕತೆ ಇಲ್ಲದೆ ಅವೆಲ್ಲಾ ಪರಾಕ್ರಮಿಗಳ ಕೈಸೇರಿದವು. ಈ ಪಾತಾಳಗೃಹದಲ್ಲಿ ನಿಂತಾಗ ನಮಗನಿಸು ವುದೊಂದೇ -ಭಾರತಭೂಮಿಯಲ್ಲಿ ನಡೆಯಬಾರದ್ದೆಲ್ಲಾ ನಡೆದುಹೋಯಿತು. ದೇವರೇ , ಇತಿಹಾಸ ಪುನರಪಿ ಜರುಗದಿರಲಿ ಜರುಗದಿರಲಿ.

ಸಾಯಂಕಾಲ ಇಲ್ಲಿಯ 'ಪೋಲರಿಡೊ ' ಚಿತ್ರಮಂದಿರದಲ್ಲಿ '೧೦೦ ರೈಫಲ್ಸ್' ಎಂಬ ಹಾಲಿವುಡ್ ನಿರ್ಮಿತ ಚಿತ್ರ ನೋಡಲು ತೆರಳಿದೆವು. ಚಿತ್ರ ಪ್ರಾರಂಭ ಆಗುವುದಕ್ಕಿಂತ ೨ ತಾಸು ಮುಂಚಿನಿಂದಲೇ ಟಿಕೆಟ್ ಕೊಡಲು ಪ್ರಾರಂಭಿಸುತ್ತಾರೆ. ಕ್ಯೂನಲ್ಲಿ ನಿಂತವರನ್ನು ಶಿಸ್ತಿನಿಂದ ಇರಿಸಲು ಲಾಠಿಧಾರಿ ಪೋಲಿಸರು ಸದಾ ಇರುತ್ತಾರೆ. ಜನ ಶಿಸ್ತಿನಿಂದ ವರ್ತಿಸದೆ ನಿಮಿಷಕ್ಕೊಮ್ಮೆ ಲಾಠಿಗಳಿಂದ ದಬ್ಬಿಸಿಕೊಳ್ಳುತ್ತಾರೆ . ಇಲ್ಲಿ ಶಿಸ್ತು ಬಿಟ್ಟು ಬೇರೆ ಎಲ್ಲಾ ಇತ್ತು. ಟಿಕೆಟ್ ದೊರೆತ ಮೇಲೆ ಒಳಗಿನ ಆವಾರದಲ್ಲಿ ಕಾಯಬೇಕು. ಈ ಆವಾರದಲ್ಲಿ ಉಸಿರುಗಟ್ಟುವಷ್ಟು ಸಿಗರೇಟಿನ ಹೊಗೆ. ಅಸಹ್ಯ ಬರುವಷ್ಟು ಕಾಗದದ ತುಂಡು , ಪಾಪ್‌ಕಾರನ್ ವಗೈರೆ ನೆಲದ ಮೇಲೆ . ಸಿನಿಮಾದವರು ದಯೆ ತೋರಿ ಬಾಗಿಲು ತೆಗೆದಾಗ ನೂಕುನುಗ್ಗಲು. ಇಡೀ ಸಿನಿಮಾ ಒಂದೇ ದರ. ಒಳಗೋ ಹೊಲಸೋ ಹೊಲಸು. ಕಡಲೆಸಿಪ್ಪೆ , ಕಾಗದದ ಚೂರು ಇತ್ಯಾದಿ. ಕತ್ತಲಲ್ಲಿ ಯಾವುದಾದರೂ ಜಾಗ ನೋಡಿ ನೀವು ಕುಳಿತುಕೊಳ್ಳುವುದರೊಳಗೆ ಪ್ರದರ್ಶನ ಪ್ರಾರಂಭ ಆಗುತ್ತದೆ. ಇರಾನಿನ ರಾಷ್ಟ್ರೀಯತೆಯ ಗುರುತಾದ ಅರಸು ಷಾ ರೇಜಾ ಪೆಹಲವಿ ಆರ್ಯಾಮೆಹರ್ ಅವರ ಚಿತ್ರ ತೋರಿಸಿದೊಡನೆ ಎಲ್ಲರೂ ಎದ್ದು ನಿಲ್ಲುತ್ತಾರೆ , ಹ್ಯಾಟ್ ತೆಗೆಯುತ್ತಾರೆ , ಕೋಟು ಬಿಚ್ಚುತ್ತಾರೆ.

ಇಲ್ಲಿ ಸುದ್ದಿಚಿತ್ರಗಳಿಲ್ಲ. ಎಲ್ಲಕ್ಕಿಂತ ಮಿಗಿಲಾದ ಆಶ್ಚರ್ಯವೆಂದರೆ ನಾವು ಹಾಲಿವುಡ್ ಚಿತ್ರವೆಂದು ಭಾವಿಸಿದ ಈ ಚಿತ್ರವನ್ನು ಅವರು ಪರ್ಶಿಯನ್ ಭಾಷೆಗೆ ಡಬ್ ಮಾಡಿದ್ದಾರೆ. ಸರಿ ಎರಡು ತಾಸು ಮೂಕೀ ಚಿತ್ರ ನೋಡಿದಂತೆ ನೋಡಿದೆವು.

ಜನರು ಭಾರತೀಯರಂತೆಯೇ ಕಾಣುತ್ತಾರೆ. ಸಾಬೂನು, ಸೆಂಟ್, ಪೌಡರ್ ವಸ್ತುಗಳಿಂದ ಮೊದಲು ಮಾಡಿ ದೊಡ್ಡ ದೊಡ್ಡ ಯಂತ್ರಗಳವರೆಗೆ ಪರದೇಶದಿಂದ ಕರಿಸಿಕೊಳ್ಳುತ್ತಾರೆ. ಸ್ವದೇಶೀ ಉದ್ದಿಮೆ ಅಷ್ಟಾಗಿ ಬೆಳೆದಿಲ್ಲ. ವ್ಯಾಸಂಗವೆಲ್ಲ ಪರ್ಶಿಯನ್ ಭಾಷೆಯಲ್ಲಿ. ಜನರಿಗೆ ಆಹಾರದ ಮೇಲೆ ಮಾದಕ ಪಾನೀಯಗಳ ಮೇಲೆ ತುಂಬಾ ಪ್ರೀತಿ. ಪ್ರಮುಖ ಬಾಜಾರದ ಚಿಕ್ಕ ಹೋಟಲ್ ಒಂದರಲ್ಲಿ ಚಹಾ ಕುಡಿಯುತ್ತಿದ್ದೆವು. ಅಲ್ಲಿದ್ದ ಇಬ್ಬರಲ್ಲಿ ಏನೋ ಕೊಂಚ ಘರ್ಷಣೆಯ ಮಾತು ನಡೆಯುತ್ತಿತ್ತು. ಎರಡೇ ಕ್ಷಣಗಳಲ್ಲಿ ಇಬ್ಬರ ಮುಖದಿಂದ ರಕ್ತ ತೊಟ್ಟಿಕ್ಕುತ್ತಿತ್ತು. ಅವರನ್ನು ಯಾರೂ ಬಿಡಿಸಲಿಲ್ಲ. ಪೋಲಿಸರೂ ಬರಲಿಲ್ಲ. ತಮ್ಮಷ್ಟಕ್ಕೆ ತಾವೇ ಹೊರಗೆ ಹೊರಟರು.

ತೆಹರಾನಿನ ಅತಿ ದೊಡ್ಡ ಮಸೀದಿ ಸಿಪಾಹ್ ಸಾಲಾರ್ ಇಂದು ಮುಲ್ಲಾಗಳನ್ನು ತಯಾರುಗೊಳಿಸುವ ವಿದ್ಯಾಲಯ. ಅತಿ ವಿಶಾಲ ಆಕಾರದ ಈ ಮಸೀದಿ ಮನೋಜ್ಞವಾಗಿದೆ. ಪುರಾತನ ಪರ್ಶಿಯದ ರಾಜಧಾನಿ (ಈಗ ಹಳ್ಳಿ) 'ರೇ' ಇಲ್ಲಿಂದ ಮೂರು ಮೈಲು. ಅಲ್ಲಿ ಇಸ್ಲಾಂ ಧರ್ಮದ ಪ್ರಮುಖ ಇಮಾಮರೊಬ್ಬರ ಸಮಾಧಿ ಇದೆ. ಅದೊಂದು ಇಸ್ಲಾಂ ಯಾತ್ರಾ ಸ್ಥಳ. ಅದರ ಪಕ್ಕದಲ್ಲಿ ಹಿಂದಿನ ಷಾ ಅವರ ಸಮಾಧಿ-ಇದೊಂದು ಅಮೂಲ್ಯವಾದ ಮಧ್ಯಕಾಲೀನ ಯುಗದ ಅಮೃತಶಿಲೆಯ ಶಿಲ್ಪ.

ಇಲ್ಲಿಯ 'ಆಲಿ ಕಾರಂಜಿ'ಯಲ್ಲಿ ಜಮಖಾನೆ ಒಗೆಯುವ ದೃಶ್ಯ ನೋಡುವಂತಹುದು. ಬೆಟ್ಟದ ಒಡಲಿಂದ ನಿಧಾನವಾಗಿ ಇಳಿದುಬರುವ ತಿಳಿ ನೀರಿನ ಬುಗ್ಗೆ ಆಲಿ ಕಾರಂಜಿ. ಸ್ಫಟಿಕಸದೃಶ ಜಲದಲ್ಲಿ ಜಮಖಾನೆ ಒಗೆಯಲು ಎಲ್ಲ ಕಡೆಯಿಂದ ಇಲ್ಲಿಗೇ ಜನ ಬರುತ್ತಾರೆ. ಬಡಮಕ್ಕಳು ಈಜಾಡುತ್ತಾರೆ. ಒಗೆದ ಬಣ್ಣ ಬಣ್ಣದ ಜಮಖಾನೆಗಳನ್ನು ಬೆಟ್ಟದ ನೆತ್ತಿಯ ಮೇಲಿನಿಂದ ಕೆಳಗಿನವರೆಗೆ ಆರಲು ಹಾಕಿ ವರ್ಣಮಯ ಜಗತ್ತನ್ನೇ ನಿರ್ಮಿಸಿರುತ್ತಾರೆ.

ನಮ್ಮ ಮೂರು ದಿನದ ವಾಸ್ತವ್ಯ ಮೂರು ನಿಮಿಷಗಳಂತೆ ಕಳೆದಿತ್ತು. ಗುಳೇಕಾರರಂತೆ ಗಂಟು ಮೂಟೆ ಕಟ್ಟಿಕೊಂಡು 'ಏರ್ ಫ್ರಾನ್ಸ್' ಅವರ

ವಿಮಾನದಲ್ಲಿ ಬೇರೂಟ್‌ಗೆ ಪಯಣಿಸಿದೆವು. ಆಕಾಶಯಾನದಲ್ಲಿ ಅವರು ನೀಡಿದ ಉಪಾಹಾರ ಪುಷ್ಕಳವೂ ಶ್ರೇಷ್ಠವೂ ಆಗಿತ್ತು, ಅಭಿಮಾನದ ಅಂಶವೆಂದರೆ ಪ್ರತಿಯೊಂದು ಪದಾರ್ಥ ಫ್ರಾನ್ಸಿನಲ್ಲಿಯೇ ತಯಾರಾಗಿತ್ತು. ಹವೆಯಲ್ಲಿ ಸಂಗೀತ ಎಂಬ ಕಾರ್ಯಕ್ರಮವಿತ್ತು. ಆದರೆ ಆ ಸಂಗೀತ ಕೇಳಲು ಸುಮಾರು ೨೦ ರೂಪಾಯಿ ಕೊಟ್ಟು ಇಯರ್‌ಫೋನ್ ಕೊಳ್ಳಬೇಕಂತೆ. ಸರಿ, ನಾವು ಭಾರತೀಯರು ಸಂಗೀತವನ್ನು ಮೆಲುಕುಹಾಕಲು ಬಲ್ಲೆವು. ಕಣ್ಣು ಮುಚ್ಚಿದರೆ ಸಾಕು, ಪಂ. ರವಿಶಂಕರ್, ಎಂ.ಎಸ್.ಸುಬ್ಬುಲಕ್ಷ್ಮಿಯ ಯಾವ ಗಾಯನವಾದರೂ ಪುನರಪಿ ನಿನದಿಸುತ್ತದೆ. ಅಷ್ಟರಲ್ಲಿಯೇ ಬೇರೂಟ್ ವಿಮಾನ ತಾಣದಲ್ಲಿ ಇಳಿಯುವ ಸೂಚನೆ ಬಂದಿತ್ತು.

ಯೂರೋಪಿನ ಹೆಬ್ಬಾಗಿಲು - ಬೇರೂಟ್ : ಅನುಭಾವಿ ಕವಿ ಖಲೀಲ್ ಜಿಬ್ರಾನನ ದೇಶ. ಲೆಬನಾನಿನ ರಾಜಧಾನಿ ಬೇರೂಟ್. ಇಲ್ಲಿ ನಮ್ಮ ವಾಸ್ತವ್ಯ ಎಂಟೇ ತಾಸು. ವಿಮಾನತಾಣದಲ್ಲಿದ್ದ ಲೆಬನೀಸ ಪ್ರವಾಸ ಖಾತೆಯನ್ನು ಕಂಡೆವು. ಅವರು ನಮಗೆ ಕೂಡಲೇ ಒಂದು ಚಿಕ್ಕ ಟೂರಿನ ವ್ಯವಸ್ಥೆ ಮಾಡಿದರು. ಚಿಕ್ಕ ಪ್ರವಾಸಿ ಬಸ್‌ನಲ್ಲಿ–ಪುರಾತನ ನಗರ ಬಾಬ್ಲೊಸ್ ಮತ್ತು ಜೀಟಾ ಪ್ರಕೃತಿ ನಿರ್ಮಿತ ಗುಹೆಗಳನ್ನು ನೋಡಿದೆವು. ಬಾಬ್ಲೊಸ್ ಶಿಲಾಯುಗದಿಂದ ಅಸ್ತಿತ್ವದಲ್ಲಿರುವ ನಗರವೆಂದು ಇಲ್ಲಿಯ ಉತ್ಖನನಗಳು ನಿರೂಪಿಸಿವೆ. ನಮ್ಮ ತೆಕ್ಕಲಕೋಟೆಯಲ್ಲಿ (ಬಳ್ಳಾರಿ ಜಿಲ್ಲೆ) ಇತ್ತೀಚೆಗೆ ದೊರೆತಂತಹ ಶವದ ಪಾತ್ರೆಗಳು (ಕುಂಡಗಳು) ಇಲ್ಲಿ ೨೦೦ ಕ್ಕೆ ಮಿಕ್ಕಿ ದೊರೆತಿವೆ. ಪುರಾತನ ಫಿನಿಷಿಯನ್ನರ (ಫೋನಿಷಿಯನ್ಸ್) ದೇವಾಲಯ, ರಂಗ ಮಂದಿರ, ಬಂದರು, ಪೇಟೆ ಎಲ್ಲಾ ಉತ್ಖನನದಿಂದ ಹೊರಬಿದ್ದಿವೆ. ಕ್ರಿಶ್ಚಿಯನ್ ಧರ್ಮಯುದ್ಧದ ವೀರರು ಕಟ್ಟಿದ ಕೋಟೆಯಿದೆ. ಮೆಚ್ಚಬೇಕಾದ ಸಂಗತಿಯೆಂದರೆ ಇರುವ ಅಲ್ಪಸ್ವಲ್ಪ ವಸ್ತುಗಳನ್ನು ಕಾಪಾಡಿರುವ, ಪ್ರದರ್ಶಿಸಿರುವ ಮತ್ತು ಜನರಿಗೆ ತೋರಿಸಿರುವ ರೀತಿ. ಎಂಟುನೂರು ವರುಷದ ಹಿಂದಿನ ಒಂದು ಬೀದಿಯನ್ನು ಹಾಗೆಯೇ ಕಾಪಾಡಿಕೊಂಡು ಬಂದಿದ್ದಾರೆ. ಆಯಕಟ್ಟಿನ ಸ್ಥಳಗಳಲ್ಲಿ ಲೈಟುಗಳನ್ನು ಹಾಕಿ ಪಥಗಳನ್ನು ನಿರ್ಮಿಸಿ ಪ್ರವಾಸಿಗೆ ವಿಷಯ ಪರಿಚಯವಾಗಲು ಅನುವು ಮಾಡಿದ್ದಾರೆ. ಪುರಾತನ ಫಿನಿಷಿಯನ್ನರ ಬಂದರನ್ನು ಇಂದಿಗೂ ವಿಮಾನುಗಾರಿಕೆಗಾಗಿ ಉಪಯೋಗಿಸುತ್ತಾರೆ. ಪ್ರತಿಯೊಂದು ಸ್ಥಳವಲ್ಲಿ ಆಯಾ ಸ್ಥಳಗಳ ಕುರಿತು ಪುಸ್ತಿಕೆ, ಫೋಟೋ, ಸ್ಲೈಡ್ ಇತ್ಯಾದಿ ಸಿಗುತ್ತವೆ.

ಇನ್ನು ಜೀಟಾದಲ್ಲಿ ಅಂತರಗಾಮಿಯಾದ ನದಿಯೊಂದು ಭೂಮಿಯ

ಒಡಲಲ್ಲಿ ಪ್ರವಹಿಸಿ ಸುಣ್ಣದ ಕಲ್ಲನ್ನು ಕರಗಿಸಿ ರೋಮಾಂಚಕ ಪಾತಾಳ ಗೃಹಗಳನ್ನು ನಿರ್ಮಿಸಿದೆ. ಸುಣ್ಣದ ಕಲ್ಲಿನ ಸ್ವಪ್ನಲೋಕ ಇಲ್ಲಿ ನಿರ್ಮಿತವಾಗಿದೆ. ನೀರಿನ ಕೊರೆತಕ್ಕೆ ದಾರಿ ಬಿಟ್ಟು ಮಿದುಶಿಲೆ, ಅರಳಿ ಹೊರಳಿ ಹಾರಿ ಜಿಗಿದು ಇಳಿದು ಅನೇಕ ರೀತಿಯ ಆಕಾರಗಳನ್ನು ನಿರ್ಮಿಸಿದೆ. ಅವರವರ ಊಹೆಗೆ ಅನುಸರಿಸಿ ಪ್ರಾಣಿ, ಸಸ್ಯ, ಪ್ರಕೃತಿ, ಬೇಕಾದ ಆಕಾರಗಳನ್ನು ಮನಸ್ಸಿನಲ್ಲಿ ಕಾಣಬಹುದು. ಸರಕಾರದವರು ಒಳಗಡೆ ಓಡಾಡಲು ಭದ್ರವಾದ ಪಥವನ್ನು ನಿರ್ಮಿಸಿ, ದೀಪದ ವ್ಯವಸ್ಥೆ ಮಾಡಿ, ಶಿಲಾರೂಪಗಳನ್ನು ಯಾರೂ ಭಗ್ನ ಗೊಳಿಸದಂತೆ ಭದ್ರಕಾವಲಿರಿಸಿ ಕಾಪಾಡುತ್ತಿದ್ದಾರೆ. ಭೂಮಿತಾಯಿಯ ಒಡಲಲ್ಲಿ ತಂಪಿನ ಈ ಕಂದರಗಳಲ್ಲಿ ಕನಸು ಕಾಣಲು ಕಲ್‌ಬೆಂಚುಗಳಿವೆ. ಒಳಗೆ ಬರಲು ಪ್ರವೇಶಧನವೂ ಇದೆ.

ಜೀಟಾದಿಂದ ಮರಳುವಾಗ ಲೆಬನಾನ್ ಇತಿಹಾಸದ ಕೆಲ ಘಟ್ಟಗಳನ್ನು ಸೂಚಿಸುವ ಸ್ಮಾರಕ ಕಲೆಗಳನ್ನು ತೋರಿಸಿದರು. ಅವುಗಳ ಪೈಕಿ ಒಂದರಲ್ಲಿ ಲೆಬನಾನ್ ಸ್ವಾತಂತ್ರ್ಯ ರಕ್ಷಣೆಗೆ ಭಾರತೀಯ ಕಾಲ್ದಳವೊಂದು ಹೋರಾಡಿ ತೆಂದು ನಮೂದಿಸಿರುವುದು ಕಂಡು ನಮಗೆ ರೋಮಾಂಚನವೆನಿಸಿತು.* ನಮ್ಮ ಈ ಬಸ್ ಪ್ರವಾಸದಲ್ಲಿ ಮುಂಬಯಿಯ ಅಜಿತ್ ಬ್ರೋಕ್ಸ್ ಕಂಪೆನಿಯ ಮಾಲೀಕರು ಮತ್ತು ಅವರ ಪತ್ನಿ ಸನ್ನಿಹಿತರಾದರು. ಪ್ರವಾಸ ಮುಗಿದ ಮೇಲೆ ಅವರು ತಾವು ರುಚಿಕಂಡ ಇಂಡಿಯನ್ ರೆಸ್ಟೋರೆಂಟ್‌ಗೆ ಕರೆ-ದೊಯ್ದರು. ಅಲ್ಲಿಯ ವೇಟರ್ ಮೈಸೂರಿನವ, ಕನ್ನಡಿಗ. ಕನ್ನಡ ನುಡಿ ಕೇಳಿ ನಮಗೆ ನಮ್ಮ ಮನೆಯವರನ್ನೇ ಕಂಡಷ್ಟು ಸಂತೋಷವಾಯಿತು. ಅಲ್ಲಿ ನಮಗೆ ಚಪಾತಿ, ಆಲೂಬಾಜಿ, ಹಪ್ಪಳ, ಉಪ್ಪಿನಕಾಯಿ ದೊರೆಯಿತು. ಆ ದಿನ ಅಮೃತವನ್ನೇ ಸವಿದಷ್ಟು ಸಂತೋಷವಾಯಿತು.

ಲೆಬನಾನ್ ಚಿಕ್ಕ ದೇಶ. ಇಲ್ಲಿಯ ಭಾಷೆ ಅರಾಬಿಕ್ ಮತ್ತು ಇಂಗ್ಲಿಷ್, ಜನತೆ ಮುಕ್ಕಾಲು ಭಾಗ ಕ್ರಿಸ್ತೀಯರು. ಸೂಯೆಜ್ ಕಾಲುವೆ ಮುಚ್ಚಿದಾಗ ಬೇರೂಟ್ ಪಶ್ಚಿಮದ ರಾಷ್ಟ್ರಗಳ ಕಣ್ಣಿಗೆ ಬಿತ್ತು. ಎಣ್ಣೆಯ ಕೊಳದಿಂದ ಬೇರೂಟ್ ಬಂದರಿನವರೆಗೆ ಕೊಳವೆಮಾರ್ಗ ಹಾಕಿದ್ದಾರೆ. ಇದರಿಂದ ಸೂಯೆಜ್ ಕಾಲುವೆಯ ಅಗತ್ಯ ಕಡಿಮೆ ಆಗುತ್ತದೆ. ಸಿರಿಯನ್ನರಿಗೂ ಲೆಬನೀಯರಿಗೂ ಬಹು ದಿನದ ಕಲಹ. ಆದರೆ ಈಗ ಅವರಿಗೆ ಶಾಂತಿಯ ನೆರೆಹೊರೆ ಇದೆ. ಯೂರೋಪಿಗೆ ಬೇರೂಟ್ ಪೂರ್ವದಿಕ್ಕಿನ ಹೆಬ್ಬಾಗಿಲು.

* (ಈ ಸ್ಮಾರಕ ಫಲಕದ ಬಗ್ಗೆ ಪದ್ಮಶ್ರೀ ವಿನಾಯಕ ಗೋಕಾಕರು ತಮ್ಮ "ಇಂದಿಲ್ಲ ನಾಳೆ'' ಪುಸ್ತಕದಲ್ಲಿ ಬರೆದಿದ್ದಾರೆ.)

೩ ಅರಬರ ಹೃದಯ: ಕೈರೊ

ಬೇರೂಟ್‌ನಿಂದ ಲೆಬನಾನ್ ದೇಶದ ಸರಕಾರಿ ಸಾರಿಗೆ ವ್ಯವಸ್ಥೆ "ಮಿಡಲ್ ಈಸ್ಟ್ ಏರ್‌ಲೈನ್ಸ್" ಮೂಲಕ ಪಯಣಿಸಿದೆವು. ಈ ಕಂಪೆನಿಯ ಕೆಲಸಗಾರರು ತುಂಬ ಪರಿಣತರಲ್ಲ ಎಂಬುದು ಅವರ ದಡಬಡ ಕೆಲಸದಿಂದ ವಿದಿತವಿತ್ತು. ಕೈರೋ ಸೇರುವವರೆಗೆ ಸೆರೆ ಮತ್ತು ಸಿಗರೇಟ್ ಮಾರುವುದರಲ್ಲಿಯೇ ಇಬ್ಬರು ಸಿಬ್ಬಂದಿಯವರು ನಿರತರಾಗಿದ್ದರು. ಆಕಾಶದಲ್ಲಿಯ ಈ ಮಾರಾಟಕ್ಕೆ ಯಾವ ಸರಕಾರದ ಸುಂಕವೂ ಬೀಳುವುದಿಲ್ಲ. ವಿಮಾನ ಕಂಪೆನಿಗೆ ಲಾಭವೂ ಉಂಟು. ಈಜಿಪ್ಟ್ ದೇಶದಲ್ಲಿ ನಮ್ಮಲ್ಲಿಯಂತೆ ವಿದೇಶೀ ವಸ್ತುಗಳ ಆಯಾತದ ಮೇಲೆ ನಿರ್ಬಂಧ, ಸುಂಕ ಇರುವುದರಿಂದ ಅನೇಕ ಕೈರೋವಾಸಿಗಳು ಸೆರೆ ಮತ್ತು ಸಿಗರೇಟ್ ಖರೀದಿಯಲ್ಲಿ ತೊಡಗಿದ್ದರು. ಪ್ರತಿಯೊಬ್ಬರೂ ನಾಲ್ಕಾರು ಸೀಸೆ ಸೆರೆ, ಬಂಡಲ್ ಬಂಡಲ್ ವಿದೇಶಿ ಸಿಗರೇಟ್ ಖರೀದಿಸುತ್ತಿದ್ದರು. ಇವರ ವ್ಯವಹಾರ ಮೋಜಾಗಿತ್ತು. ಮಧ್ಯಪೂರ್ವದಲ್ಲಿಯೇ ಕೈರೋ ಅತಿ ದೊಡ್ಡ ನಗರ. ನೈಲ್ ನದಿಯ ಬಗಲಿಗೆ ಹೊಂದಿಕೊಂಡು ಮೈಲು ಮೈಲುಗಳ ವರೆಗೆ ಹರಡಿದ ಕೈರೋ ವಿಮಾನದ ಕಿಟಕಿಯಿಂದ ಕಾಣಿಸುತ್ತಿತ್ತು. ಮಸೀದಿಗಳ ಮಿನಾರಗಳು, ಗಗನಚುಂಬಿ ಕಟ್ಟಡಗಳು, ವಿಶಾಲವಾದ ರಸ್ತೆಗಳು–ಕೈರೋ ಆಕರ್ಷಕವಾಗಿ ಕಾಣಿಸುತ್ತಿತ್ತು.

ವಿಮಾನನಿಲ್ದಾಣದಲ್ಲಿ ಸುಂಕದ ಅಧಿಕಾರಿಗಳು ಪೂರಾ ತನಿಖೆ ಮಾಡುತ್ತಾರೆ. ಎಲ್ಲರಿಗೂ ಭಾರತೀಯರ ಮೇಲೆ ಪ್ರೀತಿ. ಎಲ್ಲಾ ಮುಗಿಸಿ ನಾವು ಶೆಫರ್ಡ್ಸ್ ಹೋಟೆಲ್ ಸೇರುವ ಹೊತ್ತಿಗೆ ಸಂಜೆಯ ಏಳು ಗಂಟೆಯಾಗಿತ್ತು. ಇಲ್ಲಿ ರಾತ್ರಿ ಎಂಟರವರೆಗೆ ಹೊತ್ತೇ ಕಂತುವುದಿಲ್ಲ.

ಕೈರೋ ಸೇರಿದಾಗ ನನ್ನ ಜೀವನದ ಒಂದು ಮಹತ್ತರ ಆಸೆ ಕೈಗೂಡಿತೆಂದು ನನಗನಿಸಿತು. ಕಾಲೇಜಿನ ದಿನಗಳಲ್ಲಿ ಪ್ರಪಂಚ ಸಂಸ್ಕೃತಿಯ ಇತಿಹಾಸ ಓದುತ್ತಿರುವ ಕಾಲದಿಂದ, ಪುರಾತನ ಈಜಿಪ್ಟಿನ ಫಾರೋಸ್, ಪಿರಮಿಡ್ಸ್, ಈ ಸಂಸ್ಕೃತಿಯ ಬಗ್ಗೆ ಅವರ್ಣನೀಯ ಕುತೂಹಲವಿತ್ತು. ಜೀವನದಲ್ಲಿ ಒಮ್ಮೆಲ್ಲ ಒಮ್ಮೆ ಕಣ್ಣಾರೆ ಕಾಣಬೇಕೆಂಬ ಆಸೆ ಸುಪ್ತವಾಗಿತ್ತು!

ರಾತ್ರಿ ಇನ್ನೂ ಸಮಯವಿದ್ದುದರಿಂದ ಕ್ಯಾಂಡಿ ಎಂಬ ಮಾರ್ಗದರ್ಶಿಯನ್ನು ಕರೆದುಕೊಂಡು ವಿಶ್ವವಿಖ್ಯಾತ ಈಜಿಪ್ಷಿಯನ್ ಬ್ಯಾಲೆ ಡ್ಯಾನ್ಸ್ ನೋಡಲು ತೆರಳಿದೆವು.

ಈ ನೃತ್ಯಮಂದಿರವನ್ನು ಪ್ರವೇಶಿಸಿದ ಕೂಡಲೇ ನನಗೆ ನಮ್ಮ ನಾಟಕ ಗೃಹಗಳ ನೆನಪಾಯಿತು. ಅಲ್ಲಿಯ ವರ್ಣವಿಲಾಸ, ಸಂಗೀತದ ಚಾಲು ಮತ್ತು ಉತ್ಸಾಹಮಯ ವಾತಾವರಣ ಅಚ್ಚ ಭಾರತೀಯವಾಗಿತ್ತು. ದೊಡ್ಡ ರಂಗ ಮಂದಿರದಲ್ಲಿ ಪ್ರೇಕ್ಷಕರ ಮಧ್ಯಕ್ಕೆ ಚಾಚಿದಂತಿರುವ ಅರ್ಧಚಂದ್ರಾಕೃತಿಯ ನಾಟ್ಯಮಂಟಪ ಈ ಮಂಟಪದ ಮೇಲೆ ಹಿಂದಿನ ಸಾಲಿಗೆ ಪ್ರೇಕ್ಷಕರಿಗೆ ಕಾಣುವಂತೆ ವಾದ್ಯಮಂಡಲಿ ಇರುತ್ತದೆ. ಅನೇಕ ಕಡೆಯಿಂದ ನಾಟ್ಯಮಂಟಪಕ್ಕೆ ಬೆಳಕು ಬೀರುತ್ತಾರೆ. ಈ ನೃತ್ಯಗಳಲ್ಲಿ ಹತ್ತಾರು ಜನ ನರ್ತಕಿಯರು ಇರುತ್ತಾರೆ. ಒಬ್ಬೊಬ್ಬರೂ ಅವರ ವಯಸ್ಸಿಗನುಸರಿಸಿ ಒಂದೊಂದು ಪ್ರಕಾರದ ನರ್ತನ ಮಾಡುತ್ತಾರೆ. ನರ್ತನಗಳ ಮಧ್ಯೆ ಹಾಸ್ಯನಟರ ವಿಕಟ ಕಾರ್ಯಕ್ರಮಗಳು ಇರುತ್ತವೆ. ಎಲ್ಲಾ ಅರೆಬಿಕ್ ಭಾಷೆಯಲ್ಲಿ ಜರುಗುತ್ತದೆ. ಮಾರ್ಗದರ್ಶಿ ಕ್ಯಾಂಡಿ ಪ್ರತಿಯೊಂದನ್ನೂ ಇಂಗ್ಲಿಷಿಗೆ ತರ್ಜುಮೆ ಮಾಡಿ ಹೇಳುತ್ತಿದ್ದ. ಪ್ರತಿಯೊಂದು ನೃತ್ಯದಲ್ಲಿ ಮುಖ್ಯವಾಗಿ ಮೂರು ಭಾಗಗಳನ್ನು ಕಾಣಬಹುದು. ಮೊದಲನೆಯದಾಗಿ ಪ್ರಿಯಾಗಮನದ ನಿರೀಕ್ಷೆ, ಎರಡನೆಯದಾಗಿ ಪ್ರಿಯನು ಬಾರದ ಕಾರಣ ವಿರಹ, ರೋಷ ಮತ್ತು ಆವೇದನೆ. ಮೂರನೆಯ ಭಾಗದಲ್ಲಿ ಪ್ರಿಯಸಮಾಗಮ. ಹಾವಭಾವಗಳಲ್ಲಿ, ಪದಗತಿಗಳಲ್ಲಿ, ಅರ್ಥವನ್ನು ಪರಿಪುಷ್ಟವಾಗಿ ಹೊರಹೊಮ್ಮಿಸುತ್ತಾರೆ. ಮಧ್ಯವಯಸ್ಕ

ಹುಡಿಗೆಯರ ನಾಚಿನಲ್ಲಿ ಕಲೆಗೆ ಮಹತ್ವ ಕಾಣುತ್ತದೆ. ಹರೆಯದ ಹುಡಿಗೆಯರಲ್ಲಿ ವಯಸ್ಸಿನ ಬಿಮ್ಮಿನ ಕಾರಣ ಕಲೆಯು ಜೊತೆಗೆ ಕಾಮೋಪಾಸನೆ ಝಗಝಗಿಸುತ್ತದೆ. ಅವರ ಗತಿಯಲ್ಲಿ ಸಾಟಿಯಿಲ್ಲದ ರೋಷ ಮತ್ತು ಸವಾಲು ಎದ್ದು ತೋರುತ್ತದೆ. ಈ ಮಂದಿರಗಳಲ್ಲಿ ಹಣದ ಸುಲಿಗೆ ಚೆನ್ನಾಗಿ ನಡೆಯುತ್ತದೆ. ನರ್ತಿಸಿದ ನಂತರ ಹುಡುಗೆಯರು ಬೇರೆ ಬೇರೆ ಟೇಬಲ್‌ಗೆ ಬಂದು ಕುಳಿತು ಕೊಂಕು ವ್ಯಯ್ಯಾರಗಳಿಂದ ಮೆರೆಯುತ್ತಾರೆ. ಹರಟೆ ಹೊಡೆದು ಕುಳಿತವನ ಜೇಬು ಕತ್ತರಿಸುವಂತೆ ಪಾನೀಯ ಕುಡಿದು, ಕುಡಿಸಿ, ಸುಲಿಯುತ್ತಾರೆ. ಅನೇಕ ವೇಶ್ಯೆಯರು ಸಹ ಇಂತಹ ಎಡೆಗಳಲ್ಲಿ ಹೊಂಚುಹಾಕಿರುತ್ತಾರೆ. ಹೊಸ ಕಾಲದ ನರ್ತಕಿಯರು ದೈಹಿಕ ವ್ಯಾಪಾರ ವನ್ನು ತ್ಯಜಿಸಿ ಬರೀ ನರ್ತನಕ್ಕೆ ಮೀಸಲಾಗಿರುವಂತೆ ತೋರುತ್ತದೆ. ಅವರ ದುಡಿಮೆಯೂ ಹೆಚ್ಚಾಗಿದೆ. ವಿದ್ಯಾವಂತರೂ ಮೇಲ್ತರಗತಿಯ ಜನರೂ ಈ ಕಲೆಗೆ ಧಾವಿಸಿದ್ದಾರೆ. ಇಂತಹ ಜನರು ಒಂದೇ ರಂಗಮಂದಿರಕ್ಕೆ ಸಂಬಳದ ಮೇಲೆ ಜೋತುಬೀಳದೆ ಅನೇಕ ರಂಗಮಂದಿರಗಳಲ್ಲಿ ಭಿನ್ನ ಭಿನ್ನ ಕಾರ್ಯಕ್ರಮ ನೀಡುತ್ತಾರೆ

ಪಿರಮಿಡ್ಸ್ ಮತ್ತು ಸ್ಫಿಂಕ್ಸ್ ಕೈರೋದಿಂದ ಕೆಲವೇ ಮೈಲು ದೂರ ದಲ್ಲಿವೆ. ಈಜಿಪ್ಷಿಯನ್ ಸರಕಾರ ಪಿರಮಿಡ್‌ಗಳಲ್ಲಿಯ ಎಲ್ಲ ವಸ್ತುಗಳನ್ನು ಸರಕಾರಿ ಮ್ಯೂಜಿಯಂಗೆ ಸಾಗಿಸಿದೆ. ಪಿರಮಿಡ್‌ಗಳಲ್ಲಿ ಆಧುನಿಕ ಉಪಕರಣ ಗಳ ಮೂಲಕ ಸಂಪತ್ತಿನ ಶೋಧ ನಡೆದಿದೆ. ಆಕಾಶವನ್ನು ಧಿಕ್ಕರಿಸಿ ಭೂಮಿ ಯನ್ನು ಅವಚಿ ಹಿಡಿದ ಈ ಪಿರಿಮಿಡ್‌ಗಳನ್ನು ನೋಡಿದಾಗ ಪುರಾತನರ ದೃಢಸಂಕಲ್ಪದ ಬಗ್ಗೆ ಅಭಿಮಾನವೆನಿಸುತ್ತದೆ. ಜಗತ್ತಿನ ಚಿದಂಬರ ರಹಸ್ಯದ ದ್ಯೋತಕವಾದ ಸ್ಫಿಂಕ್ಸ್ ಈಜಿಪ್ಟಿಗೆ ಪ್ರವಾಸೀ ವ್ಯಾಪಾರವನ್ನು ನೀಡುತ್ತದೆ. ಇಲ್ಲಿ ಒಂಟೆ ಸವಾರಿ, ಕುದುರೆ ಸವಾರಿ, ಕತ್ತೆ ಬಂಡಿ ಸವಾರಿ ಮಾಡಬಹುದು.

ಈಜಿಪ್ಷಿಯನ್ ಮ್ಯೂಜಿಯಂನಲ್ಲಿ ನೈಲ್ ನಾಗರಿಕತೆಯ ಎಲ್ಲಾ ವಸ್ತು ಗಳನ್ನೂ ವೈಜ್ಞಾನಿಕ ರೀತಿಯಿಂದ ಅಳವಡಿಸಲಾಗಿದೆ. ಹಳೆಗಾಲದ ಕುಬೇರ ಟುಟಂಖಮಾನ್, ಸೂರ್ಯಾರಾಧಕ ಇಖ್ನಾಟನ್, ನಗೆ ತರುವ ರೀತಿಯಲ್ಲಿ ಮಮ್ಮಿಗಳಾಗಿ ಮಲಗಿದ್ದಾರೆ. ಐದು ಸಾವಿರ ವರುಷಗಳಿಂದಲೂ ಅವರಿಗೆ ಶವ ಸಂಸ್ಕಾರ ದೊರೆತಿಲ್ಲ. ಅವರು ತಮ್ಮ ಮರಣ ಮಂದಿರಗಳಲ್ಲಿ ಸಂಗ್ರಹಿಸಿದ ವಸ್ತುಭಾಂಡಾರವನ್ನು ನೋಡಿದಾಗ ನಗೆ ಬರುತ್ತದೆ–ಆಶಾವಾದಕ್ಕೆ ಅದ್ಭುತ

ವೆನಿಸುತ್ತದೆ. ಆಧಾರವಿಲ್ಲದೆ ಬೆಳೆದ ಈ ಸಂಸ್ಕೃತಿ ನಶಿಸಿಹೋಯಿತು.

ಅನೇಕ ವರುಷಗಳ ಅನಂತರ ಆಲ್‌ಬೇನಿಯಾವ ಅರಸು ಮಹಮ್ಮದ್ ಆಲಿ ಈಜಿಪ್ಟಿನ ಮೇಲೆ ಧಾಳಿ ಮಾಡಿ ಪುರಾತನ ಸಂಸ್ಕೃತಿಯನ್ನು ನಾಶಮಾಡಿ ಇಸ್ಲಾಂ ಧರ್ಮವನ್ನು ಸ್ಥಾಪಿಸಿದನು. ದೊಡ್ಡದೊಡ್ಡ ಮಸೀದಿಗಳನ್ನು ಕಟ್ಟಿ ಇಸ್ಲಾಂ ರಾಜಮನೆತನವನ್ನು ಸ್ಥಾಪಿಸಿ ಆಧುನಿಕ ಈಜಿಪ್ಟನ್ನು ನಿರ್ಮಿಸಿದನು. ಕೈರೋದಲ್ಲಿ ಮೂರುನೂರಕ್ಕೆ ಮಿಗಿಲಾಗಿ ಮಸೀದಿಗಳಿವೆ. ಇವುಗಳಿಗೆ ಮಕುಟ ಮಣಿಯೆಂದರೆ 'ಸಿಟಾಡೆಲ್'. ನಗರದ ಅತಿ ಎತ್ತರದ ದಿನ್ನೆಯ ಮೇಲೆ ಕೋಟೆ. ಅದರಲ್ಲಿ ಒಂದು ಅರಮನೆ, ರಾಜಕೀಯ ವ್ಯವಹಾರಗಳಿಗಾಗಿ ಒಂದು ಕಛೇರಿ, ಅನಂತರ ಒಂದು ಬೃಹತ್ ಮಸೀದಿ ನಿರ್ಮಿಸಿದ್ದಾರೆ. ಈ ಮಸೀದಿಯ ಗುಮ್ಮಟಗಳು ಬೃಹತ್ತಾಗಿವೆ. ಒಳಗಡೆ ಮಾಡಿರುವ ಬಣ್ಣದ ಸೆರಾಮಿಕ್ ಮತ್ತು ಮೊಜೇಕ್ ಚಿತ್ತಾರದ ಕೆಲಸ ಅಮೂಲ್ಯವಾಗಿದೆ. ನೆಲದ ಮೇಲೆ ಅಮೂಲ್ಯವಾದ ಪರ್ಶಿಯನ್ ಜಮಖಾನೆ, ಮೇಲೆಲ್ಲ ರಂಗುರಂಗಿನ ದೀಪವ್ಯವಸ್ಥೆಗಾಗಿ ಉತ್ಕೃಷ್ಟ ಷಾಂಡೆಲಿಯರ್ ವ್ಯವಸ್ಥೆ. ದೀಪಗಳನ್ನು ಹಚ್ಚಿದಾಗ ಒಳಗಿನ ಚಂದವನ್ನು ಬಣ್ಣಿಸಲಾಗದು. ಬಿಜಾಪುರದ ಗೋಲಗುಮ್ಮಟದಲ್ಲಿ ಪಿಸುಮಾತು ಮಾರುದನಿ ಕೊಡುವಂತೆ ಇಲ್ಲಿಯೂ ಸಣ್ಣ ಪ್ರಮಾಣದಲ್ಲಿ ಮಾತು ಮರಿಯಾಗುತ್ತದೆ. ಯಾವ ಮತೀಯನೇ ಆಗಿರಲಿ ಒಳಗೆ ನಿಂತರೆ ಪರಮಾತ್ಮ ಸನ್ನಿಧಾನದಲ್ಲಿದ್ದಂತೆ ಭಾವನೆಯಾಗಿ ಪ್ರಾರ್ಥನೆ ತಂತಾನೆ ಮೂಡುತ್ತದೆ. ಇತ್ತೀಚಿನವರೆಗೆ ಸಿಟಾಡೆಲ್ ಇಂಗ್ಲಿಷ್ ಜನರ ವಸತಿಯಾಗಿತ್ತಂತೆ. ಇಲ್ಲಿಯೇ ಇರುವ 'ಗೋರ್ ಹಾ' ಅರಮನೆ ವಿಸ್ತಾರದಲ್ಲಿ ಚಿಕ್ಕದಾದರೂ ಇಸ್ಲಾಮಿಕ್ ಕಲೆಯ ದೃಷ್ಟಿಯಿಂದ–ಮಹಮದ್ ಆಲಿಯ ಜೀವಿತದ ದೃಷ್ಟಿಯಿಂದ ಪ್ರಮುಖವಾದುದಾಗಿದೆ.

ಮಹಮದ್ ಆಲಿಯ ವಂಶಸ್ಥರ ಇತಿಹಾಸ ವಿವೇಚನೆಗೆ ನಗರ ಮಧ್ಯದ ಮಣಿಯಾಲ್ ಅರಮನೆ ಸೂಕ್ತವಾಗಿದೆ. ಈ ಅರಸುಮನೆತನದ ಪ್ರತಿಯೊಬ್ಬರ ವರ್ಣಚಿತ್ರಗಳಿವೆ. ಈ ಅರಮನೆಯ ಒಳ ಅಲಂಕಾರ ಪ್ರಮುಖವಾಗಿದೆ. ಪ್ರತಿಯೊಂದು ಕೋಣೆಯ ಅಲಂಕಾರ, ಮೇಲುಮುಚ್ಚು ಭಿನ್ನಭಿನ್ನವಾಗಿವೆ. ಈಜಿಪ್ಟಿನ ಶೈಲಿ, ಆಲ್‌ಬೇನಿಯಾದ ಶೈಲಿ, ಇಥಿಯೋಪಿಯಾ ಶೈಲಿ, ಪರ್ಶಿಯನ್ ಶೈಲಿ, ಇತ್ಯಾದಿ. ಕಟ್ಟಿಗೆಯಿಂದ ನಿರ್ಮಿತವಾದ ಈ ಅರಮನೆ, ಇಲ್ಲಿಯ ದರಬಾರ್, ಆಗಿನ ಕಾಲದ ವೈಭವವನ್ನು ಮೆರೆಸುತ್ತದೆ. ಬಂಗಾರದ ಕೆಲಸ,

ಕುಸುರಿಯ ಕೆಲಸ ಚತುರತೆಯಿಂದ ಮಾಡಲ್ಪಟ್ಟಿವೆ. ವರ್ಣ ಚಿತ್ರಗಳ ು ಜೀವಂತವಾಗಿವೆ. ಇತ್ತೀಚಿನ ಅರಸು ಪದಚ್ಯುತ ಫರೂಕ್‌ದೊರೆಯ ಅರಮನೆ ಇನ್ನೊಂದು. ಈ ಅರಮನೆ ಇಂಗ್ಲೆಂಡಿನ ಅರಮನೆಯೊಂದರ ನಕಲು. ಆಧುನಿಕ ಅನುಕೂಲಗಳಿಂದ ಕೂಡಿದ ಕಟ್ಟಿಗೆಯ ಅರಮನೆ. ಫರೂಕ್‌ದೊರೆಯ, ಅವನ ರಾಣಿಯ ಮತ್ತು ಮಕ್ಕಳ ಕೋಣೆಗಳು ವೈಭವೋಪೇತವಾಗಿವೆ. ಕೈರೋ ಬಾಜಾರಗಳಲ್ಲಿ ನಡೆವಾಗ ಅರೇಬಿಯನ್ ಕಥೆಗಳ ಸಿನಿಮಾಗಳ ನೆನಪಾಗುತ್ತದೆ. ಆಫ್ರಿಕೆಯ ಬೇರೆಬೇರೆ ರಾಷ್ಟ್ರಗಳ ಗುಡಿಕೈಗಾರಿಕೆ ವಸ್ತುಗಳು, ಈಜಿಪ್ಟಿನ ಪ್ರಮುಖ ವ್ಯಾಪಾರವಾದ ಸುಗಂಧ ದ್ರವ್ಯಗಳು ಇಲ್ಲಿ ಹೇರಳವಾಗಿ ಸಿಗುತ್ತವೆ. ಯಾವುದಾದರೂ ಅಂಗಡಿಗೆ ಹೋದರೆ ಅವನು ನಿಮಗೆ ಏನಾದರೂ ಒಂದು ವಸ್ತುವನ್ನು ಕಟ್ಟಿಯೇ ಕಳಿಸುತ್ತಾನೆ. ಈ ಜನ ತುಂಬಾ ಮಾತುಗಾರರು. ವ್ಯಾಪಾರಕ್ಕೋಸ್ಕರ ಸ್ನೇಹಿತರಿಗಿಂತ ಹೆಚ್ಚಿನ ಸಲುಗೆಯಿಂದ ಒತ್ತಾಯಪಡಿಸುತ್ತಾರೆ. ಡಾಲರ್ ಮತ್ತು ಇಂಗ್ಲಿಷ್ ಪೌಂಡ್ ಎಂದರೆ ಬಾಯಿಬಾಯಿ ಬಿಡುತ್ತಾರೆ. ವಸ್ತುಗಳ ದರಗಳಲ್ಲಿ, ಗುಣಮಟ್ಟದಲ್ಲಿ ವಿಪರೀತ ಮೋಸ, ಚೌಕಾಸಿ ನಡೆಯುತ್ತದೆ. ಇವರಿಗೆ ಸಿಗುವ ಮತ್ತು ಸುಲಭವಾಗಿ ಪಕ್ಕಾಗುವ ಗಿರಾಕಿಗಳೆಂದರೆ ಅಮೇರಿಕನರು. ಆದರೆ ಇಡೀ ಈಜಿಪ್ಟ ದೇಶ ಯುದ್ಧ ಸನ್ನದ್ಧತೆಯಲ್ಲಿರುವ ಕಾರಣ ಪ್ರವಾಸಿಗರ ಸಂಖ್ಯೆ ಕಳೆದ ಮೂರು ವರ್ಷಗಳಿಂದ ತುಂಬಾ ಕಡಿಮೆಯಾಗಿದೆಯೆಂದು ಹೇಳುತ್ತಾರೆ.

ಫ್ರೆಂಚರು ಐಫೆಲ್ ಟವರ್ ಕಟ್ಟಿ ಅದರಿಂದ ದುಡ್ಡು ಮಾಡುತ್ತಿರುವುದನ್ನು ಕಂಡು ಅನೇಕ ರಾಷ್ಟ್ರಗಳಲ್ಲಿ ಈಗ ಇಂತಹ ಮಾದರಿಯ ಗೋಪುರಗಳನ್ನು ಕಟ್ಟಿದ್ದಾರೆ. ಕೈರೋ ಟವರ್ ಇಂತಹ ಒಂದು ಗೋಪುರ. ಗೋಪುರದ ತುದಿಗೆ ಸೇರಲು ವಿದ್ಯುತ್ ತೊಟ್ಟಿಲುಗಳಿವೆ. ಪ್ರವೇಶಧನ ನೀಡಿ ಮೆಟ್ಟಲನ್ನೇರಿ ಹೋದರೆ ಮೇಲೆ ಕೈರೋದ ರಮ್ಯನೋಟವನ್ನು ಮೆಲಕು ಹಾಕುತ್ತಾ ಹೊಟ್ಟೆ ತುಂಬಿಕೊಳ್ಳಲು ಹೋಟೆಲ್ ಇದೆ. ಈ ದೇಶದ ಜೀವದಂತೆ ಹರಿಯುತ್ತಿರುವ ನೈಲ್ ಕೈರೋದ ಮಧ್ಯ ಭಾಗದಲ್ಲಿ ಧೀರ ಗಂಭೀರವಾಗಿ ನಡೆದಿದೆ. ಕೈರೋದ ಚಂದವನ್ನು ನೋಡಬೇಕೆಂದರೆ ನೈಲ್ ನದಿಯಲ್ಲಿ ನೌಕಾ ವಿಹಾರ ಮಾಡಬೇಕು.

ಪುರಾತನ ಈಜಿಪ್ಟಿನ ರಾಜಧಾನಿ ಮೆಮ್ಫಿಸ್ ಎರಡನೆಯ ರಾಮ್ಸೆಸ್ ಪ್ರಭುವಿನ ಕಾಲಕ್ಕೆ ಪ್ರಪಂಚದ ಪ್ರಮುಖ ಪಟ್ಟಣಗಳಲ್ಲಿ ಒಂದಾಗಿತ್ತು. ಇಂದು

ಹಂಪೆಗಿಂತ ಕೊಂಪೆಯಾದ ಹಳ್ಳಿ. ಇಲ್ಲಿ ನಡೆದ ಉತ್ಖನನದಿಂದ ಅಮೂಲ್ಯ ವಾದ ಶಿಲ್ಪಕೃತಿಗಳು, ಮಡಕೆಗಳು ಮುಂತಾದುವೂ ದೊರೆತಿವೆ. ಗೊಮ್ಮಟ ಗಾತ್ರದ ರಾಮ್ಸೆಸ್ ಪ್ರಭುವಿನ ಮೂರ್ತಿ ಭಗ್ನವಾಗಿದ್ದರೂ, ನೆಲದ ಮೇಲೆ ಮಲಗಿಸಿ ಹೊಂದಿಸಲ್ಪಟ್ಟಿರುವುದರಿಂದ ಅಮೋಘವಾಗಿದೆ. ಮೆಮ್ಫಿಸ್‌ನ ಪಕ್ಕದಲ್ಲಿರುವುದು ಸಕ್ಕಾರ. ಇದೊಂದು ಶ್ಮಶಾನ. ಇಲ್ಲಿ ಅಸಂಖ್ಯಾತ ಗೋರಿಗಳು ದೊರೆತಿವೆ. ಭೂಸ್ವಾಮಿ 'ಟೀ' ಎಂಬಾತನ ಸಮಾಧಿ ಮಹತ್ವ ದ್ದಾಗಿದೆ. ಈ ಸಮಾಧಿಯ ಭಿತ್ತಿಗಳ ಮೇಲೆ ತತ್ಕಾಲೀನ ಈಜಿಪ್ಟಿನ ಜನ ಜೀವನದ ಪ್ರತಿ ವಿಭಾಗವನ್ನು ಕೆತ್ತಲಾಗಿದೆ. ಆಗ ಹಾಕಿದ ಬಣ್ಣ (ಸು. ೫೦೦೦ ವರ್ಷಗಳ ಹಿಂದೆ) ಈಗಲೂ ಕೊಂಚ ಕೊಂಚ ಉಳಿದಿದೆ.

ಇನ್ನೊಂದು ಕಡೆ ಇರುವ ಸಮಾಧಿಗಳೆಲ್ಲ ದೈವಿಕ ಸಮಾಧಿಗಳೆಂದು ಹೇಳ ಬಹುದು. ಪುರಾತನ ಈಜಿಪ್ಟಿನಲ್ಲಿ ಆಕಳ ಕರು ಅಥವಾ ನಾಯಿಮರಿ ಯನ್ನು ದೇವರಿಗೆ ಮೀಸಲು ಬಿಡುತ್ತಿದ್ದರು. ಕರುವಿನ ಒಂದು ವಯಸ್ಸಿನಲ್ಲಿ ಅದನ್ನು ಜೀವಸಮಾಧಿ ಮಾಡುತ್ತಿದ್ದರು. ಅದರಂತೆಯೇ ನಾಯಿಮರಿಗೂ ಗತಿ ದೊರೆಯುತ್ತಿತ್ತು. ಇಂತಹ ಸಮಾಧಿಗಳನ್ನು ಸಾಲುಸಾಲಾಗಿ ಇಲ್ಲಿ ಉತ್ಖನನದಲ್ಲಿ ಹೊರತೆಗೆಯಲಾಗಿದೆ. ಸರಕಾರ ಭೂಗರ್ಭದಲ್ಲಿಯೇ ಅವು ಗಳಿಗೆ ಭದ್ರವ್ಯವಸ್ಥೆ ಮಾಡಿ ನೋಡುವವರಿಗೆ ಪಥ ನಿರ್ಮಿಸಿ ದೀಪದ ವ್ಯವಸ್ಥೆ ಮಾಡಿ ಅನುಕೂಲ ಮಾಡಿದ್ದಾರೆ. ಈ ಸಮಾಧಿಗಳು ೬ × ೬ × ೮ ಅಡಿ ಗಾತ್ರದ ಅಖಂಡ ಶಿಲೆಯ ಪೆಟ್ಟಿಗೆಗಳು. ಇವುಗಳ ನಿರ್ಮಾಣ, ಸಾಗಾಣಿಕೆ, ಭೂಮಿಯಲ್ಲಿ ಅವುಗಳ ಸ್ಥಾಪನೆ ಎಲ್ಲಾ ಒಂದು ಬೃಹತ್‌ಕೆಲಸವೇ ಸರಿ.

ನೈಲ್ ನದಿಯ ಪಕ್ಕದಲ್ಲಿ ಇದುವರೆಗೆ ಗುದ್ದಲಿ ಹಾಕದೆ ಇರುವ ಅನೇಕ ದಿನ್ನೆಗಳಿವೆ. ಈ ದಿನ್ನೆಗಳ ಗರ್ಭದಲ್ಲಿ ಏನೆಲ್ಲಾ ಅಡಗಿದೆಯೋ ಅದು ತಾಯಿ ನೈಲ್‌ನದಿಗೇ ಗೊತ್ತು. ಈಜಿಪ್ಟಿನ ಜನ ಎಲ್ಲಾ ಪೂರ್ವಸ್ಥ ರಂತೆ ಸರಳರು, ಬಡವರು, ಮತ್ತು ಎಲ್ಲಾ ಕಷ್ಟಜೀವಿಗಳು. ಇಡೀ ದೇಶ ಯುದ್ಧಸನ್ನದ್ಧತೆಯಲ್ಲಿ ತೊಡಗಿದೆ. ಪ್ರತಿಧಾಳಿಯಲ್ಲಿ ಇಸ್ರೇಲ್‌ನವರದೇ ಮೇಲುಗೈ ಆಗುತ್ತಿರುವುದರಿಂದ ಸರಕಾರದಿಂದ ಹಿಡಿದು ಸಾಮಾನ್ಯ ಪ್ರಜೆಯ ವರೆಗೆ ಭಯಮನಸ್ಕತೆಯುಟಾಂಗಿದೆ. ಸರಕಾರಿ ಕಛೇರಿಗಳ ಮುಂದೆ ರಕ್ಷಕ ಗೋಡೆಗಳನ್ನು ಕಟ್ಟಿದ್ದಾರೆ. ಸೇತುವೆಗಳ ಪ್ರದೇಶಗಳಲ್ಲಿ ರಕ್ಷಿತ ಆವರಣಗಳ ಒಳಗೆ ಸಶಸ್ತ್ರ ಪಡೆ ಕಾಯುತ್ತ ಇರುತ್ತದೆ. ನಗರದ ಆಯಕಟ್ಟಿನ ಜಾಗ

ಗಳಲ್ಲಿ ಬಿಗುವಾದ ಕಾವಲಿದೆ. ಆದರೆ ಸಾಮಾನ್ಯ ಈಜಿಪ್ಶಿಯನರಿಗೆ ಯುದ್ಧ ಬೇಕಿಲ್ಲ. ಮರ್ಯಾದೆಯ ಸಂಧಾನಕ್ಕೆ ಅವರ ಪುರಸ್ಕಾರವಿದೆ. ಆದರೆ ಪ್ರತಿಯೊಬ್ಬರಲ್ಲಿ ಅವರ ನೇತಾರ ನಾಸರ್ ಕುರಿತು ಅಚಲ ಅಭಿಮಾನವಿದೆ. ಅಸ್ಖಲಿತ ವಿಶ್ವಾಸವಿದೆ. ಇವರ ವಿದ್ಯಾಭ್ಯಾಸವೆಲ್ಲಾ ಅರಾಬಿಕ್ ಭಾಷೆಯಲ್ಲಿ ಜರುಗುತ್ತದೆ. ಹಳ್ಳಿಯ ಹೆಂಗಸರಿಂದ ಹಿಡಿದು ಪಟ್ಟಣದ ನಾಗರಿಕ ವರ್ಗದವರೆಗೆ ಪ್ರತಿಯೊಬ್ಬರೂ ಪಾಶ್ಚಾತ್ಯ ರೀತಿಯ ಉಡುಗೆಯನ್ನೇ ಧರಿಸುತ್ತಾರೆ. ಅರಬರು ವಿಪರೀತ ತಿಂಡಿಪೋತರು. ಭಾರತೀಯರ ಬಗ್ಗೆ ಇವರಿಗೆ ವಿಪರೀತ ಕಕ್ಕುಲತೆ. ಸಾಮಾನ್ಯರಿಂದ ಹಿಡಿದು ಸರಕಾರೀ ಅಧಿಕಾರಿಗಳ ವರೆಗೆ ಸರ್ವರೂ ಭಾರತೀಯರನ್ನು ವಿಶ್ವಾಸ ಪ್ರೀತಿಗಳಿಂದ ಕಾಣುತ್ತಾರೆ.

ಕೈರೋ ಬಿಡುವಾಗ ನಮಗೆ ಹೇಗೋ ಆಯಿತು. ಈ ಪುರಾತನ ದೇಶವನ್ನು ನೋಡಲು ಕೆಲ ತಿಂಗಳುಗಳೇ ಬೇಕು. ಒಂದು ವಾರದ ಕಾಲದಲ್ಲಿ ಏನನ್ನು ತಾನೇ ನಾವು ಅರಿಯಲು ಸಾಧ್ಯ. ಆದರೆ ಕೈರೋ ನಿರೀಕ್ಷೆ ನನ್ನ ಮನಸ್ಸಿನಲ್ಲಿ ಸುಮಾರು ಹದಿನೈದು ವರ್ಷಗಳಿಂದ ಮನೆ ಮಾಡಿಕೊಂಡಿದ್ದ ಕಾರಣ ಈ ವೇಗದ ಸಂದರ್ಶನ ಅತೃಪ್ತಿಯನ್ನೇ ನೀಡಿತು.

ನಾಸೆರ್ ಆಡಳಿತದ ಒಂದೇ ಚಿಕ್ಕ ಪ್ರಸಂಗವನ್ನು ಬರೆಯಬೇಕೆನ್ನಿಸುತ್ತದೆ. ಈ ಪ್ರಸಂಗದಿಂದ ನಾವು ಕಲಿಯುವುದು ಸಾಕಷ್ಟಿದೆ. ಸಕ್ಕಾರ ಎಂಬ ಪ್ರಾಚೀನ ಸ್ಥಳವೊಂದರಲ್ಲಿ ಸರಕಾರದ ಪ್ರವಾಸೋದ್ದಿಮೆಯ ಇಲಾಖೆಯು ದೊಡ್ಡ ಹೋಟೆಲೊಂದನ್ನು ಕಟ್ಟಬಯಸಿ ಕಂಟ್ರಾಕ್ಟು ನೀಡಿತು. ಕೆಲಸ ಅತಿ ತ್ವರೆಯಲ್ಲಿಯೇ ಮುಗಿದು ನಾಸೆರ್ ಅವರ ಅಮೃತ ಹಸ್ತದಿಂದ ಈ ಹೋಟೆಲ್ ಪ್ರಾರಂಭವೂ ಆಯಿತು. ಕೆಲ ತಿಂಗಳುಗಳ ನಂತರ ಈ ಹೋಟೆಲಿನಲ್ಲಿ ತಂಗಿದ್ದ ಒಬ್ಬ ಇಂಜನೀಯರು ಈ ಕಟ್ಟಡದ ಮಾಡಿನಲ್ಲಿ ಸೂಕ್ಷ್ಮ ಬಿರುಕುಗಳನ್ನು ಗುರುತಿಸಿ ಅದರ ಭದ್ರತೆಯ ಬಗ್ಗೆ ಹೆದರಿ ನಾಸೆರ್ ಅವರಿಗೆ ನೇರವಾಗಿ ಪತ್ರ ಬರೆದು ಕೂಲಂಕಷ ವಿಚಾರಣೆ ನಡೆಸಲು ಪ್ರಾರ್ಥಿಸಿದರಂತೆ. ನಾಸೆರ್ ಅವರು ತಕ್ಷಣ ತಜ್ಞರ ವಿಚಾರಣೆಗೆ ಈ ಕಟ್ಟಡವನ್ನು ಒಪ್ಪಿಸಿದರು. ತಜ್ಞರು ಎಲ್ಲಾ ವಿಧ ಪರೀಕ್ಷೆ ನಡೆಸಿ ಕಟ್ಟಡವು ತೀರ ಅಪಾಯಕಾರಿ ಪರಿಸ್ಥಿತಿಯಲ್ಲಿದೆ. ಹೋಟೆಲನ್ನು ಕೂಡಲೇ ತೆರವು ಮಾಡಬೇಕು ಎಂದು ರಿಪೋರ್ಟ್ ಮಾಡಿದರು. ಹೋಟೆಲ್ ಖಾಲಿಯಾದ ಮೇಲೆ ಒಂದು ವರ್ಷದ ನತಂರ ಒಂದು ಭಾಗದ ಪಾಯ ಕುಸಿದು ಬಿದ್ದುಹೋಗಿದೆ.

ಆದರೆ ನಾಸೆರ್ ಅವರು ಕೂಡಲೇ ಈ ಕಟ್ಟಡಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಕಂಟ್ರಾಕ್ಟರ್ ಅವರ ಮೇಲೆ ರಾಷ್ಟ್ರದ್ರೋಹದ ಮೊಕದ್ದಮೆ ಹೂಡಿ ಅವರು ಸೆರೆಮನೆವಾಸಕ್ಕೆ ಹೋಗುವಂತೆ ಮಾಡಿದ್ದಾರೆ.

ಬಹು ಮುಖ್ಯ ಸಂಗತಿಯೆಂದರೆ ಈ ಕಟ್ಟಡದ ಸುತ್ತು ಮುಳ್ಳು ತಂತಿ ಬೇಲಿ ಹಾಕಿ ಒಂದೆಡೆ ಈ ಹಗರಣದ ಇತಿಹಾಸವನ್ನು ದೊಡ್ಡ ಫಲಕವೊಂದರ ಮೇಲೆ ಬರೆಸಿ ಪಾತಕರಿಗೆ ಎಚ್ಚರಿಕೆ ನೀಡಲಾಗಿದೆ. ನಾವೂ ಹಾಗೆ ಮಾಡಿದರೆ?

ನಮ್ಮ ಮಾರ್ಗದರ್ಶಿಯಾಗಿದ್ದ "ಕ್ಯಾಂಡಿ" ವಿಚಿತ್ರ ವ್ಯಕ್ತಿ. ಆತನು ನಿಜವಾಗಿ ಮುಸ್ಲಿಮ. ಆತನ ನಿಜವಾದ ಹೆಸರೂ ಬೇರೆ. ಆದರೆ ನಮಗೆ ಒಂದು ಬಾರಿ ತಾನು ಕ್ರಿಸ್ತೀಯನೆಂದು ಹೇಳಿಕೊಂಡ. ಮರುಕ್ಷಣದಲ್ಲಿಯೇ "ಸಾರಿ, ನಾನು ಮುಸ್ಲಿಮರ್" ಎಂದ. ಎಲ್ಲಾ ಪ್ರವಾಸಿ ಮಾರ್ಗದರ್ಶಿಗಳಂತೆ ಈತನೂ ಪ್ರವಾಸಿಗೆ ಮೊದಲು ತಿಳಿಸುವುದು ಕೈರೋ ನಗರದ ರಾತ್ರಿ ಜೀವನದ ವಿಷಯ. ಒಮ್ಮೆ ನಾವು ಸಿಟಾಡೆಲ್ ನೋಡಲು ಹೋಗುತ್ತಿರುವಾಗ ಪಕ್ಕದಲ್ಲಿಯ ಬೆಟ್ಟವನ್ನು ತೋರಿಸಿ 'ಆ ಬೆಟ್ಟದಿಂದಲೇ ಪಿರಮಿಡ್ ಕಟ್ಟಲು ಕಲ್ಲನ್ನು ತರಲಾಯಿತು' ಎಂದ. 'ಸರಿ ಆ ಬೆಟ್ಟದ ಒಂದು ಚಿತ್ರ ತೆಗೆಯೋಣ' ವೆಂದು ಕಾರು ನಿಲ್ಲಿಸಿ ನನ್ನ ಸೋದರ ಒಂದು ಚಿತ್ರ ತೆಗೆಯುತ್ತಿರಲಾಗಿ ಅಲ್ಲಿಗೊಬ್ಬ ವೃದ್ಧ ಬಂದ. ಅವನು ತನ್ನ ಸಿಗರೇಟ್ ಪ್ಯಾಕಿನ ಮೇಲೆ ಏನೋ ಬರೆದುಕೊಂಡ. ನಾವದನ್ನು ನೋಡಲಿಲ್ಲ. ನಮ್ಮ ಕಾರು ಮುಂದೆ ಹೋಗುತ್ತಿರುವಾಗ ಕನ್ನಡಿಯಲ್ಲಿ ಅವನು ಬರೆದುಕೊಳ್ಳುತ್ತಿರುವುದನ್ನು ಡ್ರೈವರ್ ನೋಡಿ ಗಾಡಿಯನ್ನು ಹಿಂದಕ್ಕೆ ತಂದನು. ಸರಿ, ಅರ್ಧಗಂಟೆ ಕಾಲ ಆ ಮುದುಕನಿಗೂ ಕ್ಯಾಂಡಿಗೂ ವಾದವೋ ವಾದ. ಅನೇಕ ಜನ ಸೇರಿದರು. ಕಡೆಗೆ ಆ ಮುದುಕ ಆ ಸಿಗರೇಟ್ ಪ್ಯಾಕನ್ನು ಹರಿದು ಹಾಕಿದ. ಮುಂದೆ ಗೊತ್ತಾಯಿತು. ವಿಷಯ ಏನೆಂದರೆ ಆ ಬೆಟ್ಟದ ತಪ್ಪಲಲ್ಲಿ ಈಜಿಪ್ಟ್ ಸೇನೆಯ ವಸತಿಯಿದೆ. ಅಲ್ಲಿ ಯಾರೂ ಫೋಟೋ ತೆಗೆಯುವಂತಿಲ್ಲ. ನಾವು ಫೋಟೋ ತೆಗೆದಿದ್ದು ನೋಡಿ ಆ ಮುದುಕ ಕಾರಿನ ನಂಬರು ಬರೆದುಕೊಂಡ. ಅವನೇನಾದರೂ ಪೋಲೀಸರಿಗೆ ತಿಳಿಸಿದ್ದರೆ ವಿಪರೀತ ತೊಂದರೆಯಾಗುತ್ತಿತ್ತೋ ಏನೋ. ಜನರಲ್ಲಿಯ ಜಾಗೃತಿಯನ್ನು ನೋಡಿ ಒಂದು ರೀತಿ ಅಭಿಮಾನವೆನಿಸಿತು. ಆದರೆ ಇಪ್ಪತ್ತನೆಯ ಶತಮಾನದಲ್ಲಿ

ಕೂಡಾ ಮಾನವತೆಯು ಯುದ್ಧದಿಂದ ದೂರವಾಗಲಿಲ್ಲವಲ್ಲ ಎಂದು ತಿಳಿದು ಸಂತಾಪವೆನಿಸುತ್ತದೆ. ಆದರೆ ದೇಶಗಳ ಗ್ರಹಚಾರವನ್ನು ಬದಲಿಸಲು ಸಾಧ್ಯವಿಲ್ಲ. ಇಡೀ ಅರಬ ರಾಜ್ಯಗಳಲ್ಲಿ ಶತಮಾನಗಳ ನಂತರ ದೊರೆತಿರುವ ಸ್ವಾತಂತ್ರ್ಯವನ್ನು ಉಳಿಸಿ ಬೆಳೆಸಿಕೊಳ್ಳಲು ನಿರಂತರ ಪ್ರಯತ್ನವೇನೋ ನಡೆದಿದೆ. ಕೈರೋ ದೊಡ್ಡ ನಿಧಿಯಂತೆ ಇದೆ. ಇಲ್ಲಿಯ ಮ್ಯೂಜಿಯಂ. ಇಲ್ಲಿಯ ವಿಶಾಲಬೀದಿಗಳು. ಇಲ್ಲಿಯ ಐತಿಹಾಸಿಕ ಕಟ್ಟಡಗಳು, ಇವರ ಜ್ವಲಂತ ಇತಿಹಾಸ ಮತ್ತೆ ಆ ಸ್ವಚ್ಛ ನೀಲಿಯ ನೈಲ್ ಮಹಾನದಿ ನಮ್ಮನ್ನು ಸೆರೆಹಿಡಿದಿದ್ದವು. ಆದರೆ ನಾವು ಪ್ರವಾಸಿಗರು. ಗುಳೇ ಕೀಳಲೇಬೇಕು ಅಲ್ಲವೇ ? ಕೈರೋ ಮಾತೆ, ನಿನಗೆ ಪ್ರಣಾಮ' ನಮ್ಮ ಚಿಕ್ಕ ಸಂದರ್ಶನ ಮಾಗಿಸಿ ಗ್ರೀಕರ ರಾಷ್ಟ್ರೀಯ ವಿಮಾನ ಸಾರಿಗೆ ಸಂಸ್ಥೆಯಾದ 'ಒಲಂಪಿಕ್ ಏರ್‌ಲೈನ್ಸ್'ನಲ್ಲಿ ಅಥೆನ್ಸಿಗೆ ತೆರಳಿದೆವು.

ಅಥೆನ್ಸ್: ಪಶ್ಚಿಮದ ಪಿತಾಮಹರು

ಪಾಶ್ಚಾತ್ಯ ಸಂಸ್ಕೃತಿಯ ತೊಟ್ಟಿಲು ಗ್ರೀಸ್ ಮತ್ತು ರೋಮ್. ಪಾಶ್ಚಾತ್ಯರ ಶಾಸ್ತ್ರ, ಧರ್ಮ, ಕತೆ, ಕವಿತೆ, ವಿಜ್ಞಾನ, ಜೀವನ ಧರ್ಮ ಎಲ್ಲ ಬೆಳೆದು ಬಂದುದು ಗ್ರೀಸ್‌ನಲ್ಲಿ. ಎಲ್ಲ ಪಾಶ್ಚಾತ್ಯರಿಗೆ ಗ್ರೀಸ್ ಪವಿತ್ರ ಯಾತ್ರಾಸ್ಥಳ. ಅಥೆನ್ಸ್ ಗ್ರೀಸಿನ ಮುಖ್ಯ ಪಟ್ಟಣ.

ಪುರಾತನ ಗ್ರೀಸ್ ದೇಶದ ರಾಜಸೌಧ ; ಸಾಹಿತ್ಯ ಮಂಟಪ ; ದೇವಾಲಯ **ಆಕ್ರೊಪೋಲಿಸ್**. ನಗರದ ಮಧ್ಯದಲ್ಲಿರುವ ಬೆಟ್ಟದ ನೆತ್ತಿಯ ಮೇಲೆ ಕೋಟೆ ಕಟ್ಟಿ ಅದರೊಳಗೆ ಅಥಿನ್ಯ ದೇವತೆಯ ದೇವಾಲಯ, ವಿಜಯ ದೇವತೆಗೆ ದೇವಾಲಯ, ರಾಜಕರ್ಮಗಳಿಗೆ ಅವಶ್ಯವಾದ ಅನೇಕ ಭವನಗಳನ್ನು ನಿರ್ಮಿಸಿದ್ದರು. ಕಾಲಾಂತರದಲ್ಲಿ ಗ್ರೀಕರಿಗೆ ಮತ್ತು ಪರ್ಶಿಯನರಿಗೆ ನಡೆದ ಯುದ್ಧದಲ್ಲಿ ಅಥೆನ್ಸ್‌ನ ಅವನತಿಯಾಗಿ ಆಕ್ರೊಪೋಲಿಸ್ ವಿಧ್ವಂಸವಾಯಿತು. ಕ್ರಿಶ್ಚಿಯನ್ ಧರ್ಮಯುದ್ಧ ಕಾಲದಲ್ಲಿ ತುರುಷ್ಕ ಪರ್ಶಿಯನ್ನರ ಕೈಯಲ್ಲಿದ್ದ ಆಕ್ರೊಪೋಲಿಸ್‌ನ್ನು ವಶಪಡಿಸಿಕೊಳ್ಳಲು ಕ್ರಿಸ್ತೀಯರೆ ಸಿಡಿಮದ್ದು ಹಾಕಿ ಅಥೆನ್ಸ್ ದೇವತೆಯ ಅರ್ಧಶಿಥಿಲ ದೇವಾಲಯವನ್ನು ಪೂರ್ತಿ ನೆಲಸಮ ಮಾಡಿದರು. ಆಧುನಿಕ ಗ್ರೀಸಿನ ಜನನವಾದ ಮೇಲೆ ಆಕ್ರೊಪೋಲಿಸ್‌ನ್ನು ಆದಷ್ಟು ಪುನರ್ರಚಿಸಿದ್ದಾರೆ. ಆದರೆ ಇಲ್ಲಿಯ ಅಮೂಲ್ಯ ಶಿಲ್ಪಕೃತಿಗಳೆಲ್ಲ

ಇಂಗ್ಲಿಷ್ ಮತ್ತು ಫ್ರೆಂಚ್ ಅಭಿಮಾನಿಗಳ ಕೃಪೆಯಿಂದ ಲಂಡನ್ ಮತ್ತು ಪ್ಯಾರಿಸ್‌ನ ಮ್ಯೂಜಿಯಂಗಳಲ್ಲಿ ಭದ್ರವಾಗಿವೆ.

ಆಕ್ರೊಪೊಲಿಸ್‌ನ ಪಕ್ಕದಲ್ಲಿರುವುದು ರೋಮನ್ ಅಗೋರಾ. ಗ್ರೀಸ್ ರೋಮನರ ಆಡಳಿತಕ್ಕೆ ಒಳಪಟ್ಟಾಗ ತಮ್ಮ ರಾಜತಾಂತ್ರಿಕ ಕೈಂಕರ್ಯಗಳಿಗಾಗಿ ರೋಮನರು ಅಗೋರಾ ಭವನಗಳನ್ನು ನಿರ್ಮಿಸಿದರು. ತುರುಕರು ಅವನ್ನು ನಾಶಗೊಳಿಸಿದ್ದಾರೆ. ಇಲ್ಲಿಯ ಭಗ್ನ ಶಿಲ್ಪಕೃತಿಗಳನ್ನು ಕಂಡಾಗ ರೋಮಾಂಚಕ ರೋಮನ್ ಸಾಮ್ರಾಜ್ಯದ ಕಲ್ಪನೆ ಬರುತ್ತದೆ. ಇಲ್ಲಿಯೇ ಇರುವ ಮ್ಯೂಜಿಯಂನಲ್ಲಿ ಅನೇಕ ಭಗ್ನ ಶಿಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ. ಪುರಾತನ ಅಗೋರೆಯ ಪ್ರತಿಕೃತಿಯನ್ನು ಮಾಡಿಟ್ಟಿದ್ದಾರೆ. ಅಕ್ರೊಪೊಲಿಸ್‌ನಲ್ಲಿರುವ ಮ್ಯೂಜಿಯಂ ಕೂಡಾ ಅನೇಕ ಸುಂದರ ಮೂಲಕೃತಿಗಳನ್ನು ; ಅನೇಕ ಪ್ರತಿಕೃತಿಗಳನ್ನು ಒಳಗೊಂಡಿದೆ. ಅರ್ಧಮರ್ಧ ಮುರಿದ ಶಿಲ್ಪಗಳನ್ನು ಗೋಡೆಗೆ ಹೊಂದಿಸಿ ಪ್ಲಾಸ್ಟರ್‌ನಲ್ಲಿ ಶಿಲ್ಪದ ಆಕೃತಿ ಮೂಡಿಬರುವಂತೆ ರೂಪುಗೊಳಿಸಿದ್ದಾರೆ. ಜಗದ್ವಿಜೇತ ಅಲೆಗ್ಸಾಂಡರ್ ಪ್ರಭುವಿನ ದೇಶವಾದರೂ ಗ್ರೀಸಿನ ಇತಿಹಾಸ ಕರುಣಾಜನಕವಾಗಿದೆ. ಮೇಲಿಂದ ಮೇಲೆ ಧಾಳಿಗೆ ಗುರಿಯಾಗಿ ಘಾಸಿಯಾಗಿದೆ. ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿ ಗ್ರೀಕರ ಇತಿಹಾಸದ ಅವಲೋಕನ ಮಾಡಬಹುದು. ವ್ಯಕ್ತಿಶಿಲ್ಪಗಳು, ವೀರಗಲ್ಲುಗಳು, ಸಮಾಧಿ ಬರೆಹಗಳು, ಹಲವಾರು ರೀತಿಯ ಕಂಚಿನ, ಅಮೃತಶಿಲೆಯ, ಬಣ್ಣದ ಮಣ್ಣಿನ ಈ ವಸ್ತುಗಳಲ್ಲಿ ಅವುಗಳನ್ನು ಕುರಿತು ಬರೆದ ಟಿಪ್ಪಣಿಗಳಲ್ಲಿಯೂ ಗ್ರೀಕ್ ಇತಿಹಾಸವನ್ನು ಸುಲಭವಾಗಿ ಗುರುತಿಸಬಹುದು. ಬೈಜಂಟಾಯನ್ ಸಾಮ್ರಾಜ್ಯದ ಪ್ರಖರ ಪ್ರಭಾವಕ್ಕೆ ಸಿಲುಕಿದ ಗ್ರೀಸ್‌ನಲ್ಲಿ ಬೈಜಂಟಾಯನ್‌ಶೈಲಿಯ ಕಲೆಯೇ ಉದ್ಭವಿಸಿತು. ಬಂಗಾರದ ಮೋಜೇಕ್‌ನಿಂದ ಚಿತ್ರಗಳನ್ನು ಕಟ್ಟಿಗೆಯ ಮೇಲೆ ಗೋಡೆಯ ಮೇಲೆ ನಿರ್ಮಿಸುವ ಕಲೆ ರೂಢಿಸಿತು. ಈ ಶಿಲ್ಪಕಲೆಯ ಅಗಾಧ ಸಂಗ್ರಹದ ವಿಶ್ವರೂಪವನ್ನು ನೋಡಬೇಕೆಂದರೆ ಇಲ್ಲಿಯ ಬೈಜಂಟಾಯನ್ ವಸ್ತು ಸಂಗ್ರಹಾಲಯಕ್ಕೆ ಹೋಗಬೇಕು. ಈ ವಸ್ತು ಸಂಗ್ರಹಾಲಯಗಳನ್ನು ಅತ್ಯಂತ ನಾಜೂಕಿನಿಂದ, ಸೌಂದರ್ಯ ಮತ್ತು ಇತಿಹಾಸದ ಅಭಿಲಾಷೆಯಿಂದ ವ್ಯವಸ್ಥೆಗೊಳಿಸಲಾಗಿದೆ.

ಗ್ರೀಸ್ ಮೊದಲಿನಿಂದ ಅರಸೊತ್ತಿಗೆಯ ರಾಷ್ಟ್ರ. ಇತ್ತೀಚೆಗೆ ಮಿಲಿಟರಿ ಕ್ರಾಂತಿಯೊಂದು ನಡೆದು ಅರಸು ಕಾನ್‌ಸ್ಟಂಟೈನ್ ಬಹಿಷ್ಕೃತರಾಗಿ

ದ್ದಾರೆ. ಅರಸೊತ್ತಿಗೆಯ ಬದಲು, ಸೈನಿಕ ಮಂಡಲದ ಆಡಳಿತ ನಡದಿದೆ. ಅರಸು ಕಾನ್‌ಸ್ಟಂಟೈನ್ ವಿದೇಶಗಳಲ್ಲಿ ತಲೆಮರೆಸಿಕೊಂಡಿದ್ದಾನೆ. ಈ ರಾಜಮನೆತನದ ಹಿಂದಿನ ಅರಮನೆ 'ಬೇನಾಕಿ' ಇಂದು ದೊಡ್ಡ ಮ್ಯೂಜಿಯಂ ಆಗಿದೆ. ಅರಸರ ಕಾಲದಲ್ಲಿಯೇ ಹಳೆಯ ಈ ರಾಜಭವನವನ್ನು ಮ್ಯೂಜಿಯಂ ಆಗಿ ಪರಿವರ್ತಿಸಿ ಅರಮನೆಯ ಸಕಲ ಅನುಪಯೋಗಿ ವಸ್ತುಗಳನ್ನು ಇಲ್ಲಿ ಪ್ರದರ್ಶಿಸಿದ್ದಾರೆ. ಗ್ರೀಕ್ ಜನ : ಅವರ ವೇಷ, ಆಭರಣ, ಕುಶಲಕಲೆ, ಅರಸೊತ್ತಿಗೆ, ರಾಜಕಿಂಕರರ ಜೀವನ, ರಾಜಮನೆತನದ ಒಳ ಇತಿಹಾಸಕ್ಕೆ ಸೇರಿದ ವ್ಯಕ್ತಿ ಶಕ್ತಿಗಳ ವಿಷಯ, ಆಯುಧೋಪಕರಣ ವಗೈರಾ ತಿಳಿಯ ಬೇಕೆಂದರೆ ಇದೊಂದು ಮುಗಿಯದ ಕೋಶ.

ಗ್ರೀಕ್ ಜನಪದ ನೃತ್ಯಗಳನ್ನು ನೋಡುವ ಸದವಕಾಶ ಪ್ರತಿ ಪ್ರವಾಸಿಗೆ ದೊರೆಯುವಂತೆ ಸರಕಾರ ಏರ್ಪಡಿಸಿದೆ. ವಸಂತಕಾಲದಿಂದ ಮೊದಲ್ಗೊಂಡು ಚಳಿಗಾಲದವರೆಗೆ ಪ್ರತಿನಿತ್ಯ ರಾತ್ರಿ ೧೦ ಗಂಟೆಗೆ ಜನಪದ ನೃತ್ಯಮೇಳ ನಡೆಯುತ್ತದೆ. ಇದಕ್ಕಾಗಿ ಸರಕಾರ ಒಂದು ಸಂಸ್ಥೆಯನ್ನು ಸ್ಥಾಪಿಸಿ ಅವರಿಗೆ ಉಪಯೋಗಕ್ಕಾಗಿ ಉದ್ಯಾನವನದ ಮಧ್ಯದಲ್ಲಿ ಆಕರ್ಷಕ ಸನ್ನಿವೇಶದಲ್ಲಿ ಚಿಕ್ಕ ಬೆಟ್ಟದ ತಪ್ಪಲಿನಲ್ಲಿ ಬಯಲು ರಂಗಮಂದಿರವೊಂದನ್ನು ನಿರ್ಮಿಸಿದೆ. ಇಲ್ಲಿ ಗ್ರೀಸ್ ದೇಶದ ಎಲ್ಲಾ ಭಾಗಗಳಿಂದ ಉತ್ಕೃಷ್ಟವಾದ ಜನಪದ ನೃತ್ಯಪ್ರಕಾರಗಳನ್ನು ಆರಿಸಿ, ತರಬೇತು ನೀಡಿ, ಉತ್ತಮ ಪರಿಕರಗಳಿಂದ ವ್ಯವಸ್ಥೆಗೊಳಿಸಿ ಪ್ರದರ್ಶಿಸುತ್ತಾರೆ. ಅನೇಕ ಜಾನಪದ ನೃತ್ಯಗಳಲ್ಲಿ ಗ್ರೀಸಿನ ಸುವರ್ಣಯುಗದ ವ್ಯಕ್ತಿಗಳ ಕತೆಗಳೂ ಬರುತ್ತವೆ. ಅಲೆಗ್ಝಾಂಡರನ ಆಗಮನ ಒಂದು ನೃತ್ಯದ ವಿಷಯವಾಗಿತ್ತು. ಆಕ್ರೊಪೊಲಿಸ್‌ನಲ್ಲಿ ರಾತ್ರಿಕಾಲದಲ್ಲಿ ಬೆಳಕು ಮತ್ತು ಶಬ್ದದ ಉಪಯೋಗದಿಂದ ಆಕ್ರೊಪೊಲಿಸ್ ಬಾಳಿನ ಗೋಳಿನ ಕತೆಯನ್ನು ನಿರ್ಮಿಸುತ್ತಾರೆ. ಆಧುನಿಕ ತಂತ್ರ ಪ್ರಯೋಗದಿಂದ ಒಂದು ಸ್ಥಳದ ಚರಿತ್ರೆಯನ್ನು ತೋರಿಸುವಲ್ಲಿ ಶಬ್ದ ಮತ್ತು ಬೆಳಕಿನ ಪ್ರಯೋಗ ನೋಡುಗನ ಮೇಲೆ ಅದ್ಭುತ ಪರಿಣಾಮ ಬೀರುತ್ತದೆ. ದಿಲ್ಲಿಯ ಕೆಂಪು ಕೋಟೆಯಲ್ಲಿ ಇಂತಹ ಪ್ರಯೋಗವೊಂದು ಯಶಸ್ವಿಯಾಗಿ ನಡೆಯುತ್ತಿದೆ.

ಅಥೆನ್ಸ್ ಪಟ್ಟಣದ ಆಕಾಶದೃಶ್ಯವನ್ನು ಕಾಣಬೇಕೆಂದರೆ ಫರ್ನಿಕ್ಯುಲರ್ ಎಂಬ ವಾಹನದಲ್ಲಿ ಬೆಟ್ಟದ ತುದಿಗೆ ಏರಬೇಕು. ಆಕ್ರೊಪೊಲಿಸ್‌ಗಿಂತ ಯಾವುದೇ ಕಟ್ಟಡ ಎತ್ತರವಾಗಿರಬಾರದೆಂಬ ಅಭಿಪ್ರಾಯದಿಂದ ಅಥೆನ್ಸ್‌ನಲ್ಲಿ

ಗಗನಚುಂಬಿ ಕಟ್ಟಡಗಳಿಗೆ ಅನುಮತಿಯಿಲ್ಲ. ಆದರೆ ಸುಮಾರು ವಿಸ್ತಾರವಾಗಿ ನಗರ ಹರಡಿದೆ.

ಅಥೆನ್ಸ್ ತುಂಬಾ ಸುಂದರವಾದ ಪಟ್ಟಣ. ವಿಶಾಲವಾದ ಸ್ವಚ್ಛವಾದ ಬೀದಿಗಳು; ದಾರಿಯ ಮಧ್ಯಭಾಗದಲ್ಲಿ, ಚೌಕದಲ್ಲಿ ಪುಷ್ಪಭರಿತ ತೋಟಗಳು. ಎಲ್ಲಿ ನೋಡಿದರೂ ಆಕರ್ಷಕ ರೆಸ್ಟೊರಾಂಟ್‌ಗಳು. ವಿಚಿತ್ರವೆಂದರೆ ಇಲ್ಲಿಯ ರೆಸ್ಟೊರಾಂಟ್‌ಗಳು ಫುಟ್‌ಪಾತ್ ಮೇಲೆ, ರಸ್ತೆ ಚೌಕದ ಮಧ್ಯೆ ಜಾಸ್ತಿ ಜಾಗವಿದ್ದಲ್ಲಿ ಕೂಡ ಹರಡಿವೆ. ಜನ ಇಂತಹ ಜಾಗಗಳಿಗೆ ಮುಗಿಬೀಳುತ್ತಾರೆ. ರಸ್ತೆಯ ಮೇಲೆಯೇ ಇರುವಂತಿರುವ ಈ ರೆಸ್ತೊರಾಗಳಲ್ಲಿ ಕುಳಿತು ಕಾಫಿ, ಟೀ ಅಥವಾ ಬೀರು ಕುಡಿಯುತ್ತಾ ಬರಹೋಗುವ ಕಾಮಿನಿಯರನ್ನು ನೋಡುವುದರಲ್ಲಿಯೇ ಕೆಲವರಿಗೆ ಆನಂದ.

ಜನರ ಏಕಮೇವ ಭಾಷೆ ಗ್ರೀಕ್: ಆದರೆ ಬಹುತೇಕ ಜನರಿಗೆ ಇಂಗ್ಲಿಷ್ ಅಥವಾ ಬೇರಾವುದಾದರೂ ಯೂರೋಪಿಯನ್ ಭಾಷೆ ಬರುತ್ತದೆ. ಗ್ರೀಕರು ತುಂಬಾ ಸುಂದರ ಜನಾಂಗ. ದಷ್ಟಪುಷ್ಟ ಶರೀರದ ಶ್ವೇತವರ್ಣೀಯರು. ಗ್ರೀಕ್ ವಿಗ್ರಹಗಳನ್ನು ಮ್ಯೂಜಿಯಂನಲ್ಲಿ ನೋಡಿ ಹೊರಬಂದು ರಸ್ತೆಯಲ್ಲಿ ಹೋಗುವ ಜನರನ್ನು ನೋಡಿದರೆ ವಿಗ್ರಹಗಳೇ ಬಟ್ಟೆ ತೊಟ್ಟು ಸಚೇತನಗೊಂಡು ಚಲಿಸುತ್ತಿರುವವರೇನೋ ಎಂಬಂತೆ ಚೆಲುವರು. ಗ್ರೀಕ್ ದೇಶದ ಆರ್ಥಿಕ ಸ್ಥಿತಿ ಏಷಿಯಾ ಮತ್ತು ಆಫ್ರಿಕೆಯ ಅನೇಕ ರಾಷ್ಟ್ರಗಳಿಗಿಂತ ಭದ್ರವಾಗಿದೆ. ಔದ್ಯೋಗಿಕ ಕ್ರಾಂತಿ ಪ್ರಾರಂಭವಾಗಿದೆ. ರಾಷ್ಟ್ರದ ಸಂಪತ್ತನ್ನು ವಿನಿಯೋಗಿಸಲು ಸರ್ವಯತ್ನ ಮಾಡಲಾಗಿದೆ, ಗ್ರೀಕರು ತುಂಬಾ ಸ್ವಾಭಿಮಾನೀ ಜನರು. ಪ್ರವಾಸೀ ವ್ಯಾಪಾರ ದೇಶದ ಆದಾಯದಲ್ಲಿ ಬಹು ದೊಡ್ಡ ಪಾಲಾಗಿರುವುದರಿಂದ ವಿದೇಶೀ ಪ್ರವಾಸಿಗಳಿಗೆ ಸಾಕಷ್ಟು ಅನುಕೂಲಗಳಿವೆ. ಅತ್ಯುತ್ತಮ ಬಸ್ ಸಾರಿಗೆ ವ್ಯವಸ್ಥೆ ಇದೆ. ವಿಮಾನ ನಿಲ್ದಾಣದಲ್ಲಿ ಕಸ್ಟಮರ್ ಸರ್ವೀಸ್‌ಗಾಗಿಯೇ ಪ್ರತ್ಯೇಕ ಜನರಿದ್ದಾರೆ. ಈ ಜನ ತುಂಬಾ ಸಹೃದಯತೆಯಿಂದ ಮಾರ್ಗದರ್ಶನ ಮಾಡುತ್ತಾರೆ. ಟೂರ್‌ಗಳಿಗೆ ಅಲ್ಲಿಯೇ ಟಿಕೆಟ್ ಕೊಡುತ್ತಾರೆ. ಗ್ರೀಕ್ ದೇಶದ ಜೀವನಮಟ್ಟ ತುಂಬಾಸುಧಾರಿಸಿದೆ. ಭಾರತೀಯ ಮಾನಗಳ ಪ್ರಕಾರ ದುಬಾರಿಯೆನಿಸಿದರೂ ಕೂಡ ಸೇವೆಗಳು ತುಂಬಾ ದಕ್ಷತೆಯಿಂದ ನಡೆಸಲ್ಪಡುತ್ತವೆ. ಇವರಲ್ಲಿ ಎದ್ದು ಕಾಣುವ ಗುಣವೆಂದರೆ ಸ್ವಾಭಿಮಾನ, ಆಕ್ರೋ-

ಪೋಲಿಸ್ ತೋರಿಸಲು ನಮ್ಮೊಡನೆ ಬಂದ ಮಾರ್ಗದರ್ಶಿ ಮಹಿಳೆಯು ಬಹು ಸೂಕ್ಷ್ಮ. ಮಾತುಗಳಲ್ಲಿ ಸ್ವಾಭಿಮಾನವನ್ನು ವ್ಯಕ್ತಪಡಿಸುತ್ತಿದ್ದಳು. ಗ್ರೀಕರ ಪ್ರಕಾರ ಕಲೆ ಸರ್ವರಿಗೂ ಸೇರಿದ್ದು. ಆದರೆ ಕಲೆಯ ರಕ್ಷಣೆ ಅಗ್ರಮಾನ್ಯ ವಾಗಿ ಗಣಿಸಲ್ಪಡಬೇಕು. ಗ್ರೀಕ್ ಕಲೆಯ ಅಮೂಲ್ಯ ರತ್ನಗಳು ಪ್ಯಾರಿಸ್ ಮತ್ತು ಲಂಡನ್ ಮ್ಯೂಜಿಯಂನಲ್ಲಿವೆ. ಲಂಡನ್ ಮತ್ತು ಪ್ಯಾರಿಸ್‌ನ ಹವೆಯಲ್ಲಿ ನೀರಿನ ಅಂಶ ಜಾಸ್ತಿ ಇರುವುದರಿಂದ ನವುರಾದ ಅಮೃತಶಿಲೆ ಹಾಳಾಗುತ್ತಿದೆಯೆಂದು ತಜ್ಞರ ಅಭಿಪ್ರಾಯ. ಆಯಾ ಸರಕಾರಗಳು ಇಂತಹ ಕ್ಷೀಣತೆಯಿಂದ ಕಲಾಕೃತಿಗಳನ್ನು ರಕ್ಷಿಸಲು ಶತಪ್ರಯತ್ನ ಮಾಡುತ್ತಿವೆ. ಆದರೆ ಗ್ರೀಸ್ ದೇಶದ ಹವೆ ತುಂಬಾ ಒಣಹವೆಯಾಗಿದೆ. ಇಲ್ಲಿ ಕಲಾಕೃತಿ ಗಳಿಗೆ ಶತಮಾನಗಳಾದರೂ ಧಕ್ಕೆ ಬರುವುದಿಲ್ಲ. ಇಂಗ್ಲಿಷ್ ಮತ್ತು ಫ್ರೆಂಚರು ಗ್ರೀಕ್ ಕಲಾಕೃತಿಗಳನ್ನು ನಮಗೆ ಮರಳಿ ಕೊಟ್ಟರೆ ಕಲಾಕೃತಿಗಳ ರಕ್ಷಣೆ ಸುಲಭವಲ್ಲವೆ ? ಈ ರೀತಿಯಲ್ಲಿ ನಡೆದಿತ್ತು ಅವಳ ಮಾತು. ನಮ್ಮ ಗುಂಪಿನ ಲ್ಲಿದ್ದ ಅನೇಕ ಇಂಗ್ಲಿಷ್ ಮತ್ತು ಫ್ರೆಂಚ್ ನಾಗರಿಕರು ಮುಸಿ ಮುಸಿ ನಗುತ್ತಿದ್ದರು. ಗ್ರೀಕರು ಅಭಿಮಾನದಿಂದ ಮೆಚ್ಚಿ ಹಾಡಿ ಹೊಗಳುವ ಇಬ್ಬರು ವಿದೇಶೀಯರೆಂದರೆ ಇಂಗ್ಲಿಷ್ ಕವಿ ಲಾರ್ಡ್ ಬೈರನ್ ಮತ್ತು ಅಮೇರಿಕೆಯ ಹಿಂದಿನ ಪ್ರೆಸಿಡೆಂಟ್ ಹ್ಯಾರಿ ಟ್ರೂಮನ್. ಕಳೆದ ಶತಮಾನದಲ್ಲಿ ಅಮರ ಕವಿ ಲಾರ್ಡ್ ಬೈರನ್ ತನ್ನ ದೇಶ ತ್ಯಾಗಮಾಡಿ ಗ್ರೀಸಿಗೆ ಬಂದು ಗ್ರೀಸಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದನು. ಬೈರನ್ ಬರೆದ ವೀರಗೀತೆಗಳೂ, ಕೈಗೊಂಡ ವೀರಕೃತ್ಯಗಳೂ ಗ್ರೀಕ್ ಜನರ ಸವಿನೆನಪಾಗಿ ಉಳಿದಿವೆ. ಬೈರನ್ ನೆನಪಿಗಾಗಿ ಅಥೆನ್ಸ್ ನಗರ ಮಧ್ಯದಲ್ಲಿ ಶಿಲ್ಪವೊಂದನ್ನು ನಿರ್ಮಿಸಿದ್ದಾರೆ. ಮನೋಜ್ಞವಾದ ಈ ಶಿಲ್ಪದಲ್ಲಿ ಗ್ರೀಕ್ ತಾಯಿ ಲಾರ್ಡ್ ಬೈರನ್‌ನನ್ನು ಒಡಹುಟ್ಟಿದ ಮಗನಿಗಿಂತ ಮಿಕ್ಕಿದ ಕುಕ್ಕುಲತೆಯಿಂದ ಮೈದಡವುತ್ತಿದ್ದಾಳೆ. ಗ್ರೀಕ್ ತಾಯಿಯ ಕಣ್ಣಲ್ಲಿ ಮೂಡಿರುವ ಹಂಬಲ, ಅಂತಃಕರಣ ಮತ್ತು ಬೈರನ್‌ನ ಮುಖದಲ್ಲಿ ಮೂಡಿರುವ ದೃಢ ನಿರ್ಧಾರ, ಆಶಾಭಾವ ಚಿತ್ತ ವನ್ನು ಕಲಕುತ್ತವೆ,

ಆಧುನಿಕ ಸ್ವತಂತ್ರ ಗ್ರೀಸ್ ಅಮೇರಿಕೆಯ ಹಿಂದಿನ ಪ್ರೆಸಿಡೆಂಟ್ ಹ್ಯಾರಿ ಟ್ರೂಮನ್‌ರಿಗೆ ಕೃತಜ್ಞವಾಗಿದೆ. ಅಮೇರಿಕೆಯ ಮಾರ್ಷಲ್ ಪ್ಲಾನ್‌ನ ಅಂಗ ವಾಗಿ ಟ್ರೂಮನ್‌ರು ಗ್ರೀಸಿಗೆ ಅನಂತ ಸಹಾಯವನ್ನು ನೀಡಿ ದೇಶದ ಆರ್ಥಿಕ

ಭದ್ರತೆಗೆ ಹಾದಿ ಮಾಡಿದರು. ಗ್ರೀಕರು ಅಥೆನ್ಸ್ ನಗರದ ಮುಖ್ಯ ಬೀದಿಯಲ್ಲಿ ಟ್ರೂಮನ್ ವಿಗ್ರಹವನ್ನು ನಿಲ್ಲಿಸಿ ಕೃತಜ್ಞತೆ ಸೂಚಿಸಿದ್ದಾರೆ.

ಪುರಾತನ ಗ್ರೀಸ್; ರೋಮಾಂಚಕ ಗ್ರೀಸ್ ಮತ್ತು ಪ್ರಕೃತಿ ರಮ್ಯ ಗ್ರೀಸಿನ ಪರಿಚಯಕ್ಕೆಂದು ಸುಮಾರು ೭೦೦ ಮೈಲುದೂರದ ಡೆಲ್ಫಿಗೆ ಒಂದು ದಿನದ ಪ್ರವಾಸ ಕೈಗೊಂಡೆವು. ಡೆಲ್ಫಿಯ ಪುರಾತನತೆ ಶಿಲಾಯುಗದವರೆಗೆ ಚಾಚುತ್ತದೆ. ಗ್ರೀಕರ ಅಭಿಮಾನ ದೇವತೆ ಕಾರಣಿಕಗಳ ಮಹಾನುಭಾವ ಅಪೋಲೋನ ಪುರಾತನ ದೇವಾಸ್ಥಾನದ ನಿವೇಶನ ಡೆಲ್ಫಿ.

ಇನ್ನೂರು ಮೈಲುಗಳ ಈ ಪ್ರವಾಸ ಏರ್‌ಕಂಡಿಷನ್ಡ್ ಬಸ್‌ನಲ್ಲಿ ಅತಿ ರಮ್ಯವಾದ ಪ್ರದೇಶಗಳ ಮೂಲಕ ಹಾಯುತ್ತದೆ. ದಾರಿಯ ಇಕ್ಕೆಲಗಳಲ್ಲಿ ಫಲಭರಿತ ತೋಟಗಳು, ವಿಶಾಲವಾದ ಹೊಲಮನೆಗಳು. ಪ್ರತಿಮನೆಯಲ್ಲಿ ಜೇನುಸಾಕಣೆ. ಪ್ರಪಂಚ ಪ್ರಸಿದ್ಧಿ ಪಡೆದ ಗ್ರೀಕ್ ಜೇನು ಆ ದೇಶದ ಪ್ರಮುಖ ರಫ್ತಿನ ಸಾಮಾನು. ಹೊಲಗಳಲ್ಲಿ, ಕಾಡುಗಳಲ್ಲಿ, ಬೆಟ್ಟಗಳಲ್ಲಿ ಎಲ್ಲಾ ಕಡೆಯಲ್ಲಿ ಜೇನುಸಾಕುವ ಪೆಟ್ಟಿಗೆಗಳನ್ನು ಕಾಣಬಹುದು. ಬೆಟ್ಟದ ಇಳಿಜಾರಿನಲ್ಲಿ ಕುರುಬರ ಮನೆಗಳು, ಕುರಿ ಮಂದೆಗಳು, ದನದ ಹಿಂಡುಗಳು ನೋಡಲು ಚಂದ. ಇದು ವಸಂತಕಾಲವಾದ್ದರಿಂದ ಎಲ್ಲೆಡೆಗೆ ದನದ ಹಿಂಡುಗಳು, ಹೂವು ಹಣ್ಣು. ಶತಮಾನಗಳವರೆಗೆ ಮಲಗಿದ್ದ ಬೆಟ್ಟಗಳಲ್ಲಿ ತೈಲ ಮತ್ತು ಲೋಹಗಳಿಗಾಗಿ ಶೋಧ ನಡೆದಿದೆ. ಆದರೆ ಇದೆಲ್ಲಾ ಶಾಂತಿಗೊಂದು ಕಲ್ಲು.

ಡೆಲ್ಫಿಯಲ್ಲಿ ಎತ್ತರವಾದ ಬೆಟ್ಟದ ತಪ್ಪಲಿನಲ್ಲಿ ಅಪೋಲೋನ ದೇವಾಲಯದ ನಿವೇಶನವಿದೆ. ಪ್ರಾಕೃತಿಕ ಅವಾಂತರಗಳಿಂದ ಈ ದೇವಾಲಯ ಅನೇಕ ಬಾರಿ ಬಿದ್ದಿದೆ. ಈಗಲೂ ಪಾಳು ಪರಿಸ್ಥಿತಿಯಲ್ಲಿದೆ. ಮುರುಕು ಕಂಬಗಳು, ಗಿಡ್ಡಗೋಡೆಗಳು ಇವನ್ನೆಲ್ಲಾ ಕಂಡಾಗ ಹಂಪೆಯ ನೆನಪಾಗುತ್ತದೆ. ಇಲ್ಲಿಯೇ ಇರುವ ಮ್ಯೂಜಿಯಂನಲ್ಲಿ ಅಪೋಲೋ ದೇವಾಲಯದ ಪೂರ್ವೇತಿಹಾಸವಿದೆ. ಅಳಿದುಳಿದ ಶಿಲ್ಪಕೃತಿಗಳ ಪ್ರದರ್ಶನವಿದೆ. ಈ ಹಾಳಿನ ಮಧ್ಯ ಓಡಾಡುವುದೇ ಒಂದು ವಿಚಿತ್ರ ಅನುಭವ. ಮೈಲಾರ ಲಿಂಗದ ಕಾರಣಿಕದಂತೆ ಅಪೋಲೋನ ಆರೆಕಲ್‌ಗಳು ಗ್ರೀಕ್ ಚರಿತ್ರೆಯಲ್ಲಿ ಕತೆಗಳಲ್ಲಿ ಹೇರಳವಾಗಿ ಉಕ್ತವಾಗಿವೆ. ಮಾರ್ಗದರ್ಶಿ ಹೇಳಿದಂತೆ ಕಾರಣಿಕ ಹೀಗೆ ನಡೆಯುತ್ತಿತ್ತಂತೆ. ಕಾರಣಿಕದ ಸಮಯಕ್ಕೆ ಸುತ್ತಣ ಹಳ್ಳಿಗಳಲ್ಲಿಯ ಶೀಲವಂತ ಹದಿನಾರು

ವರುಷದ ಕನ್ಯೆಯನ್ನು ಆರಿಸುತ್ತಿದ್ದರು. ಆ ಕನ್ಯೆ ಆ ಪುಣ್ಯದಿನದಂದು ಅಪೋಲೋ ದೇವಾಲಯದ ಅಂತರ್ಗೃಹದ ಗವಿಯಲ್ಲಿಯ ಕೊಳದಲ್ಲಿ ಮಿಂದು ಶ್ವೇತ ವಸ್ತ್ರಧಾರಿಣಿಯಾಗಿ ಬಂದು ಕಾರಣಿಕರ ಕುರ್ಚಿಯ ಮೇಲೆ ಕುಳಿತಾಗ ಅಪೋಲೋ ಆ ಕನ್ಯೆಯಲ್ಲಿ ಮೂಡಿ ಭವಿಷ್ಯಸೂಚಕ ವಾಕ್ಯವನ್ನು ನುಡಿಯುತ್ತಿದ್ದನು. ಅನೇಕ ಬಾರಿ ಈ ಮಾತಿನ ಅರ್ಥ ದ್ವಂದ್ವಮಯವಾಗಿರುತ್ತಿತ್ತು. ಹೀಗೆಂದು ಕೆಲವರೂ ಹಾಗೆಂದು ಕೆಲವರೂ ಅರ್ಥ ಮಾಡುತ್ತಿದ್ದರು. ಮಳೆ ಬಂದರೂ ಸರಿ, ಮಳೆ ಬಾರದಿದ್ದರೂ ಸರಿ. ಅಪೋಲೋ ನುಡಿ ನಿಜವಾದಂತೆಯೇ ಆಗುತ್ತಿತ್ತು.

ಇಲ್ಲಿ ಸುತ್ತಾಡುವಾಗ ಅಮೇರಿಕೆಯ ಕ್ಯಾಲಿಫೋರ್ನಿಯಾದ ನಿವೃತ್ತ ಉಪಾಧ್ಯಾಯಿನಿ ಸ್ಪೆನ್ಸರ್ ಭೇಟಿಯಾದಳು. ಅಮೇರಿಕೆಯ ಮುದುಕಿಯರು ತುಂಬಾ ಗಟ್ಟಿಗರು. ಅವರು ಪ್ರವಾಸಮಾಡಿದಷ್ಟು ಯಾರಿಂದಲೂ ಸಾಧ್ಯವಿಲ್ಲ. ವಯಸ್ಸಿನ ಧಾಳಿಯನ್ನು ಎದುರಿಸಿ ಅಲಂಕರಿಸಿಕೊಂಡು ದೂರದ ನಾಡುಗಳಿಗೆ ಪ್ರವಾಸಹೊರಡುತ್ತಾರೆ. ಕೆಮೆರಾ ಬೈನಾಕ್ಯುಲರ್ಸ್ ಉಪಯೋಗಿಸುತ್ತಾರೆ. ತಂತ್ರ ಗೊತ್ತಿರದಿದ್ದರೂ ಕೂಡಾ ಫೋಟೋ ತೆಗೆಯುತ್ತಲೇ ಇರುತ್ತಾರೆ. ಹಿಂದುಮುಂದು ನೋಡದೇ ಪರಿಚಯಕ್ಕೆ ಧಾವಿಸುತ್ತಾರೆ. ಶ್ರೀಮತಿ ಸ್ಪೆನ್ಸರ್‌ಳಿಗೆ ಯೋಗದಲ್ಲಿ ಹಿಂದು ವೇದಾಂತದಲ್ಲಿ ವಿಪರೀತ ಆಸಕ್ತಿ. ಅಮೇರಿಕೆಯ ಕರಿ ಮತ್ತು ಬಿಳಿ ಜನಾಂಗಗಳ ಮಧ್ಯೆ ಸಮತೂಕವಿರಿಸಲು ಭಾರತೀಯರು ಹೆಚ್ಚಿನ ಸಂಖ್ಯೆಯಲ್ಲಿ ಯು. ಎಸ್.ಎ.ಗೆ ವಲಸೆ ಬರಬೇಕೆಂದು ಆಕೆಯ ಅಭಿಪ್ರಾಯ. ಗ್ರೀಕ್ ಭಾಷೆಯನ್ನಲ್ಲದೆ ಬೇರೆ ಭಾಷೆ ಅರಿಯದ ಗ್ರೀಕ್ ಮಕ್ಕಳ ದುರ್ಗತಿಯ ಬಗ್ಗೆ ಆಕೆಯ ಹೃದಯ ಮಮ್ಮಲ ಮರುಗುತ್ತದೆ. ಅಮೇರಿಕೆಯ ಜೀವನವನ್ನು ಹದಗೆಡಿಸುತ್ತಿರುವ ಹಿಪ್ಪಿಗಳ ಬಗ್ಗೆ ಆಕೆ ಕ್ರುದ್ಧಳಾಗುತ್ತಾಳೆ. ದುರದೃಷ್ಟವಶಾತ್ ಆಕೆಯ ಮಗಳೂ ಕೆಲದಿನ ಹಿಪ್ಪಿ ತತ್ವಕ್ಕೆ ಮನಸೋತಿದ್ದಳಂತೆ. ಆದರೆ ಈಗ ಮನುಷ್ಯಳಾಗಿ ಅಭ್ಯಾಸ ಮುಂದುವರಿಸಿದ್ದಾಳಂತೆ. ಅಮೇರಿಕೆಯಲ್ಲಿ ಬಹುತೇಕ ಎಲ್ಲಾ ತಂದೆ ತಾಯಿಗಳು ಈ ರೀತಿಯ ಮಾನಸಿಕ ಬಾಧೆಗೆ ಗುರಿಯಾಗಿರಬಹುದೇ ?

ಅಥೆನ್ಸ್ ನಗರದ ಇನ್ನೊಂದು ಮುಖ ನಮಗೆ ಪರಿಚಯವಾಯಿತು. ಡೆಲ್ಫಿಯಿಂದ ಮರಳಿದ ಮೇಲೆ ಸಂಜೆಯ ಹೊತ್ತು ನಾನು, ನನ್ನ ತಮ್ಮ ಹಾಗೇ ಅಥೆನ್ಸ್ ಬೀದಿಯಲ್ಲಿ ಅಡ್ಡಾಡುತ್ತಿದ್ದೆವು. ಒಂದು ಚೌಕದಲ್ಲಿ ತಿರುಗಾಡುವಾಗ ಒಬ್ಬ 'ಹಾಯ್' ಎಂದು ಮಾತನಾಡಿಸಿದ. ಸರಿ, ನಾವು ಉಭಯಕುಶಲೋಪರಿ

ಮಾತಾಡುವುದರಲ್ಲಿ ಅವನು ಗ್ರೀಕ್ ಮಹಿಳೆಯರ ಸೌಂದರ್ಯದ ವರ್ಣನೆ ಮಾಡ ತೊಡಗಿದ. ನಮಗೆ ಕೊಂಚ ಅಚ್ಚರಿಯಾಯಿತು. ಅನಂತರ ಕಿಸೆಯಿಂದ ಒಂದು ಕಾರ್ಡು ತೆಗೆದು ನೀಡಿದ. ಬಹಳ ಸೋವಿ, ಬಹಳ ಸುಂದರ ಎಂದ. ಆಗ ನಮಗೆ ಅರ್ಥವಾಯಿತು ಇವನು 'ಸಿರ್‌ಪಕಡು ಸಿಂಗಾರು' ಎಂದು. ವೇಶ್ಯಾವೃತ್ತಿ, ಬೆತ್ತಲೆ ಕುಣಿತದ ಕ್ಲಬ್‌ಗಳು ಈಗ ಹೆಚ್ಚಾಗಿವೆ. ವಿದೇಶೀ ಪ್ರವಾಸಿಗಳಿಗಾಗಿ ಈ ಜನ ಹಾತೊರೆಯುತ್ತಾರೆ. ಇವರ ಬಾಧೆಯಿಂದ ತಪ್ಪಿಸಿಕೊಳ್ಳುವುದೇ ನಮಗೊಂದು ಕೆಲಸವಾಗಿತ್ತು.

ಆಕ್ರೊಪೋಲಿಸ್‌ನಲ್ಲಿ ಬೆಳಕು ಮತ್ತು ಶಬ್ದದ (ಸೌಂಡ್ ಅಂಡ್ ಲೈಟ್) ನಾಟಕವನ್ನು ನೋಡುವಾಗ ಪ್ರವಾಸದಲ್ಲಿದ್ದ ಭಾರತೀಯ ಎಂಜನೀಯರೊಬ್ಬರ ಪರಿಚಯವಾಯಿತು. ಎಸ್ಸೋ ಕಂಪನಿಯ ಅನೇಕ ಭಾರತೀಯ ಎಂಜನೀಯರರ ಗುಂಪು ಕೂಡಾ ದೊರಕಿತು. ದೂರದ ನಾಡಿನಲ್ಲಿ ನಮ್ಮವರನ್ನು ಕಂಡಾಗ ಹಾಲು ಸಕ್ಕರೆ ಸಿಕ್ಕಷ್ಟು ಸಂತೋಷವಾಗುತ್ತದೆ. ನಮ್ಮ ನಾಡಿನಲ್ಲಿ ನಾವು ಗಮನಿಸದೆ ನಿರ್ಲಕ್ಷಿಸಬಹುದಾದ ವಿಷಯಗಳು ಪರದೇಶದಲ್ಲಿ ಅಮೂಲ್ಯವೆನಿಸುತ್ತವೆ.

ಯುಗೋಸ್ಲಾವ್ ವಿಮಾನ ಸಾರಿಗೆ ಸಂಸ್ಥೆಯಲ್ಲಿ ಅಥೆನ್ಸ್ ಬಿಟ್ಟು ಬೆಲ್‌ಗ್ರೇಡ್‌ಗೆ ಪಯಣಿಸುವಾಗ ಹೃದಯ ಭಾರವಾಗಿತ್ತು. ಅಥೆನ್ಸ್ ಬಿಡಲು ಮನಸ್ಸು ಒಪ್ಪದಾಗಿತ್ತು. ಅಥೆನ್ಸ್ ಜೀವಕಳೆಯಿಂದ ತುಂಬಿ ತುಳುಕುತ್ತಿತ್ತು. ನಮ್ಮ ಜೀವನಕ್ಕೂ ಇತಿಹಾಸಕ್ಕೂ ಗ್ರೀಸ್ ಜನರ ಜೀವನ ಇತಿಹಾಸಗಳಿಗೂ ಏನೋ ಒಂದು ರೀತಿಯ ಪುರಾತನ ನಂಟು ಪ್ರಕಾಶಮಾನವಾಗಿ ಅಂತಃಕರಣವನ್ನು ಕಲಕುತ್ತಿತ್ತು. ಗ್ರೀಕ್ ಜನರ ಸ್ನೇಹಭಾವ, ಸುಂದರ ರಮ್ಯ ಪ್ರಕೃತಿ ಮತ್ತು ಜಾಜ್ವಲ್ಯಮಾನವಾದ ಇತಿಹಾಸ, ಅದರೊಂದಿಗೆ ಮಿಗಿಲಾದ ಚೆಲುವಿನ ಗ್ರೀಕ್ ಜನಾಂಗ ನಮ್ಮನ್ನು ಸೆಳೆದಿದ್ದವು.

ಯುಗೋಸ್ಲಾವಿಯ : ಬೆಲ್‌ಗ್ರೇಡ್

೪ ಸಮಾಜವಾದದ ಸಂಕ್ರಮಣ

ಅಥೆನ್ಸ್‌ನಿಂದ ಯುಗೋಸ್ಲಾವ್ ಏರ್‌ಲೈನ್ಸ್‌ನಲ್ಲಿ ಬೆಲ್‌ಗ್ರೇಡ್‌ಗೆ ಹೊರಟಾಗ ಕಮ್ಯುನಿಸ್ಟ್ ರಾಜ್ಯದ, ಟಿಟೋ ರಾಜ್ಯದ, ಪ್ರವಾಸದ ಬಗ್ಗೆ ನನ್ನಲ್ಲಿ ಮಿಶ್ರ ಭಾವನೆಗಳಿದ್ದವು. ರಾತ್ರಿ ಹತ್ತು ಗಂಟೆಯ ಹೊತ್ತಿಗೆ ನಾವು ಬೆಲ್‌ಗ್ರೇಡ್ ಸೇರಬೇಕಿತ್ತು. ಯುಗೋಸ್ಲಾವಿಯದ ಮೊದಲ ತಾಣ ಡುಬ್ರೊವ್‌ನಿಕ್‌ನಲ್ಲಿ ನಮ್ಮ ವಿಮಾನ ತಂಗಿತು. ಮುಂಜಾಗ್ರತೆಯ ಕಮ್ಯುನಿಸ್ಟ್ ಸರ್ಕಾರ ಇಲ್ಲಿಯೇ ನಮ್ಮ ಪಾಸ್‌ಪೋರ್ಟ್, ವೀಸಾ ವಗೈರಾ ಪರಿಶೀಲಿಸಿ ಲೌಂಜ್‌ಗೆ ಕಳಿಸಿದರು. "ಮುಂದಿನ ನಮ್ಮ ಪಯಣ ಎಷ್ಟು ಹೊತ್ತಿಗೆ ?" ಎಂದರೆ ಸಂಚಾಲಕರು "ಕೆಲವೇ ನಿಮಿಷಗಳಲ್ಲಿ" ಎಂದರು. ಆದರೆ ಕೆಲವು ಗಂಟೆಗಳೇ ಸಂದರೂ ಕೂಡಾ ನಮ್ಮ ವಿಮಾನ ಬರಲಿಲ್ಲ. ರೋಮ್‌ನಿಂದ ಹೊರಟ ವಿಮಾನ ಅನಿವಾರ್ಯ ಕಾರಣಗಳ ಮೂಲಕ ಬೆಳಗಿನ ಮೂರು ಗಂಟೆಗೆ ಬಂದಿತು. ಡುಬ್ರೊವ್‌ನಿಕ್ ಸುಂದರವಾದ ವಿಮಾನನಿಲ್ದಾಣ ಪಡೆದಿದೆ. ಆದರೆ ನಮಗೋ ನಿದ್ದೆಯ ಸಮಯ. ಅದರ ಮೇಲೆ ಅನಿರೀಕ್ಷತತೆ. ಸರಿ, ಅಲ್ಲಿ ಇಲ್ಲಿ ತಿರುಗಾಡುವುದು, ಕೆಫೆಯಲ್ಲಿ ಚಾ ಕುಡಿಯುವುದು ನಡೆಸಿದೆವು. ನಮ್ಮ ಅಭಿಪ್ರಾಯದ ಪ್ರಕಾರ ಕಮ್ಯುನಿಸ್ಟ್ ರಾಜ್ಯದಲ್ಲಿ ಭಯದ ಆವರಣವಿರುತ್ತದೆ ಎಂದುಕೊಂಡಿದ್ದೆವು.

ಆದರೆ ಇಲ್ಲಿ ಅದಾವುದೂ ಇದ್ದಿಲ್ಲ. ಪರಿಚಾರಿಕೆಯರು ಪರಿಚಾರಕರೊಂದಿಗೆ ನಗುತ್ತಾ ಹರಟೆ ಹೊಡೆಯುತ್ತಾ ಪ್ರೇಮಸಲ್ಲಾಪ ನಡೆಸಿದ್ದರು. ನಿಲ್ದಾಣದಲ್ಲಿ ಮೂಲೆಯೊಂದರಲ್ಲಿ ಮೂವರು ಹಿಪ್ಪಿಗಳು ಮಲಗಿದ್ದರು. ಅವರಲ್ಲಿ ಒಬ್ಬಳು ಹುಡುಗಿ ಕೆನಡಾದ ಮಾಂಟ್ರಿಯಲ್‌ನವಳು. ಇನ್ನಿಬ್ಬರು ಹುಡುಗರು ನಾರ್ವೆಯವರು. ಕೆಲಹೊತ್ತಿನ ಮುಂಚೆ ಅವರಲ್ಲಿ ಒಬ್ಬನು ಎದ್ದು ಸ್ಲಾಟ್ ಮೆಷಿನ್ನಿನಿಂದ ಪಾನೀಯವೊಂದನ್ನು ತೆಗೆದು ಕುಡಿದು, ನಮ್ಮನ್ನು ಮಾತನಾಡಿಸಿದ. ಉಭಯಕುಶಲೋಪರಿ ಆದಮೇಲೆ ಕುತೂಹಲದಿಂದ ಅವರ ತತ್ವದ ಬಗೆಗೆ ಕೇಳಿದೆವು. ಅದಕ್ಕೆ ಅವನು "ನನಗೆ ಏನೂ ಗೊತ್ತಿಲ್ಲ. ನನಗೆ ಯಾವ ರೀತಿಯ ಆಶೆ ಆಮಿಷಗಳಿಲ್ಲ. ನಾನೀಗ ತತ್ವಶಾಸ್ತ್ರದ ಅಧ್ಯಯನ ನಡೆಸಿದ್ದೇನೆ. ಎಲ್ಲಕ್ಕಿಂತ ಮೊದಲು ಮಾನವನಾಗಲು ಪ್ರಪಂಚವನ್ನು ಸುತ್ತಬೇಕು" ಎಂದ. ವಿಮಾನ ನಿಲ್ದಾಣದ ಹೊರಗಡೆ ಮಳೆ ಸುರಿಯುತ್ತಿತ್ತು. ಪರಿಚಾರಿಕೆ ನಿಮಿಷಕ್ಕೊಮ್ಮೆ ಗಂಟಲು ಹರಿದುಕೊಳ್ಳುತ್ತಿದ್ದಳು. ಈ ಜನಕ್ಕೆ ಮೆಲ್ಲಗೆ ಮಾತನಾಡಲು ಬರುವುದಿಲ್ಲವೇ ? ಯುನೈಟೆಡ್ ನೇಷನ್ನಿನ ಗಿಫ್ಟ್ ಸೆಂಟರ್‌ನಲ್ಲಿ ಕೆಲಸ ಮಾಡುವ ಓರ್ವ ಮಹಿಳೆ ಇಲ್ಲಿ ನಮಗೆ ಪರಿಚಿತಳಾದಳು. ಆಕೆ ಕರಕುಶಲ ವಸ್ತುಗಳ ಖರೀದಿಗೆಂದು ಪೂರ್ವ ಯೂರೋಪ್ ರಾಷ್ಟ್ರಗಳ ಪರ್ಯಟನೆಗೆ ಹೋಗಿದ್ದಳು. ಬೆಲ್‌ಗ್ರೇಡ್ ಸೇರಿದಾಗ ಬೆಳಗಿನ ನಾಲ್ಕೂವರೆಯಾಗಿತ್ತು. ಅಲ್ಲಿಯೂ ಮಳೆ ಸುರಿಯುತ್ತಿತ್ತು. ಸರಿ, ಟರ್ಮಿನಲ್ ಬಸ್‌ನಲ್ಲಿ ತೇಲಿ ಅಲ್ಲಿಂದ ಹತ್ತಿರದ ಎಕ್ಸೆಲ್ಸಿಯರ್ ಹೊಟೇಲ್ ಸೇರುವ ಹೊತ್ತಿಗೆ ಚಳಿ ಮಳೆಗೆ ಸಿಲುಕಿ ಸಿಗಡಿಯಾಗಿದ್ದೆವು. ಸರಕಾರೀ ವ್ಯವಸ್ಥೆಯೇ ಇಷ್ಟು. ಕಮ್ಯುನಿಸ್ಟ್, ಸೋಶಿಯಲಿಸ್ಟ್ ಯಾ ಪ್ರಜಾಪ್ರಭುತ್ವ ರಾಜ್ಯಪದ್ಧತಿ, ಯಾವುದೇ ಇರಲಿ ವ್ಯವಹಾರವನ್ನು ಸರಕಾರ ಮಾಡಿದರೆ ಅವಾಂತರವೇ ಹೆಚ್ಚು.

ಬೆಲ್‌ಗ್ರೇಡ್ ಸುಂದರವಾದ ನಗರ. ಹಿಮದಿಂದ ಮುಚ್ಚಲ್ಪಟ್ಟ ಈ ನಗರವನ್ನು ಮೊದಲಬಾರಿಗೆ ಕಂಡ ಜನರು ಬಿಳಿಯನಗರ (ಬೆಲ್‌ಗ್ರೆಡ್) ಎಂದು ಕರೆದರು. ಇತಿಹಾಸದಂತೆ ಈ ನಗರ ೨೮ ಸಲ ಪತನವಾಗಿದೆ, ಮತ್ತೆ ಜನಿಸಿದೆ. ನಮ್ಮ ಮಾರ್ಗದರ್ಶಿ ಹೇಳಿದ ಪ್ರಕಾರ ಯುಗೋಸ್ಲಾವ್ ದೇಶಕ್ಕೆ ೧ ರಾಜಧಾನಿ, ೨ ಲಿಪಿ, ೩ ಭಾಷೆ. ೪ ಜನಾಂಗ, ೫ ರಾಜ್ಯಗಳಿವೆ. ಮೊದಲ ಮತ್ತು ಎರಡನೇ ಪ್ರಪಂಚ ಯುದ್ಧಗಳಲ್ಲಿ ಸಂಗ್ರಹಿಸಿದ ವೈರಿಗಳ ಮಾರಕಾಸ್ತ್ರಗಳನ್ನು ವಾಹನಗಳನ್ನು ಅವರ ಇತಿಹಾಸದ ಸ್ಮಾರಕವಾಗಿ ಉಳಿದಿರುವ ಕೋಟೆಯಲ್ಲಿ ಕಾಣ

ಬಹುದು. ಈ ನಗರದ ಮತ್ತು ದೇಶದ ಸ್ವಾತಂತ್ರ್ಯದ ಚಿಹ್ನೆಯಾಗಿ ನಿಂತಿರುವ ಸ್ವಾತಂತ್ರ್ಯ ಪ್ರತಿಮೆ ಗಂಭೀರವಾಗಿದೆ. ಯೂರೋಪಿನ ಪ್ರಮುಖ ನದಿಗಳಾದ ಡ್ಯಾನ್ಯೂಬ್ ಮತ್ತು ಸ್ಲಾವಾ ನದಿಗಳ ಸಂಗಮದಿಂದ ಉಂಟಾದ ದ್ವೀಪದ ಮೇಲೆ ಬೆಲ್‌ಗ್ರೇಡ್ ಸ್ಥಾಪಿತವಾಗಿದೆ. ನಗರದ ಅನೇಕ ರಸ್ತೆಗಳಿಗೆ ಸ್ವಾತಂತ್ರ್ಯ ವೀರರ ಹೆಸರುಗಳನ್ನು, ರಾಷ್ಟ್ರೀಯ ಮಹತ್ವದ ದಿನಾಂಕದ ಹೆಸರುಗಳನ್ನು ಇಟ್ಟಿದ್ದಾರೆ. ನಗರದ ಎಲ್ಲೆಡೆಗೆ ಹಸಿರೋ ಹಸಿರು. ಬೇಕಾದಷ್ಟು ಹೂವಿನ ಗಿಡ ಗಳು. ಗಂಗೆ ಯಮುನೆಯರ ಸಂಗಮದಂತೆ ಸ್ಲಾವಾ ಮತ್ತು ಡ್ಯಾನ್ಯೂಬ್ ಸಂಗಮ. ಸ್ಲಾವಾ ಕೆಂಪು ನೀರಾದರೆ ಡ್ಯಾನ್ಯೂಬ್ ಹಾಲಿನಂತೆ ಬಿಳಿನೀರು. ದಟ್ಟವಾದ ಮಂಜಿನಿಂದ ಕವಿದ ಬೆಲ್‌ಗ್ರೇಡ್ ಮುಸುಕಿನಲ್ಲಿರುವ ಪರಾಯಿಂಗ ನೆಯಂತೆ ಆಕರ್ಷಕ. ಆದರೆ ಮೈಕೊರೆವ ಕುಳಿರ್ಗಾಳಿ ಭಾರತೀಯರಿಗೆ ತಡೆ ಯಲು ಅಸಾಧ್ಯ.

ಇಲ್ಲಿ ಒಂದು ವಿಷಯವನ್ನು ಸ್ಪಷ್ಟನೆ ಮಾಡುವುದು ಸೂಕ್ತವೆನಿಸುತ್ತದೆ. ಕೆನಡಾದ ಬ್ರಿಟಿಷ್ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿರುವ ನನ್ನ ಅಣ್ಣ ಅನೇಕ ಕನ್ಸಲ್ಟಿಂಗ್ ಕೆಲಸಗಳನ್ನು ಮಾಡುತ್ತಾರೆ. ಅಂತಹ ಕೆಲಸದ ದೃಷ್ಟಿಯಿಂದ ಅನೇಕ ಬಾರಿ ಆತನಿಗೆ ಯೂರೋಪ್ ಪ್ರವಾಸ ಅನಿವಾರ್ಯ ವಾಗುತ್ತದೆ. ಅನೇಕ ಬಾರಿ ಆತ ರಿಸರ್ಚ್ ದೃಷ್ಟಿಯಿಂದಲೂ ಯೂರೋಪ್‌ಗೆ ಪಯಣಿಸಬೇಕಾಗುತ್ತದೆ. ಇಂತಹ ಪ್ರಯಾಣಗಳಿಗೆ ಕೆನಡಾದ ಸಿ. ಪಿ. ಏರ್ ಮತ್ತು ಏರ್ ಕೆನಡಾ ಸಂಸ್ಥೆಯವರು ಸಂಶೋಧನೆಯನ್ನು ಪ್ರೋತ್ಸಾಹಿಸುವ ಒಂದೇ ದೃಷ್ಟಿಯಿಂದ ಫ್ರೀ ಪಾಸ್ ನೀಡುತ್ತಾರೆ. ಅಂತಹ ಒಂದು ಸಂಶೋಧನಾ ಪ್ರಯಾಣದಲ್ಲೇ ಯೂರೋಪಿಗೆ ಬಂದಿದ್ದ ಅಣ್ಣ ತನ್ನ ಎಲ್ಲಾ ಕೆಲಸ ಮುಗಿಸಿ ನಮ್ಮೊಂದಿಗೆ ಕೆಲದಿನ ಸುತ್ತಾಡುವ ಯೋಚನೆಯಿಂದ ಹೆಚ್ಚಿನ ರಜೆಪಡೆದು ಬೆಲ್‌ಗ್ರೇಡಿನಲ್ಲಿ ಕಾದಿದ್ದರು ಮುಂದೆ ರೋಮ್ ಮತ್ತು ಪ್ಯಾರಿಸ್‌ಗಳಲ್ಲಿ ಅವರೊಡನೆ ನಾವು ಕಳೆದ ಸಮಯವನ್ನು ಮರೆಯಲು ಸಾಧ್ಯವೇ ಇಲ್ಲ. ಪ್ಯಾರಿಸ್‌ನಲ್ಲಿ ಅವರನ್ನು ಬೀಳ್ಕೊಡುವಾಗ ನಮ್ಮ ದೇಹದ — ಚೈತನ್ಯದ ಹನಿ ಹನಿ ಆರ್ದ್ರತೆಯಿಂದ ಕರಗಿತ್ತು.

ದೇಶದ ಆರ್ಥಿಕ ವಹಿವಾಟೆಲ್ಲ ಸರಕಾರದ ಗುತ್ತಿಗೆಗೆ ಒಳಗಾಗಿದೆ. ಪ್ರತಿಯೊಂದು ಉದ್ದಿಮೆ, ವ್ಯವಹಾರ, ಆಸ್ತಿಪಾಸ್ತಿ ಪ್ರತಿಯೊಂದು ಹಣಗಳಿ

ಕೆಯು ಚಟುವಟಿಕೆ ಸರಕಾರದ ಅಂಗವಾಗಿದೆ. ಟಿಟೋ ಅಧಿಕಾರಕ್ಕೆ ಬಂದ ಮೇಲೆ ಸಾಮಾನ್ಯ ಜನರ ಸಂಕಷ್ಟನಿವಾರಣೆಗೆ ಬಹುಮುಖ ಪ್ರಯತ್ನ ಮಾಡಿದ್ದಾರೆ. ಮುಖ್ಯವಾಗಿ ಗುಡಿಸಲುಗಳು ಮಾಯವಾಗಿವೆ. ಜನರ ವಸತಿಗಾಗಿ ರಾಕ್ಷಸಗಾತ್ರದ ಗಗನಚುಂಬಿ ಕಟ್ಟಡಗಳನ್ನು ಕಟ್ಟಲಾಗಿದೆ. ಕೆಲ ಚಿಕ್ಕ ಚಿಕ್ಕ ವ್ಯಾಪಾರಗಳನ್ನು ವ್ಯಕ್ತಿಗಳಿಗೇ ಬಿಟ್ಟುಕೊಡಲಾಗಿದೆ. ವ್ಯವಸಾಯವೆಲ್ಲ ಎರಡೇ ರಂಗಗಳಲ್ಲಿದೆ. ಒಂದನೆಯದು ಸಹಕಾರೀರಂಗ, ಮತ್ತೆ ಎರಡನೆಯದು ಸರಕಾರೀ ರಂಗ. ಪ್ರತಿಯೋರ್ವ ವ್ಯಕ್ತಿಗೆ ಅವರ ಯೋಗ್ಯತೆಗೆ ತಕ್ಕ ಕೆಲಸ ನೀಡಲಾಗುತ್ತದೆ. ಮಕ್ಕಳ ವಿದ್ಯಾಭ್ಯಾಸಕ್ಕೆ ಅಲೌವೆನ್ಸ್, ವೃದ್ಧಾಪ್ಯಕ್ಕೆ ಅಲೌವೆನ್ಸ್ ಹೀಗೆ ಹಲವಾರು ರೀತಿಯ ಅಲೌವೆನ್ಸ್ ನೀಡಲಾಗುತ್ತದೆ. ತೆರಿಗೆ ತೀರಾ ಕಡಿಮೆ. ಏಕೆಂದರೆ ಸರಕಾರ ಉದ್ದಿಮೆಯಲ್ಲಿ, ಮನೆಗಳ ಬಾಡಿಗೆಯಲ್ಲಿ ಸಾಕಷ್ಟು ಗಳಿಸುತ್ತದೆ. ಮುಷ್ಕರಗಳು ಇಲ್ಲಿ ಕಾನೂನುಬಾಹಿರ.

ಆದರೆ ಟ್ಯಾಕ್ಸಿ ಡ್ರೈವರನಲ್ಲಿ, ಕಾರಕೂನನಲ್ಲಿ, ವೇಟರ್‌ನಲ್ಲಿ ಇನ್ನಷ್ಟು ಗಳಿಸಬೇಕೆಂಬ ಆಶೆ ಇಲ್ಲದಿಲ್ಲ. ಒಬ್ಬ ನಮಗೆ ಗಂಟು ಬಿದ್ದು ನಗರ ತೋರಿಸಿದ. ಮೂವರಿಗೆ ೨೫ ಡಾಲರು ಟ್ಯಾಕ್ಸಿಗೆಂದೂ ಮತ್ತು ಮಾರ್ಗದರ್ಶಿ ಕೆಲಸಮಾಡಿದ ಅವನಿಗೆ ೫ ಡಾಲರೆಂದೂ ನೀಡಿದೆವು. ಆದರೂ ಅವನ ಆಶೆ ತೀರಲಿಲ್ಲ. ಮಾನವನ ಮೂಲಭೂತ ಆಶೆ ಎಂತಹ ಪರಿಸ್ಥಿತಿಯಲ್ಲೂ ದಾರಿ ಕಾಯುತ್ತಿರುತ್ತದೆ. ಕೊರೆಯುವ ಚಳಿಗಾಲ, ಜಿಟಿನುಳೆ, ದಟ್ಟ ಇಬ್ಬನಿಯ ಆವರಣದಲ್ಲಿ ಬೆಲ್‌ಗ್ರೇಡ್ ನೋಟ ರಮ್ಯವಾಗಿತ್ತು. ಅಧ್ಯಕ್ಷ ಟಿಟೋ ಅವರ ಮನೆಯು ಹತ್ತಿರ ಉಗ್ರಶಾವಲಿದೆ. ಬೆಲ್‌ಗ್ರೇಡಿನ ಉನ್ನತ ಸ್ಥಳದಲ್ಲಿ ಸುಂದರವಾದ ಉದ್ಯಾನವನದ ಮಧ್ಯದಲ್ಲಿ ಟಿಟೋ ಅವರ 'ವಿಲ್ಲಾ' ಇದೆ.

ಇಲ್ಲಿಯ ನ್ಯಾಷನಲ್ ಆರ್ಟ್‌ಗ್ಯಾಲರಿ ಕಟ್ಟಡ ಶಿಲ್ಪದ ದೃಷ್ಟಿಯಿಂದ, ಕಮ್ಯೂನಿಸ್ಟ್ ಕಲಾಮಾದರಿಯ ದೃಷ್ಟಿಯಿಂದ ಗಮನಿಸಬೇಕಾದದ್ದಿದೆ. ಗ್ಯಾಲರಿಯನ್ನು ಚಿತ್ರಶಾಲೆಯ ಪರಿಪೂರ್ಣ ಉಪಯೋಗಕ್ಕೆಂದು ವಿಶೇಷವಾಗಿ ನಿರ್ಮಿಸಿದ್ದಾರೆ. ಗ್ಯಾಲರಿಯ ಒಂದು ಮೂಲೆಯೂ ವ್ಯರ್ಥವಾಗುವಂತಿಲ್ಲ. ಇಲ್ಲಿ ಪುರಾತನ ಕಲಾವಿದರ ಯಾವ ಚಿತ್ರಗಳೂ ಇಲ್ಲ. ಇರುವ ಚಿತ್ರಗಳೆಲ್ಲಾ ಯುಗೋಸ್ಲಾವ್ ಪರಿವರ್ತನೆಯಾದ ಮೇಲೆ ಅಥವಾ ಕ್ರಾಂತಿ ಸಮಯದಲ್ಲಿ

ತಯಾರಾದವುಗಳು. ಬಹಳಷ್ಟು ಚಿತ್ರಗಳ ವಿಷಯ ಮಾನವನ ದುಃಖ, ದಲಿತವರ್ಗದ ಶೋಷಣೆ ಮತ್ತು ಸಮಾಜವಾದದ ಸುಖ. ಅನೇಕ ಚಿತ್ರಗಳು ಶ್ರೀಮಂತರ ಅಟ್ಟಹಾಸಗಳನ್ನು, ಯುದ್ಧದ ಭೀಕರತೆಯನ್ನು ಚಿತ್ರಿಸುತ್ತವೆ. ಕುಡುಕರ, ಕೊಲೆಗಡುಕರ ನ್ಯಾಯಬಾಹಿರರ, ಸಮಾಜಕಂಟಕರ ಅನೇಕ ಚಿತ್ರಗಳನ್ನು ಇಲ್ಲಿ ಕಾಣುತ್ತೇವೆ. ಅಪ್ಪಿತಪ್ಪಿಯಾದರೂ ಕೂಡಾ ಪ್ರಕೃತಿಯ ರಮ್ಯ ನೋಟವಾಗಲೀ ಜೀವನದ ಮಧುರ ಸಂಗಾತಿಗಳಾಗಲೀ ದೇವರ ಮತ್ತು ಮಕ್ಕಳ ಚಿತ್ರಗಳಾಗಲೀ ಇಲ್ಲಿ ಇಲ್ಲ. ಸಂಬದ್ಧ ಸಮಾಜವಾದೀ ಜೀವನದಲ್ಲಿ ಅವೆಲ್ಲಾ ಅಸಂಬದ್ಧವೋ ಏನೋ ?

ನ್ಯಾಷನಲ್ ಗ್ಯಾಲರಿಯನ್ನು ನಾವು ಸುತ್ತುತ್ತಿರುವಾಗ ಭಾರತದಿಂದ ಸಂದರ್ಶನಕ್ಕೆ ಬಂದ ಪಾರ್ಲಿಮೆಂಟರಿ ನಿಯೋಗವೊಂದು ಅಲ್ಲಿಗೆ ಬಂದಿತು. ಈ ನಿಯೋಗದಲ್ಲಿ ಶ್ರೀ ಜಗನ್ನಾಥರಾವ್ ಜೋಷಿಯವರಿದ್ದರು. ನಿಯೋಗದ ಮುಖಂಡರಾಗಿ ಶ್ರೀ ಸೀಲಂ ಸಂಜೀವರೆಡ್ಡಿಯವರಿದ್ದರು. ನಮ್ಮನ್ನು ನೋಡಿ ಅವರಿಬ್ಬರೂ ಮಾತನಾಡಿಸಿದರು. ತುಂಬು ಅಂತಃಕರಣದಿಂದ ಎಲ್ಲಾ ವಿಚಾರಿಸಿದರು. ಕನ್ನಡಿಗರನ್ನು ನೋಡಿ ಜೋಷಿಯವರಂತೂ ಖುಷಿಯಾದರು. ರಾಯಲಸೀಮೆಯ ಜನರೆಂಬ ವಾತ್ಸಲ್ಯದಿಂದ ಸಂಜೀವರೆಡ್ಡಿಯವರು ಖುಷಿಯಾದರು. ಎಲ್ಲಾ ಸೇರಿ ಒಂದೆರಡು ಫೋಟೋ ತೆಗೆಸಿಕೊಂಡೆವು. ಬೆಲ್‌ಗ್ರೇಡಿನ ನಮ್ಮ ರಾಯಭಾರಿ ಕಛೇರಿಯಲ್ಲಿ ಕೆಲಸ ಮಾಡುವ ಕನ್ನಡಿಗರೊಬ್ಬರು ಕ್ಲಿಕ್ ಮಾಡಿದರು. ನಮ್ಮ ಹೋಟೆಲ್ಲಿನ ವೇಟರರು ವಿಚಿತ್ರರಾಗಿದ್ದರು. ಅವರಿಗೆ ೨೪ ತಾಸು ಟೆಲಿವಿಷನ್ ನೋಡುತ್ತಾ ಕಾಲ ಕಳೆಯುವುದೇ ಕೆಲಸ. ಮ್ಯಾನೇಜರ್‌ಗೆ ಟೆಲಿವಿಷನ್ ಆಫ್ ಮಾಡುವುದೇ ಕೆಲಸ. ಇವರಿಗೆ ಅವನ ಬೆನ್ನ ಹಿಂದೆ ಆನ್ ಮಾಡುವುದೇ ಕೆಲಸ. ತಿಂದದ್ದಕ್ಕೆ ಉಂಡದ್ದಕ್ಕೆ ಬಿಲ್ ಕೊಡುವುದಿಲ್ಲ. ಅವರು ಕೇಳಿದಷ್ಟು ಕೊಡಬೇಕು. ಕವರ್ ಛಾರ್ಜು ಇದೆಯೆಂದರೆ ಇದೆ. ಇಲ್ಲವೆಂದರೆ ಇಲ್ಲ. ಅವರಿಷ್ಟ. ಸರಕಾರೀ ಹೋಟೆಲ್. ಕಮ್ಯುನಿಸ್ಟ್ ಸರಕಾರ ಅಂದಮೇಲೆ ಅವರ ಮಾತೇ ವೇದವಾಕ್ಯ. ಇವರು ಸಾಕಷ್ಟು ಪ್ರತ್ಯೇಕ ದುಡ್ಡು ಮಾಡುತ್ತಿರುವರೆಂಬುದರಲ್ಲಿ ಸಂಶಯವೇ ಇಲ್ಲ.

ಇಲ್ಲಿಯ ರಾಷ್ಟ್ರೀಯ ರಂಗಮಂದಿರದಲ್ಲಿ ಬ್ಯಾಲೆ ಉತ್ಸವ ನಡೆಯು ತ್ತಿತ್ತು. ಅಪೂರ್ವವಾದ ಕಲೆಯ ನಿಷ್ಣಾತರ ಒಂದು ಆಟವನ್ನು ನೋಡಿ ದೆವು. ಕೊಡಗನ್ನು ನಡೆದೇ ನೋಡಬೇಕು ಎಂಬಂತೆ ಬ್ಯಾಲೆಯನ್ನು ನೋಡಿಯೇ ಆನಂದಿಸಬೇಕು.

ಮತ್ತೆ ಬೆಲ್‌ಗ್ರೇಡಿನ ರೋವ್ ಹಾದಿ ಹಿಡಿದಾಗ ನಮಗೆ ಮಿಶ್ರ ಭಾವನೆಗಳೇ ಇದ್ದವು. ನಮಗೆ ದೂರವೂ ಇಲ್ಲ ಹತ್ತಿರವೂ ಇಲ್ಲ ಬೆಲ್ ಗ್ರೇಡ್. ಆದರೆ ಬೆಲ್‌ಗ್ರೇಡ್ ಬಿಡುಗಡೆಯಿಲ್ಲ.

೫

ಇತಿಹಾಸಭರಿತ ಇಟಲಿ

ರೋಮಾಂಚಕಾರಕ ರೋಮ್

ಅದ್ಭುತ ರೋಮಾಂಚಕ ರೋಮ್ ನಗರದ ವಿಮಾನ ನಿಲ್ದಾಣ ಪೂರ್ವ ಪಶ್ಚಿಮ ಪ್ರಪಂಚಗಳ ಸಂಗಮಸ್ಥಾನ. ಪ್ರಪಂಚದ ಎಲ್ಲಾ ಕಡೆಯ ಎಲ್ಲಾ ಕಂಪೆನಿಯ ವಿಮಾನಗಳನ್ನು ಇಲ್ಲಿ ಕಾಣಬಹುದು. ಫಿಯಮ್ ಮಿಸಿನೋ ವಿಮಾನ ನಿಲ್ದಾಣದಲ್ಲಿ ಪ್ರಪಂಚದ ಎಲ್ಲಾ ಜನಾಂಗದವರನ್ನು ಕಾಣಬಹುದು. ಕಪ್ಪು, ಬಿಳುಪು, ಬೂದು, ಹಳದಿ ಬಣ್ಣದ ಜನರೆಲ್ಲಾ ಇಲ್ಲಿ ಸಂಗಮಿಸುತ್ತಾರೆ. ರೋಮ್ ನಗರದ ಜ್ವಲಂತ ಇತಿಹಾಸ ಪ್ರಪಂಚದ ಎಲ್ಲಾ ಜನರನ್ನೂ ಆಕರ್ಷಿಸುತ್ತದೆ. ನಿರಂತರ ಯೌವನದಿಂದ ಮೆರೆಯುವ ಅನೇಕ ಪುರಾತನ ನಗರಗಳಲ್ಲಿ ರೋಮ್ ಪ್ರಮುಖವಾಗಿದೆ, ಭಾರತೀಯ ಸಿನಿಮಾ ಪ್ರಪಂಚದ ಅನೇಕ ನಿರ್ಮಾಪಕರು ರೋಮ್ ನಗರದ ಸುಂದರ ಕಾರಂಜಿ ಶಿಲ್ಪಗಳನ್ನು ಚಿತ್ರಗಳಲ್ಲಿ ಉಪಯೋಗಿಸಿದ್ದಾರೆ. ದಕ್ಷಿಣ ಭಾರತದ ಪ್ರಸಿದ್ಧ ಸಿನಿಮಾ ನಿರ್ಮಾಪಕ, ನಿರ್ದೇಶಕ ಶ್ರೀಧರ್ ತನ್ನ ಸಿನಿಮಾತಂಡದವರಾದ ಶಿವಾಜಿ ಗಣೇಶನ್, ಕಾಂಚನ ಮುಂತಾದವರೊಂದಿಗೆ ಚಿತ್ರೀಕರಣಕ್ಕಾಗಿ ನಾವಿಳಿದ ಸಮಯದಲ್ಲಿಯೇ ಇಳಿದರು. ವಿಮಾನ ನಿಲ್ದಾಣದ ಹೊರಗೆ ರೋಮ್ ನಗರಕ್ಕೆ

ಪ್ರವಾಸಿಗಳನ್ನು ಸ್ವಾಗತಿಸುವ ಬೃಹತ್ ಶಿಲ್ಪವಿದೆ. ವಿಮಾನ ನಿಲ್ದಾಣದಿಂದ ಹೋಟೆಲ್‌ಗೆ ಅನೇಕ ಮೈಲುಗಳ ಪಯಣ. ದಾರಿಯಲ್ಲಿ ಅನೇಕ ಪುರಾತನ ನಿವೇಶನಗಳನ್ನು ಹಾಯುತ್ತಾ ಹೋಗುತ್ತೇವೆ. ಹಂಪೆಯ ಹಾಳಿನಂತೆ ಕಂಡರೂ ಹಾಳಿನ ಸುತ್ತ ಮುತ್ತ ಚಿಗುರಿದ ಹೊಸ ರೋಮ್ ನಗರದ ಜೀವ ಕಳೆಯಿಂದ ಈ ನಿವೇಶನಗಳು ಚಿತ್ತಾಕರ್ಷಕವಾಗಿ ಬೆಳಗುತ್ತವೆ.

ರೋಮ್ ನಗರಕ್ಕೆ ಅಂಟಿಕೊಂಡು ಪ್ರಪಂಚದ ಏಕೈಕ ನಗರರಾಜ್ಯ ವ್ಯಾಟಿಕನ್ ಇದೆ. ವಿಶ್ವದಾದ್ಯಂತ ಹರಡಿರುವ ರೋಮನ್ ಕ್ಯಾಥೊಲಿಕ್ ಪಂಗಡದ ಧಾರ್ಮಿಕ ಗುರು ಪೋಪ್ ಅವರ ನಿವಾಸಸ್ಥಾನ ವ್ಯಾಟಿಕನ್. ಪ್ರಪಂಚದ ಅತ್ಯಂತ ಪ್ರಭಾವೀ ಮತ್ತು ಸಂಪದ್ಭರಿತ ಧಾರ್ಮಿಕ ಆಸ್ಥಾನ ಪೋಪ್ ಅವರದು. ವ್ಯಾಟಿಕನ್ ನಗರ ಇತಿಹಾಸ ಮತ್ತು ಕಲೆಗಳ ಆವರಲ್ಲದೆ ಕ್ರಿಸ್ತೀಯರ ಯಾತ್ರಾಸ್ಥಳ. ಅಮರಕಲೆಗಾರರಾದ ಮೈಕೇಲ್ ಏಂಜೆಲೋ ಮತ್ತು ರಾಫೇಲ್ ಅವರ ಕುಂಚಪರಿಣತಿಯನ್ನು ವ್ಯಾಟಿಕನ್ ಸಿಸ್ಟೈನ್ ಛಾಪೆಲ್‌ನಲ್ಲಿ ನೋಡಬೇಕು. ತಲೆತಲಾಂತರಗಳಿಂದ ಬಳಕೆಯಲ್ಲಿದ್ದ ಅರ್ಥರಹಿತ ಕಾಲಮೀರಿದ ಪದ್ಧತಿಗಳನ್ನೂ ತಂತ್ರಗಳನ್ನೂ ಧೈರ್ಯದಿಂದ ಅತಿಕ್ರಮಿಸಿ ಹೊಸ ಕಲಾಪಂಥವನ್ನು ತೋರಿದ ಮಹಾತ್ಮ ಮೈಕೇಲ್. ಸಾವಿರಾರು ವರುಷಗಳ ನಂತರ, ಅನೇಕ ಅವಾಂತರಗಳ ನಂತರ ಇಂದಿಗೂ ಈ ಚಿತ್ರಗಳು ಛಾವಣಿಯಲ್ಲಿಂದ ಗೋಡೆಗಳಿಂದ ಉದ್ಬುದ್ಧವಾಗಿ ಕೆಮ್ಮಿ, ಚೇತರಿಸಿ, ಗರ್ಜಿಸಿ, ಸಾಂತ್ವನಗೊಳಿಸಿ, ನಕ್ಕುನಲಿಸಿ, ದಿಟ್ಟದೋರಿ ಬರುವಂತೆ ಕಾಣುತ್ತವೆ. ಅಂದಿನ ಆ ಕಾಲದಲ್ಲಿ ಅವರು ಮಾಡಿದ ವರ್ಣಸಂಯೋಜನೆ, ಎಲ್ಲೆಯಿಲ್ಲದ ಕಲ್ಪಕತೆ, ನಿಬ್ಬೆರಗಾಗಿಸುತ್ತವೆ.

ಮೈಕೇಲ್ ಏಂಜೆಲೋ ಅತ್ಯದ್ಭುತ ಕಲಾವಿದನಾಗಿದ್ದ. ಶಿಲ್ಪಿಯಾಗಿದ್ದ. ಕಟ್ಟಡತಜ್ಞನಾಗಿದ್ದ. ಅವನ ನಿರ್ಮಾಣಕುಶಲತೆಗೆ ಮತ್ತು ಚತುರ ಶಿಲಾವಿನಿಯೋಗಕ್ಕೆ ಸಾಕ್ಷಿಯಾಗಿದೆ, ಸೇಂಟ್ ಪೀಟರ್ಸ್ ಬ್ಯಾಸಿಲಿಕಾ. ಏಸುಕ್ರಿಸ್ತನ ಪ್ರಥಮ ಶಿಷ್ಯರ ಪೈಕಿ ಒರ್ವನೂ ರೋಮನ್ ಕ್ಯಾಥಲಿಕ್ ಪಂಥದ ಆದ್ಯನೂ ವ್ಯಾಟಿಕನ್ ಪೀಠದ ಪ್ರಥಮ ಆಚಾರ್ಯನೂ ಆದ ಪ್ರವಾದೀ ಪೀಟರನ ಸ್ಮಾರಕವಾಗಿ ಕಟ್ಟಲ್ಪಟ್ಟ ಈ ಕ್ರೈಸ್ತ ದೇವಾಲಯ ಮೈಕೇಲ್‌ನ ಬಹಮುಖ ಪ್ರತಿಭೆಗೆ ಚಿರಂತನ ಸಾಕ್ಷಿ. ಸ್ಥಪತಿಯಾಗಿ ಮೈಕೇಲ್ ಹಾಕಿರುವ ಕಟ್ಟಡದ

ಶಿಲ್ಪ ಯಾರೂ ಮೀರಿಸಲಾರದ ಕಲಾಖಂಡ ಶಿಲಾಹೃದಯವನ್ನರಿತ ಶಿಲ್ಪಿಯಾಗಿ ಮೈಕೇಲ್ ಮಾಡಿರುವ ನಾನಾವಿಧ ಅಮೃತಶಿಲಾ ವಿನಿಯೋಗ ಸಾಟಿ ಯಿಲ್ಲದುದು. ಕಲಾವಿದನಾಗಿ ಮೈಕೇಲ್ ಮಾಡಿರುವ ಅಲಂಕಾರ, ಮೂರ್ತಿ ಶಿಲ್ಪ, ವರ್ಣವಿನ್ಯಾಸ, ಅಪ್ರತಿಮವಾಗಿದೆ. ನಾಸ್ತಿಕನನ್ನೂ ಆಸ್ತಿಕನನ್ನಾಗಿ ಮಾಡಬಲ್ಲ ಶಕ್ತಿ, ಸುಪ್ತವಾದ ಸಾತ್ವಿಕತೆಯನ್ನು ಜಾಗೃತಗೊಳಿಸುವ ಮಹಾಂತ್ರಿ ಕತೆ, ಜಂಜಡವಾದ ಜಗತ್ತನ್ನು ಕ್ಷಣಕಾಲ ಮರೆಸಿ ದೇವಸಾನ್ನಿಧ್ಯವನ್ನು ಸನಿಹ ಗೊಳಿಸುವ ಅಮಾಯಕ ಸತ್ಯವಾದ ಶಿವವಾದ ಸುಂದರವಾದ ಆವರಣ ಇಲ್ಲಿ ಒಡಮೂಡಿದೆ.

ಮೈಕೇಲ್‌ನ ಕಲೆಗೆ ಮರ್ಯಾದೆಯನ್ನು ತಂದುಕೊಡುವ ಪ್ರಯತ್ನದಲ್ಲಿ ಧರ್ಮಗುರುಗಳು ಸಾಕಷ್ಟು ಸಮಯ ಮತ್ತು ಹಣ ವ್ಯರ್ಥಮಾಡಿ ಬರೆಸಿ ದ್ದಾರೆ, ಅಳಿಸಿದ್ದಾರೆ. ಕಲೆಯ ದೃಷ್ಟಿಯಲ್ಲಿ ಅಪಚಾರ ಮಾಡಿದ್ದಾರೆ. ಸೆಂಟ್ ಪೀಟರ್‌ನ ದೇವಾಲಯದಲ್ಲಿ ಕಾಲ ಮಾಗಿದ ಪೋಪರ ಅನಾವಶ್ಯಕ ಮೂರ್ತಿಗಳನ್ನು ಅಭ್ಯಂತರವೇ ಇಲ್ಲದೆ ನಿಲ್ಲಿಸಿ ಅವಾಂತರ ಮಾಡಿದ್ದಾರೆ. ಆದರೂ ಮಾನವತೆಯ ಅದೃಷ್ಟವೇನೋ ಎಂಬಂತೆ ಮೈಕೇಲ್‌ನ ಕಲೆ ಅಳಿಯದೇ ಉಳಿದು ಬಂದಿದೆ.

ವಿಖ್ಯಾತ ಕಲೆಗಾರನಾದ ರಾಫೇಲ್‌ನ ಗ್ರಾಹಕವಾದ ಚಿತ್ರಕಲೆ ಅನು ರೂಪವಾಗಿ ಉಳಿದುಬಂದಿದೆ. ಸಮಕಾಲೀನ ಕಲಾವಿದರಲ್ಲಿ ಉತ್ಕೃಷ್ಟನೆನಿಸಿ ವ್ಯಾಟಿಕನ್‌ನ ಈ ಮಂದಿರದಲ್ಲಿ ತನ್ನ ಪ್ರತಿಭೆ ತೋರಿದ ರಾಫೇಲನ ಕಲಾ ದರ್ಶನ ವಿಶಾಲವಾದುದು. ಪುರಾತನಕಾಲದ ಜೀವಂತವಾದ ಸಮಾಜವನ್ನು ಅವನ ಕುಂಚ ಸೆರೆಹಿಡಿದಿದೆ. ಅವನು ರಚಿಸಿದ ರೋಮ್ ನಗರದ ಬೀದಿ, ಕವಿ ಕಲಾವಿದರ ಸಂಭ್ರಮ, ಪೀಟರನ ಸೆರೆಮನೆವಾಸ, ಮುಂತಾದ ಚಿತ್ರಗಳು ಪರಿಪೂರ್ಣವಾದ ಕಲಾಕೃತಿಗಳೆನಿಸಿ ಸಾಟಿಯಿಲ್ಲದೇ ಮೆರೆಯುತ್ತಿವೆ. ಚಲನ ತ್ರದಲ್ಲಿ ಸೆರೆಹಿಡಿಯುವಂತೆ ಜೀವನವನ್ನು, ಸಜೀವ ಸಮೂಹವನ್ನು, ಭಾವೋ ದ್ವೇಗಗಳನ್ನು ಸೆರೆಹಿಡಿದಿರುವ ರೀತಿ ರಾಫೇಲನಿಗೆ ಮಾತ್ರ ಸಾಧ್ಯ. ವ್ಯಾಟಿ ಕನ್ ವಸ್ತುಸಂಗ್ರಹಾಲಯದಲ್ಲಿ ಅಮೂಲ್ಯವಾದ ಅನೇಕ ಶಿಲ್ಪಗಳಿವೆ. ಆದರೆ ಅವನ್ನು ವ್ಯವಸ್ಥೆಗೊಳಿಸಿರುವ ರೀತಿ, ವೈಜ್ಞಾನಿಕವಾಗಿಲ್ಲ. ಅಸಂಖ್ಯಾತ

ವಾಗಿ ಅವರ ವಶಕ್ಕೆ ದೊರೆತಿರುವ ಶಿಲ್ಪಗಳೂ, ಟಾಪೆಸ್ಟ್ರಿಗಳೂ, ಚಿತ್ರಲೇಖನಗಳೂ, ವೈಭವದ ಆಭರಣಗಳೂ ಸರಿಯಾದ ಜಾಗ ದೊರೆಯದೇ ದೊರೆತ ಜಾಗದಲ್ಲಿ ಕುಳಿತಿವೆ. ಪ್ರಪಂಚದ ಬಹುಭಾಗ ಸಂಪತ್ತಿನ ವಹಿವಾಟಿನಲ್ಲಿ ಬಹುಮುಖ್ಯ ಪಾತ್ರವನ್ನು ಈ ಸಂಸ್ಥೆ ವಹಿಸುತ್ತದೆ. ಅಮೇರಿಕೆಯ ಇಡೀ ಸಂಪತ್ತಿನ ೧/೩ ಕ್ಕೆ ಮಿಕ್ಕಿದ ಭಾಗದ ಒಡೆತನ ಧಾರ್ಮಿಕ ಸಂಸ್ಥೆಗಳಿಗೆ ಸೇರಿದೆಯೆಂದು ಹೇಳಲಾಗುತ್ತಿದೆ. ಇಟಲಿಯ ವಾಣಿಜ್ಯ ವ್ಯವಹಾರ, ಸಂಪತ್ತಿನ ೨/೩ ಅಂಶ ವ್ಯಾಟಿಕನ್ ಸೂಚನೆಯಂತೆ ನಡೆಯುತ್ತದೆಯಂತೆ. ವ್ಯಾಟಿಕನ್‌ಗೆ ಪ್ರತ್ಯೇಕ ಅಂಚೆ, ಹಣ ಮತ್ತು ಕಾಲ್ದಳ ಇದೆ. ಇಲ್ಲಿಯು ಎಲ್ಲಾ ವ್ಯಾಪಾರ ಪ್ರವಾಸಿಗಳ ಮೇಲೆ ಆಧಾರಿತವಾಗಿದೆ.

ವ್ಯಾಟಿಕನ್ ಗೋಡೆಯ ಹೊರಗಡೆ ಇರುವ ಸೇಂಟ್ ಪಾಲ್ಸ್ ಕ್ಯಾಥೆಡ್ರಲ್ ಅಗಾಧವಾಗಿದೆ. ಕುಸುರಿ ಕೆಲಸದ, ಸುವರ್ಣ ಶಿಲ್ಪದ ಅಗಾಧವಾದ ಸ್ಥಂಭಗಳನ್ನಾಧರಿಸಿ ನಿರ್ಮಿಸಲ್ಪಟ್ಟಿರುವ ಒಳಗಿನ ಆವಾರಗಳು ಅದ್ಭುತವಾಗಿವೆ. ಅಲ್ಲಿಯ ವಾತಾವರಣ ಯಾರನ್ನಾದರೂ ಮುಗ್ಧಗೊಳಿಸುತ್ತದೆ. ಧರ್ಮರಕ್ಷಣೆಗಾಗಿ ನಿರ್ವಾಹವಿಲ್ಲದೆ ಕತ್ತಿ ಹಿಡಿದು ನಿಂತಿರುವ ಪ್ರವಾದಿ ಪಾಲ್‌ನ ವಿಗ್ರಹದ ಮುಖದ ಮೇಲಿನ ಅಸಹಾಯಕತೆಯ ಕಳೆಗೆ ಈಡೇ ಇಲ್ಲ.

ರೋಮ್ ನಗರದ ಬಹುಮುಖ್ಯ ಆಕರ್ಷಣೆ ಕೊಲೋಶಿಯಂ ಮತ್ತು ರೋಮನ್ ಸರ್ಕಸ್. ರೋಮಿನ ಗ್ಲಾಡಿಯೇಟರ್ಸ್ ಬಗ್ಗೆ ಕೇಳಿದ ಓದಿದ ಮತ್ತು ಪರದೆಯ ಮೇಲೆ ಕಂಡವರಿಗೆ ಇವುಗಳ ಬಗ್ಗೆ ಕುತೂಹಲ. ಸರ್ಕಸ್ ಕ್ರಿಶ್ಚಿಯನ್ನರ ಬಲಿದಾನದ ರಕ್ತತರ್ಪಣಕ್ಕೆ ಆಹುತಿಯಾಗಿ ನೆಲಸಮವಾಗಿದೆ. ಕೊಲೋಶಿಯಂ ಅಂಗವಿಕಲವಾದರೂ ಹೃದಯಂಗಮವಾಗಿ ನಿಂತಿದೆ. ಗಜಗಾತ್ರದ ಗೋಡೆಗಳು, ಆವಾರಗಳು ಇವುಗಳ ಮಧ್ಯೆ ನಿಂತಾಗ ರೋಮನ್ ಯುಗದ ಕೋಲಾಹಲ, ಕೇಕೆ, ವಿಕಟಹಾಸ್ಯ, ಸುರಾಸುಂದರಿಯರ ಗಲಾಟೆ ಮತ್ತು ಕ್ರೀಡೆ ಎಲ್ಲೆಡೆ ಇದ್ದಕ್ಕಿದ್ದಂತೆ ಒಡಮೂಡಿಬರುತ್ತದೆ. ಪಶುಬಲದಿಂದ ಕೊಬ್ಬಿದ ಗ್ಲಾಡಿಯೇಟರ್ ಮತ್ತು ಆತ್ಮಬಲದಿಂದ ಎದ್ದು ನಿಂತ ಕ್ರಿಸ್ತೀಯ ಯೋಧರು ಕಾಣಬರುತ್ತಾರೆ. ಲೋಕದ ಕಣ್ಣಿಗೆ ಅಂದು ಆಟವಾಗಿದ್ದ ಈ ವಿಷಯ ನಿಜಕ್ಕೂ ಪ್ರಪಂಚದ ಇತಿಹಾಸದ ನಿರ್ಣಾಯಕ ಘಟ್ಟ

ವೆನಿಸಿತ್ತು. ಅದಮ್ಯಶಕ್ತಿಯ ಉಬ್ಬರದಿಂದ ಕದನಕುತೂಹಲದಿಂದ ಮೆಯ್ಯುಬ್ಬಿ ಮೆರೆಯುತ್ತಿದ್ದ ರೋಮ್ ಸಾಮ್ರಾಜ್ಯವೂ ಮಣ್ಣು ಮುಕ್ಕಿತು. ಆ ಸಂಸ್ಕೃತಿ ನಾಶವಾಗಿ ಅದರ ಕುರುಹಾಗಿ ಇಂದು ನಾವು ಕಾಣುವುದು ಭಗ್ನ ಮಂಟಪಗಳು, ಮಸಣದಂತೆ ಕಾಣುವ ಅರಮನೆಗಳು, ವಿರೂಪವಾದ ಆವಾರಗಳು. ದೇವರ ಮಹಿಮೆಯನ್ನು ಸಾರಲು ಬಂದ ಏಸುಕ್ರಿಸ್ತನನ್ನು ಶಿಲುಬೆಗೇರಿಸಿದ ಪಾಪದಿಂದ ರೋಮ್ ಸಾಮ್ರಾಜ್ಯ ಚೇತರಿಸಿಕೊಳ್ಳಲೇ ಇಲ್ಲ, ಭಗವತ್ ಕ್ಷಮೆಗೂ ಮಿತಿಯಿದೆ ಎಂಬುದಕ್ಕೆ ಇದೊಂದು ಚಿರಂತನ ಸಾಕ್ಷಿ. ರೋಮ್ ನಗರದ ಪ್ರತಿಯೊಂದು ಕಟ್ಟಡದ ಅಡಿಪಾಯ ಪುರಾತನ ರೋಮಿನ ಯಾವುದೋ ಕಟ್ಟಡವನ್ನು ಆಧರಿಸಿಯೇ ನಿಂತಿದೆ.

ಆಧುನಿಕ ಇಟಲಿಯನ್ನು ಒಂದುಗೂಡಿಸಿ ರಾಷ್ಟ್ರೀಯತೆಯನ್ನು ಒಡಮೂಡಿಸಿ ಒಂದು ರಾಜ್ಯವನ್ನಾಗಿ ರೂಪಿಸಲು ಜೀವ ತೇಯ್ದು ಹೋರಾಡಿದ್ದು ಗೆರಿಬಾಲ್ಡಿ ಮತ್ತು ಅವನ ಹೆಂಡತಿ. ಇಟಲಿಯ ಉಚ್ಛ್ರಾಯ ಸ್ಥಿತಿಯಲ್ಲಿ ದಾರಿ ತಪ್ಪಿಸಿ ಅನ್ಯಾಯ ಮಾಡಿದ್ದು ಮುಸಲೋನಿ. ಮುಸಲೋನಿ ಪುರಾತನ ರೋಮಿನ ಪ್ರಪಂಚಾಧಿಪತ್ಯದ ಕನಸು ಕಂಡಿರಬೇಕು. ರೋಮನರು ಗೆರಿಬಾಲ್ಡಿಯನ್ನು ರಾಷ್ಟ್ರಪಿತನೆಂದು ನೆನೆಸುತ್ತಾರೆ. ಮುಸುಲೋನಿಯನ್ನು ನಿರ್ಭಾವದಿಂದ ಇತಿಹಾಸದ ಒಂದು ಪಂಕ್ತಿಯಂತೆ ನೆನೆಸುತ್ತಾರೆ,

ಇಲ್ಲಿಯ ರಾಷ್ಟ್ರೀಯ ಮ್ಯೂಜಿಯಂನಲ್ಲಿ ಮೈಕೇಲ್‌ನ, ಮತ್ತಿತರ ಅನೇಕ ಹಿರಿಯ ಕಲಾವಿದರ ಅನೇಕ ಕೃತಿಗಳಿವೆ. ಆದರೆ ಹರಕು ಮುರುಕು ಅನಾಮಿಕ ಶಿಲ್ಪಗಳೇ ಹೆಚ್ಚು. ರೋಮನ್ ಮೊಸೇಕ್‌ನ (Roman Mosaic) ಉತ್ಕೃಷ್ಟ ಅವಶೇಷಗಳಿವೆ. ಬಾರ್ಬರೇನಿ ಅರಮನೆಯಲ್ಲಿ ಚಿತ್ರಗಳಿವೆ ಉತ್ಕೃಷ್ಟವಲ್ಲದಿದ್ದರೂ ಕೂಡಾ ಅನೇಕ ಕಲಾವಿದರ ಅನೇಕ ಚಿತ್ರಗಳು ಇಲ್ಲಿ ಶೇಖರಿಸಲ್ಪಟ್ಟಿವೆ. ಕಲೆಯ ಇತಿಹಾಸದ ದೃಷ್ಟಿಯಿಂದ ನೋಡಬಹುದು. ಬೋರ್ಗಿಸ್ ಗ್ಯಾಲರಿ ಎಲ್ಲಕ್ಕಿಂತ ಉತ್ತಮವಾಗಿದೆ. ಸಾಹುಕಾರ ಮನೆತನವೊಂದು ತಮ್ಮ ಬಂಗಲೆಯ ಅಲಂಕಾರಕ್ಕೆಂದು ಸಂಗ್ರಹಿಸಿದ ಕಲಾಸಂಪತ್ತಿದು. ಅತ್ಯುತ್ತಮವೆನಿಸಿದ ಚಿತ್ರಗಳೂ, ಚಂದ್ರಕಾಂತ ಶಿಲೆಯ ಅಪರೂಪ ಶಿಲ್ಪಗಳೂ, ಅಂದವಾಗಿ ಅಲಂಕರಿಸಲ್ಪಟ್ಟ ಛಾವಣಿಗಳೂ ಈ ಚಿತ್ರಶಾಲೆಯನ್ನು

ಉತ್ಕೃಷ್ಟಗೊಳಿಸಿವೆ. ಬೋಗೀಸ್ ಕುಟುಂಬದವರಿಂದ ಇಟಲಿ ಸರಕಾರವು ಈ ಮನೆಯನ್ನೂ ಕಲಾಸಂಪತ್ತನ್ನೂ ಪಡೆದುಕೊಂಡು ನವೀನವಾಗಿ ವ್ಯವಸ್ಥಿ ಗೊಳಿಸಿ ಕಲಾಜಗತ್ತಿಗೆ ಉಪಕಾರ ಮಾಡಿದೆ.

ಪಾಶ್ಚಾತ್ಯ ಜನಜೀವನದ ಬಹುಮುಖ್ಯ ಭಾಗವಾದ ರಾತ್ರಿ ಜೀವ ನದ ಶಾಲೆಗಳನ್ನು (ನೈಟ್ ಕ್ಲಬ್) ನೋಡುವ ಅವಕಾಶ ನಮಗೆ ಇಲ್ಲಿ ದೊರೆ ಯಿತು. ಇಲ್ಲಿಯ ಬಸ್ ಕಂಪನಿಯು ಮೂರು ನೈಟ್ ಕ್ಲಬ್‌ಗಳನ್ನು ಸಂದರ್ಶಿ ಸುವ, ಒಂದು ರಾತ್ರಿ ಪ್ರವಾಸದ ಏರ್ಪಾಟು ಮಾಡಿದ್ದಾರೆ. ಪ್ರತಿಯೊಂದು ಪಾಶ್ಚಾತ್ಯ ನಗರದಲ್ಲಿ ಇಂತಹ ಪ್ರವಾಸಗಳಿರುತ್ತವೆ. ಪ್ರವಾಸಿಗಳೂ ಇಂತಹ ಕಂಪನಿಗಳ ಕೃಪಾಶ್ರಯದಲ್ಲಿ ಹೋದರೆ ಅನೇಕ ಬಾಧೆಗಳು ತಪ್ಪು ತ್ತವೆ. ಮತ್ತು ಯಾವ ಅಪಾಯವೂ ಇರುವುದಿಲ್ಲ. ಮೊದಲನೆಯ ಕ್ಲಬ್‌ನ ಅಲಂಕಾರ ಸಮುದ್ರ ಜಗತ್ತನ್ನು ಹೋಲುತ್ತಿತ್ತು. ಕಡಲ ತೀರದ ರೋಮ ನರು ಮೀನು ಹಿಡಿದು ಜೀವಿಸುತ್ತಾರೆ. ಅವರ ಗೃಹವೂ ಹಡಗಿನಾಕಾರ ವಾದುದು. ಹಾಡು, ಕುಣಿತ, ಸಹಾಯಮಾಡುತ್ತವೆ. ಇಲ್ಲಿ ಇಂತಹ ರೋಮನ್ ಜಾನಪದ ಗೀತೆಗಳನ್ನು ಹಾಡುತ್ತಿದ್ದರು; ಯಾರಿಗೂ ಅವರ ಹಾಡಿನ ಬಗ್ಗೆ ಪರಿವೆಯೇ ಇಲ್ಲ. ಪ್ರತಿಯೊಬ್ಬರ ಆಸಕ್ತಿ. ಸುರೆ ಮತ್ತು ಸುಂದರಿಯರ ಬಗ್ಗೆ. ನಮಗೆ ಕಂಪನಿಯವರು ಷಾಂಪೇನ್ ಇತ್ತರು. ಆದರೆ ನಾವು ಸುರೆಯ ಭಕ್ತರಲ್ಲವೆಂಬುದನ್ನು ತಿಳಿದು ಕೋಲಾ ನೀಡಿದರು. ಕೆಲಕಾಲ ತಂಪುಕೋಲಾ ಚಪ್ಪರಿಸುತ್ತಾ ಅರ್ಥವಾಗದ ಆ ಗೀತೆಗಳನ್ನು ಕೇಳಿದೆವು. ಗೀತೆಯ ಮಾತು ತಿಳಿಯದಿದ್ದರೂ ಆ ಮಟ್ಟ ಮತ್ತು ಭಾವವು ಕೊಂಚ ಕೊಂಚ ತಿಳಿಯುತ್ತಿದ್ದವು. ಎರಡನೆಯದಾಗಿ ನಾವು ಹೋದದ್ದು ಆಧುನಿಕ ರೀತಿಯ ರಾತ್ರಿ ಶಾಲೆ. ಇಲ್ಲಿ ಒಂದು ರಂಗಸ್ಥಳದ ಮೇಲೆ ವಾದ್ಯ ಮಂಡಳಿ ಮತ್ತು ಓರ್ವ ಅರೆನಗ್ನ ನರ್ತಕಿ ನಿರಂತರ ಹಾಡುತ್ತಾ ಕುಣಿ ಯುತ್ತಾ ಇರುತ್ತಾರೆ. ಈ ನರ್ತನ ಉತ್ಥಾನಕ್ಕೇರುವ ಹೊತ್ತಿಗೆ ಅನೇಕರು ಅವರೊಂದಿಗೆ ಸೇರಿ ಹುಚ್ಚರಂತೆ ನರ್ತಿಸುತ್ತಾ ಇರುತ್ತಾರೆ. ಇಲ್ಲಿ ಮುದುಕ ನೊಬ್ಬನು ಹುಡುಗಿಯೊರ್ವಳೊಂದಿಗೆ ಹುಚ್ಚಾಬಟ್ಟೆ ಕುಲುಕಿ ಕುಲುಕಿ ಕುಣಿ ಯುತ್ತಿದ್ದುದು ಎಂದಿಗೂ ಮರೆಯಲಾಗದ ದೃಶ್ಯ. ಮೂರನೆಯದಾಗಿ ನಾವು

ತೆರಳಿದ್ದು ಅತ್ಯಾಧುನಿಕ ಸ್ಟ್ರಿಪ್‌ಟೀಸ್ ಕ್ಲಬ್. ಸ್ಟ್ರಿಪ್‌ಟೀಸ್ ಎಂದರೆ ಅನೇಕರ ಎದುರಿಗೆ ಹೆಣ್ಣೊಂದು ಕಾಮೋತ್ತೇಜಕವಾಗಿ ನರ್ತಿಸುತ್ತಾ ಕುಲುಕುತ್ತಾ ಮೆಲ್ಲಮೆಲ್ಲಗೆ ಒಂದೊಂದೇ ತುಂಡು ಬಟ್ಟೆ ತೆಗೆದೊಗೆದು ಸಂಪೂರ್ಣ ವಿವಸ್ತ್ರ ಳಾಗುತ್ತಾಳೆ. ಸ್ವಾಭಾವಿಕವಾದ ದೇಹ ಸೌಂದರ್ಯವನ್ನು ಆವರಣರಹಿತವಾಗಿ ನೋಡಿ ಜನ ಕೇಕೆ ಹಾಕುತ್ತಾರೆ. ಈ ಕ್ಷಣಕಾಲ ಅದೊಂದು ರಾಕ್ಷಸ ರಾಜ್ಯದಂತೆ ತೋರುತ್ತದೆ. ರೋಮ್ ನಗರದ ರಸ್ತೆಗಳೆಲ್ಲ ಪುರಾತನ ಕಳೆ ಯಿಂದ ಕಂಗೊಳಿಸುತ್ತವೆ. ರಸ್ತೆಕೂಡುಗಳ ಮಧ್ಯೆ ಇರುವ ಕಾರಂಜಿಗಳು ಅಮೂಲ್ಯವಾಗಿವೆ. ಶತಮಾನಗಳ ಇತಿಹಾಸದಲ್ಲಿ ಅನೇಕ ವ್ಯಕ್ತಿಗಳ ಸ್ಮರಣೆ ಗಾಗಿ ಅನೇಕ ಘಟನೆಗಳ ನೆನಪಿಗಾಗಿ ಈ ಕಾರಂಜಿಗಳನ್ನು ನಿರ್ಮಿಸಲಾಗಿದೆ. ಇವುಗಳ ಪೈಕಿ ನಾಣ್ಯಗಳ ಕಾರಂಜಿ, ಬರ್ಬರೇನಿ ಕಾರಂಜಿ ಮತ್ತು ರಿಪಬ್ಲಿಕ್ ಪಿಯಾಜಾ ಅನುಪಮವಾಗಿವೆ. ಪ್ರಪಂಚದ ಪವಿತ್ರ ನದಿಗಳಾದ ಗಂಗಾ, ನೈಲ್, ಟೈಬರ್ ಇತ್ಯಾದಿಗಳ ಬಗ್ಗೆ ಸ್ಮಾರಕ ಕಾರಂಜಿಯೊಂದು ಹೃದಯಂ ಗಮವಾಗಿದೆ. ಈಜಿಪ್ಟಿನಿಂದ ಕಠಿಣ ಪರಿಶ್ರಮದಿಂದ ಕಳಿಸಲ್ಪಟ್ಟ ರಾಮ್ಸೆಸ್ ಸ್ತಂಭ, ಕ್ಲಿಯೋಪಾತ್ರ ಸ್ತಂಭ ಆ ಕಲೆಯ ಅಮೋಘ ಸ್ಮಾರಕಗಳೆನಿಸಿವೆ. ರೋಮ್ ನಗರದ ಮಧ್ಯದಲ್ಲಿ ಹರಿಯುತ್ತಿರುವ ಟೈಬರ್ ನದಿಯನ್ನು ದಾಟಲು ೫೨ ಸೇತುವೆಗಳಿವೆ. ಬಹು ಪುರಾತನ ಸೇತುವೆಗಳನೇಕ ಭೀಮ ಬಲದಿಂದ ಇಂದಿಗೂ ನಿಂತಿವೆ.

ಈ ಜನ ಸುಂದರಗಾತ್ರರು. ಜಗತ್ತಿನಲ್ಲಿಯೇ ರುಚಿಗಾರರೆನಿಸಿ ನಿಪುಣ ಪಾಕಶಾಸ್ತ್ರಿಗಳೆನಿಸಿದ್ದಾರೆ. ಪಶ್ಚಿಮದ ಯಾವುದೇ ದೇಶದಲ್ಲಿ ನೋಡಿ ದರೂ ಕೂಡ ಹೋಟೆಲ್ ಉದ್ದಿಮೆ ಇಟಾಲಿಯನ್ನರ ಕೈಯಲ್ಲಿಯೇ ಉಳಿದಿದೆ. ನಗರದ ಅನೇಕ ಕೂಟಗಳಲ್ಲಿ ಗಾನ ಕಛೇರಿಗಳು ರಾತ್ರಿಯೆಲ್ಲಾ ನಡೆದಿರುತ್ತವೆ. ಇಟಾಲಿಯನ್ನರು ಭಾರತೀಯರಂತೆ ಬಡವರು. ನಮ್ಮಂತೆ ಆರಾಮ ಮನೋ ಭಾವದವರು. ಭಾರತೀಯರಂತೆ ಊಟತಿಂಡಿಯೆಂದರೆ ತುಂಬ ಜೀವ. ಹೆಣ್ಣು ಹೊನ್ನಿನ ಮೇಲೆ ಇವರ ಬಾಳ್ವೆ ಆಧಾರಿತ. ಅನೇಕ ಸಹಸ್ರ ಇಟಾಲಿಯನ್ನರು ಗ್ರೀಕರಂತೆ ಹೊರದೇಶಗಳಲ್ಲಿ ಸಂಪತ್ತಿನೊಡೆಯರಾಗಿದ್ದಾರೆ. ಜಗತ್ಪ್ರಸಿದ್ಧ ಫಿಯಟ್‌ಕಾರ್ ಕಂಪನಿ ಇಲ್ಲಿಯೇ ಇದೆ. ಉದ್ಯೋಗ ಸಂಪನ್ನ

ವಾದ ಯೂರೋಪಿನ ಇತರ ರಾಷ್ಟ್ರಗಳು ಇಟಲಿಯಿಂದ ಹೇರಳವಾಗಿ ಅಸಂಖ್ಯ ವಸ್ತುಗಳನ್ನು ತರಿಸುತ್ತಾರೆ. ಇಟಲಿಯ ಬಟ್ಟೆಬರೆಗಳು ಅಮೇರಿಕೆ ಯಲ್ಲಿ ತುಂಬಾ ಜನಪ್ರಿಯ.

ಇಟಾಲಿಯನ್ ಸಿನಿಮಾದ ರುಚಿನೋಡಲು 'ಸೆರಾಫಿನೋ' ಎಂಬ ಚಿತ್ರಕ್ಕೆ ಹೋಗಿದ್ದೆವು. ಇಲ್ಲಿ ಸೆನ್ಸಾರ್ ವ್ಯವಸ್ಥೆ ಇಲ್ಲದುದರ ಪರಿಣಾಮ ಈ ಚಿತ್ರ ದಲ್ಲಿ ಚೆನ್ನಾಗಿ ತಿಳಿಯಿತು. ಆದರೆ ಇಟಲಿಯ ಸಿನಿಮಾರಂಗ ಪ್ರಪಂಚದಲ್ಲಿಯೇ ಹೆಸರು ಪಡೆದಿದೆ. ಇಟಲಿ ಸರಕಾರಕ್ಕೆ ಸೇರಿದ ಅಲಿಟಾಲಿಯ ವಿಮಾನ ಸಾರಿಗೆಯಲ್ಲಿ ಪ್ಯಾರಿಸ್‌ಗೆ ಹೊರಟುನಿಂತಾಗ ರೋಮ್ ನಗರ ನಮ್ಮನ್ನು ಪೂರ್ಣ ಗೆದ್ದುಕೊಂಡಿತ್ತು. ಆ ನಗರದ ಅಗಾಧ ವೈಭವ, ಸಂಪತ್ತು, ಇತಿಹಾಸ, ಕಲಾಪ್ರಪಂಚ, ಅದಮ್ಯವಾದ ರಸಿಕತೆ ಮತ್ತು ಎಲ್ಲ ಕಾಲಕ್ಕೂ ಉಳಿಯ ಬಲ್ಲೆನೆಂಬ ಆಕಾಂಕ್ಷೆ ನಮ್ಮನ್ನು ಮುಗ್ಧಗೊಳಿಸಿತ್ತು.

೬

ಪ್ಯಾರಿಸ್ : ಅಂಗನೆಯರ ಇಂದ್ರಧನುಷ್

ರೋಮ್ ನಗರದಿಂದ ಹೊರಟು ಪ್ಯಾರಿಸ್ ಸೇರಿದಾಗ ರಾತ್ರಿ ಒಂಬತ್ತು ಗಂಟೆಯಾಗಿತ್ತು. ಇದುವರೆಗೆ ನೋಡಿದ ವಿಮಾನತಾಣಗಳಿಗಿಂತ ಪ್ಯಾರಿಸ್ಸಿನ ಆರ್ಲಿ ವಿಮಾನತಾಣ ವೈಭವದಿಂದ ಕೂಡಿತ್ತು. ಪ್ರವಾಸಿಗರಿಗೆ ಅಸಂಖ್ಯ ಸೌಲಭ್ಯಗಳು. ಭಾರತದಿಂದ ಹೊರಡುವಾಗ ನಮಗೆ ಸಮಯ ಸಾಕಷ್ಟಿಲ್ಲದ್ದರಿಂದ ಫ್ರೆಂಚ್ ವೀಸಾ ತೆಗೆದುಕೊಳ್ಳಲಾಗಲಿಲ್ಲ. ವಿಮಾನನಿಲ್ದಾಣದಲ್ಲಿ ೭೨ ಗಂಟೆಗಳ ವೀಸಾ ಮಾತ್ರ ಕೊಡಲು ಸಾಧ್ಯವೆಂದರು. ನಮ್ಮ ಯೋಜನೆಯ ಪ್ರಕಾರ ನಾವು ನಾಲ್ಕು ದಿನ ಇರಬೇಕಾಗಿತ್ತು. ಸರಿ, ದೊರೆತಷ್ಟೇ ಭಾಗ್ಯವೆಂದು ಯೋಚಿಸಿ ೭೨ ಗಂಟೆಗಳ ವೀಸಾ ತೆಗೆದುಕೊಂಡು ರಾಯಲ್ ಮಾನ್ಸೀವ್ ಹೋಟೆಲ್ ಸೇರಿದೆವು. ರಾತ್ರಿ ೧೧ ಗಂಟೆಯ ಹೊತ್ತಾಗಿದ್ದರೂ ಕೂಡಾ ಪ್ಯಾರಿಸ್‌ನ ವೈಭವ ಕಡಿಮೆಯಾಗದೆ, ತದ್ವಿರುದ್ಧವಾಗಿ ಚಟುವಟಿಕೆ ಹೆಚ್ಚುತ್ತಾ ನಡೆದಂತೆ ತೋರುತ್ತಿತ್ತು. ನಮ್ಮ ಹೋಟೆಲ್‌ಗೆ ಹತ್ತಿರದಲ್ಲಿಯೇ ಆರ್ಕ್-ಡಿ-ಟ್ರಯಂಫ್ (ವಿಜಯ ಗೋಪುರ) ಇತ್ತು. ರಾತ್ರಿ ವೇಳೆಯಾಗಿದ್ದರೂ ಕೂಡಾ ಪೌರ್ವಾತ್ಯರ ಕನಸಿನ ಅಲಕಾವತಿಯಾದ ಪ್ಯಾರಿಸ್‌ನಲ್ಲಿ ತಿರುಗಾಡುವ ಹಂಬಲದಿಂದ ಕೆಲಹೊತ್ತು ತಿರುಗಾಡಿ ದಾರಿ ಬದಿಯ ರೆಸ್ಟುರಾಂದಲ್ಲಿ ಟೀ ಹೀರಿ ಮನೆಗೆ ಮರಳಿದೆವು.

ಭೂಮಿಯ ಮೇಲೆ ಅತಿ ಎತ್ತರವಾದ ಗೋಪುರವನ್ನು ಕಬ್ಬಿಣದಿಂದ ಕಟ್ಟಲು ಮಾಡಿದ ಹೆಮ್ಮೆಯ ಸಾಹಸ ಐಫೆಲ್ ಗೋಪುರ. ಐದು ದಶಕಗಳ ಹಿಂದೆ ಅತಿ ಎತ್ತರವೆನಿಸಿದ್ದ ಈ ಗೋಪುರ ತನ್ನದೇ ಆದ ಸ್ಥಾನವನ್ನು ಇಂದಿಗೂ ಪಡೆದಿದೆ. ಆದರೆ ಜಪಾನರು ಇದಕ್ಕಿಂತ ಮಿಗಿಲಾದ ಇಂಥದೇ ಶಿಖರವನ್ನು ಟೋಕ್ಯೋದಲ್ಲಿ ಈಗಾಗಲೇ ನಿರ್ಮಿಸಿದ್ದಾರೆ. ಸಿನೆ ನದಿಯ ದಡದ ಮೇಲೆ ರಂಜಕವಾದ ನಿವೇಶನದಲ್ಲಿ ಆಕಾಶವನ್ನು ಇರಿದು ನಿಂತಿದೆ - ಈ ಗೋಪುರ. ಈ ಗೋಪುರದ ತುಟ್ಟ ತುದಿಗೆ ವಿದ್ಯುತ್ ತೊಟ್ಟಿಲಲ್ಲಿ ಏರಿ ಪ್ಯಾರಿಸ್‌ನ ಪಕ್ಷಿನೋಟವನ್ನು ಕಾಣಬಹುದು. ವಿಶಾಲವಾದ ಮೈತೆರೆದು ಮಲಗಿರುವ ಪ್ಯಾರಿಸ್ ಮೇಲಿನಿಂದ ಮೋಹಕವಾಗಿದ್ದ, ಪ್ಯಾರಿಸ್‌ನ ಸಾಮ್ರಾಜ್ಯವಾದಿ ಯುಗದ ಅನೇಕ ಅಮೋಘ ಮಂದಿರಗಳು ಎದ್ದು ಕಾಣುತ್ತವೆ. ಅಂತರರಾಷ್ಟ್ರೀಯ ತಿಳಿವಳಿಕೆಯ ಗುರುತಾಗಿ ತೋರುವ ಅದ್ಭುತ ಶಿಲ್ಪದ ಯುನೆಸ್ಕೋ ಮಂದಿರ ಎಲ್ಲರ ಮನ ಸೆಳೆಯುತ್ತದೆ. ಕಣ್ಣು ಕಾಣುವವರೆಗೆ, ದಿಕ್ಕಿನ ಅಂಚಿನವರೆಗೆ ಹರಡಿರುವ ಈ ರೋಮಾಂಚಕ ನಗರ ಮಾನಸ ಪುರುಷನ ದಿವ್ಯಾರಾಮ

ಐಫೆಲ್ ಗೋಪುರದ ತುದಿಯಲ್ಲಿ ಹಸಿದವರಿಗೆ ಉಪಾಹಾರ ಮತ್ತು ಪಾನಗೃಹವಿದೆ. ಸುತ್ತಣ ನೋಟವನ್ನು ಸವಿಯುತ್ತಾ ಗಂಟೆಗಳ ಕಾಲ ಹರಟೆ ಹೊಡೆಯುತ್ತಾ, ಮೆಲುಕು ಹಾಕುತ್ತಾ ಪಾನೀಯ ಗುಟುಕರಿಸಲು ಜನ ಇಲ್ಲಿ ಬರುತ್ತಾರೆ. ಪ್ರಿಯತಮನಿತ್ತ ಮೊದಲ ಮುದ್ದು, ಅಕ್ಕರೆಯ ನುಡಿ, ಸುಗ್ರಾಸ ಭೋಜನ ಇವುಗಳ ಭಾರದಿಂದ ಐಫೆಲ್ ಟವರ್ ಬಾಗಿಲ್ಲ. ಆದರೆ ಪುನರುಜ್ಜೀವನಗೊಂಡಿದೆ. ಇಲ್ಲಿಯ ಜನರಿಗೆ ರಹಸ್ಯವೇ ಇಲ್ಲ. ಇತರರ ಪರಿವೆ ಇಲ್ಲ. ಅನೇಕ ಕಣ್ಣುಗಳ ಬಗ್ಗೆ ಲಕ್ಷ್ಯವಿಲ್ಲ. ಭಾರತೀಯರು ಅಸಹಜವೆಂದು ಭಾವಿಸುವ ಅನೇಕ ಕ್ರಿಯೆಗಳನ್ನು ಸಹಜವಾಗಿ ಸಾರ್ವಜನಿಕವಾಗಿ ಇವರು ನಡೆಸುತ್ತಾರೆ.

ಆರ್ಕ್-ಡಿ-ಟ್ರಿಯುಂಫ್ ಅಥವಾ ವಿಜಯಗೋಪುರ ಪ್ಯಾರಿಸ್‌ನ ಹೃದಯವಿದ್ದಂತೆ. ಈ ಗೋಪುರದಿಂದ ಎಪ್ಪತ್ತೆರಡು ರಸ್ತೆಗಳು ಪ್ರಾರಂಭವಾಗುತ್ತವೆ. ಅಥವಾ ೭೨ ರಸ್ತೆಗಳು ಈ ಗೋಪುರಕ್ಕೆ ಬಂದು ಸೇರುತ್ತವೆ. ಪ್ರಪಂಚ

ಪ್ರಸಿದ್ಧವಾದ ಷ್ಯಾಂಪ್ಸ್ ಎಲಿಸಿಯಾ ರಸ್ತೆ ಇಲ್ಲಿಂದ ಪ್ರಾರಂಭವಾಗುತ್ತದೆ. ಈ ರಸ್ತೆಯು ವಿಶ್ವವಿಖ್ಯಾತ ನೈಟ್‌ಕ್ಲಬ್‌ಗಳೂ, ಅಂಗಡಿಗಳೂ, ಕಂಪನಿಗಳೂ, ಕಛೇರಿಗಳೂ ಇವೆ. ಅರಮನೆಗಳು ಈ ರಸ್ತೆಗೆ ಅಂಟಿವೆ. ವಸ್ತು ಸಂಗ್ರಹಾಲಯಗಳು, ಚಿತ್ರಶಾಲೆಗಳು ಈ ರಸ್ತೆಯನ್ನು ಬಳಸಿವೆ. ನಮ್ಮ ಗೇಟ್ ವೇ ಆಫ್ ಇಂಡಿಯದಂತಿರುವ ಗೋಪುರ ಕುಸುರಿನ ಕೆತ್ತನೆಯ ಕೆಲಸದಿಂದ ಅನುಪಮವಾಗಿದೆ. ಫ್ರಾನ್ಸಿನ ಅಧ್ಯಕ್ಷೀಯಚುನಾವಣೆಯಲ್ಲಿ ಭಾಗ ವಹಿಸಿದ್ದು ಅನಂತರ ವಿಜಯಿಯಾದ ಪಾಂಪಿಡೋ ರಾಷ್ಟ್ರಕ್ಕೆ ರೇಡಿಯೋ ಮತ್ತು ಟಿ.ವಿ. ಮೂಲಕ ಇಲ್ಲಿಂದ ಕರೆ ನೀಡುತ್ತಿರುವುದನ್ನು ಅನಿರೀಕ್ಷಿತ ವಾಗಿ ಅಲ್ಲಿ ಹಾಯುತ್ತಿದ್ದಾಗ ಕಂಡೆವು. ಇಲ್ಲಿಯ ಭೂಗರ್ಭ ರೈಲು ಸುಲಭವೂ ಸರಳವೂ ಆಗಿದೆ.

ಯುನೆಸ್ಕೋ ಕಛೇರಿ ಆಧುನಿಕ ಕಟ್ಟಡಶಿಲ್ಪ ಮತ್ತು ಅಲಂಕರಣ ದೃಷ್ಟಿಯಿಂದ ಅದ್ಭುತವಾಗಿದೆ. ಪ್ರಪಂಚದ ಏಕತೆಯನ್ನು ತೋರಿಸಲು ಅನೇಕ ದೇಶಗಳ ಅನೇಕ ಹಿರಿಯ ಕಲಾವಿದರು ವಿವಿಧ ರಂಗಗಳನ್ನು ಸಿಂಗರಿಸಿದ್ದಾರೆ. ಫ್ರೆಂಚ್ ಸ್ಥಪತಿಯೊರ್ವನ ಅಪೋಘ ಕಲ್ಪನೆಯ ಫಲವಾಗಿ ರೂಪುಗೊಂಡ ಈ ಕಟ್ಟಡದ ಅಂಗಗಳು ಅತಿ ಉಪಯೋಗಕರವಾದ ಕಲಾಮಯವಾದ ಆಧುನಿಕ ಆವಾರಗಳೆನಿಸಿವೆ. ಇಲ್ಲಿಯ ಜಪಾನೀ ತೋಟ ಅಸೆಂಬ್ಲಿ ಹಾಲ್ ಇತ್ಯಾದಿ ನೋಡತಕ್ಕ ಸ್ಥಳಗಳಾಗಿವೆ. ಪ್ರಪಂಚಸಂಸ್ಥೆಯ ಸ್ಥಾಪಕ ಅಂಗಗಳಲ್ಲಿ ಒಂದಾದ ಈ ಸಂಸ್ಥೆ ಕಾರ್ಯಸಫಲತೆಯಿಂದಲೂ ವ್ಯಾಪಕತ್ವದಿಂದಲೂಈ ಶತ ಮಾನದ ಅಮೂಲ್ಯ ಕೊಡುಗೆಯೆನಿಸಿದೆ,

ನಾತ್-ದಾಮ್ : ಕರ್ನಾಟಕ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ ಪ್ರೊ. ವಿ. ಎಂ. ಇನಾಂದಾರರು ನಮಗೆ ಇಂಗ್ಲಿಷ್ ಪಾಠ ಮಾಡುತ್ತಿದ್ದರು. ಥಾಮಸ್ ಹಾರ್ಡಿಯ 'ಟೆಸ್', 'ನಾತರ್‌ದಾಮಿನ ಗೂನ', (ಹಂಚ್‌ಬ್ಯಾಕ್ ಆಫ್ ನಾಟರ್ ಡಾಮ್) ಈ ಕಾದಂಬರಿಗಳನ್ನು ಅವರು ಪಾಠ ಮಾಡುವಾಗ ಧಾರವಾಡದ ಇಡೀ ವಿದ್ಯಾರ್ಥಿವೃಂದ ಅದನ್ನು ಕೇಳಲು ಬರುತ್ತಿತ್ತು. ಅಂದಿನಿಂದ ಪ್ಯಾರಿಸ್ಸಿನ ಈ ನಾತರ್‌ದಾಮ್ ಕೆಥೆಡ್ರಲ್ ನನಗೆ ನೋಡಲೇಬೇಕಾದ ಒಂದು ಸ್ಥಳವೆನಿಸಿತ್ತು. ಪ್ಯಾರಿಸ್ಸಿನ ನಮ್ಮ ಮೂರು

ದಿನದ ವಾಸ್ತವ್ಯದಲ್ಲಿ ಒಂದು ಮಧ್ಯಾಹ್ನ ಭೂಗರ್ಭರೈಲಿನ ಮೂಲಕ ನಾತರ್‌ದಾಮಿನ ಈ ಸುಪ್ರಸಿದ್ಧ ಕ್ರೈಸ್ತ ದೇವಾಲಯವನ್ನು ನೋಡಲು ಹೋದೆವು.

ಮನಮೋಹಕ ಸಿನೆ ನದಿಯ ದಂಡೆಯ ಮೇಲೆ ಕಟ್ಟಿಗೆಯಿಂದ ಕಟ್ಟಲ್ಪಟ್ಟ ಈ ಇಗರ್ಜಿಯು ಫ್ರಾನ್ಸ್ ದೇಶದ ಒಂದು ಮಹತ್ವದ ಮತ್ತು ಪವಿತ್ರ ಐತಿಹಾಸಿಕ ಸ್ಥಳ. ಸುಮಾರು ಹನ್ನೊಂದನೆಯ ಶತಮಾನದಲ್ಲಿ ನಿರ್ಮಿತವಾದ ಈ ಇಗರ್ಜಿಯ ಭವ್ಯತೆ, ಕುಸುರಿ ಕೆಲಸ, ಗಾಜಿನ ಕೆಲಸ ಬಣ್ಣದ ಕೆಲಸ ಅಸದೃಶವಾದುದು. ಇಡೀ ಯುರೋಪಿನಲ್ಲಿ ಇದಕ್ಕೆ ಸಮವಾದ ಸುಂದರ ದೇವಾಲಯವೇ ಇಲ್ಲವೆಂದು ಹೇಳಲಾಗಿದೆ. ಇಗರ್ಜಿಯಲ್ಲಿ ಕ್ರಿಸ್ತನನ್ನು ಶಿಕ್ಷೆಗೊಳಪಡಿಸಿದ ಮೂಲಶಿಲುಬೆಯತುಂಡೊಂದು ಇದೆ. ಸಂತ ಲೂಯಿಯು ಕಾಣಿಕೆಯಾಗಿ ಕೊಟ್ಟ ಮನೋವೇಧಕವಾದ ಮುಳ್ಳಿನ ಕಿರೀಟ ಇದೆ. ಫ್ರಾನ್ಸ್ ದೇಶದ ರಾಜನಾಗಿದ್ದ ೧೩ನೇ ಲೂಯಿಯ ತಾಯಿ ಮೇರಿಯೇ ದೇಶದ ಅಭಿಮಾನೀ ದೇವತೆಯೆಂದು ಪರಿಗಣಿಸಿ ಅರ್ಪಿಸಿದ ರಾಜ ದಂಡ ಮತ್ತು ರಾಜಮುಕುಟ ಇಲ್ಲಿಯೇ ಇವೆ. ಫ್ರಾನ್ಸ್ ದೇಶದ ಮಹಾ ದೇಶಭಕ್ತೆ ಜೋನ್ ಆಫ್ ಆರ್ಕ್‌ಳ ವಿಚಾರಣೆ ಇಲ್ಲಿಯೇ ನಡೆಯಿತಂತೆ. ಈ ಇಗರ್ಜಿಯಲ್ಲಿ ಯೂರೋಪಿನ ಅನೇಕ ಅರಸುಮನೆತನಗಳ ಮದುವೆಗಳು ನಡೆದಿವೆ. ಫ್ರಾನ್ಸ್‌ನ ಅನೇಕ ಸಂತಸಮಯ ಮತ್ತು ದುಃಖಮಯ ಪ್ರಸಂಗಗಳಿಗೆ ಈ ಚರ್ಚ್ ಮೂಕಸಾಕ್ಷಿಯಾಗಿ ದೇವದೂತನಾಗಿ ನಿಂತಿದೆ.

ಇಂತಹ ಸ್ಥಳದ ಒಳಭವನದಲ್ಲಿ ಕಾಲಿಟ್ಟಾಗ ನಮಗೆ ಒಂದು ರೀತಿಯ ಕುಬ್ಜ ಭಾವನೆ ಉಂಟಾಗುತ್ತದೆ. ಭವಂತಿಯ ಅಡಿಯಿಂದ ಮುಡಿಯವರೆಗೆ ರಾಜರು, ಮಂತ್ರಿಗಳು, ಸೇನಾನಿಗಳು, ಕವಿಗಳು, ಕಲಾಕೋವಿದರು, ಕ್ರಾಂತಿಕಾರರು, ದೇಶಭಕ್ತರು, ಪ್ರತ್ಯಕ್ಷವಾಗಿ ನಕ್ಕಂತೆ, ಅತ್ತಂತೆ, ಬಯ್ದಂತೆ, ವಿಚಾರಿಸಿದಂತೆ ಅನಿಸಿ ದಿಗ್ಭ್ರಾಂತರಾಗುತ್ತೇವೆ.

ಈ ಸ್ಥಳದಲ್ಲಿಯೇ ಮಹತ್ವಾಕಾಂಕ್ಷಿಯಾದ ನೆಪೋಲಿಯನ್‌ನ ವಿಜಯ ದುಂದುಭಿ ಮೊಳಗಿತ್ತು. ಹಿಟ್ಲರ್‌ನಿಂದ ವಿಮೋಚಿತವಾದ ಫ್ರಾನ್ಸ್–ಪ್ಯಾರಿಸ್

ಇಲ್ಲಿಯೇ ದೇವರಿಗೆ ಶ್ರದ್ಧಾಂಜಲಿ ಅರ್ಪಿಸಿತ್ತು. ಎಲ್ಲಾ ರಾಷ್ಟ್ರೀಯ ವೀರರ ಚರಮಗೀತೆಯನ್ನು ಇದೇ ಮಂದಿರವಲ್ಲಿ ಹಾಡಲಾಗಿದೆ. ಫ್ರೆಂಚ್ ಜನರಿಗೆ ಇದೊಂದು ಪುಣ್ಯಸ್ಥಳ. ಇದೊಂದು ರಾಷ್ಟ್ರೀಯ ಭಾವನೆಯನ್ನು ಉದ್ದೀಪಿಸುವ, ವೈಭವಗಳನ್ನು ನೆನಪಿಗೆ ತರುವ, ತಪ್ಪುಗಳನ್ನು ನೆನಪು ಮಾಡಿಕೊಡುವ, ಆತ್ಮೀಯರನ್ನು ಹುತಾತ್ಮರನ್ನು ಕೃತಜ್ಞತೆಯಿಂದ ನೆನೆಯುವ, ಆತ್ಮಶೋಧನೆ ಮಾಡುವ ಅಮೃತ ವಾತಾವರಣದ ಸ್ಥಾನ. ಪ್ಯಾರಿಸ್‌ನ ಲೂವ್ರ್ (LOUVRE) ಮ್ಯೂಜಿಯಂ ವಿಶ್ವದಷ್ಟು ವಿಶಾಲವಾಗಿದೆ. ಕಲಾಭಿಲಾಷೆಯಿಂದ ಕಳೆದ ಶತಮಾನದಲ್ಲಿ ಇಂಗ್ಲಿಷರು ಮತ್ತು ಫ್ರೆಂಚರು ತಮ್ಮ ಸಾಮ್ರಾಜ್ಯದ ಭಾಗಗಳಲ್ಲಿ ವಸ್ತುವಿಶೇಷಗಳನ್ನು ದೋಚಿಕೊಂಡು ಬಂದರು. ಸಾಮ್ರಾಜ್ಯವಾದ ಮಾಡಿದ ಮಹಾ ಉಪಕಾರಗಳಲ್ಲಿ ಇದೊಂದು. ಒಂದು ರೀತಿಯಲ್ಲಿ ಇದು ನಡೆದದ್ದು ಒಳಿತೆನಿಸುತ್ತದೆ. ಈ ವಸ್ತುಗಳು ಇವರ ಕೈಗೆ ದೊರಕಿದ ಕಾರಣ ಇಂದಿಗಾದರೂ ಸುರಕ್ಷಿತವಾಗಿವೆ. ಅರಕ್ಷಿತವಾದ ಏಶಿಯನ್ ಮತ್ತು ಆಫ್ರಿಕನರ ಕೈಯಲ್ಲಿ ಈಗಾಗಲೇ ನಶಿಸಿರುವ ಅನೇಕ ಕಲಾಕೃತಿಗಳಂತೆ ಇವೂ ಕಾಣವಾಗುತ್ತಿದ್ದವೋ ಏನೋ. ಲೂವ್ರ್ ಮ್ಯೂಜಿಯಂನಲ್ಲಿ ಉತ್ತರ ಧ್ರುವದಿಂದ ದಕ್ಷಿಣ ಧ್ರುವದವರೆಗೆ ಯಾವ ದೇಶದ ಸಂಸ್ಕೃತಿ, ಇತಿಹಾಸ, ಪುರಾಣ, ಶಿಲ್ಪ, ಕಲೆಯ ಬಗ್ಗೆ ಪ್ರವೇಶ ಪಡೆಯಬಹುದು. ಅನೇಕ ಕಡೆ ಫ್ರೆಂಚ್ ಪುರಾತನ ನಿಪುಣರು ಅತಿಕಷ್ಟದಿಂದ ಉತ್ಖನನ ಮಾಡಿ ವಸ್ತುಗಳನ್ನು ಸಂಗ್ರಹಿಸಿ ಟಿಪ್ಪಣಿ ಬರೆದು ಸಂಶೋಧನೆ ಮಾಡಿ ಅವುಗಳನ್ನು ಈ ವಸ್ತುಸಂಗ್ರಹಾಲಯದಲ್ಲಿ ಪುನಃ ನಿರ್ಮಿಸಿದ್ದಾರೆ. ಆಧುನಿಕ ಮಯಸಭೆಯಂತೆ ಕಾಣುವ ಈ ವಸ್ತುಸಂಗ್ರಹಾಲಯ ವಿದ್ಯಾಕಾಂಕ್ಷಿಗೆ ಸತ್ಯಲೋಕ. ಅಸ್ಸಿರಿಯನ್, ಫೋನಿಷಿಯನ್, ಈಜಿಪ್ಷಿಯನ್, ರೋಮನ್, ಗ್ರೀಕ್, ಫ್ರೆಂಚ್ ಮತ್ತು ಇಂಡಿಯನ್ ವಸ್ತುವಿಶೇಷಗಳು ತಡೆದು ನಿಲ್ಲಿಸುತ್ತವೆ. ಕಲಾ ವಿಭಾಗದಲ್ಲಿ ಲಿಯೊನಾರ್ಡೋ ಡ ವಿಂಚಿಯ ಪ್ರಸಿದ್ಧ ಕಲಾಕೃತಿ 'ಮೊನಾಲೀಸಾ' ಇದೆ. ಫ್ರಾನ್ಸಿನ ಅಮರ ಕಲಾವಿದರಾದ ರುಬೆನ್ಸ್, ಟಿಷಿಯನ್, ಮಾನೆ, ವ್ಯಾನಗಾಗ್, ಪಿಕಾಸೋ, ರೋಡಿನ್ ಅವರ ಅಸಂಖ್ಯಾತ ಕಲಾಕೃತಿಗಳು ಇಲ್ಲಿವೆ. ಎರಡನೆಯ ಪ್ರಪಂಚಯುದ್ಧ ಕಾಲದಲ್ಲಿ ಜರ್ಮನರು ಅದೇಕೆ

ಈ ಕಲಾಕೃತಿಗಳನ್ನು ಕಳವು ಮಾಡಲು ಪ್ರಯತ್ನಿಸಿದರೆಂಬುದು ಇವನ್ನು ನೋಡಿದಾಗಲೇ ತಿಳಿಯುತ್ತದೆ. ಇಲ್ಲಿ ವ್ಯವಸ್ಥೆ, ಪುನ ವ್ಯವಸ್ಥೆ ನಡೆದೇ ನಡೆದಿದೆ. ಮನಸೆಳೆಯುವಂತೆ ವಸ್ತುಗಳನ್ನು ವ್ಯವಸ್ಥೆ ಮಾಡುವಲ್ಲಿ ಫ್ರೆಂಚ ರನ್ನು ಯಾರೂ ಮೀರಿಸಲಾರರು. ಮಾನವತೆಯ ಒಳಿತಾದ ಸಾಧನೆಯ ಮತ್ತು ಕಲ್ಪಕ ಜಗತ್ತಿನ ಮತ್ತು ಭಗವಂತನ ಮಹತ್ತಿನ ಸಾಕ್ಷಿರೂಪಿ ವಿಶ್ವವಿದ್ಯಾಲಯ ಈ ಮ್ಯೂಜಿಯಂ. ಈ ಸ್ಥಳದಲ್ಲಿ ಕಾಲಕ್ಕೆ ಕಟ್ಟಿಲ್ಲ. ಇಲ್ಲಿ ಬಂದವನಿಗೆ ವಯಸ್ಸಿನ ಮಿತಿಯಿಲ್ಲ. ಸಮಯ ಸ್ತಂಭನವಾಗುತ್ತದೆ. ಮಾಯ ಸಭೆ ಪ್ರಿಯದರ್ಶಿನಿಯಾಗಿ ಚೇತನಗೊಳ್ಳುತ್ತದೆ. ಫ್ರೆಂಚ್ ಇತಿಹಾಸದ ರಂಗ ಸ್ಥಳವೆಂದರೆ ವರ್ಸ್ಯೈ ಅರಮನೆ. ಅರಸರ ನಿವಾಸಸ್ಥಾನವೆನಿಸಿ ಸಾಮ್ರಾಜ್ಯದ ಲಗಾಮಿನ ಕೇಂದ್ರವೆನಿಸಿ ಶತಮಾನಗಳ ಕಾಲ ವರ್ಸ್ಯೈ ಬೆಳಗಿತು. ಫ್ರೆಂಚ್ ಕ್ರಾಂತಿಯ ಕಾಲದಲ್ಲಿ ರಾಣಿ ಮೇರಿ ಅಂಟೋನಿಟ್ ಮತ್ತು ಅರಸು ಲೂಯಿ ಅವರ ಕೊಲೆಯಾಗಿ ಈ ಅರಮನೆಯು ಬರಿಮನೆಯಾಯಿತು. ಕ್ರಾಂತಿಯ ಕತ್ತಲೆ ಬೆಳಕಿನಲ್ಲಿ ಜನ ಸಿಕ್ಕಿದ್ದನ್ನು ದೋಚಿದರು. ಕಂಡವರನ್ನು ಕೊಂದರು. ರಾಜ್ಯ ಕುರುಕ್ಷೇತ್ರವಾಗಿ ರಕ್ತಕಾಳಿಗೆ ತೇಗುವಷ್ಟು ಬಲಿಯಾದ ಮೇಲೆ ಕ್ರಾಂತಿ ವಿಫಲತೆ ಎನಿಸಿ ನೆಪೋಲಿಯನ್ ಚಕ್ರವರ್ತಿ ಆವಿರ್ಭವಿಸಿದನು ನೆಪೋಲಿಯನ್ ವರ್ಸ್ಯೈಯನ್ನು ಸ್ಮಾರಕಗೃಹವೆಂದು ಘೋಷಿಸಿ ಫಾನ್‌ಟೆನ್‌ಬ್ಲೋ ದಲ್ಲಿ ಹೊಸದಾದ ಅರಮನೆಯನ್ನು ನಿರ್ಮಿಸಿಕೊಂಡನು. ವರ್ಸ್ಯೈ ವೈಭವೋ ಪೇತವಾದ ಅಸಮಾನವಾದ ಅರಮನೆ. ರಸಿಕ ಫ್ರೆಂಚ್ ರಾಜರ ಊಹಾತೀತ ರಸಿಕ ಜೀವನದ ಕುರುಹನ್ನು ಇಲ್ಲಿ ಕಾಣಬಹುದು. ಶೃಂಗಾರಮಯವಾದ ಈ ಒಡಾರದ ಕೋಣೆಗಳು, ಹೆಣದಲ್ಲಿಯೂ ಜೀವ ತುಂಬುತ್ತವೆ. ಕನ್ನಡಿಗಳ ಪಡಸಾಲೆ, ಲೂಯಿ ಅರಸರ ಅಂತರ್‌ಗೃಹ, ಮೇರಿ ಅಂಟೋನಿಟ್‌ಳ ಶಯನ ಮಂದಿರ ಎಣೆಯಿಲ್ಲದ ವಿಲಾಸದಿಂದ ಕೂಡಿ ಅದ್ವಿತೀಯವೆನಿಸಿವೆ.

ಫಾಂಟನ್‌ಬ್ಲೋದ ನೆಪೋಲಿಯನ್‌ನ ಅರಮನೆ ಅದು ನಿರ್ಮಿಸಿದ ಕಲಾಶೈಲಿಗಾಗಿ ಪ್ರಸಿದ್ಧವಾಗಿದೆ. ಗೋಡೆಯ, ಛಾವಣಿಯ, ಪ್ರತಿ ಅಂಗು ಲವೂ ಅಲಂಕರಿಸಲ್ಪಟ್ಟಿದೆ. ನೆಪೋಲಿಯನ್ ಸಾಮ್ರಾಟನಾಗಬಯಸಿ ತನ್ನ ಬಂಧುಬಳಗಕ್ಕೆ ಅಧಿಕಾರ ನಿರ್ಮಿಸಿ ತನ್ನ ವಂಶಕ್ಕೆ ಸಿಂಹಾಸನವನ್ನು ಚಿರಸ್ಥಾಯಿ

ಗೊಳಿಸಲು ಹೆಣಗಿದ ಅನೇಕ ಘಟನೆಗಳ ಚಿತ್ರಾವಳಿ ಇಲ್ಲಿದೆ. ಸಾಮ್ರಾಜ್ಯ ಶಾಹಿಯ ವಿರುದ್ಧ ರಕ್ತಮಯ ಕ್ರಾಂತಿಯ ಫಜೀತಿಯನ್ನು ಅವಧರಿಸಿದ ಫ್ರಾನ್ಸ್ ಮತ್ತೊಮ್ಮೆ ಸಾಮ್ರಾಜ್ಯಶಾಹಿಯ ಪಾದಧೂಳಿಯನ್ನೂ ತಲೆಯ ಮೇಲೆ ಧರಿಸುವ ಸಂದರ್ಭ ಒದಗಿದುದು ವಿಚಿತ್ರವೇ ಸರಿ. ಆದರೆ ಅತಿ ಆಶೆಯ ದೊರೆ ತನ್ನ ವಾಟರ್‌ಲೂ ಕಾಣುವ ದಿನ ಮತ್ತು ಫ್ರಾನ್ಸಿನಲ್ಲಿ ಪ್ರಜಾಪ್ರಭುತ್ವದ ಬೆಳಗಿನ ದಿನ ಬಹುದೂರ ಉಳಿಯಲಿಲ್ಲ. ವೀರ ಮಹತ್ವಾಕಾಂಕ್ಷಿ ದೊರೆ ನೆಪೋಲಿಯನ್‌ನ ಅನೇಕ ಅವಶೇಷಗಳನ್ನೂ ಇಲ್ಲಿ ಸಂಗ್ರಹಿಸಿದ್ದಾರೆ. ಫಾಂಟೆನ್‌ಬ್ಲೋ ಮೊದಲು ಬೇಟೆಮನೆಯೆಂದು ಉದಿಸಿ ಅನಂತರ ಸಾಮ್ರಾಜ್ಯದ ಹೃದಯವೆನಿಸಿ ಮುಡಿಯೆನಿಸಿ ಈಗ ಫ್ರೆಂಚ್ ಕಲೆಯ ಕಂಠಾಭರಣವೆನಿಸಿದೆ.

ನಮ್ಮ ಪ್ಯಾರಿಸ್ ವಾಸ್ತವ್ಯದಲ್ಲಿ ನಾವು ಮರೆಯಲಾಗದ ಸಂಗತಿಯೆಂದರೆ ಪ್ಯಾರಿಸ್ ಬೀದಿಯೊಂದರಲ್ಲಿ ಹಿಂದಿ ಚಿತ್ರನಟಿ ಶ್ರೀಮತಿ ಆಶಾಪರೇಖಳನ್ನು ಭೇಟಿಯಾದದ್ದು. ಒಂದು ಮಧ್ಯಾಹ್ನದ ಲಂಚ್ ಮುಗಿದೊಡನೆ ನಾವು ಹಾಗೆಯೇ ತಿರುಗಿಕೊಂಡು ಬರೋಣವೆಂದು ಷಾಂಪ್ಸ್ ಎಲಿಸಿಯಾ ಮೂಲಕ ಹೊರಟೆವು. ಇಕ್ಕೆಲದ ಮರಗಳ ತಣ್ಣನೆಯ ವಾತಾವರಣದಲ್ಲಿ ಹರಟೆಹೊಡೆಯುತ್ತಾ, ಪಕ್ಕದ ಅಂಗಡಿಗಳ ಷೋಕೇಸ್ ವ್ಯವಸ್ಥೆಯ ಟೀಕೆ ನಡೆಸುತ್ತಾ ನಡೆದಿತ್ತು ನಮ್ಮ ವಿಹಾರ. ಇದ್ದಕ್ಕಿದ್ದಂತೆ ನಮಗೆ ಏನಾದರೂ ಬಾಯಾಡಿಸುವ ತಿಂಡಿ – ಉದಾ : ಖಾರಾಬೂಂದಿ, ಚಕ್ಕುಲಿ, ಕೋಡಬಳೆ, ಖಾರದ ನೆಲಗಡಲೆ, ಬಟಾಣಿ ಇತ್ಯಾದಿ – ಬೇಕೆನಿಸಿ ಅಂತಹುದೇನಾದರೂ ಅಂಗಡಿಗಳಲ್ಲಿ ಸಿಗುತ್ತೇನೋ ಎಂದು ಒಂದು ಸ್ಟೋರ್‌ಗೆ ನುಗ್ಗಿದೆವು. ಅಲ್ಲಿ ನಮಗೆ ಸಿಕ್ಕಿದ್ದು Salted peanuts – ಉಪ್ಪಿನ ನೆಲಗಡಲೆಬೀಜ. ನಮ್ಮಲ್ಲಿ ಸುಮಾರು ೨೦ ಪೈಸೆಗೆ ದೊರಕಬಹುದಾದಷ್ಟು ಕಡಲೆಗೆ ಸುಮಾರು ಎರಡು ರೂಪಾಯಿ ಕೊಟ್ಟು ತಂದೆವು. ಆ ಕಡಲೆಯ ರುಚಿಯೋ ರುಚಿ. ಅಲ್ಲವೇ ? ಹಾಗೆಯೇ ಮುಂದೆ ಹೋಗುತ್ತಿರುವಾಗ ಸೋದರ ಮಂಜು ಪಕ್ಕನೆ ನಿಂತು, "ಅಣ್ಣ ಅಲ್ನೋಡು ಆಶಾಪರೇಖ ಇದ್ದಂಗಿದೆ" ಎಂದ. ನಾವು ಹೌದೆಂಮದೇ ತಡ, ಅವನೊಂದು ಫೋಟೋ ತೆಗೆದೇ ಬಿಟ್ಟ. ತೀರ ಹತ್ತಿರ ಬಂದಾಗ

ವಿಷ್ ಮಾಡಿದೆವು, ಅವರು ಪ್ರತಿಯಾಗಿ ವಿಷ್ ಮಾಡಿದರು. ಅವರ ಜೊತೆಗೆ ತಾಯಿ, ತಂದೆ, ನೌಕರರು ಇದ್ದರು. ಆಶ್ಚರ್ಯದ ಸುಂಟರ ಗಾಳಿಯಲ್ಲಿ ಸಿಕ್ಕ ನಮಗೆ ಅವರನ್ನು ನಿಲ್ಲಿಸಿ ಮಾತನಾಡಬೇಕೆಂಬ ಯೋಚನೆ ಫಕ್ಕನೆ ಹೊಳೆಯಲಿಲ್ಲ. ಯಾವುದಾದರೂ ಹಿಂದಿ ಚಿತ್ರದ ಷೂಟಿಂಗ್‌ಗೆ ಬಂದಿರಬೇಕೆಂದುಕೊಂಡು ಮುಂದೆ ನಡೆದೆವು. ಫಾಂಟೆನ್ ಬ್ಲೂಗೆ ಹತ್ತಿರದ ಬಾರ್ಬಿಜಾನ್ ಎಂಬ ಹಳ್ಳಿಯಲ್ಲಿ ವಿಖ್ಯಾತ ಲೇಖಕ ರೂಸೋ, ಸ್ಟೀವನ್‌ಸನ್ ಅವರು ವಾಸವಾಗಿದ್ದ ನಿವಾಸಗಳಿವೆ. ಈ ಹಳ್ಳಿ ಸುಂದರ ನಿಸರ್ಗಮಯ ವಾತಾವರಣದಲ್ಲಿರುವುದರಿಂದ ಇಂದಿಗೂ ಅನೇಕ ಪ್ಯಾರಿಸ್ಸಿಯನ್ನರು ತಮ್ಮ ಕಳೆದುಳಿದ ದಿನಗಳನ್ನು, ಬಿಸಿಲುಕಾಲದ ದಿನಗಳನ್ನು, ಇಲ್ಲಿ ಕಳೆಯಲು ಹವಣಿಸಿ ಕಾಟೇಜ್‌ಗಳನ್ನು ಕಟ್ಟಿದ್ದಾರೆ. ರೂಸೋ ಮತ್ತು ಸ್ಟೀವನ್‌ಸನ್ ಕೂಡ ಇದೇ ರೀತಿಯಲ್ಲಿ ದಿನ ಕಳೆದ ನಿವಾಸಗಳಿವು. ಪ್ರಸಿದ್ಧ ಜನರ ನಿವಾಸಸ್ಥಾನಗಳನ್ನು ಈ ರೀತಿಯಲ್ಲಿ ಕಾಪಾಡಿಕೊಂಡು ಬರುವುದು ಸತ್ ಸಂಪ್ರದಾಯ. ಅವರ ಸೇವೆಗಾಗಿ ರಾಷ್ಟ್ರದ ಕೃತಜ್ಞತೆಯೆಂದೂ ಭಾವಿಸ ಬಹುದು. ನಾಡಿಗಾಗಿ ಜೀವ ತೇದ ಮಹನೀಯರ ನೆನಪು ಮುಂದಿನ ಜನಾಂಗಕ್ಕೆ ಉಳಿಯಬೇಕಾದರೆ ಇಂತಹ ಸ್ಮಾರಕಗಳು ಅತ್ಯಗತ್ಯ. ಇದರಂತೆಯೆ ಪ್ಯಾರಿಸ್ಸಿನ 'ಪ್ಯಾಂಥಿಯಾನ್' ಬಹು ಮುಖ್ಯವಾದುದು. ಈ ರಾಕ್ಷಸಾಕಾರದ ಕಟ್ಟಡದಲ್ಲಿ ಫ್ರೆಂಚ್ ಇತಿಹಾಸವನ್ನು ಗಟ್ಟಿಗೊಳಿಸಲಾಗಿದೆ. ಗೋಡೆಗಳ ನ್ನಾವರಿಸಿ ನಿಂತಿರುವ ವರ್ಣಚಿತ್ರಗಳಲ್ಲಿ ಫ್ರೆಂಚ್ ಇತಿಹಾಸದ ಬಹುಮುಖ್ಯ ಘಟ್ಟಗಳನ್ನು ಕಾಣಬಹುದು. ಅನೇಕ ಸೂಕ್ತ ಶಿಲಾಖಂಡಗಳಲ್ಲಿ ರೂಸೋ ಜೋಲಾ, ವಾಲ್ಟೇರ್ ಮುಂತಾದವರ ಸ್ಮಾರಕಗಳಿವೆ. ನೆಲಮನೆಯಲ್ಲಿ ಫ್ರೆಂಚ್ ರಾಷ್ಟ್ರವೀರರ, ಕಲಾವಿದರ, ಸೇನಾಪತಿಗಳ, ಲೇಖಕರ ಸಮಾಧಿಗಳಿವೆ. ಅನೇಕ ಕಡೆ ಸಮಾಧಿಗಳ ಮುಂದೆ ಆಯಾ ವ್ಯಕ್ತಿಯ ಮೂರ್ತಿಗಳಿವೆ. ಇಲ್ಲಿ ನಡೆವಾಗ ಶತಮಾನಗಳ ಕಾಲ ಹಿಂದೆ ಸಂಚರಿಸಿದಂತೆಯೂ ರೂಸೋ ಮುಂತಾದ ವರೊಂದಿಗೆ ಸಂಭಾಷಿಸಿದಂತೆಯೂ ಅನುಭವವಾಗುತ್ತದೆ. ಇಲ್ಲಿ ಶಿಲೆ ಮಾತನಾಡು ತ್ತದೆ. ವಾತಾವರಣ ಹಿಡಿದು ನಿಲ್ಲಿಸುತ್ತದೆ. ಫ್ರೆಂಚರ ಬಗ್ಗೆ ಅಭಿಮಾನ, ಅನು ಕಂಪ ಸೆಲೆಯೊಡೆಯುತ್ತದೆ.

ಫ್ರೆಂಚರು ಗ್ರೀಕ್ ಮತ್ತು ರೋಮನ್ನರಷ್ಟು ಸುಂದರರೇನೂ ಅಲ್ಲ ಆದರೆ ರಸಿಕರು–ವಿಲಾಸಿಗಳು. ಶೃಂಗಾರ ವೈಭವದಲ್ಲಿ, ಕಲಾ ವಿಲಾಸದಲ್ಲಿ ರಂಗಿನ ಜೀವನದಲ್ಲಿ, ಪರಿಮಳ ಪ್ರಯೋಗದಲ್ಲಿ ಕಾಳಿದಾಸ ಮಹಾಕವಿಯ ಪಾತ್ರಗಳನ್ನು ಮೀರಿಸುವ ಮೋಹನೀಯರು. ಪ್ಯಾರಿಸ್ ಮಲಗುವುದೇ ಇಲ್ಲ. ಕುಡಿದಾಟ ಮತ್ತು ಕುಣಿದಾಟ, ನಿರಂತರ ಚೆಲ್ಲಾಟ ನಡೆದೇ ಇರುತ್ತದೆ. ಜೀವನ ಇವರಿಗೆ ಕಂಡಷ್ಟು ಸುಲಭ ಇನ್ನಾರಿಗೂ ಕಂಡಿಲ್ಲ.

ಪ್ರಪಂಚ ಪ್ರಸಿದ್ಧವಾದ ಪ್ಯಾರಿಸ್ ನೈಟ್‌ಕ್ಲಬ್‌ಗಳ ಪರಿಚಯ ಪಡೆಯಲು ನಾವೂ ಒಂದು ಪ್ರವಾಸದ ಟಿಕೆಟ್ ಪಡೆದೆವು. ಈ ಪ್ರವಾಸದ ಅಂಗವಾಗಿ ಪ್ಯಾರಿಸ್‌ನ ಮೂರು ವಿಭಾಗದ ಮೂರು ಸ್ತರದ ನೈಟ್‌ಕ್ಲಬ್ ನೋಡಿದೆವು. ಇಲ್ಲಿಯ ಕೆಳತರಗತಿಯ ಕಾಮವೀಧಿ 'ಪಿಗ್ಯಾಲ್' ಎಂಬ ವಿಭಾಗ. ಇಲ್ಲಿಯ ಕಡಿಮೆ ಆದಾಯದ ಜನರಿಗೆ ಬೇಕಾದಷ್ಟು ವಿಲಾಸಗೃಹಗಳಿವೆ. ಇಲ್ಲಿ ನಾವು ನೋಡಿದ ನೈಟ್‌ಕ್ಲಬ್ ತೀರ ರೋಚಕವಾಗಿತ್ತು. ನೋಡುಗರ ಮಧ್ಯೆ ದೊಂಬರಂತೆ ಕುಣಿಯುವುದು ನಡೆಯಿತು. ಮಧ್ಯ ವಯಸ್ಕರಾದ ಹೆಣ್ಣು ಗಂಡುಗಳು ತೀರ ಕೆಳತರಗತಿಯ ಚೇಷ್ಟೆ ಮಾಡುತ್ತಾ, ಯಥಾರ್ಥವಾಗಿ ದೊಂಬರಂತೆ ಕಿರುಚುತ್ತಾ ಬಡಿದಾಡುತ್ತಲಿರುವುದನ್ನು ಕಂಡು ಜನ ವಿನೋದಿಸುತ್ತಾರೆ. ಪಿಗ್ಯಾಲ್‌ಗಿಂತ ಕೊಂಚ ಮೇಲ್ಮಟ್ಟದ ವಿಭಾಗ ಬ್ಯಾಸ್ಟಿಲ್ಲೇ. ಇಲ್ಲಿಯ 'ಈವ್' ಎಂಬ ಕ್ಲಬ್‌ಗೆ ತೆರಳಿದೆವು. ಇದೊಂದು ಆಧುನಿಕ ಕ್ಲಬ್. ಇಲ್ಲಿಯ ಪ್ರತಿಯೊಂದು ಕ್ಲಬ್ ಪೈಪೋಟಿಯಿಂದ ಕೆಲಸ ಮಾಡುತ್ತವೆ. ಅತ್ಯಂತ ಕಾಮೋತ್ತೇಜಕ ಕಾರ್ಯಕ್ರಮವೆಂದು ಪ್ರಸಿದ್ಧಿ ಮಾಡುತ್ತವೆ. ಈ ಕ್ಲಬ್‌ನಲ್ಲಿ ಎಂಟು ಹುಡುಗಿಯರು ನಾಲ್ವರು ಮಧ್ಯವಯಸ್ಕ ಪುರುಷರು ಆಟ ಆಡಿದರು. ವೆಚ್ಚದ ಬಟ್ಟೆಬರೆಗಳನ್ನು ಧರಿಸಿ ಕಣ್ಸೆಳೆವಂತೆ ಒಮ್ಮೆ, ನೆಳಲು ಬೆಳಕುಗಳ ಮಧ್ಯೆ ಅರೆಬೆತ್ತಲೆ, ಪೂರ ಬೆತ್ತಲೆಯಾಗಿ ಒಮ್ಮೆ ಇವರ ಆಟ ನಡೆಯಿತು. ಪುರುಷರು ಕೀಳು ಹಾಸ್ಯದ ಕಿರಿ ಚುಟುಕಗಳನ್ನು ಹಾರಿಸುತ್ತಿದ್ದರು. ಮಾಯಾಲಾಂದ್ರ ಮತ್ತು ಚಲಚ್ಚಿತ್ರ ಪ್ರೊಜೆಕ್ಟರಿನ ಚತುರ ಉಪಯೋಗದಿಂದ ಇಬ್ಬರೇ ಹೆಂಗಸರ ಮೇಲೆ ಮೂಡಿಸುತ್ತಿದ್ದ ನೆರಳು ವಿವಿಧ ವಿನ್ಯಾಸದಿಂದ ಕೂಡಿ ಈ ಕಾರ್ಯಕ್ರಮ ಅತಿ ಕುತೂಹಲವಾಗಿತ್ತು. ಲಜ್ಜೆಯಿಲ್ಲದ

ಹರೆಯದ ಹುಡುಗಿಯರು ತಮ್ಮ ರಹಸ್ಯಾಂಗಗಳನ್ನು ಹೆಮ್ಮೆಯಿಂದ ತೋರಿಸುತ್ತಾ ಬೆಳಕಿನಲ್ಲಿ ತೋರಿಸುವುದು ನಮಗೆ ಅಸಹಜ ಮತ್ತು ಅಸಹ್ಯವೆನಿಸಿ ಅನೇಕ ಬಾರಿ ಅರಿಯದಂತೆ ಅವನತ ಮುಖರಾಗುತ್ತೇವೆ. ಸಾವಿರ ಕಣ್ಣುಗಳ ಇರಿಯುವ ದಿಟ್ಟಿಗೆ ಬೆರಗಾಗದೇ ಬೆಚ್ಚದೇ ಅಂಗಾಂಗಗಳನ್ನು ಮೆರೆಸುವ ಈ ಧೀರೆಯರು ಬ್ರಹ್ಮನ ವಿಶಿಷ್ಟ ಸೃಷ್ಟಿಯೇ ಸೈ. ಆದರೆ ಮೇಲುಮುಚ್ಚಿನಲ್ಲಿ ಅಡಗಿ ಕುಳಿತು ಈ ಸ್ವಯಂಚಾಲಿತ ಪ್ರೊಜೆಕ್ಟರ್‌ಗಳ ಆಟ ಮಾತ್ರ ಅಪೇಕ್ಷಣೀಯವಾಗಿತ್ತು.

ಕಡೆಯದಾಗಿ ನಾವು ನೋಡಿದ್ದು ಪ್ರಪಂಚದ ಶ್ರೇಷ್ಠವಾದ ಲಿಡೋ (LIDO). ಇದಕ್ಕೆ ಸರಿಯೆನಿಸುವ ಕ್ಲಬ್ ಇನ್ನೂ ಪ್ರಪಂಚದಲ್ಲಿ ಹುಟ್ಟಿಲ್ಲವಂತೆ. ಈ ಕ್ಲಬ್‌ಗೆ ಪ್ರವೇಶ ದೊರೆಯಬೇಕಾದರೆ ಸೂಟ್, ಷೂಸ್ ಮತ್ತು ಟೈ ಇರಲೇಬೇಕು. ಅಷ್ಟೇನೂ ಚಳಿಯಿರದ ಕಾರಣ ನಾನು ಮಾತ್ರ ಕೋಟು ಮತ್ತು ಟೈ ಇಲ್ಲದೆ ಬಂದಿದ್ದೆ. ನಮ್ಮ ಪ್ರವಾಸದ ಮಾರ್ಗದರ್ಶಿ ನನಗೆ ಮುಂದಾಗಿಯೇ ಎಚ್ಚರಿಸಿದಳು. ಸರಿ ಬ್ಯಾಸ್ಟಿಲ್‌ನಿಂದ ಟ್ಯಾಕ್ಸಿಯಲ್ಲಿ ತೆರಳಿ ಕೋಟ್ ಮತ್ತು ಟೈ ಧರಿಸಿ ನಮ್ಮ ಗುಂಪು ಲಿಡೋ ಸೇರುವ ಮುಂಚೆಯೇ ನಾನು, ಅಣ್ಣ ಲಿಡೋ ಸೇರಿದೆವು. ಈಗಾಗಲೇ ರಾತ್ರಿ ಒಂದು ಗಂಟೆಯ ಸಮಯ. ಷಾಂಪ್ಸ್ ಎಲಿಸಿಯಾ ರಸ್ತೆಯಲ್ಲಿ ದೊಡ್ಡ ಮೆರವಣಿಗೆ ಹೊರಟಿತ್ತು. ಪ್ರೆಸಿಡೆನ್ಷಿಯಲ್ ಚುನಾವಣೆಯಲ್ಲಿ ಪಾಂಪಿಡೋ ಅಖಂಡ ವಿಜಯ ಗಳಿಸಿದ್ದರು. ಅವರ ವಿಜಯದ ಸಂಕೇತವಾಗಿ ಆ ಅಪರರಾತ್ರಿಯಲ್ಲಿಯೇ ಮೆರವಣಿಗೆ, ಕೇಕೆ, ಹಾಡು, ಬ್ಯಾಂಡು ನಡೆದಿತ್ತು. ಅದನ್ನು ನೋಡಲೊಂದು ಚೆಂದ. ಕಾರುಗಳ ಮೇಲೆ ಮತ್ತು ಮುಂದೆ ಹುಡುಗಿಯರೇ ಹುಡುಗಿಯರು.

ಲಿಡೋ ಬಹುದೊಡ್ಡ ಕ್ಲಬ್. ಸುಮಾರು ಐದಾರು ನೂರು ಜನ ಆಸೀನರಾಗಲು ವ್ಯವಸ್ಥೆ ಇದೆ. ಅತ್ಯಾಧುನಿಕವಾದ ರಂಗಮಂಟಪ. ಗುಂಡಿಯೊತ್ತಿದರೆ ತಿರುಗುತ್ತದೆ, ಮೇಲೇರುತ್ತದೆ, ಕುಸಿಯುತ್ತದೆ, ವಿಶಾಲವಾಗುತ್ತದೆ, ಆಕುಂಚನಗೊಳ್ಳುತ್ತದೆ. ಬೆಳಕಿನ ವ್ಯವಸ್ಥೆ ಅಸಮಾನವಾದುದು. ಇಂತಹ ಸಂಸ್ಥೆಯಲ್ಲಿ ಕೆಲಸ ಮಾಡಲು ನುರಿತ ಕಲಾವಿದರು ನಾ ಮುಂದೆ ತಾ ಮುಂದೆ ಎಂದು ಬರುತ್ತಾರೆ. ಇಂಥ ಜಾಗದಲ್ಲಿ ನುರಿತವರ ಕಣ್ಣಿಗೆ ಬಿದ್ದ ಅನೇಕರು

ಮುಂದೆ ಹಾಲಿವುಡ್ ಸೇರಿದ್ದಾರೆ. ಅಸಂಖ್ಯಾತ ಕಲಾವಿದರ ಸಹಾಯದಿಂದ ಅದ್ಭುತ ಕಾರ್ಯಕ್ರಮಗಳನ್ನು ತೋರಿಸುತ್ತಾರೆ. ಬೆಕ್ಕಸಬೆರಗಾಗಿ ನೋಡುತ್ತಾ ಕುಳಿತಿರುವುದೊಂದೇ ಕೆಲಸ. ಅದೊಂದು ಭಾವಲೋಕ. ಮನಸ್ಸು ಕಲ್ಪಿಸಿ ರಚಿಸಿ ಅರ್ಥೈಸಿಕೊಳ್ಳುವುದರೊಳಗೆ ಮತ್ತೊಂದು ಸನ್ನಿವೇಶ ಮೂಡಿರುತ್ತದೆ. ನೀರಿನ ಮೇಲೆ ನಡೆದಂತೆ ಗಾಳಿಯಲ್ಲಿ ಹಾರಿದಂತೆ ಸಮಲೋಕದಲ್ಲಿ ಲಘುವಾಗಿ ಸಂಚರಿಸಿದಂತೆ ಅನುಭವ ಉಂಟಾಗುತ್ತದೆ. ಲಿಡೋದವರ ಕಲಾತ್ಮಕ ಮತ್ತು ಪ್ರದರ್ಶನ ಪರಿಣತೆ ಅಸಮಾನವಾದುದು. ಮೃದುಮಧುರವಾದ ಸ್ವರ ಸಂಯೋಜನೆ, ಮೇಳಗಾನ, ಪ್ರತಿಯೊಂದೂ ವಿಶಿಷ್ಟವಾದುದು. ಭಾರತೀಯರ ಕನಸು ಕಾಣುವ ಲೋಕವನ್ನು ಫ್ರೆಂಚರು ನಿರ್ಮಿಸಿದ್ದಾರೆ.

ಫ್ರೆಂಚ್ ಸಿನಿಮಾದ ರುಚಿಯನ್ನು ನೋಡಲು ಹೋದೆವು. ಯಾವುದೊ ಒಂದು ವಿರುದ್ಧ ಹೆಸರಿನ ಚಿತ್ರ. ಈ ಚಿತ್ರಕ್ಕೆ ಕತೆಯಿಲ್ಲ, ಮೊದಲಿಲ್ಲ ಮತ್ತು ಕೊನೆಯಿಲ್ಲ. ಇದರಲ್ಲಿ ಒಬ್ಬ ಹೈದನ ಅನಂತ ರತಿಕ್ರೀಡೆಯೇ ವಿಷಯ ಇದನ್ನು ನೋಡಲು ಬಂದ ಜನರಲ್ಲಿ ನಾವೇ ಎಲ್ಲರಿಗಿಂತ ಕಿರಿಯರೆನ್ನಬಹುದು ಬಹುತೇಕ ದಂಪತಿಗಳು ಮತ್ತು ಮಧ್ಯವಯಸ್ಕರು. ನಮ್ಮ ಮುಂದಿನ ಸಾಲಿನಲ್ಲಿ ಕುಳಿತ ಒಬ್ಬ ಹುಡುಗ ಒಬ್ಬ ಹುಡುಗಿ ಸಿನಿಮಾ ನೋಡಲು ಬಂದವರಲ್ಲ. ಮೊದಲಿನಿಂದ ಕೊನೆಯವರೆಗೆ ಅವರು ಸರಸಸಲ್ಲಾಪದಲ್ಲಿಯೇ ನಿರತರಾಗಿದ್ದರು. ಬಹುಶಃ ಅವರು ಮನೆಗೆ ಮರಳಲಾರರು. ಹೋಟೆಲ್‌ನಲ್ಲಿ ಕೋಣೆ ಹಿಡಿಯಲು ಶಕ್ತರಲ್ಲ. ಅವರ ಸರಸವೆಲ್ಲಾ ಸೀಟ್‌ನಲ್ಲಿಯೇ ನಡೆದಿತ್ತು.

ಪ್ಯಾರಿಸ್ ಇಹಲೋಕದ ಅಲಕಾವತಿಯೇ ಸರಿ. ಪ್ಯಾರಿಸಿಯನ್ನರ ಜೀವನವನ್ನು ಬಳಸಿ ಅನಂತವಾಗಿ ಹರಿದಿರುವ ಸೀನೇ ರಸಗಂಗೆಯಾಗಿದ್ದಾಳೆ. ರಮಣೀಯತೆಯಿಂದ ತುಂಬಿ ತುಳುಕುವ ಈ ತಾಣ ಭೂದೇವಿಯ ಮಾನಸ ಲೋಕ. ಮನುಷ್ಯ ಸುಂದರನೂ ಸಂತುಷ್ಟನೂ ಆಗಿ ಜೀವಿಸಲು ಹಂಬಲಿಸಿ ಅಪ್ಪಿಕೊಂಡ ಜೀವನಧರ್ಮ ಪ್ಯಾರಿಸ್. ಎಳೆಯ ಮಕ್ಕಳ ಮನಸ್ಸಿನಲ್ಲಿ ಪ್ಯಾರಿಸ್ ಒಂದು ರೋಮಾಂಚಕ ಓಯಸಿಸ್. ಅದು ಚಿರಯೌವನ ಕಾಂತಿಯುಕ್ತ ಅಮರ ಕನ್ಯೆ.

ಏರ್ ಫ್ರಾನ್ಸ್ ಸಾರಿಗೆಯಲ್ಲಿ ಪ್ಯಾರಿಸ್ ಬಿಡುವಾಗ ಹೃದಯ ಅತೃಪ್ತಿಯಿಂದ ಕುದಿಯುತ್ತಿತ್ತು. ಒಂದನೆಯದಾಗಿ ಹೆಚ್ಚು ಕಾಲ ನಿಲ್ಲಲು ವೀಸಾ ದೊರೆಯಲಿಲ್ಲದ ಖೇದ. ಎರಡನೆಯದಾಗಿ ಬೆಲ್‌ಗ್ರೇಡಿನಿಂದ ನಮ್ಮೊಡನೆ ಜೊತೆಯಾಗಿದ್ದ ಅಣ್ಣನನ್ನು ಬಿಟ್ಟು ಹೊರಡುವ ವಿರಹಭಾವನೆ. ಆತನಿಗೆ ಶುಭ ಕೋರಿ ಕೈವಹಾಡಿ ಮುನ್ನಡೆವಾಗ ಹೃದಯ ಮಂಜಾಗಿತ್ತು. ಪ್ಯಾರಿಸ್‌ನ ನಲ್‌ನೆನಕೆಗಳ ಭಾರದಲ್ಲಿ ಕುಸಿಯುತ್ತಿರುವಾಗ ಲಂಡನ್ ಪಟ್ಟಣದ ಹೀಥ್ರೋ ವಿಮಾನತಾಣ ಆಗಮಿಸಿತ್ತು. ಶತಮಾನಗಳ ಕಾಲ ನಮ್ಮನ್ನಾಳಿದ ಆಂಗ್ಲರ ರಾಜಧಾನಿ ಲಂಡನ್‌ನ ಆಕರ್ಷಣೆಯೇ ಒಂದು ರೀತಿಯದು. ಇಂಗ್ಲೆಂಡ್ ಭಾರತದ ಮಿದುಳೂ, ಹೃದಯವೂ, ಸಂಸ್ಕೃತಿಯೂ ಆಗಿದೆ. ಸುದೈವದಿಂದ ಭಾರತೀಯತೆ ಆತ್ಮರಂಗದಲ್ಲಿ ವಿರಾಜಮಾನವಾಗಿದೆ.

೭ ಲಂಡನ್ ಗತವೈಭವದ ಮೆಲುಕಾಟ

ದಿವಾರಾತ್ರಿ ಸೂರ್ಯನೇ ಮುಳುಗದ ಸಾಮ್ರಾಜ್ಯವನ್ನು ಕಟ್ಟಿ ವಿಶ್ವದ ಬಲಿಷ್ಠತಮ ರಾಜ್ಯವೆನಿಸಿಕೊಂಡು ಸಪ್ತಸಮುದ್ರಗಳ ಮೇಲೆ ಧೀಮಂತಿಕೆಯಿಂದ ತಿರುಗಾಡಿದ ಇಂಗ್ಲಿಷ್ ಜನಾಂಗದ ರಾಜಧಾನಿ ಲಂಡನ್. ಇಂದಿಗೂ ಅನೇಕರಿಗೆ ಬರೀ ಹೆಸರು ಮಾತ್ರವಲ್ಲ, ಹೆಸರಿಗಿಂತ ಹೆಚ್ಚಿನದಾದ ಮತ್ತೊಂದು ಶಕ್ತಿ, ಲಂಡನ್ ಜೊತೆಗೆ ಕೇಂಬ್ರಿಜ್ ಮತ್ತು ಆಕ್ಸ್‌ಫರ್ಡ್; ಆಧುನಿಕ ಜನಾಂಗದ ತಕ್ಷಶಿಲೆ ಮತ್ತು ಕಾಶಿ. ಇಂತಹ ಲಂಡನ್‌ನಲ್ಲಿ ಇಳಿದಾಗ ಆಗಲೇ ರಾತ್ರಿ. ಆದರೆ ನಮಗೆ ಹೋಟೆಲ್ ರಿಜರ್ವೇಷನ್ ಇದ್ದಿಲ್ಲ. ಬ್ರಿಟಿಷ್ ಯೂರೋಪಿಯನ್ ಏರ್‌ಲೈನ್‌ನವರು ಪ್ರವಾಸಿಗರಿಗೆ ಹೋಟೆಲ್ ಅನುಕೂಲವನ್ನು ಮಾಡಿಕೊಡುತ್ತಾರೆ. ಹೋಟೆಲ್ ಕೌಂಟರಿನ ಹುಡುಗಿ ನಮಗೆ ಅನುಕೂಲವಾಗುವ 'ದರ ಮಾಧ್ಯಮದಲ್ಲಿ' ತಮ್ಮ ಪಟ್ಟಿಯ ಹೋಟೆಲ್ ಹುಡುಕಿ ರೂಮ್ ಸಿಗುವುದಾದರೆ ಏರ್ಪಾಟು ಮಾಡಿಕೊಡುತ್ತಾರೆ. ಈ ಸೇವೆ ಮುಫತ್ ದೊರೆಯುತ್ತದೆ. ಲಂಡನ್‌ನಲ್ಲಿರುವ ಹೋಟೆಲ್‌ಗಳ ಸಂಖ್ಯೆ ನೋಡಿದರೆ ಯಾವ ಕಷ್ಟವಿಲ್ಲದೇ ವಸತಿ ದೊರೆಯಬೇಕು. ಆದರೆ ಸದ್ಯ ಪ್ರಪಂಚಪ್ರಸಿದ್ಧ ವಿಂಬಲ್‌ಡನ್ ಲಾನ್‌ಟೆನಿಸ್ ಆಟಗಳು ನಡೆಯುತ್ತಿದ್ದ ಕಾರಣ ಅನೇಕ ಹೋಟೆಲ್‌ಗಳು 'ಸಾರಿ, ನೋ ವೇಕೆನ್ಸಿ' ಬೋರ್ಡು ತಗುಲಿಸಿದ್ದವು.

ಸುದೈವದಿಂದ ಸಸೆಕ್ಸ್ ಗಾರ್ಡನ್ಸ್‌ನ ವಿಂಡ್ಸರ್ ಹೋಟೆಲ್ ಎಂಬಲ್ಲಿ ನಮಗೆ ಎಡೆ ದೊರೆಯಿತು. ಈ ಸೇವೆಯನ್ನು ನಮ್ಮಲ್ಲಿಯ ಏರ್‌ಲೈನ್ಸ್ ಮತ್ತು ಬಸ್ ಕಂಪನಿಯವರು ಮಾಡಿದರೆ ಪ್ರವಾಸಿಗರಿಗೆ ಅನುಕೂಲವಾದೀತು. ನಾವು ಕಾಮನ್‌ವೆಲ್ತ ಪ್ರಜೆಗಳಾದ್ದರಿಂದ ಇಂಗ್ಲೆಂಡಿನಲ್ಲಿ ವೀಸಾ ಬಾಧೆ ಇರಲಿಲ್ಲ.

ಅಮೇರಿಕೆಯ ಪ್ರವಾಸಕ್ಕೆ ನನಗೆ ವೀಸಾ ಇರಲಿಲ್ಲವಾದ್ದರಿಂದ ಮೊದಲನೆಯ ಕರ್ತವ್ಯವಾಗಿ ಅಮೇರಿಕೆಯ ರಾಯಭಾರ ಕಛೇರಿಗೆ ಹೋದೆ. ರಕ್ಕಸ ಗಾತ್ರದ ಈ ಕಛೇರಿಯ ವೀಸಾ ಮತ್ತು ಇಮಿಗ್ರೇಷನ್ ಇಲಾಖೆ ಕಿಕ್ಕಿರಿದು ತುಂಬಿತ್ತು. ಇಂಗ್ಲೆಂಡ್ ಮತ್ತು ಇತರ ಯುರೋಪಿಯನ್ ದೇಶಗಳಿಂದ ಜನ ಅಮೇರಿಕೆಗೆ ನಿರಂತರ ವಲಸೆ ಹೋಗುತ್ತಾರೆ. ಏಷಿಯಾ ಮತ್ತು ಆಫ್ರಿಕಗಳಿಂದ ಜನ ಯುರೋಪಿಗೆ ವಲಸೆ ಬರಲು ಆಶಿಸುತ್ತಾರೆ. ಸುಖದ ಪ್ರಯತ್ನದಲ್ಲಿ ಸ್ವಾತಂತ್ರ್ಯದ ಹುಡುಕಾಟದಲ್ಲಿ ತೃಪ್ತಿಯ ಆವಿಷ್ಕರಣದಲ್ಲಿ ಮನುಷ್ಯ ನಾಡಿಂದ ನಾಡಿಗೆ ವಲಸೆ ಹೋಗುತ್ತಾನೆ. ಇದ್ದ ಹಲವು ವರುಷ ಆಯುಷ್ಯವನ್ನು ತನಗಿಷ್ಟ ಬಂದಂತೆ ಸಾರ್ಥಕಗೊಳಿಸಲು ಪ್ರಯತ್ನಿಸುತ್ತಾನೆ. ವೀಸಾ ಅರ್ಜಿ ಹಾಕಿದ ಎರಡು ತಾಸಿನ ಮೇಲೆ ನನಗೆ ಇಂಟರ್‌ವ್ಯೂ ದೊರೆಯಿತು. ಅಮೇರಿಕೆಯ ಬಗ್ಗೆ ನನಗೆ ಅಚಲ ಅಭಿಮಾನ, ವಿಶ್ವಾಸವಿದೆ. ಅವರ ತೊಂದರೆಗಳ ಬಗ್ಗೆ ಸಹಾನುಭೂತಿಯೂ ಇದೆ. ಆದರೆ ಈ ವೀಸಾ ಅಧಿಕಾರಿ ವರ್ತಿಸಿದ ರೀತಿ ನನಗೆ ಸರಿಬರಲಿಲ್ಲ. ನಮ್ಮ ಸಂಭಾಷಣೆ ಹೀಗಿತ್ತು :

"ಇಂಗ್ಲೆಂಡಿಗೆ ಬಂದು ಎಷ್ಟು ದಿನವಾಯಿತು ?"

"ನಿನ್ನೆ ರಾತ್ರಿ ಬಂದೆವು."

"ಅಮೇರಿಕೆಯಲ್ಲಿ ಎಷ್ಟು ದಿನ ಇರುವಿರಿ ?"

"ಸುಮಾರು ಮೂರು ವಾರ ಪರ್ಯಂತ."

"ಇಂಗ್ಲೆಂಡ್ ಎಂದು ಬಿಡುವಿರಿ ?"

"ಇನ್ನು ನಾಲ್ಕಾರು ದಿನಗಳಲ್ಲಿ"

"ಓಹ್, ಇಂಗ್ಲೆಂಡಿನಲ್ಲಿ ವಾರ, ಅಮೇರಿಕೆಯಲ್ಲಿ ಮೂರು ವಾರ. ನಿಮ್ಮ ಹವ್ಯಾಸವೇನು ?"

"ನಾನು ಭಾರತದಲ್ಲಿ ವ್ಯಾಪಾರಿ. ಮಿಲ್ ಮಾಲೀಕ. ಅಮೇರಿಕೆಯಲ್ಲಿ ನನ್ನ ಹವ್ಯಾಸ ಪ್ರವಾಸ."

"ಅಮೇರಿಕೆಯಲ್ಲಿ ಯಾರ್ಯಾರನ್ನು ಮತ್ತು ಯಾವ್ಯಾವ ಕಂಪನಿಯವ ರನ್ನು ಕಾಣುವಿರಿ ?"

"ಹಾಗೆ ಪ್ರತ್ಯೇಕವಾಗಿ ಯಾರನ್ನೂ ಕಾಣುವ ಉದ್ದೇಶವಿಲ್ಲ. ಹೊಸ ಪ್ರಪಂಚದ ಬಲಿಷ್ಠ ರಾಜ್ಯವಾದ ಅಮೇರಿಕೆಯ ಜೀವನ, ಉದ್ಯಮ, ಇತಿಹಾಸ ಮತ್ತು ಪ್ರಾಕೃತಿಕ ಸ್ಥಳಗಳನ್ನು ನೋಡುವುದೇ ನನ್ನ ಪ್ರತ್ಯೇಕ ಅಭಿಲಾಷೆ."

"ಇಂಡಿಯಾದಲ್ಲೇ ನೀವೇಕೆ ವೀಸಾ ತೆಗೆಯಲಿಲ್ಲ ?"

"ವ್ಯವಧಿಯಿದ್ದಿಲ್ಲ."

"ಪ್ರವಾಸಿಗಳಾದ ನಿಮಗೆ ಅವಸರವೇನೂ ಇದ್ದಿಲ್ಲ. ವೀಸಾ ತೆಗೆದು ಕೊಂಡೇ ಬರಬಹುದಿತ್ತು."

"ಸಮಯವಿದ್ದಿಲ್ಲ. ಅಲ್ಲದೇ ನನ್ನ ಅಣ್ಣನನ್ನು ನಾನು ಯೂರೋಪಿನಲ್ಲಿ ಸಂಧಿಸಬೇಕಾಗಿತ್ತು. ನನ್ನ ಟಿಕೆಟ್ ಬುಕ್ಕಾಗಿದೆ. ಹೋಟೆಲ್ ರಿಜಿಸ್ಟ್ರೇಷನ್ ಆಗಿದೆ. ನಿಶ್ಚಿತ ಸಮಯಗಳಲ್ಲಿ ನಿಶ್ಚಿತ ಪ್ರದೇಶಗಳನ್ನು ಸುತ್ತಾಡಿ ನಾನು ಮರಳಬೇಕು."

"ಸರಿ, ಅದೊಂದೇ ನಿಮ್ಮನ್ನು ಕಾಪಾಡಬೇಕು. ನಿಮ್ಮ ಕ್ರಿಡೆನ್ಷಿಯಲ್ಸ್ ಬಗ್ಗೆ ನನಗೆ ಆಧಾರವಿಲ್ಲ. ನಾನು ಒಂದೇ ಪ್ರಯಾಣದ ವೀಸಾ ನೀಡಬಲ್ಲೆ."

"ಸರಿ, ಅದನ್ನೇ ಕೊಡಿ."

ಈ ಸಂಭಾಷಣೆಯಲ್ಲಿ ಪ್ರಮುಖವಾಗಿ ಎದ್ದು ಕಾಣುವ ಅಂಶವೆಂದರೆ ಈ ಅಧಿಕಾರಿಗೆ ಏಷಿಯನರ ಬಗ್ಗೆ ಇರುವ ಅನುಮಾನ ಮತ್ತು ಭಯ. ಇಂತಹ ಅಧಿಕಾರಿಗಳು ತಮ್ಮ ದೇಶಕ್ಕೆ ಹಾನಿಮಾಡುತ್ತಾರೆ. ಅಮೇರಿಕೆ ಯನ್ನು ಆವರಿಸಿರುವ ಈ ಭಯದ ಅನೇಕ ಮುಖಗಳನ್ನು ನಾನು ಮುಂದೆ ಅನೇಕ ಬಾರಿ ಕಂಡೆ. ಇದಕ್ಕೆ ಬೇಕಾದಷ್ಟು ಪೂರ್ವಪೀಠಿಕೆ ಇರಬಹುದು. ಆದರೆ ನನ್ನ ವಿಷಯದಲ್ಲಿ ಅನುಮಾನಿಸುವಂತೆಯೇ ಇದ್ದಿಲ್ಲ. ಏಕೆಂದರೆ

೧. ನನ್ನ ಪಾಸ್‌ಪೋರ್ಟ್ ಸ್ವಚ್ಛವಾಗಿತ್ತು.

೨. ಇರಾನ್, ಈಜಿಪ್ಟ್, ಲೆಬನಾನ್, ಇಟಲಿ, ಗ್ರೀಸ್ ಮತ್ತು ಫ್ರಾನ್ಸ್

ದೇಶಗಳಲ್ಲಿ ಯಾವ ಕಟಕಟೆಯೂ ಇಲ್ಲದೆ ಪ್ರವಾಸಮಾಡಿ ಬಂದ ಸ್ವಚ್ಛ ಪಾಸ್‌ಪೋರ್ಟ್ ಅಧಿಕಾರಿಯ ಟೇಬಲ್ ಮೇಲೆ ಇತ್ತು.

೩. ನನ್ನ ಅಮೇರಿಕೆಯ ಪ್ರವಾಸದ ಟಿಕೆಟ್, ಹೋಟೆಲ್ ರಿಜರ್ವೇಷನ್ ಪಕ್ಕಾ ಆಗಿತ್ತು.

೪. ನಾನು ಯಾವ ರಾಜಕೀಯ ಪಕ್ಷಕ್ಕೂ ಸೇರದ ಸಾಧಾರಣ ಸುಶಿಕ್ಷಿತ ಮಿಲ್ ಮಾಲೀಕ ಎಂಬುದು ಸ್ಪಷ್ಟವಿತ್ತು.

ಇಂತಹ ಕೇಸ್‌ನಲ್ಲಿ ಎರಡನೆಯ ಬಾರಿ ವಿಚಾರಿಸದೇ ಪ್ರವಾಸೀ ವೀಸಾ ದಯಪಾಲಿಸಬಹುದು. ಆದರೆ ಅಮೇರಿಕೆಯ ಕಪಿಮುಷ್ಟಿಯ ನಿಷ್ಠಾವಂತ ಸೇವಕ ಹಾಗೆ ಮಾಡಲಿಲ್ಲ. ಈ ರಾಯಭಾರ ಕಛೇರಿಯ ಅವಾಂತರದಿಂದ ತಪ್ಪಿಸಿಕೊಂಡು ಹೊರಬಂದವರು ಮನಸಾ ಸುಧಾರಿಸಿಕೊಳ್ಳಲು ಭಾರತದಲ್ಲಿ ಚಿತ್ರೀಕರಣಗೊಂಡ ಚಿತ್ರ 'ಗುರು' ನೋಡಿದೆವು. ಈ ಚಿತ್ರದಲ್ಲಿ ಭಾರತೀಯ ಗುರು (ಶಿಕ್ಷಣ ಪದ್ಧತಿಯಲ್ಲಿ) ಸಂಪ್ರದಾಯ, ಸಂಗೀತ ಕಲೆಯ ಮಹತಿ ಚೆನ್ನಾಗಿ ಚಿತ್ರಿತವಾಗಿದೆ. ಗುರುವಿನ ಗುಲಾಮನಾಗುವವರೆಗೆ ವಿದ್ಯೆ ಸಿದ್ಧಿಸದು ಎಂಬ ವಿಷಯವನ್ನು ಮನಮುಟ್ಟುವಂತೆ ಪ್ರತಿಪಾದಿಸಿದ್ದಾರೆ.

ಲಂಡನ್ನಿನ ನಮ್ಯೂಸಿಯಂ ಪ್ರಖ್ಯಾತವಾದುದು, ಇಲ್ಲಿ ಪ್ರಪಂಚದಲ್ಲಿಯೇ ಹೆಚ್ಚಿನ ಗ್ರೀಕ್ ಶಿಲ್ಪಸಂಗ್ರಹವಿದೆ. ಪ್ರತಿಯೊಂದು ಕೋಣೆಯನ್ನೂ ಬಹಳ ನಾಜೂಕಾಗಿ ಮತ್ತು ಬಹು ಉಪಯೋಗಕರವಾಗಿ ವ್ಯವಸ್ಥೆಗೊಳಿಸಲಾಗಿದೆ. ವಿಶೇಷ ಚಿತ್ರಗಳ ಬಗ್ಗೆ ರಿಕಾರ್ಡುಮಾಡಲಾದ ಮಾಹಿತಿ ಸ್ವಲ್ಪೇ ಬಾಡಿಗೆಗೆ ದೊರೆಯುತ್ತವೆ. ನಮ್ಮಿಷ್ಟಕ್ಕೆ ನಾವು ಕಿವಿಗೆ ಜೋಡಿಸಿಕೊಂಡು ಬೇಕಾದಷ್ಟು ಸಾರಿ ಕೇಳಬಹುದು.

ಫ್ರೆಂಚರಂತೆ ಇಂಗ್ಲಿಷರು ಸಹ ತಮ್ಮ ಸಾಮ್ರಾಜ್ಯದ ಮೂಲೆ ಮೂಲೆಗಳಿಂದ ಅಪೂರ್ವಶಿಲ್ಪಗಳನ್ನು ಕಲಾಕೃತಿಗಳನ್ನು ಹೆಕ್ಕಿ ತಂದು ಮ್ಯೂಜಿಯಂನ ಹೊಟ್ಟೆ ಬಿರಿವಂತೆ ಶೇಖರಿಸಿದ್ದಾರೆ. ಈಜಿಪ್ಷಿಯನ್ ಮ್ಯೂಜಿಯಂನಲ್ಲಿ ಇದ್ದುದರ ಎರಡರಷ್ಟು ಮಮ್ಮಿಗಳು ಇಂಗ್ಲಿಷ್ ಮ್ಯೂಜಿಯಂನಲ್ಲಿ ಇವೆ. ಮೆಕ್ಸಿಕೋದಿಂದ ಮೊದಲುಮಾಡಿ ಆಸ್ಟ್ರೇಲಿಯಾದವರೆಗೆ ಎಲ್ಲಾ ದೇಶಕ್ಕೆ ಸೇರಿದ ಪಿಂಗಾಣಿ ಮತ್ತು ಮಣ್ಣು, ಕಟ್ಟಿಗೆ, ಲೋಹ, ಶಿಲೆಯ ಮತ್ತು ನೂಲಿನ

ಅನೇಕ ವಿಧದ ಸಾಮಗ್ರಿಗಳು ಇಲ್ಲಿವೆ. ಮಾಗ್ನಕಾರ್ಟದ ಮೂಲಪ್ರತಿ, ಪ್ರಸಿದ್ಧ ಪ್ರೇಮಪತ್ರಗಳು, ಇತಿಹಾಸ ದಾಖಲೆಗಳು ಇಲ್ಲಿವೆ. ಇತಿಹಾಸದ ಮತ್ತು ವಿಧವಿಧ ಸಾಂಸ್ಕೃತಿಕ ಪರಂಪರೆಗಳ ಅಭ್ಯಾಸಿಗಳಿಗೆ ಕಲಾಜಿಜ್ಞಾಸುಗಳಿಗೆ ಇದೊಂದು ಮುಗಿಯದ ಮತ್ತು ಮರೆಯದ ಕತೆ. ಭಗ್ನಶಿಲೆ ಮಾರ್ನುಡಿ ಯುತ್ತದೆ. ಮುರುಕುಚಿತ್ರ ಹರಕೆ ಹೇಳುತ್ತದೆ. ಕಾಡುಜನರ ಉಡುಗೆ ಕುಣಿಯುತ್ತದೆ. ಮಮ್ಮಿಗಳು ಮಾತನಾಡುತ್ತವೆ. ಕಲ್ಪನೆಯೊಂದೇ ಬೇಕು.

ಲಂಡನ್‌ನಷ್ಟು ಅನುಕೂಲವಾದ ನಗರ ನಮಗೆ ಬೇರೆ ಎಲ್ಲಿಯೂ ಕಾಣ ಲಿಲ್ಲ. ರಸ್ತೆಗೊಂದು ಪೂರ್ವೀಯರ ವ್ಯಾಪಾರಸಂಸ್ಥೆ. ಅದು ಅಂಗಡಿಯೋ ಹೋಟೆಲ್ಲೋ ದವಾಖಾನೆಯೋ ಯಾವುದೋ ಒಂದು. ಹತ್ತು ಜನರ ಗುಂಪು ಎದುರಾದರೆ ಅದರಲ್ಲಿ ಒಬ್ಬರೋ ಇಬ್ಬರೋ ಭಾರತೀಯರು ಅಥವಾ ಪಾಕಿಸ್ತಾನೀಯರು. ಪ್ರತಿರಸ್ತೆಯಲ್ಲಿ ಚಿಕ್ಕ ಚಿಕ್ಕ ಸೋವಿದರದ ಟ್ಯಾವೆರ್ನ್ ಅಥವಾ ವೇಸೈಡ್ ಇನ್‌ಗಳಿವೆ. ಬಟ್ಟೆ ಒಗೆದುಕೊಳ್ಳಲು ಸ್ವಯಂಚಾಲಿತ ಲಾಂಡ್ರಿಗಳು. ಸುಲಭದರದಲ್ಲಿ ನಮ್ಮ ಬಟ್ಟೆಗಳನ್ನು ಈ ಸ್ವಯಂಚಾಲಿತ ಯಂತ್ರಗಳಲ್ಲಿ ಸ್ವಚ್ಛ ಮಾಡಿಕೊಂಡೆವು. ಸಾಯಂಕಾಲ ಥೇಮ್ಸ್ ನದಿಯಲ್ಲಿ ಒಂದು ಸುತ್ತು ನೌಕಾವಿಹಾರ ಮಾಡಿದೆವು. ಲಂಡನ್ ಪುರಾತನ ಪಟ್ಟಣವಲ್ಲದೇ ಇಂಗ್ಲಿಷ್‌ರು ಕನ್ಸರ್‌ವೇಟಿವ್ ಆದ ಕಾರಣ ಅನೇಕ ಕಡೆ ಲಂಡನ್ ಅಷ್ಟು ಅಂದ ವೆನಿಸುವುದಿಲ್ಲ. ಆದರೆ ಥೇಮ್ಸ್ ನದಿಯ ಮೇಲೆ ಬೀಸುವ ಆ ಕೊರೆಗಾಳಿ ಮಾತ್ರ ತಡೆಯಲಸಾಧ್ಯ.

ವೆಸ್ಟ್ ಮಿನಿಸ್ಟರ್ ಆ್ಯಬೆ ದೊಡ್ಡ ಕ್ರೈಸ್ತ ದೇವಾಲಯ ಮತ್ತು ಸಮಾಧಿಸ್ಥಾನ. ಪದ್ಮಶ್ರೀ ಗೋಕಾಕರ ಕಾವ್ಯದಲ್ಲಿ ಮತ್ತು ಪ್ರವಾಸಕಥನದಲ್ಲಿ ಮಂದಿರದ ಬಗ್ಗೆ ಓದಿದ ನೆನಪಿನಿಂದ ಕುತೂಹಲಿಯಾಗಿ ನಾನು ನಡೆದೆ. ಸೈನಿಕರಿಗೆ ಮಾರಣಹೋಮ ಮಾಡಿದ ಅಧಿಕಾರಿಗಳಿಗೆ, ರಾಜಬಂಧುಗಳಿಗೆ ಇರುವ ಮರ್‍ಯಾದೆ, ಕವಿಗಳಿಗೆ, ದಾರ್ಶನಿಕರಿಗೆ ಮತ್ತು ಸಂತರಿಗೆ ಇಲ್ಲಿ ದೊರೆತಿಲ್ಲ. ಜನರ ಮನಸ್ಸಿನಲ್ಲಿರುವ ಮರ್‍ಯಾದೆಯೇ ಅವರಿಗೆ ಸಾಕು. ಈ ಘೋರ ಗೋರಿ ಬೇಡ.

ಒಂದು ಸಾಯಂಕಾಲ ತೀರ ಬೇಸರವಾದ ಕಾರಣ ಭಾರತೀಯ ಉಪ

ಹಾರಗೃಹಕ್ಕೆ ಹೋಗುವುದೆಂದು ನಿರ್ಧರಿಸಿ ಟ್ರಫಾಲ್ಗರ್ ಚೌಕದ ಸುಪ್ರಸಿದ್ಧ ವೀರಸ್ವಾಮಿಯ ರೆಸ್ಟುರಾಗೆ ತೆರಳಿದೆವು. ಸ್ಕ್ರೀನ್ ಪತ್ರಿಕೆ ಓದುವವರಿಗೆ ಈ ರೆಸ್ಟುರಾ ತೀರಾ ಪರಿಚಿತ. ಭಾರತೀಯ ಸಿನಿಮಾ ಮಹನೀಯರೆಲ್ಲ ತಮ್ಮ ಕಾಕ್‌ಟೇಲ್ ಡಿನ್ನರ್ ವಗೈರೆ ಈ ಹೋಟೆಲ್‌ನಲ್ಲಿಯೆ ಏರ್ಪಡಿಸುತ್ತಾರೆ. ಕೊಂಚ ಹಳೆಯದಾದ ಕಟ್ಟಡದ ಎರಡನೆಯ ಮಹಡಿಯ ವಿಶಾಲ ಭವನದಲ್ಲಿ ನೆಲೆಸಿರುವ ದಕ್ಷಿಣ ಭಾರತೀಯ ಈ ಹೋಟೆಲ್ ತುಂಬಾ ಶೃಂಗಾರಮಯ ವಾಗಿದೆ. ಇಲ್ಲಿ ಎಲ್ಲಾ ಬಗೆಯ ಭಾರತೀಯ ತಿನಿಸು.ಊಟ, ಪಾನೀಯ ಸಸ್ಯ ಮತ್ತು ಮಾಂಸಾಹಾರ ದೊರೆಯುತ್ತವೆ. ಮೆನು ಕಾರ್ಡಿನಲ್ಲಿ ಭಕ್ಷ್ಯ ಗಳ ಹೆಸರು ಓದುತ್ತಿದ್ದಂತೆಯೇ ನಮಗೆ "ಸ್ವರ್ಗಾ ಭೂಮಿಗೆ ಬಂತು ಕಾಣಣ್ಣಾ" ಆಗಿತ್ತು. ಯಾವುದಕ್ಕೆ ಆರ್ಡರ್ ಕೊಡಬೇಕೆಂದು ನಮ್ಮನಮ್ಮಲ್ಲಿಯೇ ಕನ್ನಡದಲ್ಲಿ ಮಾತನಾಡುತ್ತಿರುವಾಗ ಎದುರಿಗೆ ನಿಂತಿದ್ದ ವೇಟರ್ ನಮ್ಮ ಮಾತು ಕೇಳಿ ಸಂತೋಷದಿಂದ " ಏನು ಸ್ವಾಮಿ, ತಾವು ಮೈಸೂರಿನವರೆ ? " ಎಂದಾಗ ನಮಗೆ ಖುಷಿಯೋ ಖುಷಿ. ಆ ಮನುಷ್ಯ ಲಂಡನ್ ಸೇರಿ ಹತ್ತು ವರುಷಗಳು ಆದುವಂತೆ. ಸರಿ, ನಮಗೆ ಖುಷಿಯೆನಿಸಬಹುದಾದ ತಿಂಡಿಗಳನ್ನು ಅವನೇ ಯೋಚಿಸಿ ತಂದ. ಆ ದಿನ ನಮಗೆ ಸಾಕಷ್ಟು ಹಪ್ಪಳ, ಉಪ್ಪಿನಕಾಯಿ ರಸಂ, ಪರಿಮಳಸೂಸುವ ಅನ್ನ, ಒಟ್ಟಿನಲ್ಲಿ ಭೂರಿ ಭೋಜನ. ಆ ವೇಟರ್ ಮಹಾಶಯ ಮಾತು ನಿಲ್ಲಿಸಲೇ ಇಲ್ಲ. ನಮಗೋ ' ಓಹೋ ? ಹಾಗೋ ? ' ಸರಿ ಸರಿ, ಇತ್ಯಾದಿ ಹೇಳ, ಅನಿವಾರ್ಯವಾಗಿ ನಕ್ಕು ಸಾಗಿದೆವು. ಒಂದೂವರೆ ತಾಸುಗಳ ನಿಧಾನ ಭೋಜನದ ನಂತರ ಮೈಸೂರಿನ ಆ ವೇಟರನಿಗೆ ಕೃತಜ್ಞತೆ ಸಲ್ಲಿಸಿ ನಮ್ಮ ಹೋಟೆಲ್ ಸೇರಿದಾಗ ನಮಗೇ ತೃಪ್ತಿಯ ಅರ್ಥವಾಗಿತ್ತು.

ಪುರಾತನವಾದ ಬ್ರಿಟಿಷ್ ಪಾರ್ಲಿಮೆಂಟಿನ ಉಭಯ ಸದನಗಳಲ್ಲಿ ಸಂಚರಿಸುವುದು ಒಂದು ಅಮೂಲ್ಯ ಅನುಭವ. ಭವನದ ಒಳಗಡೆ ದಾರಿಯ ಇಕ್ಕೆಲಗಳಲ್ಲಿ ಪ್ರಸಿದ್ಧ ವಾಗ್ಮಿಗಳೂ, ಪಾರ್ಲಿಮೆಂಟೇರಿಯನ್ನರೂ ಆದ ಬರ್ಕ್ ಮುಂತಾದ ಮಹನೀಯರ ಶಿಲ್ಪಗಳಿವೆ. ರಾಜವಂಶಕ್ಕೂ ಪಾರ್ಲಿಮೆಂಟಿಗೂ ನಡೆದ ಅನೇಕ ಘಟನೆಗಳ ವರ್ಣಚಿತ್ರಮಾಲಿಕೆಯಿದೆ. ಮೊಗಲರ ಅರಸು ಬಹಾದ್ದೂರ್ ಷಾ ನಿಂದ ಬಂಗಾಲದ ೨೪ ಪರಗಣಗಳಲ್ಲಿ ಕಂದಾಯ ವಸೂಲಿಯ

ಹಕ್ಕು ಪಡೆದ ಚಿತ್ರವಿದೆ. ಪಾರ್ಲಿಮೆಂಟಿಗೆ ಮತ್ತು ಬ್ರಿಟಿಷ್ ರಾಜ್ಯವ್ಯವಸ್ಥೆಗೆ ಸಂಬಂಧಿಸಿದ ಅನೇಕ ಮಹನೀಯರ ವಿಗ್ರಹಗಳಿವೆ. ನಾವು ಹೋದಾಗ ಕೆಳಮನೆಯು ಅಧಿವೇಶನದಲ್ಲಿತ್ತು. ಕೊಂಚ ಸಮಯ ಸಂದರ್ಶಕರ ಗ್ಯಾಲರಿಯಲ್ಲಿ ಕುಳಿತು ವಿರೋಧ ಪಕ್ಷದ ಸದಸ್ಯನೊರ್ವನ ಕೆಲ ಮಾತುಗಳನ್ನು ಕೇಳಿ ಮರಳಿದೆವು.

ಕಾರ್ಲೈಲ್ ಮತ್ತು ಜಾನ್ಸನ್‌ರ ಅಪೂರ್ವ ಮನೆಗಳನ್ನು ನೋಡಿದೆವು. ಈ ಮಹನೀಯರು ತಮ್ಮ ಕಾಲದಲ್ಲಿ ಬ್ರಿಟಿಷ್ ಜನತೆಗೆ ಮತ್ತು ಮಾನವತೆಯ ಒಟ್ಟನ ಬೆಳವಣಿಗೆಗೆ ಮಹತ್ವದ ಕಾಣಿಕೆ ಸಲ್ಲಿಸಿದವರು. ಅವರ ಜೀವಿತ ಕಾಲದಲ್ಲಿ ಈ ಸಾಧನೆಗೆ ಅವರು ನೀಡಿದ ಬೆಲೆಯೇನು ? ಹೊತ್ತ ಶ್ರಮವೇನು? ಪಡೆದ ಮಾನವೇನು ? ಮನುಷ್ಯರಾಗಿ ಅವರು ಬಾಳಿದ ಪರಿಯೇನು ? ತಿಳಿಯಬೇಕಾದರೆ ಇಂಗ್ಲಿಷರು ಮಾಡಿದಂತೆ ಮಾಡಬೇಕು! ಆ ಮನೆಗಳನ್ನು ಕೊಂಡು ಅವರು ಜೀವಿತ ಕಾಲದಲ್ಲಿ ಇರಿಸಿದ ರೀತಿಯಲ್ಲಿಯೇ ಇರಿಸಿದ್ದಾರೆ. ಆಯಾ ಮಹನೀಯರ ಕೃತಿಗಳನ್ನು, ಅವರ ಬಗ್ಗೆ ಆ ಕಾಲಕ್ಕೆ ಸಮಕಾಲೀನ ಪತ್ರಿಕೆಗಳಲ್ಲಿ ಬಂದ ವ್ಯಂಗ್ಯಚಿತ್ರ, ಚಿತ್ರ, ಅವರಿಗೆ ದೊರೆತ ಮಾನ ಸನ್ಮಾನದ ಗುರುತುಗಳು ಮತ್ತು ಅವರ ಬಗ್ಗೆ ನಡೆದ ವಾದ ವಿವಾದವನ್ನೂ ಅನೇಕ ಮೂಲಗಳಿಂದ ಸಂಗ್ರಹಿಸಿ ಪ್ರತಿಯೊಂದಕ್ಕೂ ತಕ್ಕಷ್ಟು ವಿವರಣೆ ನೀಡಿ ಅಚ್ಚುಕಟ್ಟಾಗಿ ಮುಕ್ತಗೊಳಿಸಿದ್ದಾರೆ.

ಜಾನ್ಸನ್ನರ ಮನೆಯಲ್ಲಿರುವಾಗ ಅವರ ಸಮಕಾಲೀನರಾದ ಬಾಸ್ವೆಲ್, ಗೋಲ್ಡ್‌ಸ್ಮಿತ್ ಮುಂತಾದ ಮಹನೀಯರ ಕುರಿತ ಅನೇಕ ವಿಷಯಗಳೂ ವಿದಿತವಾಗುತ್ತವೆ. ಜಾನ್ಸನ್‌ನ ಕೌಟುಂಬಿಕ ಬಾಳ್ವೆಯ ವಿಚಾರವೂ ತಿಳಿಯುತ್ತದೆ. ಕಾರ್ಲೈಲ್ ಮನೆಯಲ್ಲಿ ಅದ್ಭುತವಾದ ವಸ್ತುಸಂಗ್ರಹವಿದೆ. ಮುಪ್ಪಿನ ಮುದುಕನಾಗುವ ವರೆಗೆ ಬದುಕಿದ ಕಾರ್ಲೈಲ್ ಮಕ್ಕಳಿಲ್ಲದೇ ಗತಿಸಿದ. ಸಕಲವನ್ನೂ ಬ್ರಿಟಿಷ್ ಜನಾಂಗಕ್ಕೆ ತ್ಯಾಗ ಮಾಡಿದ್ದಾನೆ. ರಾಷ್ಟ್ರೀಯ ಮರ್ಯಾದೆ ಮರ್ಷಾಶನಗಳ ನೀಡಿಕೆಯ ಬಗ್ಗೆ ಬ್ರಿಟಿಷ್ ಪ್ರಧಾನಿಯೊಂದಿಗೆ ನಡೆದ ಪತ್ರವ್ಯವಹಾರ ಸಾಹಿತಿಯ ಸ್ಥಾನವನ್ನು ಮೇಲೊಯ್ಯುತ್ತದೆ. ಹಣ್ಣಾದ ಮುದುಕ ಕಾರ್ಲೈಲ್ ಶರಣತ್ವವನ್ನಪ್ಪಿದ ತೂಗುವ ಆರಾಮಕುರ್ಚಿಯನ್ನು

ನೋಡಿದಾಗ ಧನ್ಯತೆಯೆನಿಸುತ್ತದೆ. ಹಳೆಗಾಲದ ಅತ್ಯುತ್ತಮ ಗದ್ಯ ಲೇಖಕನೆಂದು ಹೆಸರು ಪಡೆದ ಕಾರ್ಲೈಲ್‌ಗೆ ಶಬ್ದವೆಂದರೆ ಆಗುತ್ತಿರಲಿಲ್ಲ. ಮೂರನೆಯ ಅಂತಸ್ತಿನಲ್ಲಿ ಆದಷ್ಟು ಶಬ್ದರಹಿತವಾಗಿರುವಂತೆ ಏರ್ಪಡಿಸಿಕೊಂಡ ಕೊಠಡಿಯಲ್ಲಿ ಕಾರ್ಲೈಲ್ ಲೇಖನ ವ್ಯವಸಾಯ ನಡೆಸಿದ್ದ. ಇದೊಂದು ಭಾವಲೋಕ. ಆ ಮಹನೀಯ ಉಪಯೋಗಿಸಿದ್ದ ಕುರ್ಚಿ, ಕತ್ತಿ, ಕತ್ತರಿ, ಸಲಿಕೆ, ಗುದ್ದಲಿ, ಕೊಡಲಿ, ಎಲ್ಲಕ್ಕೂ ಮಹಿಮೆ ಬಂದಿತ್ತು. ಮಹಾತ್ಮರನ್ನು ಮುಕುಟದಲ್ಲಿ ಹೊತ್ತ ಮೆಟ್ಟಿಗೂ ಮಹಿಮೆ ಬಂದಿತ್ತು. ಎಲ್ಲರನ್ನೂ ಮೀರಿಸಿ ಕಾಲಾಂತರದಲ್ಲಿ ಜನಮನವನ್ನು ಸೆರೆಹಿಡಿಯಬಲ್ಲ ಶಕ್ತಿ ಸಾಹಿತಿ ಮತ್ತು ಕಲಾವಿದರಿಗೆ ಸಾಧ್ಯ. ಕೋಟ್ಯಾವಧಿ ಚಕ್ರವರ್ತಿಗಳು ಕಾಳಿದಾಸನ ಮುಂದೆ ಅಳಿದುಹೋದರು. ಕವಿ ಅಮರನಾಗಿದ್ದಾನೆ. ಸಾರ್ವಕಾಲಿಕ ಜನರ ಗೌರವಕ್ಕೆ ಪಾತ್ರನಾಗಿದ್ದಾನೆ.

ಟ್ರಾಫಾಲ್ಗರ್ ಚೌಕದಲ್ಲಿರುವ ರಾಷ್ಟ್ರೀಯ ಚಿತ್ರಶಾಲೆ ಸಮುದ್ರದಷ್ಟು ವಿಶಾಲವಾಗಿದೆ. ಯೂರೋಪಿನ ಎಲ್ಲೆಡೆಯ ವರ್ಣಶಿಲ್ಪಿಗಳ ಅಸಂಖ್ಯ ಕಲಾಕೃತಿಗಳು ಈ ಸಂಗ್ರಹದಲ್ಲಿವೆ. ಎಲ್ಲ ಸಂಪ್ರದಾಯದ ಮೇಲ್ತರಗತಿಯ ಕಲಾಕೃತಿಗಳು ಇಲ್ಲಿವೆ. ಆರುನೂರಕ್ಕೂ ಮಿಕ್ಕಿ ಸಾಟಿ ಇಲ್ಲದ ಕಲಾಕೃತಿಗಳೆಂದು ಹೆಸರಿಸಬಹುದಾದವು ಇವೆ. ನೋಡುತ್ತಾ ನೋಡುತ್ತಾ ಕಾಲು ಸೋಲುತ್ತವೆ. ಒಬ್ಬ ಕಲಾವಿದನನ್ನಾಗಲೀ ಒಂದು ಪಂಥವನ್ನಾಗಲೀ ಆರಿಸಿಕೊಂಡು ಚಿತ್ರಗಳನ್ನು ನೋಡಿದರೆ ತೃಪ್ತಿಯಾಗುತ್ತದೆ. ಇಲ್ಲವಾದರೆ ಧೀರ ಗಂಭೀರ ಮುನ್ನೀರ ಮುಂದೆ ನಿಂತ ಹೃದಸಂತೆ ಆಗುತ್ತದೆ. ಟವರ್ ಆಫ್ ಲಂಡನ್ ಪುರಾತನ ಕಾಲದ ಪಟ್ಟಣ ಕೋಟೆಯ ಪ್ರಮುಖವಾದ ಭಾಗ. ಶಿಥಿಲವಾಗಿದ್ದರೂ ಸುಸಜ್ಜಿತಗೊಳಿಸಲಾಗಿದೆ. ಇಲ್ಲಿಯ ಒಂದು ಭಾಗದಲ್ಲಿ ರಾಜಾಭರಣಗಳನ್ನು ಭದ್ರಗೊಳಿಸಲಾಗಿದೆ. ಬ್ರಿಟಿಷ್ ಕಿರೀಟ–ಮಣಿಯಾದ ಭಾರತೀಯ ಕೊಹಿನೂರ್ ಇಲ್ಲಿ ಸಿಗುತ್ತದೆ. ಬಕಿಂಗ್ ಹ್ಯಾಂ ಅರಮನೆ ರಾಜಬಿಡಾರವಾದ್ದರಿಂದ ಯಾರಿಗೂ ಪ್ರವೇಶವಿಲ್ಲ. ಆದರೆ ಪ್ರತಿನಿತ್ಯ ಹನ್ನೊಂದು ಗಂಟೆಗೆ ನಡೆಯುವ ರಕ್ಷಕದಳದ ಬದಲಾವಣೆಗೆ ಸಾವಿರಾರು ಜನ ಸೇರಿರುತ್ತಾರೆ. ರಂಗುರಂಗಿನ ಪೋಷಾಕು ಧರಿಸಿದ ರಕ್ಷಕದಳದವರ

ಈ ಬದಲಾವಣೆ ಬಹುಕಾಲದಿಂದ ಜನರನ್ನು ಆಕರ್ಷಿಸಿದೆ, ಇದರಂತೆ ಸಾಮ್ರಾಜ್ಞಿಯ ಅಶ್ವದಳದ ಬದಲಾವಣೆ ಕೂಡ ಚಂದವಾಗುತ್ತದೆ. ಕ್ವೀನ್ಸ್ ಗ್ಯಾಲರಿಯಲ್ಲಿ ಪ್ರಸಿದ್ಧ ಕಲಾವಿದ ಲಿಯೊನಾರ್ಡೊ ಡ ವಿಂಚಿಯ ಅಪ್ರಕಟಿತ ಕಲಾಪುಸ್ತಕದ ಪ್ರದರ್ಶನವಿದೆ. ಡ ವಿಂಚಿಯ ಬಹುಮುಖ ಪ್ರತಿಭೆಯ ಪ್ರಖರ ಪ್ರದರ್ಶನವಿದು. ಪ್ರಾಣಿಶಾಸ್ತ್ರದ ಅಭ್ಯಾಸ, ಮನುಷ್ಯ ದೇಹಶಾಸ್ತ್ರದ ಅಭ್ಯಾಸದಿಂದ ಮೊದಲ್ಗೊಂಡು ಪ್ರಾಣಿಗಳ ಚಲನವಲನದ ಸೂಕ್ಷ್ಮತಮ ಅಭ್ಯಾಸವನ್ನು ಲಿಯೊನಾರ್ಡೊ ಮಾಡಿದುದು ಇಲ್ಲಿದೆ. ಅಲಕ್ಷಿಸಬಹುದಾದ ಅನೇಕ ಅಮೂಲ್ಯ ಘಟನೆ ಮತ್ತು ಚಲನೆಗಳನ್ನು ಡ ವಿಂಚಿ ಅಭ್ಯಾಸ ಮಾಡಿರುವ ರೀತಿ ಯಾವುದೇ ಕಲಾವಿದನಿಗೆ ದಾರಿ ದೀಪವಾಗಬಲ್ಲದು.

ಇಲ್ಲಿಯ ಪ್ರವಾಸೀ ಕಂಪೆನಿಯ ಮೂಲಕ ಒಂದು ದಿನದ ಆಕ್ಸ್‌ಫರ್ಡ್ ಮತ್ತು ಷೇಕ್ಸ್‌ಪಿಯರ್ ಹಳ್ಳಿಯ ಪ್ರವಾಸ ಕೈಗೊಂಡೆವು. ಅತಿ ಹಳೆಯ ವಿಶ್ವವಿದ್ಯಾಲಯವಾದ ಆಕ್ಸ್‌ಫರ್ಡ್, ಹಳ್ಳಿಯ ಪೇಟೆ ಪೇಟೆಗಳಲ್ಲಿ ವಿಸ್ತರಿಸಿದೆ. ಮೊಟ್ಟಮೊದಲನೆಯ ಕಾಲೇಜಾದ ಕ್ರೈಸ್ತ ಕಾಲೇಜುಗಳನ್ನು ಸಂದರ್ಶಿಸಿದೆವು. ಪುರಾತನ ಕಟ್ಟಡಗಳನ್ನು ಜೀವಂತವಾಗಿಟ್ಟುಕೊಂಡು ಅವರು ಉಪಯೋಗಿಸುತ್ತಿರುವ ರೀತಿ ನಿಜಕ್ಕೂ ಅನುಕರಣೀಯ. ಮೊಗಲ ಅರಸು ಅಕಬರ ಕಟ್ಟಿದ ಫತೇಪುರ ಸಿಕ್ರಿಯನ್ನು ಸರಿಯಾಗಿ ಬಳಸಿದರೆ ಒಂದು ಪೂರಾ ರೆಸಿಡೆನ್ಶಿಯಲ್ ವಿಶ್ವವಿದ್ಯಾಲಯವನ್ನು ಬೆಳೆಸಬಹುದು. ಆಕ್ಸ್‌ಫರ್ಡ್ ಹಳ್ಳಿಯಂತಿದೆ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಆಕರ್ಷಣೀಯ ಕಟ್ಟಡಗಳನ್ನು ಹೊಂದಿಲ್ಲ. ಆದರೆ ವಿಶ್ವದ ಮೂಲೆಮೂಲೆಯ ಪ್ರತಿಭಾವಂತ ವಿದ್ಯಾರ್ಥಿಗಳು ಇಲ್ಲಿಗೆ ಧಾವಿಸಲು ಪ್ರಯತ್ನಿಸುತ್ತಾರೆ, ಈ ವಾತಾವರಣ ಪರಮ ಪವಿತ್ರವಾದ ಜ್ಞಾನಸಾನ್ನಿಧ್ಯದಿಂದ ಹೊರಸೂಸುತ್ತದೆ. ಇಲ್ಲಿಂದ ಷೇಕ್ಸ್‌ಪಿಯರ್ ಹುಟ್ಟಿಬೆಳೆದ ಹಳ್ಳಿ ಸ್ಟ್ರಾಟ್‌ಫರ್ಡ್-ಆನ್-ಏವನ್‌ಗೆ ತೆರಳಿದೆವು. ಏವನ್ ನದಿಯ ದಂಡೆಯ ಮೇಲಿನ ಸ್ಟ್ರಾಟ್‌ಫರ್ಡ್ ಹಳ್ಳಿ ಅನೇಕರಿಗೆ ಸ್ಫೂರ್ತಿಸ್ಥಾನ. ಇಲ್ಲಿಯ ಜನ ಇತರರ ನೆರವು ಪಡೆದು ಷೇಕ್ಸ್‌ಪಿಯರ್ ಟ್ರಸ್ಟ್ ಸ್ಥಾಪಿಸಿ ಅವನು ಜನಿಸಿದ ಮನೆ, ಅವನು ಬೆಳೆದ ಮನೆ, ಆತನ ಪ್ರಿಯತಮೆಯ ಮನೆ ಇವುಗಳನ್ನು ಖರೀದಿಸಿ ಮೊದಲಿನಂತೆ ಅಳವಡಿಸಿ

ಸ್ಮಾರಕಗಳಂತೆ ನಡೆಸಿಕೊಂಡು ಬರುತ್ತಿದ್ದಾರೆ. ಈ ಊರಿನ ಹೈದರು ಷೇಕ್ಸ್‌ಪಿಯರನ ನಾಟಕಗಳನ್ನು ಕಲಿತು ಪ್ರಪಂಚದಾದ್ಯಂತ ಪ್ರದರ್ಶಿಸಿ ಹೆಸರು ಗಳಿಸಿದ್ದಾರೆ. ಪ್ರತಿ ವಸಂತ ಕಾಲದಲ್ಲಿ ಇಲ್ಲಿಯ ಷೇಕ್ಸ್‌ಪಿಯರ್ ರಂಗ ಮಂದಿರದಲ್ಲಿ ಷೇಕ್ಸ್‌ಪಿಯರ್ ನಾಟಕೋತ್ಸವ ನಡೆಸುತ್ತಾರೆ. ಹಳ್ಳಿಯ ಪ್ರತಿಯೊಂದು ಪ್ರಮುಖ ಸ್ಥಳಗಳನ್ನು ಷೇಕ್ಸ್‌ಪಿಯರ್ ಆಕ್ರಮಿಸಿದ್ದಾನೆ. ಆವನ ಸ್ನೇಹಿತರ ಮನೆ, ವೈದ್ಯರ ಮನೆ ಎಲ್ಲವೂ ಸ್ಮಾರಕಗಳಾಗಿವೆ. ಷೇಕ್ಸ್‌ಪಿಯರನ ಬಗ್ಗೆ ಯಾವುದೇ ವಾದವಿವಾದವನ್ನು ಒಪ್ಪಲು ಈ ಜನ ಸಿದ್ಧರಿಲ್ಲ. ಷೇಕ್ಸ್‌ಪಿಯರನು ಜನಿಸಿದ ಮನೆಯಲ್ಲಿ ಅವನು ಮಗುವಾಗಿದ್ದಾಗ ಮಲಗಿದ ತೊಟ್ಟಿಲು, ಅವನ ತಾಯಿಯ ಅಡುಗೆ ಮನೆ ಇತ್ಯಾದಿ ಅವೇ ವಸ್ತುಗಳಾಗಿಲ್ಲದಿದ್ದರೂ ಸಮಕಾಲೀನ ಉಪಯೋಗದ ವಸ್ತುಗಳಂತೆ ತೋರುತ್ತವೆ. ಷೇಕ್ಸ್‌ಪಿಯರ್ ಮತ್ತು ಅವನ ಜೀವನ ಸಾಧನೆಗಳ ಬಗ್ಗೆ ಕೆಲ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಆತನ ವಿಚಾರಗಳನ್ನು ಕವನಗಳನ್ನು, ಆಣಿಮುತ್ತುಗಳನ್ನು ಪ್ರಕಟಿಸಿದ್ದಾರೆ. ಇವರು ಪ್ರಕಟಿಸುವ ಕಾಣಿಕೆಯ ವಸ್ತುಗಳು ಕೂಡಾ ತುಂಬಾ ಚೆನ್ನಾಗಿವೆ. ಈ ಕೆಲಸವನ್ನು ನಮ್ಮ ಅನೇಕ ಪುರಾತನ ಕವಿಗಳ ಬಗ್ಗೆ ಮಾಡಬೇಕೆಂದೆನಿಸುತ್ತದೆ.

ಇಲ್ಲಿಗೆ ಹತ್ತಿರದಲ್ಲಿಯೇ ಇರುವ ಬ್ರಿಟಿಷ್ ಆಳರಸರ ವಾರ್‌ವಿಕ್ ಅರಮನೆಗೆ ತೆರಳಿದೆವು. ಇದೊಂದು ಪುರಾತನ ಅರಮನೆ. ಏವನ್ ನದಿಯ ದಂಡೆಯ ಮೇಲೆ ಸುಭದ್ರ ಕೋಟೆಯ ಆವರಣದಲ್ಲಿ ರಚಿಸಲ್ಪಟ್ಟಿರುವ ಈ ಅರಮನೆ ಬ್ರಿಟಿಷ್ ವಾಸ್ತುಶಿಲ್ಪದ ಉತ್ತಮ ಉದಾಹರಣೆಯಾಗಿದೆ. ಸುತ್ತಲೂ ನೂರಾರು ಎಕರೆ ಜಮೀನನ್ನು ಆಕರ್ಷಕ ತೋಟವಾಗಿ ಪರಿವರ್ತಿಸಿದ್ದಾರೆ. ಈ ತೋಟದಲ್ಲಿ ಅನೇಕ ಪಕ್ಷಿಗಳೂ ನವಿಲುಗಳೂ ಸ್ವತಂತ್ರವಾಗಿ ಜೀವಿಸುತ್ತವೆ. ಬಹು ರಮ್ಯವಾದ ವಾತಾವರಣ. ಈ ಅರಮನೆಯ ಒಳಗಡೆ ಸುಸಜ್ಜಿತವಾಗಿದೆ. ಹಿಂದೆ ಈ ರಾಜವಂಶದಲ್ಲಿ ಸೋದರರಿಬ್ಬರು ಸಿಂಹಾಸನಕ್ಕೆ ಪೈಪೋಟಿ ಮಾಡಿ ಒಬ್ಬನ ಹತ್ಯೆ ನಡೆಯಿತಂತೆ. ಆತನ ಪ್ರೇತಾತ್ಮ ಇಂದಿಗೂ ಈ ಅರಮನೆಯಲ್ಲಿ ತಡಕಾಡುತ್ತಿದೆಯಂತೆ. ಅನಿವಾರ್ಯವೆನಿಸಿದರೆ ಅಥವಾ ಬದಲಾವಣೆಗೆಂದು ರಾಜಕುಮಾರರಾಗಲೀ ಕುಮರಿಯರಾಗಲೀ ಇಲ್ಲಿ ವಾಸಿಸುವು

ದಿತ್ತು. ಆದರೆ ಈಗ ಇದು ಪ್ರದರ್ಶನ ಮಂದಿರ ಮಾತ್ರ ಆಗಿದೆ. ಪ್ರತಿಯೊಂದು ರಾಜವಂಶದಲ್ಲಿ ರಕ್ತಧಾರೆ ನಡೆದು ಸಿಂಹಾಸನಗಳು ಬೆಳಗಿವೆ. ಪ್ರತಿಯೊಂದು ಅರಮನೆಯಲ್ಲಿ ಒಂದಾದರೂ ಪ್ರೇತಾತ್ಮ ಸೇಡಿಗಾಗಿ ತಡ ಕಾಡುತ್ತಿದೆ. ಇದು ಅರಸೊತ್ತಿಗೆಯ ಸೌಭಾಗ್ಯ.

ಲಂಡನ್‌ನಲ್ಲಿ ತಿರುಗಾಡುವುದು ಅತಿ ಸುಲಭ. ನಗರದ ತಳಭಾಗದಲ್ಲೆಲ್ಲಾ ರೈಲು ರಸ್ತೆಗಳಿವೆ. ಪ್ರತಿ ರೈಲು ನಿಲ್ದಾಣದಲ್ಲಿ ವಿಶಾಲವಾದ ನಕ್ಷೆಗಳಿರುತ್ತವೆ. ಯಾವ ಲೈನಿಗೆ ಏರಬೇಕು, ಎಲ್ಲಿ ಬದಲಾವಣೆ ಮಾಡಬೇಕು ಎಂಬುದನ್ನು ಕಂಡುಕೊಳ್ಳಲು ರೈಲಿನ ಪೆಟ್ಟಿಗೆಯಲ್ಲಿ ಕೂಡಾ ನಕ್ಷೆಗಳನ್ನು ಅಂಟಿಸಿರುತ್ತಾರೆ. ಎರಡು ಷಿಲ್ಲಿಂಗ್ ನೀಡಿ ಟಿಕೆಟ್ ಕೊಂಡರೆ ಎಷ್ಟು ದೂರಕ್ಕಾದರೂ ಪಯಣಿಸಬಹುದು. ಇಲ್ಲಿ ಟಿಕೆಟ್ ಕೊಡುವವರು ಕೂಡಾ ಮಾರ್ಗದರ್ಶನ ಮಾಡುತ್ತಾರೆ. ಎಲ್ಲಕ್ಕಿಂತ ಸುಲಭವಾದ ಮತ್ತು ಅನುಕೂಲವಾದ ಪ್ರಯಾಣ ಸೌಕರ್ಯ ಈ ಸಬ್-ವೇ(sub-way).

ಲಂಡನ್ ನಗರ ಪ್ರಪಂಚದ ಹಿಪ್ಪಿಗಳ ಕೇಂದ್ರವೆನಿಸಿದೆ. ಹಿಪ್ಪಿಗಳ ತತ್ವ ಸದ್ಯಕ್ಕೇನೋ ಓಡುವ ವಾಹನಕ್ಕೆ ಹಾಕಿದ ತಡೆಯಂತೆ ಇದೆ. ಪಾಶ್ಚಾತ್ಯ ಜೀವನದಲ್ಲಿ ದುಡ್ಡಿಗೆ ವಿಪರೀತ ಬೆಲೆ ಬಂದು, ದುಡ್ಡೇ ನಿನ್ನ ಸಮಾನರಾರು ? ಎಂದು ಮಾನವ ತನ್ನ ಮತ್ತು ತನ್ನವರ ಜೀವನವನ್ನು ಅಲಕ್ಷಿಸಿದ. ಗಂಡ ಹೆಂಡತಿ ಈರ್ವರೂ ಬೆಳಗಿನಲ್ಲಿ ಕೆಲಸಕ್ಕೆ ಹೊರಡುತ್ತಾರೆ. ಸಾಯಂಕಾಲ ಮನೆ ಸೇರಿದಾಗ ಅನೇಕರಿಗೆ ಮಕ್ಕಳ ಒಡನಾಟ ಅಭ್ಯಂತರವೆನಿಸುತ್ತದೆ. ಗಾರ್ಹಸ್ಥ್ಯ ಜೀವನದ ಆಕರ್ಷಣೆ ಇರುವವರಿಗೆ ಮಕ್ಕಳೊಡನೆ ಸಮೀಪದ ಸಂಪರ್ಕವೇ ದೊರೆಯುವುದಿಲ್ಲ. ದಾದಿಗಳ ಆಶ್ರಯದಲ್ಲಿ ಮಕ್ಕಳು ಬೆಳೆದು ದೊಡ್ಡವರಾಗುತ್ತಾರೆ. ಹದಿನೆಂಟರ ಹರೆಯ ಬರುತ್ತಲೇ ಮಗನು ಸ್ವತಂತ್ರ ಜೀವನದ ಬಿಸಿಲ್ಗುದುರೆ ಏರಿ ತಂದೆತಾಯಿಗಳಿಂದ ದೂರವಾಗುತ್ತಾನೆ. ಹಿಪ್ಪಿಗಳು ಇದೆಲ್ಲವನ್ನೂ ಸವಾಲು ಮಾಡುತ್ತಾರೆ ? ಈ ರೀತಿಯ ಗಾಣದೆತ್ತಿನ ದುಡಿಮೆ ಜೀವಿಸಲು ಬೇಕೇಬೇಕೇ ? ಒಡಲಲ್ಲಿಲ್ಲದ ಸಭ್ಯತೆಯನ್ನು ಹೊರಗೆ ಮೆರೆಸುವುದು, ತಾಯಿತಂದೆ ತಮ್ಮ ಸ್ವಾಭಾವಿಕ ಅಂತಃಕರಣದಿಂದ ಮಕ್ಕಳನ್ನು ದುಡಿಮೆಗಾಗಿ ದೂರಮಾಡುವುದು, ಇದು

ಅವಮಾನುಷ. ಮನುಷ್ಯ ಪ್ರೇಮಿಸಲು ಅರಿಯಬೇಕು. ಆನಂದವಾಗಿರಲು ಆರಾಮವಾಗಿರಲು ನೆನೆಯಬೇಕು. ದುಡ್ಡಿಲ್ಲದೆ ಬಾಳು ಸಾಧ್ಯ. ಮನೆಯಿಲ್ಲದೆ ಬದುಕಬಹುದು. ಬರಿಗಾಲಿನಿಂದ ನಡೆಯಬಹುದು. ಕಾಸಿಲ್ಲದೆ ಕಾಶೀಯಾತ್ರೆ ಮಾಡಬಹುದು. ಈ ರೀತಿ ಅನೇಕ ತತ್ವಗಳನ್ನಪ್ಪಿಕೊಂಡು ಜನಿಸಿದ್ದು ಹಿಪ್ಪಿ ದರ್ಶನ. ಈಗ ಲಂಡನ್ನಿನಿಂದ ಈ ಹಂಬಲದ ರೋಗ ಪ್ರಪಂಚದ ಎಲ್ಲ ಕಡೆ ಪಸರಿಸತೊಡಗಿದೆ. ಅಮೇರಿಕೆಯಲ್ಲಿ ಇದರ ವಿಶ್ವರೂಪವನ್ನು ಕಾಣ ಬಹುದು. ಲಂಡನ್ ನಗರದ ಬೀದಿಬೀದಿಗಳಲ್ಲಿ ಉದ್ಯಾನವನಗಳಲ್ಲಿ ಸಾರ್ವಜನಿಕ ಕಟ್ಟಡಗಳ ಮೆಟ್ಟಲುಗಳ ಮೇಲೆ ಸಾಕಷ್ಟು ಹಿಪ್ಪಿ ಜನರನ್ನು ಕಾಣಬಹುದು. ಇವರಿಗೆ ಹಿಂದೂ ಮತ್ತು ಚೀನಿ ವೇದಾಂತಗಳ ಮೇಲೆ ಹುಚ್ಚು ಪ್ರೀತಿ. ಲಂಡನ್ ರಸ್ತೆಗಳಲ್ಲಿ ಸಿಕ್ಕಾಪಟ್ಟೆ ಕುಣಿದುಕುಣಿದು ಕುಪ್ಪಳಿಸುತ್ತಾ ಹಾಡುವ ಮುದುಕರನ್ನು ಕಾಣಬಹುದು.

ಕಡೆಯದಾಗಿ ಇಲ್ಲಿಯ ಭಾರತೀಯ ರಾಯಭಾರ ಕಛೇರಿಗೆ ಹೋಗಿದ್ದೆವು. ನಾವು ಹೋದ ಸಮಯದಲ್ಲಿ ಕೆಲ ಡಾಕ್ಯುಮೆಂಟರಿ ಚಿತ್ರಗಳನ್ನು ತೋರಿಸುತ್ತಿದ್ದರು. ನೋಡುತ್ತಾ ಕುಳಿತ ಜನರ ಪೈಕಿ ವಿದೇಶಿಯರೇ ಬಹಳಷ್ಟು ಜನರಿದ್ದರು. ಅಲ್ಲಿ ತೋರಿಸಿದ ಭಾರತೀಯ ನೃತ್ಯಕಲೆಯ ಮೇಲಿನ ಡಾಕ್ಯುಮೆಂಟರಿಯನ್ನು ನಾವಂತೂ ನೋಡಲಾಗಲಿಲ್ಲ. ಅತೀ ಹಳೆಯ ಮತ್ತು ಕಲೆ ಅರಿಯದ, ಕಥಾನಕವೇ ಇಲ್ಲದ ಈ ಡಾಕ್ಯುಮೆಂಟರಿಯನ್ನು ನಮ್ಮಲ್ಲಿಯೇ ತೋರಿಸಬಾರದು. ಅದನ್ನು ವಿಶೇಷ ಸಮಾರಂಭವಿಲ್ಲದೆ ಸಮುದ್ರಕ್ಕೆ ಅರ್ಪಿಸಬೇಕು. ಚಲನಚಿತ್ರ ಕಲೆ ತುಂಬಾ ಮುಂದುವರಿದಿರುವ ಪಶ್ಚಿಮ ರಾಷ್ಟ್ರಗಳಲ್ಲಿ ನಮ್ಮ ದೇಶದ ಕಲೆಯ ಬಗ್ಗೆ ತೋರಿಸಲು ಅಸಂಖ್ಯವಾದ ಅತ್ಯುತ್ತಮ ಡಾಕ್ಯುಮೆಂಟರಿಗಳಿವೆ. ಅವನ್ನೇಕೆ ಲಕ್ಷ್ಯಗೊಟ್ಟು ಆರಿಸಬಾರದು? ನಾವು ತೋರಿಸದೇ ಇದ್ದರೆ ಅಪರಾಧವೇನೂ ಇಲ್ಲ. ಆದರೆ ಅಪಚಾರ ಮಾಡುವ ಇಂತಹದನ್ನು ತೋರಿಸಲೇ ಬಾರದು.

ಲಂಡನ್ ಇಂದು ಕಾಮನ್‌ವೆಲ್ತ್ ದೇಶವಾಸಿಗಳ ನಗರ. ಇಂಗ್ಲಿಷರು ಉತ್ತಮೋತ್ತಮ ಜೀವನದ ಆಸೆಯಿಂದ ಕೆನಡಾ ಮತ್ತು ಅಮೇರಿಕೆಗೆ ಅಥವಾ ಆಸ್ಟ್ರೇಲಿಯಕ್ಕೆ ವಲಸೆ ಹೋಗುತ್ತಾರೆ. ಕಾಮನ್‌ವೆಲ್ತ್‌ಗೆ ಸೇರಿದ ಏಷ್ಯಾ ಮತ್ತು ಆಫ್ರಿಕೆಯ ಅನೇಕ ರಾಷ್ಟ್ರೀಕರು ಉತ್ತಮ ಬದುಕಿನ ಅನ್ವೇಷಣೆ

ಯಲ್ಲಿ ಲಂಡನ್ ಸೇರುತ್ತಾರೆ. ಜೀವನದ ಪ್ರತಿಯೊಂದು ಹವ್ಯಾಸದಲ್ಲಿ ಮತ್ತು ಪ್ರತಿಯೊಂದು ಸ್ತರದಲ್ಲಿ ಏಷ್ಯನ್ ಮತ್ತು ಆಫ್ರಿಕನ್ ಜನರನ್ನು ಕಾಣಬಹುದು. ವಿಶೇಷತಃ ಸೇವೆಗಳನ್ನೆಲ್ಲಾ (ಡ್ರೈವರ್, ಸ್ವೀಪರ್ , ಕ್ಲೀನರ್, ಮೆಕ್ಯಾನಿಕ್, ವೇಟರ್ ಇತ್ಯಾದಿ) ಬ್ರಿಟಿಷೇತರರೇ ನಡೆಸುತ್ತಾರೆ. ವೈದ್ಯಕೀಯ ವೃತ್ತಿಯಲ್ಲಿ ಭಾರತೀಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ರಾಜಕೀಯ ರಂಗ ಮಾತ್ರ ಇಂಗ್ಲಿಷರ ವಶದಲ್ಲಿದೆ. ಒಂದು ದೇಶದ ಭವಿಷ್ಯದಲ್ಲಿ ಬರೆದಿರುವುದನ್ನು ಕಂಡರಿದು ಹೇಳುವುದು ಯಾರಿಂದಲೂ ಸಾಧ್ಯವಿಲ್ಲ. ಇಂಗ್ಲೆಂಡ್ ಆಕರ್ಷಕವಾದ ಸುಂದರ ನಾಡು. ಒಳನಾಡು ಸಾಟಿಯಿಲ್ಲದೆ ಸೌಂದರ್ಯದಿಂದ ಕಂಗೊಳಿಸುತ್ತದೆ. ಕಣ್ಣು ಕಾಣುವವರೆಗೆ ಹಸಿರೋ ಹಸಿರು. ರಸ್ತೆಯ ಬದಿಗೆ ವಾಹನವನ್ನು ಅಕ್ಕರೆಯಿಂದ ಮುಚ್ಚಿ ಹಿಡಿವಷ್ಟು ವೃಕ್ಷರಾಜಿ. ಮೈದಾನದ ಒಳಗೆಲ್ಲಾ ಬಣ್ಣ ಬಣ್ಣದ ಹೂಹಾಸು. ಹಳ್ಳಿಗೆ ಮೇಲುಹೊದಿಕೆಯಾಗಿ ನದಿಗೆ ಆವರಣ ವಾಗಿ ಕೈಬೀಸಿ ಕರೆವ ಮರಗಳು. ಅನೇಕ ಶತಮಾನಗಳ ಜ್ವಲಂತ ಇತಿಹಾಸದ ಆಧಾರದ ಮೇಲೆ ಜನತೆಯ ಬಾಳು ಗಂಭೀರಮಯ. ಅಭಿಮಾನಾಸ್ಪದವಾದ ನಾಡು ಇಂಗ್ಲೆಂಡ್.

ಕೆ. ಎಲ್. ಎಂ. ರಾಯಲ್ ಡಚ್ ವಿಮಾನ ಸಾರಿಗೆಯಲ್ಲಿ ಲಂಡನ್ ಬಿಡುವಾಗ ಸ್ವದೇಶವನ್ನು ಬಿಟ್ಟಷ್ಟು ಸಂತಾಪವೆನಿಸಿತು.

೮ ಮಾಂಟ್ರಿಯಾಲ್ : ಫ್ರೆಂಚ್ ಕೆನಡಾ

ಲಂಡನ್ನಿನಿಂದ ನೇರವಾಗಿ ಮಾಂಟ್ರಿಯಾಲ್‌ಗೆ ನಮಗೆ ಜಾಗೆ ದೊರಕದ ಕಾರಣ ಆಮ್‌ಸ್ಟರ್‌ಡ್ಯಾಂಗೆ ಹೋಗಿ ಅಲ್ಲಿಂದ ಮಾಂಟ್ರಿಯಾಲ್‌ಗೆ ನೇರವಾದ ಉಡ್ಡಾಣ ಮಾಡಿದೆವು. ಪ್ರಪಂಚದ ಪ್ರಸಿದ್ಧ ವಿಮಾನನಿಲ್ದಾಣಗಳ ಪೈಕಿ ಆಕರ್ಷಕವಾದುದು ಆಮ್‌ಸ್ಟರ್‌ಡ್ಯಾಂ. ಇಲ್ಲಿ ಇರುವಷ್ಟು ಬೃಹತ್ತಾದ ತೆರಿಗೆರಹಿತ ಅಂಗಡಿ ಇನ್ನೆಲ್ಲಿಯೂ ಇಲ್ಲ. ನಮಗಿಲ್ಲಿ ಒಂದು ತಾಸಿಗಿಂತ ಹೆಚ್ಚು ಸಮಯವಿದ್ದುದರಿಂದ ನಾವು ಇಲ್ಲಿಯ ಕ್ಯಾಮರಾ ಅಂಗಡಿಗೆ ಹೋಗಿ (ಮೂವಿ ಕ್ಯಾಮರಾ ೮ ಎಂ. ಎಂ.) ಎಂಟು ಮಿಲಿಮೀಟರಿನ ಒಂದು ಚಲನ ಚಿತ್ರ ಕ್ಯಾಮರಾ ಕೊಂಡುಕೊಂಡೆವು.

ಈ ಷಿಪೋಲ್ (SCHIPHOL) ನಿಲ್ದಾಣದಲ್ಲಿ ಒಂದು ತಾಸಿನ ವಾಸ್ತವ್ಯದಲ್ಲಿ ಬಹಳ ತಮಾಷೆ ನಡೆಯಿತು. ಹಾಲೆಂಡ್ ದೇಶದಲ್ಲಿ ಪೋರ್ನೋಗ್ರಫಿಗೆ (ಕಾಮಸಾಹಿತ್ಯ) ನಿರ್ಬಂಧವಿಲ್ಲ. ಕಾಮಶಾಸ್ತ್ರದ ಅನಂತ ಅಸಹ್ಯ ಚಿತ್ರಮಯ ಸಾಹಿತ್ಯ ಇಲ್ಲಿಂದ ಪ್ರಪಂಚದ ಬೇರೆಲ್ಲಾ ಕಡೆ ರಫ್ತಾಗುತ್ತದೆ. ಕಾಮಶಾಸ್ತ್ರದ ಮೃಗಕ್ರೀಡೆಗೆ ಸಂಬಂಧಿಸಿದಂತೆ ಸಿನಿಮಾಗಳು, ಸ್ಲೈಡುಗಳು,

ಪುಸ್ತಕಗಳು ಇತ್ಯಾದಿ ವಿಮಾನ ನಿಲ್ದಾಣದಲ್ಲಿಯೇ ಸಿಗುತ್ತವೆ. ಇವಕ್ಕೆ ವಾಡಿಕೆ ಯಲ್ಲಿ ಬ್ಲೂ ಫಿಲ್ಮ್ ಎಂದು ಕರೆಯಲಾಗುತ್ತದೆ. ಇಂತಹ ಸಿನಿಮಾ ರೀಲುಗಳ ಮೇಲೆ ಶೈಕ್ಷಣಿಕ ಸಿನಿಮಾ ಎಂದು ಬರೆದು ಕಸ್ಟಮ್ಸ್ ಅಧಿಕಾರಿಗಳನ್ನು ವಂಚಿಸಲಾಗುತ್ತದೆ. ಇಲ್ಲಿಯ ಅಂಗಡಿಯವ ನಮಗೆ ದುಂಬಾಲು ಬಿದ್ದಿದ್ದ. ಒಂದೋ ಎರಡೊ ತೆಗೆದುಕೊಳ್ಳಿ. ನಿಮಗೆ ಯಾವ ತರಹದ ಬಾಧೆಯೂ ಬರದಂತೆ ನಾನು ಪ್ಯಾಕ್‌ಮಾಡಿ ಲೇಬಲ್ ಹಾಕಿ ಕಟ್ಟಿಕೊಡುತ್ತೇನೆ ಎಂದು ಹೇಳಿಯೇ ಹೇಳಿದ. ನಾವು ಈಗಾಗಲೇ ಭಾರತೀಯರು ಇಂಥ ವ್ಯವಹಾರ ವನ್ನು ಮಾಡಿ ನಮ್ಮ ದೇಶದ ಮುಖಕ್ಕೆ ಸಾಕಷ್ಟು ಮಸಿ ಬಳಿದಿದ್ದಾರೆ. ಅಂತಹುದರಲ್ಲಿ ನಾವು ಆ ಕೆಲಸ ಮಾಡುವುದು ಬೇಡ ಎಂದು ಆತನೊಡನೆ ವಾದಿಸಿ ಒಪ್ಪಿಸಿದೆವು. ಆದರೆ ಇಂತಹ ಸಾಮಗ್ರಿ ಅನೇಕ ಕಡೆ ನಿಮ್ಮನ್ನು ಅನಿವಾರ್ಯ ಆತಂಕಗಳಿಂದ ಪಾರುಮಾಡುತ್ತದೆಂಬುದು ಭವ್ಯ ಭಾರತ ದೇಶದ ಹೆಬ್ಬಾಗಿಲು ತಲುಪಿದಾಗಲೇ ನನಗೆ ತಿಳಿಯಿತು. ಭಾರತೀಯನ ಸಂಸ್ಕೃತಿ ಮಟ್ಟ ಅನೇಕ ಬಾರಿ ಅಷ್ಟು ಕೆಳಕ್ಕೆ ಇಳಿಯುವುದು ನೋಡಿದಾಗ ಮರು ಗಬೇಕಾಗುತ್ತದೆ.

ಇಲ್ಲಿಂದ ಕೆನಡಾಕ್ಕೆ ನಮ್ಮೊಂದಿಗೆ ಕೆನಡಾ ಫೀಲ್ಡ್ ರೆಜಿಮೆಂಟಿನ ಒಂದು ಗುಂಪು ಪಯಣಿಸಿತು. ಎರಡನೆಯ ಪ್ರಪಂಚ ಸಮರದ ಸಮಯದಲ್ಲಿ ಈ ಕೆನಡಾ ಫೀಲ್ಡ್ ರೆಜಿಮೆಂಟಿನವರು ಆ್ಯಲೀಸ್ ಕಡೆಗೆ ಹೋರಾಟ ನಡೆಸಿದ್ದರು. ಇವರಾರಿಗೂ ಜೀವಸಹಿತ ಮನೆಗೆ ಮರಳುವ ಭರವಸೆ ಇದ್ದಿಲ್ಲ. ಆದರೆ ಅಣುಬಾಂಬ್ ಪ್ರಯೋಗದಿಂದ ಪ್ರಪಂಚ ಸಮರ ಒಮ್ಮೆಲೆ ಕೊನೆಗೊಂಡು ಈ ಜನ ಹೊಸ ಜೀವನದ ಹಮ್ಮಿನಿಂದ ಸ್ವದೇಶಕ್ಕೆ ಮರಳಿದ್ದರು. ಅನಂತರ ಇವರು ಸೈನ್ಯದಿಂದ ಹೊರಬಿದ್ದು ಬದುಕಿನ ಬೇರೆ ಬೇರೆ ರಂಗಗಳಲ್ಲಿ ತಕ್ಕ ಸ್ಥಾನಗಳಲ್ಲಿದ್ದಾರೆ. ಯುದ್ಧ ನಿಷ್ಕ್ರಮಣವಾದ ೨೫ ವರ್ಷಗಳ ನಂತರ ಇವರೆಲ್ಲಾ ಸೇರಿ ಯೂರೋಪಿನ ಬೇರೆ ಬೇರೆ ಕಡೆ ಎರಡು ವಾರಪರ್ಯಂತ ತಿರುಗಾಡಿ ಅನಂತರ ತಮ್ಮ ಬದುಕಿಗೆ ಮರಳುತ್ತಿದ್ದರು. ಇವೆಲ್ಲಾ ಸ್ವಯಂ ಸ್ಫೂರ್ತಿಯಿಂದ ಮತ್ತು ಸ್ವಯಂವೆಚ್ಚದಿಂದ ನಡೆದಿತ್ತು. ಎಂಟು ತಾಸಿನ ದೀರ್ಘ ವಿಮಾನ ಪ್ರವಾಸದಲ್ಲಿ ಈ ಜನರ ಲಘು ಹಾಸ್ಯ ಮತ್ತು ಹಾಡು ಅವಶ್ಯ ವಸ್ತುಗಳೆನಿಸಿದ್ದವು. ಇವರ ಪೈಕಿ ಓರ್ವ ಮಹಿಳೆ ವಿಮಾನದ

ಕಪ್ಪು, ಪ್ಲೇಟ್ ವಗ್ಯೆರೆ ಕಲೆ ಹಾಕುವುದರಲ್ಲಿಯೇ ನಿರತಳಾಗಿದ್ದಳು. ಕೆನಡಾದ ಭೂಮಿ ಕಣ್ಣಿಗೆ ಬಿದ್ದೊಡನೆ ಇವರ ದೇಶಪ್ರೇಮದ ಕೋರಸ್ ಪ್ರಾರಂಭವಾಯಿತು. ನಿದ್ದೆಯು ಮಂಪರಿನಲ್ಲಿದ್ದ ಓರ್ವನಂತೂ ಕಿಟಕಿಯಲ್ಲಿ ಕೆನಡಾವನ್ನು ನೋಡಿ ಓಹ್, ಕೆನಡಾ ಎಂದು ಕನವರಿಸಿದನು.

ಮಾಂಟ್ರಿಯಾಲ್ ಔದ್ಯಮಿಕ ಕೆನಡಾದ ಹೃದಯ. ಹೆಚ್ಚಾಗಿ ಫ್ರೆಂಚ್ ಮಾತನಾಡುವ ನಾಗರಿಕರಿಂದ ನಿಬಿಡವಾದ ಇಲ್ಲಿ ಇಂಗ್ಲಿಷಿಗೆ ಮಹತ್ವ ಕಡಿಮೆ. ಕೆನಡಾ ದೇಶ ಒಂದು ನೂರು ವರ್ಷಗಳ ತನ್ನ ಆಯುಷ್ಯದಲ್ಲಿ ಸಾಕಷ್ಟು ಬಲಗೊಂಡಿದೆ ಎಂಬುದಕ್ಕೆ ಮಾಂಟ್ರಿಯಾಲ್ ಚೇತನಾತ್ಮಕ ಸಾಕ್ಷಿಯಾಗಿದೆ. ಇಲ್ಲಿಯ ಜನರಿಗೆ ಪ್ಯಾರಿಸ್ ಮೇಲೆ ಇಲ್ಲದ ಆಸೆ. ಅಲ್ಲಿಯಂತೆಯೇ ಇಲ್ಲಿ ಬೀದಿಗಳಿಗೆ ಮತ್ತು ಚೌಕಗಳಿಗೆ ಮತ್ತಿತರ ಸಾರ್ವಜನಿಕ ಶಾಲೆಗಳಿಗೆ ಫ್ರೆಂಚ್ ಹೆಸರುಗಳಿವೆ. ಇಲ್ಲಿಯ ಪ್ರಮುಖ ಚರ್ಚ್ ಪ್ಯಾರಿಸ್‌ನ ನಾಟರ್‌ಡ್ಯಾಂ ಎಂದು ಕರೆಯಲ್ಪಡುತ್ತದೆ ಮಾಂಟ್ರಿಯಾಲ್ ಸುಂದರವಾದ ಆಧುನಿಕ ನಗರ. ಇಲ್ಲಿ ಹೊಸತಾಗಿ ರಚಿತವಾಗಿರುವ ಸಬ್-ವೇ (ಭೂಗರ್ಭದ ರೈಲು.) ಅತಿ ನವೀನವೂ ಸೌಂದರ್ಯ ದೃಷ್ಟಿಯಿಂದ ನಡೆಸಲ್ಪಡುವುದೂ ಆಗಿದೆ. ಸಬ್‌ವೇಗೆ ಹೋಗುವ ದಾರಿ, ಸಬ್‌ವೇ ನಿಲ್ದಾಣ, ಸಬ್‌ವೇ ರೈಲು ಎಲ್ಲವೂ ಸ್ಫಟಿಕದಂತೆ ಸ್ವಚ್ಛ. ಇಲ್ಲಿಯ ನಗರ ಸಾರಿಗೆಯ ಇನ್ನೊಂದು ಅನುಕೂಲವೆಂದರೆ ಸಬ್‌ವೇಯಲ್ಲಿ ಟಿಕೆಟ್ ತೆಗೆದುಕೊಂಡು ನಿಮ್ಮ ಗುರಿಯನ್ನು ಬಸ್ ಮೇಲೆ ಮುಟ್ಟಬಹುದು. ಬಸ್‌ನಲ್ಲಿ ಟಿಕೆಟ್ ತೆಗೆದುಕೊಂಡು ಸಬ್‌ವೇಗೆ ಟ್ರಾನ್ಸ್‌ಫರ್ ಕೇಳಬಹುದು. ಒಟ್ಟಾರೆ ನೀವು ಸೇರಬೇಕಾದ ಸ್ಥಳವನ್ನು ಸೇರಲು ಒಂದೇ ಟಿಕೆಟ್‌ನಲ್ಲಿ ಬಸ್ ಮತ್ತು ಸಬ್‌ವೇಗಳ ಸಂಯೋಜನೆ ಮಾಡಿಕೊಳ್ಳಬಹುದು. ಇಲ್ಲಿಯ ಮನೆಗಳ ಶಿಲ್ಪ ಅದ್ಭುತವಾಗಿದೆ. ಎಲ್ಲಾ ಹೊಸ ಹೊಸ ನಮೂನೆಯ ಮನೆಗಳು. ಹಳೆಗಾಲದ ಮಾದರಿಯ ಮನೆಗಳಿಂದ ಹಿಡಿದು ಅತ್ಯಾಧುನಿಕ ಮನೆಗಳವರೆಗೆ ಇಲ್ಲಿ ಕಾಣಬಹುದು. ಇದೀಗ ಅಪಾರ್ಟ್‌ಮೆಂಟ್ ಕಟ್ಟಡಗಳು ಉದಿಸುತ್ತಿವೆ. ಮನೆಗಳನ್ನು ಇಲ್ಲಿಯ ಜನ ತುಂಬಾ ಅಂದವಾಗಿ ಇಟ್ಟಿರುತ್ತಾರೆ. ಮನೆಯ ಸುತ್ತಲೂ ಹುಲ್ಲಿನ ಹಾಸು, ತರತರದ ಗುಲಾಬಿಯ ಗಿಡಗಳು, ಬಳ್ಳಿ ಮರಗಳು ನೋಡಲು ಕಣ್ಣಿಗೊಂದು ಆನಂದಮಯ ವಾತಾವರಣ.

ಇಲ್ಲಿಯ ವ್ಯಾಕ್ಸ್ ಮ್ಯೂಜಿಯಂ (WAX MUSEUM) ಮಹತ್ವದ್ದಾಗಿದೆ. ಕೆನಡಾ ದೇಶದ ಇತಿಹಾಸ ಮತ್ತು ಕ್ರಿಸ್ತೀ ಮತದ ಪ್ರಸಂಗಗಳನ್ನು ಮೇಣದ ಬೊಂಬೆಗಳ ಮೂಲಕ ಪುನಃ ನಿರ್ಮಿಸಿದ್ದಾರೆ. ಕೆನಡಾದಲ್ಲಿ ಫ್ರೆಂಚರ ಪತನ, ಇಂಗ್ಲಿಷರು ಮತ್ತು ರೆಡ್ ಇಂಡಿಯನ್ನರ ಮೈತ್ರಿ, ಕೆನಡಾದ ಪ್ರಮುಖ ಸಂಸ್ಥೆಗಳ ಸ್ಥಾಪನೆ ಇತ್ಯಾದಿ ಪ್ರಸಂಗಗಳನ್ನು ಮನ ಮುಟ್ಟುವಂತೆ ನಿರ್ಮಿಸಿದ್ದಾರೆ. ಬೈಬಲ್ ಕಥಾನಕಗಳು ಕೂಡ ಮರ್ಮಸ್ಪರ್ಶಿಯಾಗಿವೆ. ಆದರೆ ಕೆನಡಿ, ನಿಕ್ಸನ್ ಮತ್ತು ಡಿಗಾಲ್‌ರ ಪ್ರತಿಮೆಗಳು ಚೆನ್ನಾಗಿಲ್ಲ. ಮಾಂಟ್ರೆಯಾಲ್‌ನ ಪ್ರಸಿದ್ಧ ಸಂತನಾದ ಬ್ರದರ್ ಜೋಸೆಫ್‌ನ ಶಿಲ್ಪ ಅಪರೂಪ ಕಾಂತಿಯಿಂದ ಕೂಡಿದೆ. ಈ ಸಂತನ ದೇವಾಲಯ ಮಾಂಟ್ರೆಯಾಲದ ಉನ್ನತ ದಿನ್ನೆಯೊಂದರ ಮೇಲೆ ಕಟ್ಟಲ್ಪಟ್ಟು ವರ್ಷಕ್ಕೊಮ್ಮೆ ಇಲ್ಲಿ ಜಾತ್ರೆ ನಡೆಯುತ್ತದೆ. ನಾವು ಜಾತ್ರೆಯ ಸಮಯಕ್ಕೆ ಇಳಿದಿದ್ದೆವು. ಆದರೆ ಕಳೆದ ಬಾರಿ ಜಾತ್ರೆಯಲ್ಲಿ ಫ್ರೆಂಚ್ ಪ್ರತ್ಯೇಕವಾದಿಗಳ ಗಲಾಟೆಯಲ್ಲಿ ವಿಪರೀತ ದಾಂಧಲೆಯಾಗಿ ವಿಶೇಷ ಆಮಂತ್ರಿತರಾಗಿ ಬಂದಿದ್ದ ಕೆನಡಾದ ಪ್ರಧಾನ ಅಮಾತ್ಯ ಟ್ರುಡೋ ಅವರು ಮನನೊಂದುಕೊಂಡು ಅರ್ಧದಲ್ಲಿಯೇ ರಾಜಧಾನಿಗೆ ಮರಳಿದರಂತೆ. ಈ ಬಾರಿ ವಿಪರೀತ ಪೋಲಿಸ್ ಬಂದೋಬಸ್ತ್ ಇತ್ತು. ಆದರೆ ನಾಲ್ಕಾರು ರಸ್ತೆಗಳಲ್ಲಿ ಮೆರವಣಿಗೆ ಬರುವಾಗ ವಿಪರೀತ ಗಲಾಟೆಯಾಗಿದ್ದನ್ನು ಟೆಲಿವಿಷನ್‌ನಲ್ಲಿ ನೋಡಿದೆವು. ಕಳೆದ ವರ್ಷ ಅಂತರರಾಷ್ಟ್ರೀಯ ಕೇನ್ಸ್ (CANNES) ಚಲನಚಿತ್ರ ಮಹೋತ್ಸವದಲ್ಲಿ ಪ್ರಥಮ ಪ್ರಶಸ್ತಿ ಪಡೆದ 'ಇಫ್' ಎಂಬ ಇಂಗ್ಲಿಷ್ ಚಿತ್ರ ನಡೆಯುತ್ತಿತ್ತು. ಈ ಚಲಚಿತ್ರ ಮಂದಿರ ಪೂರಾ ಭೂಮಿಯ ಒಳಗಡೆ ಇದೆ. ಈ ಮಂದಿರ ಸಬ್‌ವೇ ನಿಲ್ದಾಣಕ್ಕೆ ಸೇರಿದ ಷಾಪಿಂಗ್ ಕೇಂದ್ರದ ಒಂದು ಭಾಗ. ಇದೊಂದು ವಿಚಿತ್ರವಾದ ಚಿತ್ರ. ವಿಶಿಷ್ಟವಾದ ಇಂಗ್ಲಿಷ್ ಪಬ್ಲಿಕ್ ಶಾಲೆಯೊಂದರ ಜೀವನವನ್ನು ಮತ್ತು ಅಲ್ಲಿ ನಿತ್ಯಜೀವನನಲ್ಲಿ ಹಾಸುಹೊಕ್ಕಾಗಿ ನೆಲಸಿರುವ ಹಿಂಸ್ರಕ ವಾತಾವರಣವನ್ನು ಮಾನವನಲ್ಲಿ ಪಶುಸ್ವಭಾವದ ವಿಜೃಂಭಣೆಯನ್ನು ಕೂಲಂಕಷವಾಗಿ ಚಿತ್ರಿಸಲಾಗಿದೆ. ವಿದ್ಯಾರ್ಥಿಗಳು ದಾರಿತಪ್ಪಲು ಅಪ್ರಯೋಜಕ ಗುರುಗಳು ಕೂಡ ಎಷ್ಟು ಜಬ್ದಾರರೆಂಬುದು ಕಣ್ಣಿಗೆಕಟ್ಟುವಂತೆ ಈ ಚಿತ್ರದಲ್ಲಿ ಮೂಡಿದೆ. ನಿರ್ದೇಶಕ ಆಂಡರ್‌ಸನ್‌ನ ಬಲವಾದ ಸಂಭಾಷಣೆ

ಮತ್ತು ಬಿಗಿಯಾದ ಕಥಾನಕದ ಬಲದಿಂದ ಶೈಕ್ಷಣಿಕ ಸಮಸ್ಯೆಯ ಪರಿಚಯವನ್ನು ಪ್ರಭಾವಶಾಲಿಯಾಗಿ ಮಾಡಿದ್ದಾರೆ. ಈ ಚಿತ್ರದ ಪ್ರಭಾವ ಎಷ್ಟಿತ್ತೆಂದರೆ ಚಿತ್ರದ ಕೊನೆಗೆ ನಡೆವ ಹತ್ಯಾಕಾಂಡವನ್ನು ನೋಡಿ ತಡೆಯಲಾರದ ಓರ್ವ ಮಹಿಳೆ ಕಿಟಾರನೆ ಕಿರಚಿ ಅಳಲಾರಂಭಿಸಿದಳು. ಚಿತ್ರಮಂದಿರದಲ್ಲಿದ್ದವರಿಗೆಲ್ಲಾ ಗಾಬರಿಯೋ ಗಾಬರಿ. ಉತ್ತರ ಅಮೇರಿಕೆಯ ಜನರ ಮನೋಸ್ಥೈರ್ಯ ತೀರ ನಿರ್ಬಲವಾದುದು. ಇದಕ್ಕೆ ಅನೇಕ ಕಾರಣಗಳಿರಬಹುದು.

ಮಾಂಟ್ರಿಯಾಲ್‌ನಿಂದ ಕೆನಡಾದ ಕಾರಖಾನೆಗಳ ನಗರ ಮತ್ತು ಪ್ರಖ್ಯಾತ ಯಂತ್ರವಿದ್ಯಾಕೇಂದ್ರ ಟೊರಂಟೋಗೆ ನಡೆದೆವು. ಟೊರಂಟೋದ ಗಡಿಬಿಡಿಯ ಪೇಟೆ ವಿಭಾಗದ ವೆಸ್ಟ್‌ಬರೀ ಹೋಟಲಿನಲ್ಲಿ ನಮ್ಮ ವಸತಿ. ಔದ್ಯಮಿಕ ಬೆಳವಣಿಗೆಯ ದೆಸೆಯಿಂದ ಟೊರಂಟೋದ ಜೀವನ ವೇಗದಿಂದ ಕೂಡಿದೆ. ಟೊರಂಟೋ ಆಕಾಶ ಕಾರ್ಖಾನೆಗಳ ಹೊಗೆಯಿಂದ ತುಂಬಿದೆ. ಬೀದಿಗಳು ಮಾಂಟ್ರಿಯಾಲ್‌ನಷ್ಟು ಸ್ವಚ್ಛವಿಲ್ಲ. ಇಲ್ಲಿ ಹಲವಾರು ರಾಷ್ಟ್ರೀಕರನ್ನು ಕಾಣಬಹುದು. ಸಾಕಷ್ಟು ಭಾರತೀಯರು, ಪಾಕೀಸ್ತಾನಿಗಳು ಮತ್ತು ಚೀನೀಯರೂ ಇದ್ದಾರೆ.

ಇಲ್ಲಿಯ ಸಿಟಿಸೆಂಟರ್ ಪ್ರಪಂಚಪ್ರಸಿದ್ಧವಾಗಿದೆ. ಇದನ್ನು ರಚಿಸಲು ಪ್ರಪಂಚದಾದ್ಯಂತ ಶಿಲ್ಪಿಗಳಿಗೆ ಸೂಚನೆ ನೀಡಲು ಕರೆಯಲಾಗಿದೆ. ತಜ್ಞ ಶಿಲ್ಪಿಗಳ ಮಂಡಳಿಯು ಪ್ರಪಂಚದೆಲ್ಲ ಕಡೆಯಿಂದ ಬಂದ ಮಾದರಿ ನಕ್ಷೆಗಳನ್ನು ಪರಿಶೀಲಿಸಿ ಫಿನ್ಲೆಂಡಿನ ಶಿಲ್ಪಿಯೋರ್ವನ ನಕ್ಷೆಯನ್ನು ಅಂಗೀಕರಿಸಿದರು. ಟೊರಂಟೋ ಜನತೆಯ ಕೃತಜ್ಞತೆಯ ಕುರುಹಾಗಿ ಆ ಶಿಲ್ಪಿಗೆ ಮಿಲಿಯನ್ ಡಾಲರ್ ಸನ್ಮಾನ ನೀಡಲಾಯಿತು. ಮಹಾವೆಚ್ಚದಿಂದ ನಿರ್ಮಿಸಲಾದ ಕಟ್ಟಡ ೪೭ ಅಂತಸ್ತಿನದಾಗಿದೆ. ೨ ಅರ್ಧ ವೃತ್ತಾಕಾರದ ಗಗನ ಚುಂಬಿ ಕಟ್ಟಡಗಳ ಮಧ್ಯೆ ಗೋಳಾಕಾರದ ಸಭಾ ಭವನವಿದೆ. ಈ ಗೋಳದ ಮೂಲ ಭಾಗದಲ್ಲಿ ಟೊರಂಟೋ ನಗರಕ್ಕೆ ಸೇರಿದ ಅಮೂಲ್ಯ ದಾಖಲೆಗಳನ್ನು ರಕ್ಷಿಸಲಾಗಿವೆ. ಗಗನಚುಂಬಿ ಕಟ್ಟಡಗಳ ತುದಿಯೇರಿ ಟೊರಂಟೋ ನಗರದ ಪಕ್ಷಿನೋಟ ಕಾಣಬಹುದು. ಈ ಸಿಟಿಸೆಂಟರಿನ ಧ್ಯೇಯ : ಇಂಟಲಿಜೆನ್ಸ್, ಇಂಟೆಗ್ರಿಟಿ ಮತ್ತು ಇಂಡಸ್ಟ್ರಿ.

ಟೊರಂಟೋದ ಆರ್ಟ್ ಗ್ಯಾಲರಿಯಲ್ಲಿ ಪಾಬ್ಲೋ ಪಿಕಾಸೋನ ಕುರಿತಾದ

ವಿಶೇಷ ಪ್ರದರ್ಶನವಿತ್ತು. ಪಿಕಾಸೋನ ಇತ್ತೀಚಿನ ಕೃತಿಗಳ ಈ ಪರಿಚಯ ವನ್ನು ಪಡೆಯಲೆಂದು ಹೋದೆವು. ಪಿಕಾಸೋ ಸಮಕಾಲೀನ ಊಹೆಯನ್ನು ಮೀರಿ ಬೆಳೆದ ಕಲಾವಿದ. ೧೦ ವರುಷದ ಹಿಂದೆ ರಚಿಸಿದ ಪಿಕಾಸೋನ ಕಲಾಕೃತಿ ಇಂದು ಯಾವ ಅಭ್ಯಂತರವೂ ಇಲ್ಲದೆ ಮೆಚ್ಚುಗೆ ಪಡೆಯುತ್ತದೆ. ಆದರೆ ಇಂದಿನ ಆತನ ಕೃತಿ ಇನ್ನೂ ಹತ್ತು ವರ್ಷ ಕಾಯಬೇಕು. ಕಾಮಮಯ ವಾಗುತ್ತಿರುವ ಜಗತ್ತಿನಲ್ಲಿ ಕಾಮನ ಗುರುತುಗಳಿಗಿರುವ ಬೆಲೆ ಹೃದಯಕ್ಕಾಗಲೀ ಬುದ್ಧಿ ಕೌಶಲಕ್ಕಾಗಲಿ ಇಲ್ಲವೆಂದು ತೋರಿಸುವುದೇ ಆ ಮಹನೀಯನ ಉದ್ದೇಶ. ಆದರೆ ಕಲಾಪ್ರದರ್ಶನ ನೋಡಲು ಬಂದ ಅನೇಕ ಪಾಶ್ಚಾತ್ಯ ಹೆಂಗೆಳೆಯರು ಪಿಕಾಸೋನ ಕಠಿಣ ಟೀಕೆ ನಡೆಸಿದ್ದರು.

ಟೊರಂಟೋ ಕೆನಡಾದ ಧನಪತಿಗಳ ನಗರ. ಇಲ್ಲಿಯ ವಿಸ್ತರಣದಲ್ಲಿ ಬೆಟ್ಟಮಾಡುಗಳಲ್ಲಿ ಹುಟ್ಟಿಬಂದಿರುವ ಮನೆಗಳ ಶೃಂಗಾರವೇ ಶೃಂಗಾರ. ಪ್ರಸಿದ್ಧ ರಾಜಕೀಯಪಟುಗಳೂ ಸಿನಿಮಾ ನಟರೂ ಇಲ್ಲಿ ವಾಸಿಸುತ್ತಾರೆ. ಅಥವಾ ಎಂದಾದರೊಮ್ಮೆ ಬಂದು ವಾಸಿಸಲು ಮನೆ ಮಾಡಿದ್ದಾರೆ. ನಗರದಲ್ಲಿ ವಸತಿಯ ಸಮಸ್ಯೆ ಪ್ರಖರವಾಗಿರುವ ಕಾರಣ ನೂರಾರು ಅಪಾರ್ಟ್‌ಮೆಂಟ್ ಕಟ್ಟಡಗಳು ಏಳುತ್ತಿವೆ. ಟೊರಂಟೋ ವಿಶ್ವವಿದ್ಯಾಲಯ ನಗರದ ಒಂದು ಭಾಗದ ಪೂರಾ ಮನೆಗಳನ್ನು ಗುತ್ತಿಗೆಗೆ ಹಿಡಿದಿದೆ. ಪರದೇಶದಿಂದ ಬರುವ ವಿದ್ಯಾರ್ಥಿಗಳಿಗೆ ವಸತಿ ಏರ್ಪಡಿಸಲು ಈ ಮನೆಗಳನ್ನು ವಿದ್ಯಾರ್ಥಿಗಳ ಸಮಿತಿ ಯೊಂದಕ್ಕೆ ನೀಡಲಾಗಿದೆ. ಕೆನಡಾದಲ್ಲಿಯೇ ಟೊರಂಟೋ ಅತಿ ಪ್ರಸಿದ್ಧ ವಿದ್ಯಾ ಕೇಂದ್ರವಾಗಿದೆ. ಸೇಂಟ್ ಲಾರೆನ್ಸ್ ಸೀವೇ (St. Lawrence Seaway) ತಯಾರಾದ ಮೇಲೆ ಟೊರಂಟೋ ಪ್ರಮುಖ ಬಂದರೂ ಆಗಿದೆ. ಇಲ್ಲಿಗೆ ಹತ್ತಿರವಾಗಿ ಸರೋವರ ಮಧ್ಯದಲ್ಲಿ ಒಂದೆರಡು ದ್ವೀಪಗಳಿವೆ. ಈ ದ್ವೀಪಗಳನ್ನು ಮುನಿಸಿಪಲ್‌ನವರು ಸ್ವಚ್ಛಗೊಳಿಸಿ ಗಿಡಗಳನ್ನೂ ಹುಲ್ಲುಹಾಸನ್ನೂ ಬೆಳೆಸಿ ಆಕರ್ಷಕಗೊಳಿಸಿದ್ದಾರೆ. ರಾಷ್ಟ್ರೀಯ ಉದ್ಯಾನವನ ಇಲಾಖೆಯವರು ಈ ದ್ವೀಪಗಳಲ್ಲಿ ಕಾಲುದಾರಿಗಳನ್ನೂ ಬೈಸಿಕಲ್ ರಸ್ತೆಗಳನ್ನೂ ಮೋಟಾರು ದಾರಿಗಳನ್ನೂ ರಚಿಸಿ ಜನರ ವಿಹಾರಕ್ಕೆ ವಿನೋದಕ್ಕೆ ಅನುಕೂಲ ಮಾಡಿದ್ದಾರೆ. ಇಲ್ಲಿಯ ಜನರಿಗೆ ಬೈಸಿಕಲ್ ಸವಾರಿಯೆಂದರೆ ತುಂಬಾ ಉಮೇದು. ಟೊರಂಟೋ ನಗರದಿಂದ ಚಿಕ್ಕ ಚಿಕ್ಕ ಹಡಗುಗಳಲ್ಲಿ ಈ ದ್ವೀಪಗಳಿಗೆ ತೆರಳಬಹುದು. ಅಲ್ಲಿ

ಇಳಿದೊಡನೆ ನಿಮಗೆ ಬೇಕಾದ ತಿಂಡಿ ತಿನಿಸು, ಸೈಕಲ್, ಟ್ರೈಸಿಕಲ್, ಕಾರು ಮತ್ತು ಮಕ್ಕಳನ್ನು ಕುಳ್ಳಿರಿಸುವ ತಳ್ಳುಬಂಡಿ ಬಾಡಿಗೆಗೆ ಸಿಗುತ್ತವೆ. ಹರಯದ ಹುಡುಗ ಹುಡುಗಿಯರು ಬೈಸಿಕಲ್ ಬಾಡಿಗೆಗೆ ತೆಗೆದುಕೊಂಡು ಈ ದ್ವೀಪದ ಹೊಟ್ಟೆಯ ಮೂಲೆ ಮೂಲೆಗೆ ಹೋಗಿ ಅಲ್ಲಲ್ಲಿ ಹಾಕಿರುವ ಬೆಂಚುಗಳ ಮೇಲೆ ಕುಳಿತು ಹರಟೆ ಹಾಡಿ ಕುಣಿದು ದಣಿದು ಮನೆಗೆ ಮರಳುತ್ತಾರೆ. ಇಂತಹ ಕಡೆ ಬೇಕಾದಷ್ಟು ರಕ್ಷಣ ವ್ಯವಸ್ಥೆಯಿದೆ. ರಾತ್ರಿ ಕಾಲದಲ್ಲಿ ಇಲ್ಲಿಯೇ ಉಳಿದು ಶಿಬಿರಾಗ್ನಿ (Camp fire) ಹಾಕಿ ಆನಂದಿಸಲು ಬೇಕಾದ ಕಟ್ಟಿಗೆ ವಗೈರೆ ಕೂಡಾ ಇಲ್ಲಿ ದೊರೆಯುತ್ತದೆ. ನಮಗಂತೂ ಹಚ್ಚಹಸುರಿನ ಹುಲ್ಲುಹಾಸಿನ ಮೇಲೆ ನಡೆದಾಡಿದಷ್ಟೂ ಹಿತವೆನಿಸುತ್ತಿತ್ತು. ಬೆಚ್ಚನೆ ನಾಡಿನ ಬಯಲು ಪ್ರದೇಶದ ಜನರಾದ ನಮಗೆ ಆಕಾಶದೆತ್ತರ ಬೆಳೆದು ನಿಂತ ಮರಗಳ ಕೆಳಗೆ ಹಸಿರೋ ಹಸಿರಾದ ಭೂಮಿಯ ಮೇಲೆ ಓಡಾಡುವುದೊಂದು ವಿಶಿಷ್ಟ ಅನುಭವ ವೆನಿಸಿತು. ಅಲ್ಲೊಂದು ಯುಗಲ ಪೊದೆಯ ಮರೆಯಲ್ಲಿ ಮುದ್ದಾಡುತ್ತಿದ್ದವು. ಮತ್ತೊಂದು ಕಡೆ ಹತ್ತಿಪ್ಪತ್ತು ಹುಡುಗರು ಚಪ್ಪಾಳೆಯಿಕ್ಕಿ ಕುಣಿದು ಕುಣಿದು ಹಾಡುತ್ತಿದ್ದರು. ಅನೇಕ ಕಟ್ಟಿಗೆಯ ಬೆಂಚುಗಳ ಮೇಲೆ ಮುದುಕ ಮುದುಕಿಯರು ಹರೆಯದ ಹಳೇ ದಿನಗಳ ನೆನಪು ಮಾಡಿಕೊಡುತ್ತಿದ್ದರು. ಈ ಜನರು ಸಂತೋಷವಾಗಿರಲು ಹರ್ಷದಾಯಕವಾದ ಬದುಕು ಪಡೆಯಲು ಎಷ್ಟೊಂದು ಶ್ರಮಿಸುತ್ತಾರಲ್ಲ ಎಂದು ಜೀವ ತುಂಬಿಬರುತ್ತದೆ, ಆನಂದವೇ ಬ್ರಹ್ಮ, ಆನಂದವೇ ಜೀವನ ಅಲ್ಲವೇ ?

ಟೊರಂಟೋದಿಂದ ಪ್ರಪಂಚಪ್ರಸಿದ್ಧವಾದ ನಯಾಗರ ಜಲಪಾತ ನೋಡಲು ಹೋದೆವು. ಸುಮಾರು ೭೦ ಮೈಲು ದೂರದ ಈ ಧಬೆಧಬೆ ಸೌಂದರ್ಯದಲ್ಲಿ ಪ್ರಪಂಚದಲ್ಲಿಯೇ ಮಿಗಿಲೆನಿಸಿದೆ. ಕೆನಡಾ ದೇಶಕ್ಕೆ ಸೇರಿ ದಂತೆ ಕುದುರೆಲಾಳದಾಕಾರದ ಜಲಪಾತ ಮತ್ತು ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಜಲಪಾತ ಒಂದೇ ಜಾಗದಲ್ಲಿ ಇವೆ. ನಯಾಗರಾ ಎಂದರೆ ರೆಡ್ ಇಂಡಿಯನ್ನರ ಭಾಷೆಯಲ್ಲಿ ಅಬ್ಬರಿಸುವ ನದಿ ಎಂದರ್ಥ. ಬೆಟ್ಟದ ಏರಿನಿಂದ ಓಡುತ್ತಾ ಬಂದ ನಯಾಗರಾ ಅಗಾಧವಾದ ಕೊಳ್ಳದಲ್ಲಿ ಬೀಳುತ್ತಾ ಸೌಂದರ್ಯ ನಿಧಿಯೊಂದನ್ನು ಸೃಷ್ಟಿಸಿದ್ದಾಳೆ. ಸಂಯುಕ್ತ ಸಂಸ್ಥಾನದ ಕಡೆಯ ಜಲಪಾತ ಬತ್ತಿಹೋಗಿತ್ತು. ಜಲ ಪತನಗೊಳ್ಳುವ ಜಾಗೆಯಲ್ಲಿ ಮಿದುವಾದ ಕಲ್ಲು

ಇದ್ದುದರಿಂದ ಬೆಟ್ಟ ಕತ್ತರಿಸಿ ಬೀಳತೊಡಗಿತ್ತು. ಇದನ್ನು ತಡೆಗಟ್ಟುವ ಬಗೆಯನ್ನು ಯೋಚಿಸಲು ಸಂಯುಕ್ತ ಸಂಸ್ಥಾನಗಳ ಸರಕಾರ ಚಿಕ್ಕ ಒಡ್ಡನ್ನು ಹಾಕಿ ನೀರನ್ನು ಬೇರೆ ಕಡೆ ತಿರುವಿ ಜಲಪಾತವನ್ನು ಬತ್ತಿಸಿ ಸಂಶೋಧಕರಿಗೆ ಅನುವು ಮಾಡಿತ್ತು. ಕೆನಾಡ ಕಡೆಯ ಜಲಪಾತವೇ ಸುಂದರ ಮತ್ತು ಅಗಾಧ. ಈ ಜಲಪಾತದ ಅಡಿಯಲ್ಲಿ ಸುರಂಗಗಳನ್ನು ಕೊರೆದು ಪ್ರವಾಸಿಗರಿಗೆ ಜಲಪಾತದ ಸ್ಪರ್ಶಸನಿಹಕ್ಕೆ ಹೋಗುವ ಏರ್ಪಾಟು ಮಾಡಿದ್ದಾರೆ. ಸ್ವಲ್ಪ ಶುಲ್ಕವನ್ನು ತೆಗೆದುಕೊಂಡು ಪ್ರವಾಸಿಗರನ್ನು ವಿದ್ಯುತ್‌ಚಲಿ ಮೆಟ್ಟಲುಗಳ ಮೂಲಕ ಭೂತಳಕ್ಕೆ ಒಯ್ಯುತ್ತಾರೆ. ಅಲ್ಲಿ ಸುರಂಗಗಳನ್ನು ಪ್ರವೇಶಿಸುವ ಮುಂಚೆ ಸೀರ್ಪನಿಗಳಿಂದ ರಕ್ಷಣೆಗಾಗಿ ತಕ್ಕ ಪಾದರಕ್ಷೆ ಮತ್ತು ಮಳೆಯಂಗಿ ವಗೈರಾ ತೊಡಿಸುತ್ತಾರೆ. ಸುರಂಗದ ಮೂಲಕ ಹೋಗಿ ಯಥಾರ್ಥವಾಗಿ ಜಲಪಾತದ ಬೀಳುವ ನೀರಿನ ಘನಪರದೆಯ ಹಿಂದೆ ನಿಲ್ಲುತ್ತೇವೆ. ನೀರಿನ ಧಾಳಿಗೆ ತಡೆಯದೆ ಓಡಿಬರುತ್ತೇವೆ. ಇನ್ನೊಂದು ಮಾರ್ಗದಲ್ಲಿ ನಡೆದರೆ ಜಲಪಾತದ ಪಾದಸ್ಥಳಕ್ಕೆ ಸೇರಿ ಅಲ್ಲಿ ಅನಂತವಾಗಿ ಮೂಡಿರುವ ಮಳೆಬಿಲ್ಲು ನೋಡುತ್ತೇವೆ.

ನಯಾಗರ ನದಿ ಜಲಪಾತದಲ್ಲಿ ಧುಮುಕಿ ಮುನ್ನಡೆದು ತನ್ನ ದಾರಿ ಹುಡುಕುವಾಗ ಅಡ್ಡ ಬಂದ ಪರ್ವತಶ್ರೇಣಿಯನ್ನು ಸುತ್ತುವರಿದು ಓಡಲು ಹವಣಿಸಿ ಅಗಾಧವಾದ ಚಕ್ರತೀರ್ಥವನ್ನು ನಿರ್ಮಿಸಿದೆ. ಈ ಚಕ್ರತೀರ್ಥದ ಮೇಲೆ ದಂಡೆಯಿಂದ ದಂಡೆಗೆ ಸ್ಪೇನಿಷ್ ಇಂಜಿನೀಯರ್‌ನೊಬ್ಬ ತಂತಿಯ ಮೇಲೆ ತೂಗುತ್ತಾ ನಡೆವ ತೊಟ್ಟಿಲನ್ನು ಅನೇಕ ವರ್ಷಗಳ ಹಿಂದೆಯೇ ನಿರ್ಮಿಸಿದ್ದಾನೆ. ಈ ತೊಟ್ಟಿಲದಲ್ಲಿ ಪಯಣಿಸಿ ಚಕ್ರತೀರ್ಥದ ಸವಿಶಾಪದರ್ಶನವನ್ನು ಪಡೆಯಬಹುದು.

ಕುದುರೆಯ ಲಾಳದಾಕಾರದ ಜಲಪಾತವನ್ನು ನೋಡಲು ಕೊಳ್ಳದ ಮೇಲುಭಾಗದಿಂದ ಕೆಳಗಿಳಿಯಲು ಶಿಂಪಾ ಮತ್ತು ಜೋಗದಲ್ಲಿರುವಂತೆ ನವೀನ ಇನ್‌ಕ್ಲೈನರ್ (ಟ್ರಾಲಿ) ಏರ್ಪಡಿಸಿದ್ದಾರೆ. ಓಡಾಡಿ ಹೊಟ್ಟೆ ಕರಗಿಸಿಕೊಳ್ಳಲು ನೂರಾರು ಎಕರೆ ವಿಸ್ತೀರ್ಣದ ಉದ್ಯಾನವಿದೆ. ಈ ವನದ ಮಧ್ಯೆ ಸಾಕಷ್ಟು ಕಾಲುದಾರಿಗಳು, ಸಾಕಾದರೆ ಕುಳಿತುಕೊಳ್ಳಲು ಬೆಂಚುಗಳು, ಹಸಿದರೆ ಉದರಪೋಷಣೆಗೆ ರೆಸ್ಟೋರಾಗಳು ಇವೆ.

ಬ್ರಿಟಿಷ್ ರಾಜಮುಕುಟದ ಆಕಾರದ ಸೀಗ್ರಾಂ ಗೋಪುರವಿದೆ. ಈ ಗೋಪುರದ ತುದಿಯೇರಿ ಅಲ್ಲಿರುವ ರೆಸ್ಟೋರಾದಲ್ಲಿ ಸಾಕಷ್ಟು ಹೊಟ್ಟೆ ತುಂಬಿ ಕೊಳ್ಳಬಹುದು. ಆದರ ನೆತ್ತಿಗೇರಿ ಸುತ್ತಲಿನ ವನಸಿರಿ ನಯಾಗರ ನೋಡಿ ಹೃದಯ ತುಂಬಿಕೊಳ್ಳಬಹುದು. ಕೊಂಚ ದೂರದಲ್ಲಿ ಈ ಗೋಪುರಕ್ಕಿಂತ ಕೊಂಚ ಚಿಕ್ಕದಾದ ಇನ್ನೊಂದು ಗೋಪುರವಿದೆ. ಪ್ರವಾಸಿಗಳಿಗೆ ಇಲ್ಲಿ ಅಸಂಖ್ಯ ಅನುಕೂಲಗಳಿವೆ. ಮಕ್ಕಳಿಗೆ ಮನೋರಂಜನೆಯ ಕೇಂದ್ರಗಳಿವೆ. ವಿಲಾಸಿಗಳಿಗೆ ಪಾನಮಂದಿರ ನೃತ್ಯಮಂದಿರ, ಕುತೂಹಲಿಗಳಿಗೆ ಬ್ರಿಟಿಷ್ ರಾಜಾಭರಣಗಳ ಮಾದರಿ, ಖರೀದಿ ಮಾಡಬೇಕೆಂಬುವನಿಗೆ ಪ್ರಪಂಚದ ಎಲ್ಲ ದೇಶದ ಕರಕುಶಲ ವಸ್ತುಗಳ ಅಂಗಡಿ, ಹೋಟೆಲ್, ಮೋಟೆಲ್, ಸ್ವಿಮಿಂಗ್‌ಪೂಲ್ಸ್, ಕುದುರೆ ಸವಾರಿ, ಜೂಜಾಟ ಎತ್ತೆ ಭಯಂಕರ ವ್ಯಾಕ್ಸ್ ಮ್ಯೂಸಿಯಂ. ರಜೆಯ ದಿನಗಳನ್ನು ಎಣಿಸದೆ ಕಳೆಯಬೇಕೆನ್ನು ವವರಿಗೆ ನಯಾಗರ ಸಮನಿಲ್ಲದ ಸ್ಥಳ ಇಲ್ಲಿರುವ ವಿಶಾಲ ಉದ್ಯಾನ ವನದ ಸದುಪಯೋಗ ಮಾಡಲು ಕೆನಡಾ ಸರ್ಕಾರ ತೋಟಗಾರಿಕೆಯ ಕಾಲೇಜೊಂದನ್ನು ತೆರೆದಿದೆ.

ಯು.ಎಸ್. ಕಡೆಯ ಜಲಪಾತವನ್ನು ನೋಡಲು ತೆರಳಿದೆವು. ನನ್ನ ಒಂದೇ ಪ್ರವಾಸದ ವೀಸಾ ಮುದ್ರೆ ಕಂಡಿತು. ಇಲ್ಲಿಯ ಜಾರ್ಜ್‌ವೇ ವಾಕ್ ಎಂಬ ಅಟ್ಟಣಿಗೆ ಮೆಟ್ಟಲಿನ ಹಾದಿ ಸಾಹಸಮಯವಾಗಿದೆ- ಯು.ಎಸ್ ವಿಭಾಗ ಶ್ರೀಮಂತವಾಗಿ ಕಾಣಿಸುತ ದೆ. ಆದರೆ ಕೆನಡಾ ವಿಭಾಗದಷ್ಟು ವಿಶಾಲವಾಗಿ ಅಂದವಾಗಿ ಆಕರ್ಷಕವಾಗಿ ಕಾಣಿಸುವುದಿಲ್ಲ. ಯು.ಎಸ್. ಕಡೆಯಿಂದ ಮರಳಿ ಕೆನಡಾ ತೋಟಗಾರಿಕೆಯ ಇಲಾಖೆಯವರು ಏರ್ಪಡಿ ಸಿರುವ ಅತಿ ದೊಡ್ಡ ಹೂವಿನ ಗಡಿಯಾರ ನೋಡಿದೆವು. ಈ ಗಡಿಯಾರ ಬೃಹತ್ತಾದ ಯಂತ್ರ. ಆದರೆ ಈ ಗಡಿಯಾರದ ಡಯಲ್ ಮಾತ್ರ ಹೂವಿನ ಗಿಡಗಳಿಂದ ನಿರ್ಮಿತವಾದುದು. ಹದಿನೈದು ಅಡಿ ಉದ್ದನೆಯ ನಿಮಿಷದ ಕೈ ಮೆಲ್ಲಗೆ ತಿರುಗುತ್ತಾ ಗಡಿಯಾರವೆಂಬ ನಂಬಿಕೆಯನ್ನು ಹುಟ್ಟಿಸುತ್ತದೆ.

ರಾತ್ರಿ ಕಾಲದಲ್ಲಿ ನಯಾಗರ ಸೌಂದರ್ಯದ ಕತೆ, ಸಿನಿಮಾ ಚಿತ್ರ ಮತ್ತು ಮಾತು ಕೇಳಿದ ನಾವು ದೀಪೋತ್ಸವಕ್ಕಾಗಿ ಕಾದೆವು. ದುರದೃಷ್ಟ ವಶಾತ್ ವಿಪರೀತ ಇಬ್ಬನಿಯಿದ್ದ ಕಾರಣ ಬೆಳಕಿನ ಕಿರಣಗಳು ಜಲಪಾತದ

ವರೆಗೆ ಹರಿಯದೆ ನಿಶ್ಚಿತ ಸೌಂದರ್ಯ ಸೃಷ್ಟಿಯಾಗಲಿಲ್ಲ. ಪೆನ್‌ಸಿಲ್ವೇನಿಯಾ ರಾಜ್ಯದಿಂದ ಪ್ರವಾಸಬಂದ ಓರ್ವ ಡ್ರೈವರ್ ನಮಗೆ ಇಲ್ಲಿ ಮಾತಿಗೆ ದೊರೆತ್ತಿದ್ದ. ಭಾರತದ ಬಗ್ಗೆ ಅನೇಕ ಸಹಾನುಭೂತಿಯ ಮಾತುಗಳನ್ನಾಡಿದ. ಇನ್ನು ಮುಂದೆ ಸಂಯುಕ್ತ ಸಂಸ್ಥಾನಗಳ ಪ್ರವಾಸ ಮಾಡಲಿದ್ದ ನಮಗೆ ಅವನ ಮಾತುಗಳು ಮನಸ್ಸಿಗೆ ಹಿಡಿಸಿದವು. ಅವನ ಅಭಿಪ್ರಾಯದ ಪ್ರಕಾರ ನಿಜವಾದ ಯು.ಎಸ್. ಒಳನಾಡಿನಲ್ಲಿದೆ. ನಗರಗಳು ಅಗ್ನಿಭಕ್ಷಕರಂತೆ ರಾಕ್ಷಸಾಕಾರಗಳಲ್ಲಿ ಬೆಳೆದು ಅಮೇರಿಕನ್ ಜೀವನವನ್ನು ಹಾಳುಮಾಡಿದೆ. ಮುಂದೆ ಯು.ಎಸ್‌ನಲ್ಲಿ ಪ್ರವಾಸಮಾಡಿದಾಗ ಈ ಮಾತು ನಿಜವೆನಿಸಿತು.

ನನ್ನ ಒಂದೇ ಪ್ರವಾಸದ ವೀಸಾ ಮುದ್ರೆ ಪಡೆದುದರಿಂದ ಟೊರಂಟೋಗೆ ಮರಳಿ ಅಮೇರಿಕೆಯ ಕಾನ್ಸಲ್ ಕಛೇರಿಗೆ ತೆರಳಿ ಮತ್ತೆ ಅರ್ಜಿ ಹಾಕಿದೆ. ಇಲ್ಲಿಯ ಅಧಿಕಾರಿ ಸೂಕ್ಷ್ಮಗ್ರಾಹಿಯಾಗಿದ್ದ. ಆತ ನನ್ನನ್ನು ಯಾವ ಪ್ರಶ್ನೆಯನ್ನೂ ಕೇಳದೆ ಪಾಸ್‌ಪೋರ್ಟ್ ಪರಿಶೀಲಿಸಿ ಮೂರು ಪ್ರವಾಸದ ವೀಸಾ ನೀಡಿದ.

ನಯಾಗರಾ ನಮ್ಮ ಪ್ರವಾಸದಲ್ಲಿ ಮರೆಯದ ಅಧ್ಯಾಯವೆನಿಸಿತು. ಇಲ್ಲಿ ಮದರಾಸಿ ಡಾಕ್ಟರ್ ದಂಪತಿಗಳು (ಸದ್ಯ ನ್ಯೂಯಾರ್ಕ್ ವಾಸಿಗಳು ಶ್ರೀ ಸಂತಾನಕೃಷ್ಣನ್ ಮತ್ತು ಅವರ ಧರ್ಮಪತ್ನಿ ದೊರೆತರು. ಅವರು ನಮ್ಮೊಂದಿಗೆ ಸ್ನೇಹದಿಂದ ವರ್ತಿಸಿ ನ್ಯೂಯಾರ್ಕಿಗೆ ಬಂದಾಗ ತಮ್ಮ ಮನೆಗೆ ಬರಬೇಕೆಂದು ಆಹ್ವಾನಿಸಿದರು. ನಯಾಗರ ಶರಾವತಿಯಂತೆ ಲೋಕಕ್ಕೆ ಅನೇಕ ರೀತಿಯಲ್ಲಿ ಉಪಯೋಗವಾದ ನದಿ. ಸಾಗಾಣಿಕೆ ಸಾರಿಗೆಗೆ, ವಿದ್ಯುಚ್ಛಕ್ತಿ ಉತ್ಪಾದನೆಗೆ, ಕುಡಿಯುವ ನೀರಿಗೆ, ನೀರಾವರಿಗೆ ಮತ್ತು ವಿದೇಶೀ ಪ್ರವಾಸಿಗಳ ಆಕರ್ಷಣೆಗೆ, ಸ್ವದೇಶೀಯರ ಮನೋರಂಜನೆಗೆ ಅನಂತ ವಿಧವಾಗಿ ಉಪಯೋಗವಾದ ನದಿ. ಕೆನಡಾ ಮತ್ತು ಯು.ಎಸ್. ಪರಮಸ್ನೇಹದಿಂದ ನಯಾಗರ ಉಪಯೋಗ ಪಡೆದು ಧನ್ಯವಾಗಿವೆ.

ಮೋಹಾಕ್ ವಿಮಾನ ಸಾರಿಗೆಯಲ್ಲಿ ಟೊರಂಟೋ ಬಿಡಬೇಕಿತ್ತು. ಬೋಸ್ಟನ್‌ಗೆ ಹೋಗಲು ಎರಡು ಸೀಟ್ ರಿಜರ್ವ್ ಆಗಿತ್ತು. ಆದರೆ ರೀಕನ್‌ಫರ್ಮೇಷನ್‌ಗೆ ಕೇಳಿದಾಗ ಒಂದೇ ಸೀಟು ರಿಜರ್ವ್ ಆಗಿದೆ ಎಂದರು. ಈ ಕಂಪನಿಯ ಸಿಟಿ ಆಫೀಸಿನ ಕುಮರಿ ಗ್ಯಾಂಬಲ್ ನಮ್ಮ ಪರವಾಗಿ ವಾದ

ಮಾಡಿ ನಮ್ಮ ರಿಜರ್ವೇಷನ್ ಸ್ಥಿರೀಕರಿಸಿಕೊಟ್ಟಳು. ಇಲ್ಲವಾದರೆ ತೊಂದರೆ ಇತ್ತು. ರಜೆಯ ಕಾಲವಾದ್ದರಿಂದ ಎಲ್ಲ ವಿಮಾನಗಳೂ ಭರ್ತಿ ಹೋಗುತ್ತಿದ್ದ ವಲ್ಲದೆ ಮುಂದಿನ ನಾಕಾರು ದಿನ ಸೀಟು ದೊರೆವ ಸಂಭವವಿದ್ದಿಲ್ಲ.

ಅಮೇರಿಕೆಯ ಸಂಯುಕ್ತ ಸಂಸ್ಥಾನ- ಬೋಸ್ಟನ್-ಬಂಗಾರದ ಜಿಂಕೆಯ ಹಿಂದೆ

ಆಧುನಿಕ ಜಗತ್ತಿನ ಸಾಹುಕಾರ ರಾಜ್ಯವಾದ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಿಗೆ ಪ್ರವೇಶ ಮಾಡುವಾಗ ಅವ್ಯಕ್ತವಾದ ಅವರ್ಣನೀಯ ಭಾವ ವೊಂದು ನನ್ನನ್ನು ಆವರಿಸಿತು. ಇಂಗ್ಲಿಷರ ದಬ್ಬಾಳಿಕೆಯ ವಿರುದ್ಧ ವೀರಾ ವೇಶದಿಂದ ಕಾದು ಸ್ವಾತಂತ್ರ್ಯ ಪಡೆದ ಸ್ಥಳ ಬೋಸ್ಟನ್. ಇಲ್ಲಿ ನಡೆದ ಟೀಪಾರ್ಟಿ ಮುಂತಾದ ಐತಿಹಾಸಿಕ ಘಟನೆಗಳನ್ನು ಮೆಲುಕು ಹಾಕು ತ್ತಿರುವಾಗ ಮೋಹಾಕ್ ವಿಮಾನ ಬೋಸ್ಟನ್ ಅಂತರರಾಷ್ಟ್ರೀಯ ವಿಮಾನ ತಾಣದಲ್ಲಿಳಿಯಿತು.

ವಿಮಾನದಿಂದ ಹೊರಬಂದು ಬೋಸ್ಟನ್ನಿನ ಉಸಿರು ತೆಗೆದುಕೊಳ್ಳು ವುದರೊಳಗೆ ವಿಪರೀತ ತಾಪದ ಅನುಭವವಾಯಿತು. ಉಷ್ಣತೆಯ ಜೊತೆಗೆ ಹ್ಯುಮಿಡಿಟಿ ಇಲ್ಲಿಯ ಎರಡನೆಯ ತಾಪತ್ರಯ. ಬರೀ ಸೆಕೆ, ಬಿಸಿಲು ತಡೆಯಬಹುದೇನೋ. ಆದರೆ ಭಾರವಾದ ಹವೆಯಿಂದ ಕೂಡಿದ ಶಾಖ ತಡೆಯಲಸಾಧ್ಯ. ನಮ್ಮ ಗಮ್ಯಸ್ಥಾನ ಆವೇರಿ ಹೋಟಲ್ ಸೇರಿ ಏರ್

ಕಂಡೀಷನ್ಡ್ ರೂಮಿನಲ್ಲಿ ಉಸ್ಸೆಂದು ಕುಸಿದೆವು. ಬೋಸ್ಟನ್ ಬಹು ಪುರಾತನ ನಗರವೆಂದು ರಾತ್ರಿಯಲ್ಲಿಯೂ ಹೊಳೆಯುತ್ತಿತ್ತು.

ಬೋಸ್ಟನ್ ಎಷ್ಟು ಪುರಾತನವೋ ಎಷ್ಟು ಇತಿಹಾಸಭರಿತವೋ ಅಷ್ಟೇ ಹೊಲಸಾಗಿದೆ. ನಗರದ ತುಂಬ ತಿಪ್ಪೆ ತಿಪ್ಪೆ, ಗುಡ್ಡೆ ಗುಡ್ಡೆ ಹೊಲಸು. ಸುಪ್ರಸಿದ್ಧ ಬೋಸ್ಟನ್‌ನ ಕಾಮನ್ ಉದ್ಯಾನವನ ಬರೀ ಕಾಗದದ ಚೂರಿನಿಂದಲೂ ಪೋಕರಿಗಳಿಂದಲೂ ತುಂಬಿರುತ್ತದೆ. ಆಲಸಿ ನೀಗ್ರೊಗಳೂ, ವೇದಾಂತಿ ಬಿಳಿಯರೂ, ಮುದುಕರೂ, ಪ್ರೇಮಿಗಳೂ, ನಾಯಿ ಬೆಕ್ಕು ಮುಂತಾದ ಪ್ರಾಣಿಪ್ರಿಯರೂ ಈ ಉದ್ಯಾನವನ್ನು ಬೆಳಗಿನಿಂದ ಸಾಯಂಕಾಲದ ವರೆಗೆ ಎಡೆಬಿಡದೆ ಉಪಯೋಗಿಸಿ ವಿರೂಪಗೊಳಿಸಿದ್ದಾರೆ. ಅನೇಕ ಸ್ಮಾರಕ ಸ್ಥಳಗಳೂ ಶಿಲಾವಿಗ್ರಹಗಳೂ ಸ್ವಚ್ಛತೆಯ ಬೆಳಕು ಕಾಣದೆ ಶೋಚನೀಯ ಪರಿಸ್ಥಿತಿಯಲ್ಲಿವೆ.

ಸ್ವಾತಂತ್ರ್ಯ ಯುದ್ಧದ ಕಾಲದಲ್ಲಿ ಸುಪ್ರಸಿದ್ಧ ಮಧ್ಯರಾತ್ರಿಯ ಪ್ರವಾಸವನ್ನು ಮಾಡಿ ಅಮೂಲ್ಯ ಸಂದೇಶವನ್ನು ಸ್ವಾತಂತ್ರ್ಯಯೋಧರಿಗೆ ತಲುಪಿಸಿದ ಬೋಸ್ಟನ್‌ನ ಸುವರ್ಣಶಿಲ್ಪಿ ಪಾಲ್ ರಿವೆರ್‌ನ ಮನೆ ಈ ನಗರದ ಅತಿ ಪುರಾತನವಾದ ಮನೆ. ಈ ಚಿಕ್ಕ ಮನೆಯನ್ನು ರಾಷ್ಟ್ರೀಯ ಸ್ಮಾರಕವಾಗಿ ಅದನ್ನು ಮೊದಲಿನಂತೆಯೇ ಉಳಿಸಿ ಆ ಮಹನೀಯನ ಸಂಬಂಧದ ವಿಷಯಗಳೊಂದಿಗೆ ಕಾಪಾಡಿದ್ದಾರೆ. ಬೋಸ್ಟನ್ ಟೀಪಾರ್ಟಿ ನಡೆದ ಬಂದರಿನ ಆ ಸ್ಥಳದಲ್ಲಿ ಅಂತಹ ರೋಮಾಂಚಕ ಕುರುಹೇನೂ ಇಲ್ಲ. ಆದರೆ ಬ್ರಿಟಿಷರ ಗರ್ವದ ಕೊಂಬನ್ನು ಮುರಿದ ಆ ಸ್ಥಳದ ಮಹಿಮೆ ಕಾಲಾತೀತವಾದದ್ದೇನೋ. ಇದೇ ಬಂದರಿನಲ್ಲಿ ಸ್ವಾತಂತ್ರ್ಯಯೋಧರ ಯುದ್ಧನೌಕೆಯಾಗಿ ಸುಮಾರು ನಲವತ್ತು ವಿಜಯೀ ಕದನಗಳನ್ನು ಕಾದು ಎಂದೂ ಸೋಲದೆ ಇಂದಿಗೂ ಅಮೇರಿಕನ್ ಅಭಿಮಾನಕ್ಕೆ ಪಾತ್ರವಾಗಿರುವ ನೌಕೆ 'ಯು.ಎಸ್.ಎಸ್. ಕಾನ್ಸ್ಟಿಟ್ಯೂಷನ್' ಇದೆ. ಈ ನೌಕೆಯಿಂದು ರಾಷ್ಟ್ರೀಯ ಸ್ಮಾರಕ. ಈ ನೌಕೆಯ ಒಳಗಿನ ಅಂತಸ್ತುಗಳಲ್ಲಿ ಅದರ ಕಪ್ತಾನರ ಕದನಗಳ ಆಯುಧಗಳ ಅವಸ್ಥೆಗಳ ಮತ್ತು ಅದೃಷ್ಟದ ಸಂಪೂರ್ಣ ಇತಿಹಾಸವಿದೆ. ಅಮೇರಿಕನರು ಈ ನೌಕೆಯನ್ನು ದೇವಾಲಯದಂತೆ ಅಭಿಮಾನದಿಂದ ಕಣ್ಣಿಗೆ ಒತ್ತಿಕೊಳ್ಳುತ್ತಾರೆ. ಇಲ್ಲಿಯ ನಗರದ ಚೌಕ ಚೌಕಕ್ಕೆ ಇತಿಹಾಸವಿದೆ. ಸ್ವಾತಂತ್ರ್ಯ

ಯೋಧರಾದ ಬೆಂಜಮಿನ್ ಫ್ರಾಂಕ್ಲಿನ್ ಅವರು, ಜಾರ್ಜ್ ವಾಷಿಂಗ್‌ಟನ್ ಅವರು ಆಗಾಗ್ಗೆ ಬಿಡಾರ ಮಾಡಿದ ಮನೆಗಳೂ ಸ್ವಾತಂತ್ರ್ಯಯೋಧರು ವಿಚಾರ ಮಂಥನ ಮಾಡುತ್ತಿದ್ದ ಸ್ಥಳಗಳೂ ಬ್ರಿಟಿಷರೊಂದಿಗಿನ ಘರ್ಷಣೆಯಲ್ಲಿ ಅಮಾಯಕರು ಜೀವ ತೆತ್ತ ಸಂದರ್ಭಗಳೂ ಮರೆಯದ ಗಾಯಗಳಾಗಿ ನೆನಪಿನಲ್ಲಿ ಮಡುಗಟ್ಟಿ ನಿಂತಿವೆ. ಇಡೀ ವಿಶ್ವದಲ್ಲಿಯೇ ಅಮೇರಿಕನ್ನರು ಪರಾಜಿತರಾದುದಕ್ಕೆ ಎಲ್ಲಿಯಾದರೂ ಸ್ಮಾರಕವಿದ್ದರೆ ಅದು ಇಲ್ಲಿದೆ. ಅಮೇರಿಕನರು ಒಮ್ಮೆ ಬ್ರಿಟಿಷರೊಂದಿಗಿನ ಕದನದಲ್ಲಿ ಸೋತು ಸಾರ್ವತ್ರಿಕವಾಗಿ ಅವರ ಕರವಾಳಕ್ಕೆ ಬಲಿಯಾದ ಸ್ಥಳ ಅಮೇರಿಕನರ ಸೋಲಿನ ಏಕೈಕ ಸ್ಮಾರಕ ಇಲ್ಲಿದೆ. ಲಿಬರೇಷನ್ ಸೇನೆಯ ಮುಖಂಡತ್ವವನ್ನು ಜಾರ್ಜ್ ವಾಷಿಂಗ್‌ಟನ್ನನ ವಹಿಸಿಕೊಂಡದ್ದು ಒಂದು ಮರದ ಕೆಳಗೆ. ಆ ಮರ ಇಂದಿಗೂ ಬದುಕಿದೆ. ಆ ಮರದ ಸುತ್ತ ಬೇಲಿ ಹಾಕಿ ಅಲ್ಲೊಂದು ಸ್ಮಾರಕ ಶಿಲೆಯನ್ನು ಸ್ಥಾಪಿಸಿ ರಾಷ್ಟ್ರೀಯ ಸ್ಮಾರಕವೆಂದು ಕರೆದಿದ್ದಾರೆ.

ಬೋಸ್ಟನ್ ನಗರದ ಬಹು ಮುಖ್ಯ ಆಕರ್ಷಣೆ ಎಂದರೆ **ಹಾರ್ವರ್ಡ್ ವಿಶ್ವವಿದ್ಯಾಲಯ** ಮತ್ತು ಮಾಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ. ಪ್ರಪಂಚ ಪ್ರಸಿದ್ಧವಾದ ಈ ಸರಸ್ವತೀ ಮಂದಿರಗಳಲ್ಲಿ ಜ್ಞಾನಾರ್ಜನೆಗೆ ಹಾತೊರೆಯದವರಿಲ್ಲ. ಒಂದು ದಿನವೆಲ್ಲಾ ಈ ವಿಶ್ವವಿದ್ಯಾಲಯದ ರಸ್ತೆಗಳಲ್ಲಿ ತಿರುಗಾಡಿದೆವು. ಪ್ರಪಂಚದ ಅನೇಕ ಮೇಧಾವಿಗಳನ್ನೂ ತಂತ್ರಜ್ಞರನ್ನೂ ಸೃಷ್ಟಿಸಿದ ಈ ಪರಮಪೂಜ್ಯ ಸ್ಥಾನದಲ್ಲಿ ತಿರುಗಾಡಿದಷ್ಟೂ ಸಂತೋಷವೆನಿಸುತ್ತದೆ; ಕೃತಾರ್ಥತೆ ಎನಿಸುತ್ತದೆ. ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿರುವ ವೇರ್ ಗ್ಲಾಸ್ ಮ್ಯೂಜಿಯಂ ಅದ್ಭುತವಾಗಿದೆ. ಗಾಜಿನಲ್ಲಿ ವೇರ್ ಮಹಾಶಯ ನಿರ್ಮಿಸಿರುವ ಸಸ್ಯ ಪುಷ್ಪ, ಇತರೇ ಸಸ್ಯಶಾಸ್ತ್ರದ ಅದ್ಭುತಗಳೂ ನಂಬಲಸಾಧ್ಯವೆನಿಸುವಷ್ಟು ಸೂಕ್ಷ್ಮ, ಸಹಜ ಮತ್ತು ಸುಭಗವಾಗಿವೆ.

ನಮಗೆ ಮೆಚ್ಚುಗೆಯಾದುದೆಂದರೆ, ಈ ವಿಶ್ವವಿದ್ಯಾಲಯದ ಹೆಬ್ಬಾಗಿಲಿಗೆ ಬರೆದ ವಾಕ್ಯ – 'ಎಂಟರ್ ಟು ಗ್ರೋ ಇನ್ ವಿಸ್ಡಂ'. ಆದರೆ ಮೇಲೆ ನೋಡದೆ ಒಳಗೆ ಬಂದ ಅನೇಕರು ಗಲಭೆಮಾಡದೆ ಇರುತ್ತಾರೆಯೇ? ಕಳೆದ ವರ್ಷ ಇಲ್ಲಿಯೂ ವಿದ್ಯಾರ್ಥಿಗಳಿಂದ ಅನಾವಶ್ಯಕ ಗಲಭೆ ನಡೆದು,

ಗೋಲೀಬಾರ್ ನಡೆದು, ದಸ್ತಗಿರಿ, ಡಿಬಾರ್‌ಗಳಲ್ಲಿ ಪರ್ಯವಸಾನಗೊಂಡಿತಂತೆ. ಈ ವಿಶ್ವವಿದ್ಯಾಲಯದ ಆವರಣಕ್ಕೆ ಹತ್ತಿರದಲ್ಲಿಯೇ ಪ್ರಖ್ಯಾತ ಕವಿ ಲಾಂಗ್‌ಫೆಲೋ ವಾಸಿಸಿದ ಮನೆಯಿದೆ.

ಬೋಸ್ಟನ್‌ನ ಮುಕ್ಕಾಲು ಪಾಲು ಭೂಮಿ ಸಮುದ್ರದಿಂದ ಮರಳಿ ಪಡೆದದ್ದು. ಈ ಮರಳಿ ಪಡೆಯುವ ಕೆಲಸ ಸಮುದ್ರ ತೀರದ ಅನೇಕ ನಗರಗಳಲ್ಲಿ ಅವ್ಯಾಹತವಾಗಿ ನಡೆದಿದೆ. ನಗರದ ಮನೆಗಳ ಕಸವನ್ನು ತೆಗೆದುಕೊಂಡು ಹೋಗಿ ಸಮುದ್ರ ತೀರದಲ್ಲಿ ಹಾಕಿ ಹಾಕಿ ನೆಲವನ್ನು ನಿರ್ಮಿಸುತ್ತಾರೆ. ಈ ನಗರದಲ್ಲಿ ಎದ್ದು ಕಾಣುವ ಸಂತೋಷದ ಸಂಗತಿ ಎಂದರೆ ನೀಗ್ರೋ ಮತ್ತು ಬಿಳಿಯ ಜನಾಂಗಗಳಲ್ಲಿ ಇರುವ ಸೌಹಾರ್ದತೆ. ಇವರಲ್ಲಿ ಪರಸ್ಪರ ಪ್ರೇಮ ವಿವಾಹ, ಸ್ನೇಹ, ವ್ಯಾಪಾರ, ಎಲ್ಲ ರೀತಿಯ ನಾಗರಿಕ ಸಂಪರ್ಕ ನಡೆದದ್ದು ಕಾಣುತ್ತದೆ. ಇಲ್ಲಿ ವಿಪರೀತ ಸಂಖ್ಯೆಯಲ್ಲಿ ನೀಗ್ರೋಗಳು ನೆಲೆಸಿದ್ದಾರೆ. ಜೀವನದ ಪ್ರತಿಯೊಂದು ಅಂಗದಲ್ಲಿ ಇವರನ್ನು ಕಾಣಬಹುದು. ದಿವಾರಾತ್ರಿ, ರಂಗುರಂಗಿನ ಬಟ್ಟೆ ತೊಟ್ಟು ಹುಡುಗಿಯರೊಂದಿಗೆ ಕಾಮಣ್ಣಗಳಂತೆ ತಿರುಗಾಡುವ ಇವರನ್ನು ಕಂಡರೆ ನಮಗೇನೋ ಒಂದು ರೀತಿಯ ಭಯವಿತ್ತು. ರಾತ್ರಿ ಬಹುಕಾಲದವರೆಗೆ ಹೊರಗೆ ತಿರುಗದೆ ಹೋಟೆಲ್ ಸೇರಿಬಿಡುತ್ತಿದ್ದೆವು. ಆದರೆ ಅನೇಕ ನೀಗ್ರೋಗಳು ನಮ್ಮನ್ನು ತಮ್ಮ ಜನರೆಂದು ತಿಳಿದು ಮಾತಾಡಿಸುತ್ತಿದ್ದರು. ಒಮ್ಮೊಮ್ಮೆ ಇದು ತೊಂದರೆಗೆ ಕಾರಣವಾಗುತ್ತಿತ್ತು. ನಗರದ ಪ್ರಮುಖ ಆಧುನಿಕ ಕೇಂದ್ರವಾದ ಪ್ರುಡೆನ್ಷಿಯಲ್ ಕೇಂದ್ರವನ್ನು ನೋಡಿ ಮರಳಿ ಬರುವಾಗ ಕಂಠಮಟ್ಟ ಕುಡಿದು ತೂರಾಡುತ್ತಾ ಬರುತ್ತಿದ್ದ ನೀಗ್ರೋ ವೃದ್ಧನೊಬ್ಬ ನಮ್ಮ ದಾರಿ ಕಟ್ಟಿ ಮಾತಿಗೆ ಮೊದಲಿಟ್ಟ. ಸುದೈವವಶಾತ್, ಆ ಕಡೆಯಿಂದ ಬಂದ ಪೋಲೀಸ್ ವ್ಯಾನ್ ಟ್ರಾಫಿಕ್ ನಿಂತಿತು. ಆ ವ್ಯಾನನ್ನು ಗುರುತಿಸಿದ ಆ ಮಹನೀಯ ನಗುನಗುತ್ತ ನಮ್ಮ ದಾರಿ ಬಿಟ್ಟ. ಈ ರೀತಿ ಅನಾಗರಿಕ ವರ್ತನೆ, ಹಿಂಸೆಯ ಪ್ರಯೋಗ ಹೆಚ್ಚುತ್ತಾ ನಡೆದಿದೆ ಎಂದು ತಿಳಿಯಿತು. ಬೋಸ್ಟನ್‌ನಲ್ಲಿ ನಾವು ಮಾಡಿಸಿಕೊಂಡ ಕೇಶಖಂಡನ ನಮಗೆ ತಲಾ ಹತ್ತೊಂಬತ್ತು ರೂಪಾಯಿ ಹಿಡಿಯಿತು. ನಮ್ಮಲ್ಲಿ ನಾಲ್ಕಾಣೆಗೆ ಮಾಡುವ ಸೇವೆಗಿಂತ ಈ ಇಟಾಲಿಯನ್ ವೃದ್ಧ ನಾಯಿಂದನ ಸೇವೆ ಕಡಿಮೆ

ಯಾಗಿತ್ತು. ಆದರೆ ಆಯುಷ್ಕರ್ಮ ಅನಿವಾರ್ಯ. ಇಲ್ಲಿಯ ಪ್ರುಡೆನ್ಷಿಯಲ್ ಕೇಂದ್ರ ಅತ್ಯಾಧುನಿಕ ಬೋಸ್ಟನ್‌ನ ಪ್ರತೀಕ. ಇಲ್ಲಿಯ ಪೌರಾಣಿಕ ಸಬ್‌ವೇ ಅಮೇರಿಕೆಯ ಸಾಹುಕಾರಿಕಗೆ ಕಳಂಕ. ಈ ಸಬ್‌ವೇ ಕಂಡಕ್ಟರರು ಸಾಕಷ್ಟು ಲಂಚ ವಗೈರೆ ಕೂಡಾ ನಡೆಸಿದ್ದಾರೆ. ಬೋಸ್ಟನ್ ನಗರದ ಫೈನ್ ಆರ್ಟ್ ಮ್ಯೂಜಿಯಂ ಬಹುಶಃ ಅಮೇರಿಕೆಯ ಬೃಹತ್ ಮ್ಯೂಜಿಯಂಗಳಲ್ಲಿ ಗಣ್ಯ ವಾದುದು. ಇಲ್ಲಿಯ ಭಾರತೀಯ ಗ್ಯಾಲರೀ ಕೂಡಾ ಮಹತ್ವದ ಅನೇಕ ಶಿಲ್ಪಗಳನ್ನೂ ಕಲಾಕೃತಿಗಳನ್ನೂ ಹೊಂದಿದೆ. ಮದ್ರಾಸಿನ ಮ್ಯೂಜಿಯಂ ಕೆಲ ಕಲಾಕೃತಿಗಳ ಪ್ರತಿಕೃತಿಗಳನ್ನೂ ನೀಡಿದೆ. ಈ ರೀತಿಯ ವಿನಿಮಯ ಪರಸ್ಪರ ಅನುಕೂಲವೇನೊ ?. ಇಲ್ಲಿಯ ಆರ್ಟ್ ಗ್ಯಾಲರಿಯಲ್ಲಿ ಪ್ರಪಂಚ ಪ್ರಸಿದ್ಧ ಕಲಾ ವಿದರ ಅನೇಕ ಗಣ್ಯ ವರ್ಣಚಿತ್ರಗಳಿವೆ. ಆದರೆ ಯಾವ ಕಲಾಶಾಲೆಯಲ್ಲಿಯೋ ಆಗಲೀ ಭಾರತೀಯ ಚಿತ್ರಕಲೆ ಪ್ರತಿನಿಧಿಸಲ್ಪಟ್ಟಿಲ್ಲ. ಕೆಲವೆಡೆ ಭಾರತೀಯ ಶಿಲ್ಪಕ್ಕೆ ಸ್ಥಾನ ದೊರೆತಿದೆ. ಅಲ್ಲದೆ ಮೊಗಲರ ಕಾಲದ ಅಣುರೇಖಾ ಮತ್ತು ವರ್ಣಚಿತ್ರಗಳು ಕೆಲವು ಸ್ಥಾನ ಪಡೆದಿವೆ. ಇತ್ತೀಚಿನ ಅಥವಾ ಇತಿಹಾಸ ಕಾಲದ ಭಾರತೀಯ ಕಲಾಪ್ರಪಂಚದ ಯಾವುದೇ ಕೃತಿ ಎಲ್ಲೂ ಪ್ರದರ್ಶನ ಕಂಡಿಲ್ಲ. ಪಾಶ್ಚಾತ್ಯರು, ಫ್ರೆಂಚ್ ಮತ್ತು ಇಂಗ್ಲಿಷ್ ಕಲಾವಿದರಲ್ಲಿ ಆಸ್ಥೆ ತೋರಿಲ್ಲ. ಏಷಿಯಾ ಮತ್ತು ಆಫ್ರಿಕೆಯ ಕಲೆ ಅವರಿಗೆ ಪ್ರಾಚೀನ ಕುತೂಹಲ ಗಳೇ ಹೊರತು ಪರಿಣತ ಕಲೆಯ ಪರಿಪಾಕವಲ್ಲ ! ಬೋಸ್ಟನ್ ಮ್ಯೂಜಿಯಂ ಅಮೇರಿಕನ್ ಸ್ವಾತಂತ್ರ್ಯ ಇತಿಹಾಸದ ಅನೇಕ ದಾಖಲೆಗಳನ್ನೂ ಆ ಹೋರಾಟದ ಅನೇಕ ಚಿತ್ರಗಳನ್ನೂ ಹೊಂದಿದೆ. ಅಮೇರಿಕನ್ ಸ್ವಾತಂತ್ರ್ಯ ಇತಿಹಾಸದ ತೌರುಮನೆ ಬೋಸ್ಟನ್. ಪ್ರುಡೆನ್ಷಿಯಲ್ ಟವರ್ ನೋಡಿ ದವರೇ ರಸ್ತೆಯಲ್ಲಿ ಕೊಂಚ ಓಡಾಡಿದ ನಂತರ ನಮಗೆ ಕೊಂಚ ಹಸಿವಾ ದಂತೆ ಎನಿಸಿತು. ಅಲ್ಲಿಯೇ ಎದುರು ಬೀದಿಯಲ್ಲಿದ್ದ ರೆಸ್ಟೋರಾ ಒಂದಕ್ಕೆ ನುಗ್ಗಿದೆವು. ಮೆನು ನೋಡುವಾಗ ಪಶ್ಚಿಮದಲ್ಲಿ ಕ್ವಚಿತ್ತಾಗಿ ದೊರಕುವ ಆನಿಯನ್ ಅಂಡ್ ಪೆಪ್ಪರ್ ಆಮ್ಲೆಟ್ ಎಂಬ ಪದಾರ್ಥದ (ಕೋಳಿಮೊಟ್ಟೆಯ ದೋಸೆ) ಹೆಸರು ಕಂಡು ಸುಖವೆನಿಸಿತು. ಸರಿ ಎರಡು ಆಮ್ಲೆಟ್ ಆರ್ಡರ್ ಮಾಡಿದವು. ಅರ್ಧ ಗಂಟೆಯ ನಂತರ ಬೇರರ್ ತಂದಿಟ್ಟ ಆಮ್ಲೆಟ್ ನೋಡಿ ನಾವು ದಂಗಾದೆವು. ಸುಮಾರು ಹತ್ತು ಹನ್ನೆರಡು ಮೊಟ್ಟೆಗಳನ್ನು ಹಾಕಿ

ಒಂದೊಂದು ಆಮ್ಲೆಟ್ ಮಾಡಿದ್ದಾರೆ. ಅದಕ್ಕೆ ಪುಷ್ಕಳವಾಗಿ ಈರುಳ್ಳಿ ಮತ್ತು ಮೆಣಸಿನಕಾಯಿ ಹಾಕಲಾಗಿದೆ. ಉಗಿ ಉಗಿ ಹಾಯುತ್ತಿದೆ. ಪ್ರಾಯಶಃ ಅಷ್ಟು ರುಚಿಯಾಗಿ ತಯಾರಿಸಲ್ಪಟ್ಟ ಈ ಪದಾರ್ಥವು ಈವರೆಗೆ ನಮಗೆ ಎಲ್ಲೂ ಸಿಕ್ಕಿಲ್ಲವೆನ್ನಬೇಕು. ಎರಡೆರಡು ಮೊಟ್ಟೆಯ ಆಮ್ಲೆಟ್ ತಿಂದು ಅಭ್ಯಾಸವಿದ್ದ ನಾವು ಆ ರುಬ್ಬುಗುಂಡು ಗಾತ್ರದ ಆಮ್ಲೆಟ್‌ಗಳನ್ನು ನಿಧಾನವಾಗಿ ಸುಮಾರು ಒಂದು ಗಂಟೆಯ ಕಾಲ ತಿನ್ನಲಾರದೆ ಬಿಡಲಾರದೆ ತಿಂದು ಮುಗಿಸಿದೆವು. ಅನಂತರ ಬೇರರ್ ಬಂದು 'ಎನೀ ಡ್ರಿಂಕ್ಸ್ ಪ್ಲೀಸ್' ಎಂದಾಗ 'ನೋ ಥ್ಯಾಂಕ್ಸ್' ಎಂದು ಹೇಳಲೂ ನಮಗೆ ತ್ರಾಸವೆನಿಸಿತ್ತು. ಈ ರೀತಿಯ ಕಂಠಮಟ್ಟ ಊಟಮಾಡಿ ಅದೆಷ್ಟು ದಿನಗಳಾಗಿದ್ದವೋ ಏನೋ? ಆಮ್ಲೆಟ್ ಮಾಡಿದ ಆ ಪಾಕಶಾಸ್ತ್ರಿ ಚಿರಾಯುವಾಗಲಿ ಎಂದು ಹಾರೈಸಿದೆವು.

ಇಲ್ಲಿಯ 'ಪ್ಯಾರಿಸ್' ಎಂಬ ಸಿನಿಮಾದಲ್ಲಿ 'ದಿ ಲಯನ್ ಇನ್ ವಿಂಟರ್' ಎಂಬ ಇಂಗ್ಲಿಷ್ ಚಿತ್ರ ನೋಡಿದೆವು. ಇಂಗ್ಲಿಷ್ ರಾಜಮನೆತನದ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ನಡೆದ ರಾಜಕುಟುಂಬದ ಒಳಕೋಟೆಯನ್ನು ತೋರಿಸಲಾಗಿದೆ. ಪ್ರಬುದ್ಧ ಕಲಾವಿದರಾದ ಪೀಟರ್-ಒ-ಟೂಲ್ ಮತ್ತು ಕ್ಯಾಥರೀನ್ ಹೆಪ್‌ಬರ್ನ್ ಚಿತ್ರವನ್ನು ಜೀವಂಗೊಳಿಸಿದ್ದಾರೆ.

ಇಲ್ಲಿಯ ಮತ್ತೊಂದು ಮುಖ್ಯ ಸ್ಥಳವೆಂದರೆ ಜಾನ್ ಕೆನಡಿ ಸ್ಮಾರಕ ಭವನ. ಬಹಳ ವೆಚ್ಚದಲ್ಲಿ ಹೊಸ ಕಾಲದ ಕಲಾವಿದರಿಂದ ನಿರ್ಮಿತವಾಗುತ್ತಿರುವ ಈ ಸ್ಮಾರಕದಲ್ಲಿ ಗ್ರಂಥಾಲಯ, ನಾಟಕಮಂದಿರ ಇತ್ಯಾದಿ ಇರುತ್ತವೆ. ತನ್ನ ಎಳೆಯ ವಯಸ್ಸಿನಲ್ಲಿ ಅಮೇರಿಕೆಯ ರಾಜಕೀಯ ಗಗನದಲ್ಲಿ ಧ್ರುವತಾರೆಯಂತೆ ಮೂಡಿ ಪ್ರಪಂಚದ ಆಶೋತ್ತರಗಳನ್ನು ಸಕ್ರಿಯಗೊಳಿಸಿದ್ದ ಮಹನೀಯ ಜಾನ್ ಕೆನಡಿ ಮತ್ತು ಆತನ ಒಡಹುಟ್ಟಿದ ರಾಬರ್ಟ್ ಕೆನಡಿಯವರ ಪರಂಪರಾಗತ ಮನೆ–ಬೋಸ್ಟನ್. ಈ ಪ್ರಾಂತದಲ್ಲಿ ಈ ಮನೆತನದವರು ಅನಭಿಷಿಕ್ತ ಅಭಿಮಾನ ಪಡೆದಿದ್ದಾರೆ. ಮೂರನೆಯ ಮತ್ತು ಕೊನೆಯ ಕುಡಿಯಾದ ಎಡ್ವರ್ಡ್ ಕೆನಡಿಯ ಮೇಲೆ ಜನತೆ ಅದಮ್ಯ ಆಶೋತ್ತರಗಳನ್ನು ಹೊಂದಿದೆ. ಇಂಥ ಮಕ್ಕಳಿಗೆ ಜನ್ಮವಿತ್ತ ಈ ನೆಲ ಕೃತಾರ್ಥವೆನಿಸುತ್ತದೆ.

ಬೋಸ್ಟನ್‌ನಲ್ಲಿ ಮೇ ಫ್ಲವರ್ ಕನ್ಯೆಯೋರ್ವಳನ್ನು ಭೇಟಿಯಾದೆವು. ಪ್ರೊ|| ಬಿ. ಜಿ. ಎಲ್. ಸ್ವಾಮಿಯವರ 'ಅಮೇರಿಕೆಯಲ್ಲಿ ನಾನು' ಪುಸ್ತಕ ಓದಿ

ದಂದಿನಿಂದ ಈ ಕನ್ಯೆಯರ ಕುರಿತು ಕುತೂಹಲವಿತ್ತು. ಇವರನ್ನು ಅವರ ಮನೆಗೆ ಹೋಗಿ ಕಾಣುವ ಧೈರ್ಯವೇನೊ ನಮಗೆ ಬರಲಿಲ್ಲ. ಆದರೆ ಅನಿರೀಕ್ಷಿತ ವಾಗಿ ಒಂದು ರೆಸ್ಟುರಾದಲ್ಲಿ ಕನ್ಯೆಯ ಭೇಟಿಯಾಯಿತು. ನಾವಿದ್ದ ಹೋಟಲಿಗೆ ಹತ್ತಿರದಲ್ಲಿಯೇ ಲೇಡೀ ಚೈಲ್ಡ್ ವಾಸಿಸುತ್ತಾಳೆ. ಮೊಟ್ಟ ಮೊದಲು ಇಂಗ್ಲೆಂಡಿ ನಿಂದ ಧಾರ್ಮಿಕ ಸ್ವಾತಂತ್ರ್ಯವನ್ನು ಅರಸುತ್ತಾ ಹೊರನಾಡಿಗೆ ಧಾವಿಸಿದ ಪುರಾತನ ವಂಶದ ನೇರಕುಡಿ ಈ ಮೇ ಫ್ಲವರ್ ಕನ್ಯೆಯರು. ಈಕೆಗೆ ಸುಮಾರು ೬೦ ವರ್ಷಕ್ಕೆ ಮಿಗಿಲಾದ ವಯಸ್ಸಾಗಿದ್ದರೂ ಇನ್ನೂ ಕನ್ಯೆಯೇ ಸರಿ. ರೆಸ್ಟುರಾಗೆ ಡಿನ್ನರಿಗೆ ಎಂದು ಬಂದ ಈ ಮಹಿಳೆ ನೋಡಿದರೆ, ಕೊಂಚ ಭಯಾನಕ ವಾಗಿಯೇ ಇದ್ದಳು. ಸುಮಾರು ೨೦ ವರ್ಷದ ಕನ್ಯೆಯೊಬ್ಬಳು ಈಕೆಗೆ ತಿಂಡಿ ತಿನಿಸು ನೀಡುತ್ತಿದ್ದಳು. ಈ ಕನ್ಯೆ ಅದೆಷ್ಟು ಜಾಣೆಯೋ ಕಾಣೆ. ಆದರೆ ಹೋಟಲಿನವರು ತಯಾರಿಸಿದ ಸುದೀರ್ಘ ಮೆನುವಿನಲ್ಲಿ ಈಕೆ ಆರಿಸಿದ್ದು ಆ ದಿನ ಅವರಲ್ಲಿ ದುರದೃಷ್ಟವಶಾತ್ ಇರಲಿಲ್ಲ. ಆಕೆ ಆರಿಸುವ ಪ್ರತಿ ಸಾಮಾನು ಸುಲಭವಾಗಿ ಆಕೆಗೆ ದೊರೆಯುವಂತಿರಲಿಲ್ಲ. ದೊರೆತರೂ ನೂರಾರು ಟೀಕೆ. ಇದು ಹೆಚ್ಚಾಯಿತು. ಇದು ಕೊರತೆಯಾಯಿತು. ಇದನ್ನು ತೆಗೆದುಕೊಂಡು ಹೋಗು. 'ಅದನ್ನು ತಾ. ಮಾತು, ಮಾತು, ಮಾತು. ಸುಮಾರು ಒಂದು ಗಂಟೆಯ ಕಾಲ ಆಕೆಯನ್ನು ನಿರೀಕ್ಷಿಸುತ್ತಾ ಕುಳಿತೆವು. ಆಕೆಯು ತಿನ್ನುವುದು ಒಂದಾದರೆ ಅನಾವಶ್ಯಕ ಕಿರುಕುಳ ಕನಿಷ್ಠ ಹತ್ತಾಗಿತ್ತು. ಕೊನೆಗೊಮ್ಮೆ ಆಕೆ ಮುಗಿಸಿ ಹೊರಗೆ ನಡೆದಾಗ, ನೀಡುತ್ತಿದ್ದ ಆ ಕನ್ಯೆ ಸುದೀರ್ಘ ನಿಟ್ಟುಸಿರು ಬಿಟ್ಟು, ಒಂದು ಕುರ್ಚಿಯ ಮೇಲೆ ಕುಳಿತಳು. ಇಲ್ಲಿಯ ರೆಸ್ಟುರಾಗಳಲ್ಲಿ ಬೀಫ್ ಬಹು ಮುಖ್ಯವಾದ ಆಹಾರ. ನಮಗೆ ಎಲ್ಲಾ ಕಡೆಗಿಂತ ಇಲ್ಲಿ ಆಹಾರದ ತೊಂದರೆ ತೋರತೊಡಗಿತು.

ನ್ಯೂಯಾರ್ಕ್ : ಬೋಸ್ಟನ್‌ನ ಬೇಗೆಯಿಂದ ತಪ್ಪಿಸಿಕೊಂಡು ಅಮೇರಿಕೆಯ ಏರ್‌ಲೈನ್ಸ್ ಸಾರಿಗೆಯಲ್ಲಿ ನ್ಯೂಯಾರ್ಕ್‌ನ ಲಾಗ್ವಾರ್ಡಿಯಾ ನಿಲ್ದಾಣವನ್ನು ಸೇರಿದಾಗ ನ್ಯೂಯಾರ್ಕ್ ಹವೆಯೇ ಕೊಂಚ ಮೇಲೆನಿಸಿತು. ಪ್ರಪಂಚದ ಅತಿ ದೊಡ್ಡ ನಗರ ನ್ಯೂಯಾರ್ಕ್. ಇಲ್ಲಿಗೆ ಮೂರು ವಿಮಾನ ನಿಲ್ದಾಣಗಳಿವೆ. ಇದರಲ್ಲಿ ಲಾಗ್ವಾರ್ಡಿಯಾ ಮತ್ತು ಕೆನಡಿ ಇಂಟರ್‌ನ್ಯಾಷನಲ್ ಬಹಳ ದೊಡ್ಡವು. ಇಷ್ಟಾದರೂ ಒಮ್ಮೊಮ್ಮೆ ವಿಮಾನಗಳಿಗೆ ಇಳಿಯಲು

ಜಾಗ ಸಿಗದೆ ಆಕಾಶದಲ್ಲಿ ಒಂದರ ಮೇಲೆ ಇನ್ನೊಂದರಂತೆ ಹಲವಾರು ವಿಮಾನ ಸುತ್ತುತ್ತಿರುತ್ತವೆ. ಅಥವಾ ಉಡ್ಡಾಯನ ಮಾಡಲು ಸಮಯ ದೊರೆಯದೆ ಹತ್ತಿಪ್ಪತ್ತು ವಿಮಾನಗಳು ರನ್‌ವೇಗೆ ಕ್ಯೂ ಹಚ್ಚಿರುತ್ತವೆ. ಎಲ್ಲ ವಿಮಾನ ಸಾರಿಗೆ ಸಂಸ್ಥೆಗಳೂ ಜಂಬೋಜೆಟ್‌ಗಳಿಗಾಗಿ ಕಾಯುತ್ತಿದ್ದಾರೆ.

ಲಾಗ್ವಾರ್ಡಿಯಾದಿಂದ ಟೈಮ್ಸ್ ಸ್ಕ್ವೇರ್‌ನಲ್ಲಿದ್ದ ಹೋಟಲ್ ಎಡಿಸನ್‌ಗೆ ಹೋಗಬೇಕಾಗಿತ್ತು. ವಿಮಾನ ನಿಲ್ದಾಣದಿಂದ ಬಸ್‌ನಲ್ಲಿ ಸಿಟಿ ಟರ್ಮಿನಸ್‌ಗೆ ನಮ್ಮ ಹೋಟಲ್ ಕೆಲವೇ ಬ್ಲಾಕ್ಸ್ ದೂರದಲ್ಲಿದ್ದುದರಿಂದ ಯಾವ ಟ್ಯಾಕ್ಸಿ ಯವನೂ ಬರಲು ಮುಂದೆ ಬರಲಿಲ್ಲ. ನಮ್ಮ ಮದ್ರಾಸ್ ಮತ್ತು ಮುಂಬಯಿ ಇದಕ್ಕಿಂತ ಎಷ್ಟೋ ಮೇಲು, ಆದರೆ ಬೆಂಗಳೂರು ಟ್ಯಾಕ್ಸಿ ವ್ಯವಸ್ಥೆ ನೆನಪಾಯಿತು. ಅಷ್ಟರಲ್ಲಿ ಅತ್ತಕಡೆ ಬಂದ ಸುಶಿಕ್ಷಿತ ನೀಗ್ರೋ ಯುವಕ ನಡೆಸುತ್ತಿದ್ದ ಟ್ಯಾಕ್ಸಿ ನಮ್ಮನ್ನು ಕರೆದೊಯ್ಯಲು ಮುಂದೆ ಬಂದಿತು. ಆತನ ನಾಗರಿಕ ವರ್ತನೆ ನಮ್ಮನ್ನು ವಿನೀತರನ್ನಾಗಿ ಮಾಡಿತು. ಟೈಮ್ಸ್ ಸ್ಕ್ವೇರ್‌ಗೆ ಎರಡೇ ಬ್ಲಾಕ್ ದೂರದಲ್ಲಿದ್ದ ನಮ್ಮ ಹೋಟಲ್ ಎಡಿಸನ್ ಸೇರಿದಾಗ ರಾತ್ರಿ ಕಾಲದ ನ್ಯೂಯಾರ್ಕ್ ರಘುಗರಘು ಮಿರುಗುತ್ತಿತ್ತು. ನಿಯಾನ್ ಸೈನ್ಸ್‌ನ ಜಾಹಿರಾತುಗಳು ಕಣ್ಣು ಕುಕ್ಕುತ್ತಿದ್ದುವು. ಟೈಮ್ಸ್ ಚೌಕದ ತುಂಬಾ ಜನವೇ ಜನ. ಹೊಲಸು ಹೊಲಸು ಚಿತ್ರಗಳ ಅಂಗಡಿಗಳ ಮುಂದೆ ಮುಂದೆ ಮುಂದೆ ಜನ. ನೈಟ್‌ಕ್ಲಬ್‌ಗಳ ಮುಂದೆ ಸಿನಿಮಾ ನಾಟಕ ಮಂದಿರಗಳ ಮುಂದೆ ಗುಂಪು ಗುಂಪು ಜನ. ಇಲ್ಲಿ ಸಿನಿಮಾಗಳಲ್ಲಿ ಒಳಗೆ ನಡೆಯು ತ್ತಿರುವ ಸಿನಿಮಾವನ್ನು ಕ್ಲೋಸ್ ಸರ್ಕ್ಯೂಟ್ ಟೆಲಿವಿಷನ್ ಮೂಲಕ ಹೊರಗೆ ತೋರಿಸುತ್ತಾ ಇರುತ್ತಾರೆ. ಗುಂಪು ಗುಂಪು ಜನ ಅಲ್ಲಿಯೇ ನಿಂತು ನೋಡುತ್ತಿರುತ್ತದೆ. ಕೊಂಚ ಸಮಯದ ಮೇಲೆ ಉತ್ಸಾಹಗೊಂಡು ಅನೇಕರು ಟಿಕೆಟ್ ಪಡೆದು ಒಳಗೆ ಹೋಗುತ್ತಾರೆ. ನೈಟ್‌ಕ್ಲಬ್‌ಗಳ ಮುಂದೆ ಬೃಹದಾಕಾರದ ನಗ್ನ ಚಿತ್ರಗಳನ್ನು ಪ್ರದರ್ಶಿಸುತ್ತಾರೆ. ದಿನ ವಿಡೀ ಕಷ್ಟಪಟ್ಟು ದುಡಿದು ಈ ಚಿತ್ರಗಳ ಮುಂದೆ ಹಲ್ಕಿರಿದು ನಿಂತು, ನೀರು ಸುರಿಸಿ ಒಳಗೆ ನಡೆದು ಖಾಲೀ ಜೋಬಾಗಿ ಮನೆ ಸೇರಿ ಉಪವಾಸ ಮಲಗಿ ಮನೆಯವರನ್ನು ಅನಂತ ಕಷ್ಟ ಕಾರ್ಪಣ್ಯಗಳಿಗೆ ಗುರಿಮಾಡುವುದು ಅನೇಕ ನೀಗ್ರೋಗಳ ಕೆಲಸ. ದಾರಿಯ ಪಕ್ಕದಲ್ಲಿ ಮಲಗಿ ರಾತ್ರಿ ಕಳೆವ

ನೀಗ್ರೋಗಳು, ಭಿಕ್ಷುಕರು, ಕಳ್ಳರು ಸುಲಿಗೆಗಾರರು, ಎಲ್ಲರೂ ಈ ಅಪರಾತ್ರಿಯಲ್ಲಿ ನಗರದ ಮನೋರಂಜನ ಕೇಂದ್ರವಾದ ಟೈಮ್ಸ್ ಚೌಕ ಸೇರುತ್ತಾರೆ. ಬೀದಿಯಲ್ಲಿ ಹಣಾಹಣಿ ಕಾಳಗ ನಡೆಯುತ್ತದೆ. ಸಾಕಷ್ಟು ಪೋಲೀಸರು, ಯಾವಾಗಲೂ ನ್ಯಾಯ ಮತ್ತು ಶಿಸ್ತನ್ನು ಕಾಪಾಡಲು ತಿರುಗುತ್ತಾರೆ. ಆದರೆ ಪ್ರತಿಯೊಬ್ಬ ನಾಗರಿಕನಿಗೆ ಓರ್ವ ಪೋಲಿಸನನ್ನು ನಿಯಮಿಸುವುದು ಯಾರಿಂದಲೂ ಸಾಧ್ಯವಿಲ್ಲ. ನ್ಯೂಯಾರ್ಕ್ ಎಲ್ಲಾ ವಿಚಾರದಲ್ಲಿ ಮಿತಿ ಮೀರಿ ಬೆಳೆದಿದೆ. ಅದರ ಬೆಳವಣಿಗೆಯ ನೆತ್ತಿಯ ಮೇಲೆ ಹಂಪೆಯ ವೀರಭದ್ರಸ್ವಾಮಿಯ ಶಿರೋಭಾಗದ ಮೇಲೆ ಬಡಿದಂತೆ ಮಳೆ ಬಡಿಯಬೇಕು. ಹಾಗಾದರೆ ನಗರ ಜೀವನ ಶಿಸ್ತಿಗೆ ತಲೆಬಾಗುತ್ತದೆ. ರಾತ್ರಿಯಾಗಲೇ ಸಾಕಷ್ಟು ಸಮಯವಾಗಿದ್ದುದರಿಂದ ಹೋಟಲ್‌ಗೆ ಹಿಂದಿರುಗುತ್ತಿದ್ದೆವು. ದಾರಿಯಲ್ಲಿ ಪಕ್ಕದ ಕಟ್ಟಡದಿಂದ ಮೈಸೂರಿನ ಜೂನಲ್ಲಿರುವಂತಹ ಕುಳ್ಳ ನೀಗ್ರೋನೊಬ್ಬ ಹೊರಗೆ ಬಂದ. ಅವನ ಹಿಂದೆ ಹತ್ತಾರು ಜನ, ಅದೇ ಉದ್ದ ಮತ್ತು ಅಗಲಳತೆಯ ಕುಳ್ಳರು ಪುದುಪುದು ಬಂದರು. ಕುಳ್ಳರ ಈ ಸೈನ್ಯವನ್ನು ನೋಡಿ ನಮಗೆ ಭಯಾಶ್ಚರ್ಯಗಳು ಒಮ್ಮೆಲೇ ಆವರಿಸಿದವು. ಇನ್ನೂ ಇವರ ನಂತರ ಏನು ಬರುತ್ತದೋ ಎಂದು ಯೋಚಿಸಿ ಬೇಗನೆ ನಮ್ಮ ಸುರಕ್ಷಿತ ಹೋಟಲ್ ಸೇರಿದೆವು. ಸ್ವಲ್ಪ ಹೊತ್ತಿನಲ್ಲೆ ವಾಂಕೂವರ್‌ನಿಂದ ಅಣ್ಣನ ಫೋನಿತ್ತು. ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲೆ ಕೆಲಸ ಮಾಡುತ್ತಿರುವ ಆತನ ಗೆಳೆಯನ ಮನೆಗೆ ಹೋಗಬೇಕೆಂದು ಹೇಳಿದನು. ಮಾರನೆಯ ದಿನ ಮುಂಜಾವಿನಲ್ಲಿ ಹೋಟಲ್‌ನಿಂದ ಚೆಕ್ ಔಟ್ (Check out) ಮಾಡಿ ಪಾರ್ಕ್‌ವೇ ವಿಲೇಜ್ ಎಂಬ ವಿಸ್ತರಣದಲ್ಲಿದ್ದ ಅಣ್ಣನ ಗೆಳೆಯನ ಮನೆಗೆ ಹೋದವು. ಮುಂದಿನ ನಮ್ಮ ನ್ಯೂಯಾರ್ಕ್ ವಾಸ್ತವ್ಯ ಅವರಲ್ಲಿಯೇ ಆಯಿತು.

ಶ್ರೀ ದರ್ಶನ ಜೋಹಾಲ್ ಪಂಜಾಬಿನಲ್ಲಿ ಜನ್ಮಿಸಿ ಹೊಸ ಜೀವನದ ಶೋಧದಲ್ಲಿ ಕೆನಡಾ ವಾಸಿಗಳಾಗಿದ್ದಾರೆ. ಸದ್ಯ, ಕೆನಡಾ ದೇಶದ ವತಿಯಿಂದ ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ಆಫ್ರಿಕನ್ ರಾಷ್ಟ್ರಗಳ ವಿಭಾಗದಲ್ಲಿ ಕೆಲಸ ಮಾಡುತ್ತಿರುತ್ತಾರೆ. ಕೆನಡಾ ದೇಶವಾಸಿಗಳಾದ ಹಿಂದೂ ಕನ್ಯೆಯನ್ನು ವರಿಸಿದ್ದಾರೆ. ರವೀನ, ಶೀಲಾ ಮತ್ತು ಪಾಲ್ ಎಂಬ ಮೂರು ಮಕ್ಕಳ ತಂದೆಯಾಗಿ ಸುಖವಾಗಿ ಇದ್ದಾರೆ. ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ

ಅನೇಕ ಭಾರತೀಯರು ಕೆಲಸ ಮಾಡುತ್ತಾರೆ. ಗ್ರಂಥಾಲಯ ವಿಭಾಗದ ಮುಖ್ಯಸ್ಥರಾದ ಶ್ರೀ ಸುರಜಿತ್ ಸಿಂಗ್ ಕಳೆದ ೧೬ ವರ್ಷದಿಂದ ಭಾರತದ ಪತಿಯಿಂದ ಕೆಲಸ ಮಾಡುತ್ತಿದ್ದಾರೆ. ಇಡೀ ಮಾನವತೆಯ ಆಶೋತ್ತರಗಳ ನಿಜರೂಪವಾದ ಈ ಸಂಸ್ಥೆಯಲ್ಲಿ ಭಾರತೀಯರು ಗಳಿಸಿರುವ ಪ್ರತಿಷ್ಠೆ ಗಮನೀಯವಾಗಿದೆ.

ಊಟದ ವ್ಯವಧಾನದಲ್ಲಿ ನಮ್ಮನ್ನು ಅತಿಯಾದ ಮುಜುಗರಕ್ಕೆ ಈಡು ಮಾಡಿದ ಪದಾರ್ಥವೆಂದರೆ ಚಿಕನ್ ಫ್ರೈ. ಶ್ರೀ ಜೋಹಾಲ್ ಅವರ ಮನೆ ಯಲ್ಲಿ ನಮ್ಮ ಒಂದೊಪ್ಪತ್ತಿನ ಊಟಕ್ಕೆ ಚಿಕನ್ ಫ್ರೈ ಮಾಡಲಾಗಿತ್ತು ಅಥವಾ ಪೇಟೆಯಿಂದ ತರಲಾಗಿತ್ತು. ಗರಿ ಗರಿಯಾಗಿ ಕರಿಯಲಾದ ಕೋಳಿಯ ಮಾಂಸದ ತುಂಡುಗಳನ್ನು ತಿನ್ನುವುದು ತುಂಬಾ ಅಸಹ್ಯವೆನಿಸುತ್ತದೆ. ಅನಿವಾರ್ಯವಾಗಿ ತಿನ್ನಬೇಕಾಗಿತ್ತು. ಈ ದೇಶದ ಟೇಬಲ್ ಮ್ಯಾನರ್ಸ್ ಬೇರೆ. ಈ ಪದಾರ್ಥವನ್ನು ಕೈಯಲ್ಲಿ ತೆಗೆದುಕೊಂಡು ಕಚ್ಚಿ ತಿನ್ನಬೇಕು. ಹಾಗೆ ಕಚ್ಚುವಾಗ ಹೆಚ್ಚು ಶಬ್ದವಾಗಬಾರದು. ಕೆಳಗೆ ಮೇಲೆ ಪುಡಿ ಉದರಬಾರದು. ಬಾಯಿಯ ಸೋಟಿಗೆ ಜಿಡ್ಡು ಹತ್ತಬಾರದು. ಅದೊಂದು ತರಹ ನನಗೇನೋ ತುಂಬಾ ಶ್ರಮದಾಯಕವೆನಿಸಿತು. ಮಿಕ್ಕವರು ನಾಲ್ಕಾರು ತುಂಡು ತಿನ್ನುವ ಹೊತ್ತಿಗೆ ನಾನಂತೂ ಪ್ರಯಾಸದಿಂದ ಒಂದನ್ನು ಮಾತ್ರ ಮುಗಿಸಿದ್ದೆ. ಆ ದಿವಸ ನನಗೆ ನಿಜವಾಗಿ ಹೊಟ್ಟೆ ತುಂಬಲಿಲ್ಲ. ಪಾರ್ಕ್‌ವೇ ವಿಲೇಜಿನಲ್ಲಿ ಹೋಟಲ್ ಹತ್ತಿರದಲ್ಲಿ ಇಲ್ಲ. ಸರಿ ಅರ್ಧರಾತ್ರಿ ಹಸಿವಿನಿಂದ ಎಚ್ಚರ ವಾದಾಗ ನಾಲ್ಕು ಲೋಟಾ ನೀರು ಕುಡಿದು ಸ್ವಾಮಿ ಭಗವಂತ, ಈ ಪದಾರ್ಥ ನನಗಿನ್ನು ಸಿಗದಿರಲೆಂದು ಧ್ಯಾನಿಸಿ ಮಾರನೆಯ ದಿನದ ಬೆಳಗಿನ ಫಳಾರದ ತಪಸ್ಸು ಮಾಡಿದೆ. ನಮ್ಮ ಬೆಳಗಿನ ಫಳಾರ ತುಂಬಾ ಚೆನ್ನಾಗಿ ರುತ್ತಿತ್ತು. ಏಕೆಂದರೆ ಕಾರ್ನ್‌ಫ್ಲೇಕ್ಸ್, ಓಟ್ಸ್ ಮಿಲ್ಕ್ ಇತ್ಯಾದಿ. ನಿಜವಾಗಿ ನಮ್ಮ ಪಾಯಸದಂತೆಯೇ ಇರುತ್ತಿದ್ದವು. ಹಾಯಾಗಿ ಹೊಟ್ಟೆ ತುಂಬಾ ಸಿಗುತ್ತಿದ್ದ ಈ ಪದಾರ್ಥಗಳನ್ನು ನಾನು ಅಮೇರಿಕೆಯನ್ನು ಬಿಡುವವರೆಗೆ ಬಿಡಲೇ ಇಲ್ಲ. ಇವುಗಳಿಂದ ಹೊಟ್ಟೆಗೆ ತಂಪು, ಮನಸ್ಸಿಗೆ ಶಾಂತಿ ಎರಡೂ ದೊರೆಯುತ್ತಿದ್ದವು. ನ್ಯೂಯಾರ್ಕ್ ಒಂದು ಸಂಚಿತ ಪ್ರಪಂಚ. ಅಮೇರಿಕೆಯ ಸಂಯುಕ್ತ ಸಂಸ್ಥಾನ ಮತ್ತು ಪ್ರಪಂಚದ ಎಲ್ಲಾ ಕಡೆಯ ಎಲ್ಲಾ ಬಾಡಕಟ್ಟಿನ

ಜನರನ್ನೂ ಇಲ್ಲಿ ಕಾಣಬಹುದು. ಅಖಂಡ ಬ್ರಹ್ಮಾಂಡದ ಜನರಿಗೆ ಎಡೆ ನೀಡಿದಂತೆ ನ್ಯೂಯಾರ್ಕ್ ಮಾನವನ ಎಲ್ಲಾ ಕ್ರೌರ್ಯ ಮತ್ತು ಪೈಶಾಚಿಕ ಕೃತ್ಯಗಳ ಬೀಡಾಗಿದೆ. ಈ ಪಟ್ಟಣದ ವಿಶ್ವರೂಪದ ಕಿರುಪರಿಚಯವಾದರೂ ಬೇಕೆಂದರೆ ಹಲವಾರು ವರ್ಷ ಇಲ್ಲಿಯ ಜೀವನದಲ್ಲಿ ಏಕಸೂತ್ರವಾಗಿ ದಿನ ಸವೆಸಿ ಅನುಭವಿಸಬೇಕು. ಪ್ರಪಂಚದ ಅನೇಕ ಕುಬೇರರು ಇಲ್ಲಿ ಬೀಡು ಬಿಟ್ಟಿದ್ದಾರೆ. ಸಂಪತ್ತಿನ ಶೇಖರಣೆಯಲ್ಲಿ ಮತ್ತು ಗಮನೀಯ ವಿತರಣೆಯಲ್ಲಿ ಮೇಲಾಟದಿಂದ ಈ ಸಂಸ್ಥೆಗಳು ಪ್ರವರ್ಧಮಾನಕ್ಕೆ ಒರುತ್ತಿವೆ.

ರಾಕ್‌ಫೆಲ್ಲರ್ ಸೆಂಟರ್ : "ನಗರದಲ್ಲೊಂದು ನಗರ"— ಈಗ ಸುಮಾರು ಮೂವತ್ತು ವರ್ಷಗಳಿಂದ ರಾಕ್‌ಫೆಲ್ಲರ್ ಸೆಂಟರ್ ನ್ಯೂಯಾರ್ಕ್ ನಗರದ ಪ್ರೇಕ್ಷಣೀಯ ಸ್ಥಳವೆನಿಸಿದೆ. ಇಲ್ಲಿಯ ಗಗನಚುಂಬಿ ಕಟ್ಟಡಗಳಲ್ಲಿ ಪ್ರಪಂಚದ ಸುಪ್ರಸಿದ್ಧ ವ್ಯಾಪಾರೀ ಸ್ಥಳಗಳು ನೆಲೆಗೊಂಡಿವೆ. ಮ್ಯಾನ್ ಹಟನ್ ದ್ವೀಪದ ಸರ್ವಾಕರ್ಷಣೆಯೂ ಈ ಕಟ್ಟಡಗಳಲ್ಲೆ ಸಂಚಿತಗೊಂಡಿದೆ. ಇಲ್ಲಿಯ ಅಂಗಡಿಗಳಲ್ಲಿ ಪ್ರಪಂಚದ ಏಳು ಖಂಡಗಳ ಸರಕುಗಳು ತುಂಬಿವೆ. ಇಲ್ಲಿಯ ಹೋಟಲುಗಳಲ್ಲಿ ಎಲ್ಲ ರೀತಿಯ ಅಡುಗೆ ದೊರೆಯುತ್ತದೆ. ಇಲ್ಲಿಯ ರೇಡಿಯೋ ಸಿಟಿ ಹಾಲ್ ಮಂದಿರದಲ್ಲಿ ಪ್ರಪಂಚದ ಮಹತ್ತರ ಸಿನಿಮಾ ಮತ್ತು ರಂಗಕಾಣಿಕೆಗಳು ಪ್ರಕಾಶಕ್ಕೆ ಬರುತ್ತವೆ. ಇಲ್ಲಿಯ ಮಾಳಿಗೆ ಮೇಲಿನ ತೋಟಗಳು, ಪ್ಲಾಜಾಗಳು, ಇಲ್ಲಿ ಕಾಣಬರುವ ನವೋನವ ಶಿಲ್ಪಗಳು. ನೋಡುಗನಿಗೆ ನಗರ ಸೌಂದರ್ಯದ ಅಪ್ರತಿಮ ಮಾದರಿಯನ್ನು ತೋರಿಸುತ್ತವೆ.

ಇಲ್ಲಿಯ ಕೆಳಗಿನ ಅಂತಸ್ತಿನಲ್ಲಿ ಚಟುವಟಿಕೆ ಆಕರ್ಷಣೆ ಹೆಚ್ಚು. ಶರದ್ ಕಾಲದಲ್ಲಿ ಹಿಮಾಚ್ಛಾದಿತ ರಂಗದ ಮೇಲೆ ಆಟಗಳನ್ನಾಡುತ್ತಾರೆ. ಉಳಿದ ಕಾಲದಲ್ಲಿ ಇಲ್ಲಿಯ ರೆಸ್ಟುರಾದ ಬಿಸಿಲು ಕೊಡೆಗಳ ಕೆಳಗೆ ಕುಳಿತು ಸಂದರ್ಶಕರು ಸುಖಪಡುತ್ತಾರೆ.

ಈ ಭವ್ಯ ಕಟ್ಟಡದಲ್ಲೆಲ್ಲಾ ಸುತ್ತಾಡಿ ನೋಡಲು ದಾರಿಗಳನ್ನು ಮಾಡಲಾಗಿದೆ. ಈ ಎಪ್ಪತ್ತು ಅಂತಸ್ತಿನ ಕಟ್ಟಡದ ತುದಿಗೆ ಹೋಗಿ ಸುತ್ತಲೂ ನೋಡಲು ಅನುಕೂಲವಿದೆ. ಇಲ್ಲಿಯ ರೇಡಿಯೋ ಸಿಟಿ ಹಾಲ್ ೬೨೦೦ ಜನ ಪ್ರೇಕ್ಷಕರಿಗೆ ಅವಕಾಶ ಒದಗಿಸುತ್ತದೆ. ಪ್ರಪಂಚದ ಅತಿದೊಡ್ಡ ರಂಗ

ಮಂದಿರವಾದ ಇಲ್ಲಿಯ ಒಂದು ಅನುಭವವನ್ನು ಯಾರೂ ಮರೆಯಲು ಸಾಧ್ಯವಿಲ್ಲ. ಇಲ್ಲಿರುವ ಇಪ್ಪತ್ತಕ್ಕೂ ಹೆಚ್ಚಿನ ಹೋಟೆಲ್‌ಗಳ ತಿಂಡಿ ಯನ್ನಾಗಲೀ ಅದಕ್ಕಾಗಿ ನಾವು ತೆರುವ ಆನೆಗಾತ್ರದ ಬಿಲ್ಲನ್ನಾಗಲೀ ಮರೆ ಯಲು ಸಾಧ್ಯವೇ ? ಈ ಸೆಂಟರಿನಲ್ಲಿಯೇ ಇರುವ ಎನ್.ಬಿ.ಸಿ. ಟೆಲಿವಿಷನ್ ಕಂಪನಿಯ ಸ್ಟುಡಿಯೋಗಳನ್ನು ನೋಡಿದೆವು. ಅದೇ ಸಂದರ್ಭದಲ್ಲಿ ಇಂಗ್ಲೆಂಡಿ ನಲ್ಲಿ ಪ್ರಿನ್ಸ್ ಚಾರ್ಲ್ಸ್‌ನಿಗೆ ಪ್ರಿನ್ಸ್ ಆಫ್ ವೇಲ್ಸ್ ಪಟ್ಟಕಟ್ಟುವ ಸಮಾರಂಭದ ರಿಲೇ ನಡೆಯುತ್ತಿತ್ತು. ಟೆಲಿವಿಷನ್‌ನಲ್ಲಿ ಆ ಸಂದರ್ಭವನ್ನು ನೋಡುವುದೇ ಒಂದು ಅಪೂರ್ವ ಅನುಭವ. ಪ್ರಪಂಚದ ಹಣವಂತರೆಲ್ಲಾ ಬಲಾಢ್ಯರೆನಿಸಿದ ರಾಕ್‌ಫೆಲ್ಲರ್ ಸೌಧ ನಿಜಕ್ಕೂ ಅವರ ಪ್ರತಿಷ್ಠೆಗೆ ತಕ್ಕುದಾಗಿದೆ. ನ್ಯೂಯಾರ್ಕ್ ನಗರದ ಜೀವ ಈ ಸೆಂಟರ್‌ನಲ್ಲಿಯೇ ಇದೆ ಎಂದು ಹೇಳಬಹುದು.

ಥಿಯೋಡೋರ್ ರೂಸ್‌ವೆಲ್ಟ್ ನಿವಾಸ : ನ್ಯೂಯಾರ್ಕ್ ನಗರ ದಲ್ಲಿಯೇ ಹುಟ್ಟಿ ಅಮೇರಿಕಾದ ಅಧ್ಯಕ್ಷರಾದ ಶ್ರೀಥಿಯೋಡೋರ್ ರೂಸ್‌ವೆಲ್ಟ್ ರವರುಹುಟ್ಟಿದ ಮನೆಯನ್ನು ರೂಸ್‌ವೆಲ್ಟ್ ಅಸೋಸಿಯೇಷನ್‌ನವರು ಕೊಂಡು ಅದನ್ನು ಪುನಃ ವ್ಯವಸ್ಥೆಗೊಳಿಸಿ ಅಂದವಾದ ಪ್ರದರ್ಶನವನ್ನು ಏರ್ಪಡಿಸಿದ್ದಾರೆ. ಇತ್ತೀಚೆಗೆ ಈ ಮಂದಿರಗಳನ್ನು ಅಮೇರಿಕೆಯ ಸರಕಾರವು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿದೆ. ನ್ಯೂಯಾರ್ಕಿನ ೨೮ ಈಸ್ಟ್ ೨೦ನೇ ಸ್ಟ್ರೀಟ್‌ನಲ್ಲಿರುವ ರೂಸ್‌ವೆಲ್ಟರ ಜನ್ಮಸ್ಥಾನ, ಅವರ ಕುರಿತಾದ ಅನೇಕ ವಸ್ತುಗಳನ್ನು ಒಳಗೊಂಡು ಅವರ ಕಾಲದ ಅಮೇರಿಕೆಯ ಸರ್ವಾಂಗೀಣ ಇತಿಹಾಸದ ಮೇಲೆ ಢಾಳವಾಗಿ ಬೆಳಕು ಚೆಲ್ಲುತ್ತದೆ.

ದೇಶದ ಅಭಿವೃದ್ಧಿಗೆ ದುಡಿದು ರಾಷ್ಟ್ರೀಯತೆಯ ಬುನಾದಿ ಹಾಕಿ, ಸ್ವಾಭಿಮಾನೀ ರಾಷ್ಟ್ರವೊಂದನ್ನು ಕಟ್ಟಿದ ಇಂತಹ ಮಹನೀಯರ ನೆನಪನ್ನು ಗಳಿಸಿಕೊಂಡು ಕೃತಜ್ಞತೆ ತೋರುವುದು ರಾಷ್ಟ್ರೀಯ ಧರ್ಮವೆನಿಸುತ್ತದೆ.

೧೯೦೧ ರಿಂದ ೧೯೦೯ ರವರೆಗೆ ಅಮೇರಿಕೆಯ ಅಧ್ಯಕ್ಷರಾಗಿ ಅವರು ತೋರಿದ ಧೀರತೆ, ದೂರದೃಷ್ಟಿ ಇಲ್ಲಿರುವ ಅನೇಕ ವಿಷಯಗಳ ಮೂಲಕ ವ್ಯಕ್ತವಾಗುತ್ತದೆ. ರೂಸ್‌ವೆಲ್ಟರು ಅಧ್ಯಕ್ಷ ಪದವಿಯಿಂದ ವಿರಮಿಸಿದ ಮೇಲೆ ಪುಸ್ತಕ ಬರೆದರು. ಆಫ್ರಿಕೆಯಲ್ಲಿ ಬ್ರೆಜಿಲ್‌ನಲ್ಲಿ ಬೇಟೆಯಾದರು ಆಕ್ಸ್‌ಫರ್ಡ್ ಮುಂತಾದ ವಿಶ್ವವಿದ್ಯಾಲಯಗಳಲ್ಲಿ ಉಪನ್ಯಾಸ ಮಾಡಿದರು.

ನೊಬೆಲ್ ಪ್ರೈಸ್ ಗಳಿಸಿದರು. ಹೀಗೆ ಹಲವಿಧವಾಗಿ ಈ ದೊಡ್ಡ ಜೀವ ತನ್ನ ಕೊನೆಯ ಗಳಿಗೆಯ ತನಕ ದೇಶಕ್ಕಾಗಿ ಹೋರಾಡುತ್ತಲೇ ಇತ್ತು. ಇವರ ಶ್ರೀಮತಿ ಎಲಿನಾ ರೂಸ್‌ವೆಲ್ಟ್ ಅವರು ತಮ್ಮ ಕೊನೆಗಾಲ(೧೯೬೨) ದವರೆಗೆ ಮಾನವನ ಮೂಲಭೂತ ಹಕ್ಕುಗಳಿಗಾಗಿ ಹೋರಾಡುತ್ತಲೇ ಇದ್ದರು.

ಹೊರದೇಶದಿಂದ ಬರುವ ಪ್ರವಾಸಿಗರಿಗೆ ಮತ್ತು ದೇಶದ ಮುಂದಿನ ನಾಗರಿಕರಾದ ಮಕ್ಕಳಿಗೆ ಇತಿಹಾಸದ ಪ್ರಭಾವೀ ಪಾಠವನ್ನು ಇಂತಹ ಸ್ಮಾರಕ ಭವನಗಳಿಂದ ಕೊಡಬಹುದೆನಿಸುತ್ತದೆ. ಪುಣೆಯಲ್ಲಿ ಶ್ರೀ ಲೋಕಮಾನ್ಯರ ಮನೆ, ವೀರ ಸಾವರ್ಕರರ ಮನೆ, ಬೆಂಗಳೂರಿನಲ್ಲಿ ವಿಶ್ವೇಶ್ವರಯ್ಯನವರ ಮನೆ, ಅ.ನ.ಕೃ. ಮನೆ, ಮದರಾಸಿನಲ್ಲಿ ಸತ್ಯಮೂರ್ತಿಯವರ ಮನೆ, ಆಂಧ್ರದಲ್ಲಿ ಪ್ರಕಾಶಂ ಆಗಲೀ ವೀರೇಶಲಿಂಗಂ ಪಂತಲು ಅವರ ಮನೆಯಾಗಲೀ ರಕ್ಷಿಸಲ್ಪಟ್ಟು ಬೋಧಕವಾಗಿ ಉಳಿದರೆ ಅದೆಷ್ಟು ಹಿತವಾದೀತು ?

ಇಲ್ಲಿಯ **ಮಾಡರ್ನ್ ಆರ್ಟ್ ಮ್ಯೂಸಿಯಂ** ಏಕಮೇವಾದ್ವಿತೀಯ ವಾಗಿದೆ.

ಪ್ರಪಂಚದ ಎಲ್ಲಾ ಕಡೆಯಿಂದ ಅಮೂಲ್ಯ ಶಿಲ್ಪ, ವರ್ಣಚಿತ್ರ ಮತ್ತು ಲೋಹಶಿಲ್ಪಗಳನ್ನು ಕಲೆಹಾಕಿದ ಶ್ರೀಮಂತ ರಾಕ್‌ಫೆಲ್ಲರ್ ಅಂತಹ ಮಹ ನೀಯರ ಸಂಗ್ರಹಗಳಿಂದ ಈ ಮ್ಯೂಜಿಯಂ ತುಂಬಿದೆ. ಈ ಮ್ಯೂಜಿಯಂನ ಪಾತಾಳಗೃಹದಲ್ಲಿ ಸಿನೇಮಾ ಇದೆ. ಮ್ಯೂಜಿಯಂ ನೋಡುಗರಿಗೆ ಪುಕ್ಕಟೆ ಯಾಗಿ ಹಳೆಗಾಲದ ಅತ್ಯುತ್ತಮ ಚಿತ್ರಗಳನ್ನು ಎಲ್ಲ ಕಡೆಯಿಂದ ತರಿಸಿ ಪ್ರತಿನಿತ್ಯ ಕೆಲ ನಿರ್ದಿಷ್ಟ ಸಮಯದಲ್ಲಿ ತೋರಿಸುತ್ತಾರೆ. ಅದೇ ಪಾತಾಳ ಗೃಹದಲ್ಲಿ ಪ್ರಸಿದ್ಧ ಕಲಾವಿದರ ಏಕವ್ಯಕ್ತಿ ಪ್ರದರ್ಶನಗಳನ್ನು ಏರ್ಪಡಿಸುತ್ತಾರೆ. ಸದ್ಯ ಹಾಲಿವುಡ್ ಸಿನಿಮಾ ರಂಗದ ಹೆಸರಾಂತ ತಾರೆ ಕ್ಯಾಥರೀನ್ ಹೆಪ್ ಬರ್ನ್ಳ ಸುಮಾರು ನಲವತ್ತು ವರ್ಷಗಳ ಕಲಾಜೀವನದ ಚಿತ್ರಮಯ ಪ್ರದ ರ್ಶನವಿತ್ತು. ಕಲೆಯನ್ನೂ ಕಲಾವಿದರನ್ನೂ ಗೌರವಿಸುವ ಈ ಪರಿಪಾಠ ಎಲ್ಲಾದರೂ ಅನುಕರಣೀಯ. ಮೇಲಿನ ಅಂತಸ್ತುಗಳಲ್ಲಿ ತೈಲವರ್ಣಚಿತ್ರ ಜಲವರ್ಣ ಚಿತ್ರ, ಫೋಟೋಗ್ರಫಿ, ಶಿಲಾಶಿಲ್ಪ, ಲೋಹಶಿಲ್ಪ, ಕಾಷ್ಠಶಿಲ್ಪ, ಇತ್ಯಾದಿ ಗ್ಯಾಲರಿಗಳಿವೆ. ಶಿಲ್ಪದ ಬಯಲು ವಸ್ತುಸಂಗ್ರಹಾಲಯ ಅಪೂರ್ವ

ವಾಗಿದೆ. ಫ್ರಾನ್ಸಿನ ಅಪೂರ್ವ ಶಿಲ್ಪಿ, ರೋಡಿನ್ ನಿರ್ಮಿಸಿದ ಲೇಖಕ ಬಾಲ್‌ಜಾಕ್‌ನ ವಿಗ್ರಹ ಮರೆಯಲಾರದುದು. ಇಲ್ಲಿರುವ ಪಿಕಾಸೋ, ಹೆನ್ರಿ ಮೂರ್, ಅಲೆಕ್ಸಾಂಡರ್ ಮತ್ತಿತರರ ಶಿಲ್ಪಗಳು, ಎಂದಿಗಾದರೂ ಆಧುನಿಕ ಕಲೆಯ ಮತ್ತು ಕಲಾತಂತ್ರದ ಮಾದರಿಗಳಾಗಿವೆ. ಇಲ್ಲಿಯ ಆಕರ್ಷಣೀಯ ವಿಭಾಗವೆಂದರೆ ಬರಲಿರುವ ಫರ್ನಿಚರ್, ಯಂತ್ರ, ಬಳಕೆಯ ಅನೇಕ ವಸ್ತು ಗಳ ಆಕರ್ಷಣೀಯ ಮಾದರಿಗಳು.

ನಟನೆ ಮತ್ತು ನಾಟ್ಯಕಲೆಯ ಅನೇಕ ವಿಧಾನಗಳ ಅಭಿವೃದ್ಧಿಗೆ ಅನುಕೂಲವಾಗುವಂತೆ ನಿರ್ಮಿತವಾದ ನಾಟ್ಯಮಂದಿರ ಗುಚ್ಛ-ಲಿಂಕನ್ ಕೇಂದ್ರ. ಈ ಕೇಂದ್ರದ ಸ್ಫೂರ್ತಿ ಅಬ್ರಾಹಂ ಲಿಂಕನ್ ಅಲ್ಲ, ನ್ಯೂಯಾರ್ಕಿನ ಕಲಾ ಪ್ರೇಮಿ ಶ್ರೀಮಂತ ಲಿಂಕನ್. ಇಲ್ಲಿ ಅಪೇರಾ, ಬ್ಯಾಲೆ, ಡ್ಯಾನ್ಸ್, ಡ್ರಾಮಾ ಗಳಿಗಾಗಿ ಪ್ರತ್ಯೇಕ ಮಂದಿರಗಳಿವೆ. ಮಂದಿರ ತಂತ್ರದಲ್ಲಿ ಅಲಂಕಾರದಲ್ಲಿ ಒಂದನ್ನೊಂದು ಮೀರಿಸಿವೆ. ಆಸ್ಟ್ರಿಯಾ ದೇಶದವರು ನೀಡಿರುವ ಸ್ಫಟಿಕ ನಿರ್ಮಿತ ಷಾಂಡೆಲಿಯರ್ ಈ ಮಂದಿರಗಳ ವಿಶೇಷ ಅಲಂಕಾರ. ಇಲ್ಲಿಯ ನಾಟಕಮಂದಿರದ ಸಂಘದವರು ಪ್ರತಿ ವರ್ಷ ಇಪ್ಪತ್ತು ವಾರಗಳವರಗೆ ಪ್ರದರ್ಶನ ನೀಡುತ್ತಾರೆ. ಅನೇಕ ವಾರಗಳ ಮುಂಚೆಯೇ ಟಿಕೆಟುಗಳು ಭರ್ತಿ ಮಾರಾಟವಾಗುತ್ತವೆ. ಪ್ರಪಂಚ ಪ್ರಸಿದ್ಧ ನಾಟಕಮಂದಿರ ಬ್ರಾಡ್ವೇಗೆ ಇಲ್ಲಿಂದ ಕಲಾವಿದರು ತಯಾರಾಗುತ್ತಾರೆ. ಈ ಮಂದಿರಗಳ ಮಧ್ಯೆ ಇರುವ ಕಾರಂಜಿಗಳ ಗುಚ್ಛ ಎಂಟು ಅಡಿಗಳಿಂದ ಎಂಭತ್ತು ಅಡಿಗಳವರೆಗೆ ಜಿಗಿಯ ಬಲ್ಲುದು. ಈ ಮಂದಿರಗಳ ಒಳಶೃಂಗಾರ ಸಾಟಿಯಿಲ್ಲದುದು. ಆವರಣ ಗಳಲ್ಲಿರುವ ಕಲಾಕೃತಿಗಳು ಅಸೂಯೆ ಪಡುವಂತಿವೆ.

ಪ್ರಪಂಚದಲ್ಲಿಯೇ ಅತಿ ಎತ್ತರವಾದ ಕಟ್ಟಡ ಎಂಪೈರ್ ಸ್ಟೇಟ್ ಬಿಲ್ಡಿಂಗ್. ೧೦೨ ಅಂತಸ್ತುಗಳ ಈ ಕಟ್ಟಡವನ್ನು ಮೀರಿಸುವ ಕಟ್ಟಡ ಸದ್ಯ ಪ್ರಪಂಚದಲ್ಲಿ ಎಲ್ಲಿಯೂ ಇಲ್ಲ. ಇನ್ನು ಐದು ವರ್ಷಗಳಲ್ಲಿ ತಯಾ ರಾಗುವ ಇಂಟರ್‌ನ್ಯಾಷನಲ್ ಟ್ರೇಡ್ ಸೆಂಟರ್ ಇದೇ ಪಟ್ಟಣದಲ್ಲಿದ್ದು ಪ್ರಪಂಚದ ಅತ್ಯುನ್ನತ ಸೌಧವೆಂದು ಹೆಸರನ್ನೂ ಗಳಿಸಲಿದೆ. ಅದರಲ್ಲಿ ೧೧೦ ಅಂತಸ್ತುಗಳಿರುತ್ತವೆ. ಎಂಪೈರ್ ಸ್ಟೇಟ್ ಬಿಲ್ಡಿಂಗ್ ನೋಡಲು ಬರುವ ಪ್ರವಾಸಿಗರಿಂದ ಸಾವಿರಾರು ಕೋಟಿ ಡಾಲರು ಆದಾಯವಿದೆ. ಕಟ್ಟಡದ

ತುದಿಯಲ್ಲಿ ನಿಂತು ದೈತ್ಯನ ವರವಾದ ನಗರವನ್ನು, ಮ್ಯಾನ್‌ಹಟನ್ ದ್ವೀಪ ವನ್ನು ಸುತ್ತುವರಿದು ಭೋರ್ಗರೆವ ಹಡ್ಸನ್ ನದಿಯನ್ನು, ಕಿರಿದಾಗಿ ಕಂಗೊಳಿಸುವ ಸ್ವಾತಂತ್ರ್ಯ ಶಿಲ್ಪವನ್ನು ಕಂಡಾಗ ಮನಸ್ಸು ಬೆಕ್ಕಸಬೆರಗಾಗುವುದು. ಪ್ರಪಂಚದ ಅತಿ ಎತ್ತರವಾದ ಮಾಳಿಗೆಯ ಮೇಲೆ ನಿಂತು ಯೋಚಿಸಿದಾಗ ಅದೊಂದು ನಿಜಕ್ಕೂ ಅವಿಸ್ಮರಣೀಯ ಅನುಭವವೆಂದು ಎನಿಸುತ್ತದೆ.

ನ್ಯೂಯಾರ್ಕ್‌ನ ಸಂದರ್ಶಕರಿಗೆ ನೋಡಿಯೇ ತೀರಬೇಕಾದ ಪವಿತ್ರ ಯಾತ್ರಾಸ್ಥಳ ಸಂಯುಕ್ತರಾಷ್ಟ್ರಸಂಸ್ಥೆ. ಇಲ್ಲಿಯ ಕಛೇರಿಗಳು, ಸಭಾಭವನಗಳು, ಅತ್ಯಾಧುನಿಕ ಅನುಕೂಲಗಳು ಯಾವ ಭೇದಭಾವವೂ ಇಲ್ಲದೆ ಮಾನವರೆಲ್ಲ ಸಮಾನರೆಂಬ ಉದ್ಧಾರಕ ಭಾವದ ಸೂತ್ರವನ್ನು ಕಂಡಾಗ, ಜಗತ್ತಿನ ಏಳ್ಗೆ ಸಂಯುಕ್ತರಾಷ್ಟ್ರಸಂಸ್ಥೆಯಿಂದಲೇ ಸಾಧ್ಯ ಎಂಬುದು ಖಚಿತವಾಗುತ್ತದೆ. ಸಣ್ಣ ದೊಡ್ಡ ಎಲ್ಲಾ ರಾಷ್ಟ್ರಗಳ ಲಾಂಛನ ಧ್ವಜಗಳೂ ಸಮಾನ ಮಟ್ಟದಲ್ಲಿ ಹಾರುವುದನ್ನು ಕಂಡಾಗ ಉಂಟಾಗುವ ತೃಪ್ತಿ; ಸಕಲ ದೇಶಗಳೂ ಸೇರಿ ಭವನಗಳನ್ನು ಸಹಕಾರ ಸಂತೋಷದಿಂದ ಸಿಂಗರಿಸುವುದನ್ನು ಕಂಡಾಗ ಪಡೆವ ತೃಪ್ತಿ; ರಷ್ಯಾದಂತಹ ಕಮ್ಯುನಿಸ್ಟ್ ರಾಷ್ಟ್ರ, ನಮ್ಮ ಕರವಾಲಗಳ ಕತ್ತರಿಸಿ ನೇಗಿಲಗಳ ಮಾಡೋಣ ಎಂಬ ಆದರ್ಶ ಶಿಲ್ಪವನ್ನು ನಿರ್ಮಿಸಿದುದನ್ನು ಕಂಡಾಗ ಸ್ಫುರಿಸುವ ಸಮಾಧಾನ ಎಲ್ಲಿಯೂ ದೊರೆಯದು. ನ್ಯೂಯಾರ್ಕ್ ನಗರದ ಹಿಪ್ಪೀ ಜನರ ಕೇಂದ್ರ ಗ್ರೀನ್‌ವಿಚ್ ವಿಲೇಜ್. ಈ ವಿಸ್ತರಣದ ಬೀದಿಗಳಲ್ಲಿ ಹಿಪ್ಪಿಗಳಿಗೆ ಬೇಕಾಗುವ ಸಾಧನಗಳ ಅಂಗಡಿಗಳಿವೆ. ಇಲ್ಲಿ ಎಲ್ಲ ದೇಶದ ಅಡಿಗೆ ಉಣಬಡಿಸುವ ಸುಲಭ ದರದ ಹೋಟಲುಗಳಿವೆ. ಹೆಣ್ಣು ಗಂಡಿನ ಸಂಬಂಧವನ್ನು ಕುರಿತು ತೋರಿಸುವ ನಾಗರಿಕ ಸಮಾಜ ಅಸಹ್ಯವೆಂದು ಕರೆವ ಕೀಳು ಸಿನಿಮಾಗಳು, ಹಿಪ್ಪೀ ಕಲಾವಿದರ ಅಂಗಡಿಗಳು ಮತ್ತು ಹಿಪ್ಪಿಗಳ ಬಿಡಾರಗಳೂ ಇವೆ. ವಾಷಿಂಗ್‌ಟನ್ ಸ್ಮಾರಕ ಚೌಕದಲ್ಲಿ, ಕಾಲುದಾರಿಗಳಲ್ಲಿ, ಮನೆಗಳ ಮೆಟ್ಟಲುಗಳ ಮೇಲೆ ಎಲ್ಲಿ ಬೇಕಾದರಲ್ಲಿ ಹಿಪ್ಪಿಗಳೂ ನೀಗ್ರೋಗಳೂ ಆನಂದದಿಂದ ಸಮಯದ ಬಾಧೆಯಿಲ್ಲದೆ ಕಾಲ ಕಳೆಯುತ್ತಾರೆ. ಹತ್ತು ಡಾಲರ್ ಸಂಪಾದಿಸುವುದಕ್ಕಾಗಿ ಕಳವು, ಖೂನಿ, ಸುಲಿಗೆ ಮಾಡುತ್ತಾರೆ. ಹುಡುಗಿಯರು ಏಕಾಕಿಯಾಗಿ ಸಿಕ್ಕರೆ ಮಾನ ತೆಗೆಯುತ್ತಾರೆ. ಮಕ್ಕಳನ್ನು ಕದ್ದು ತಂದೆತಾಯಿಗಳಿಂದ

ಸುಲಿಗೆ ಮಾಡುತ್ತಾರೆ. ಪೋಲಿಸರಿಗೆ ಇದೊಂದು ದೊಡ್ಡ ಸಮಸ್ಯೆ. ಒಬ್ಬರನ್ನು ಬಂಧಿಸಿದರೆ ನೂರಾರು ಜನ ನಮ್ಮನ್ನೂ ಕರೆದೊಯ್, ಕರೆದೊಯ್ ಎಂದು ಬೊಬ್ಬಿಡುತ್ತಾರೆ ಮತ್ತು ಬೇಡಿ ಹಾಕಿಕೊಳ್ಳಲು ಕೈ ಯೊಡ್ಡುತ್ತಾರೆ, ಭಯಂಕರ ಆನಂದ ತತ್ವದ ಭಯಂಕರ ಕಾಡುಪ್ರಾಣಿ ಗಳಂತೆ ಗಡ್ಡ ಮೀಸೆ ಖಮಟು ವಾಸನೆ ಹರಿದ ಚಲ್ಲಣಗಳಿಂದ ಓಡಾಡುವ ಜನರಿಂದ ತುಂಬಿದ ಈ ವಿಸ್ತರಣ ಇಪ್ಪತ್ತೊಂದನೇ ಶತಮಾನದ ಪ್ರಪಂಚಕ್ಕೆ ಬೆಳಕಿಂಡಿಯೆಂದು ಹೇಳಲಾಗುತ್ತದೆ.

ಸರ್ಕಲ್ ಲೈನ್‌ನವರ ಹಡ್ಸನ್ ನದಿ ವಿಹಾರದಲ್ಲಿ ಮ್ಯಾನ್‌ಹಟನ್‌ದ್ವೀಪ ವನ್ನು ಸುತ್ತುಹಾಕಿದೆವು, ಫ್ರೆಂಚ್ ಕಲಾವಿದರಿಂದ ನಿರ್ಮಿಸಲ್ಪಟ್ಟ ಫ್ರೆಂಚ್ ಜನ ತೆಯ ಪ್ರೀತಿ ವಿಶ್ವಾಸಗಳ ಉಡುಗೊರೆಯೆಂದು ನೀಡಲ್ಪಟ್ಟ ಬೃಹತ್ತಾದ ಸ್ವಾತಂತ್ರ್ಯ ಪ್ರತಿಮೆ ಪ್ರತ್ಯೇಕ ದ್ವೀಪದಲ್ಲಿದೆ. ಗಂಭೀರವಾಗಿ ಮತ್ತು ಅರ್ಥ ಮಯ ರೀತಿಯಲ್ಲಿ ಈ ಪ್ರತಿಮೆ ಅಮೇರಿಕೆಯ ಆತ್ಮದ ಆಕಾಂಕ್ಷೆಯನ್ನು ತೋರಿ ಸುತ್ತದೆ.

ನ್ಯೂಯಾರ್ಕಿನ ಹೃದಯದಂತಿರುವ ಮ್ಯಾನ್‌ಹಟನ್ ದ್ವೀಪವನ್ನು ಸುತ್ತುವರಿದಾಗ ಕಂಡುಬರುವ ಭಾರೀ ಬಂದರುಗಳು, ಸಂಸ್ಥೆಗಳು, ಯಾಂಕೀ ಸ್ಟೇಡಿಯಂ ಮತ್ತಿತರ ಅಮೇರಿಕೆಯ ಅಭಿಮಾನ ಸೌಧಗಳು, ಕೊಲಂಬಿಯಾ, ನ್ಯೂಯಾರ್ಕ್ ಮುಂತಾದ ವಿಶ್ವವಿದ್ಯಾಲಯಗಳು, ಯುಕ್ತ ರಾಷ್ಟ್ರಸಂಸ್ಥೆ, ಇತರ ಸಂಸ್ಥೆಗಳು, ಮಾರಥಾನಿನ ರಮ್ಯ ಚಲಚ್ಚಿತ್ರದಂತೆ ಹಾಯ್ದು ಕಣ್ಮರೆ ಯಾಗುತ್ತವೆ. ಈ ಚಿಕ್ಕ ಹಡಗದಲ್ಲಿ ನಡೆವ ಅಂತಃಕರಣದಾಟ, ಪ್ರೇಮ ಸಲ್ಲಾಪ, ಗೇಲಿ ಮತ್ತು ಮಕ್ಕಳ ಗಡಿಬಿಡಿ ಅನುಭವಯೋಗ್ಯವಾದುವು.

ನ್ಯೂಯಾರ್ಕ್ ನಗರದ ಮತ್ತು ಜೀವನದ ಇತಿಹಾಸವನ್ನು ಸಿಟಿ ಆಫ್ ನ್ಯೂಯಾರ್ಕ್ ಮ್ಯೂಸಿಯಂನಲ್ಲಿ ಕಾಣುತ್ತೇವೆ. ನೂರಾರು ವರ್ಷ ಗಳ ಹಿಂದಿನ ವಾಲ್‌ಸ್ಟ್ರೀಟ್ ಅಕ್ಕಸಾಲಿಗನ ಬಜಾರು, ಆಗಿನ ಮನೆಗಳ ಒಳ ವ್ಯವಸ್ಥೆ, ಕಾಲಾಂತರದಲ್ಲಿ ನ್ಯೂಯಾರ್ಕ್‌ನಲ್ಲಿ ನಡೆದ ಕದನಗಳೂ ಅಗ್ನಿ ಪ್ರಮಾ ದಗಳೂ ವಿಶೇಷ ಸಮಾರಂಭಗಳೂ ವಿವಿಧ ಸ್ಥಳಗಳಲ್ಲಿ ದೈತ್ಯಾಕಾರಕ್ಕೆ ಬೆಳೆದು ನಿಂತ ನ್ಯೂಯಾರ್ಕ್ ಪಟ್ಟಣದ ಕರುಣಭರಿತ ಮತ್ತು ಕಷ್ಟಮಯ ಕತೆ ಇಲ್ಲಿದೆ.

ಈ ಮ್ಯೂಜಿಯಂನ ಎದುರಿಗಿರುವ ಸೆಂಟ್ರಲ್ ಪಾರ್ಕ್ ಮತ್ತು ಅಕ್ಕ ಪಕ್ಕದ ವಿಸ್ತರಣ ನ್ಯೂಯಾರ್ಕ್ ನಗರದ ವಿವಿಧ ಜನಾಂಗಗಳ ಕೈಯಲ್ಲಿ ಪಡೆಯುತ್ತಿರುವ ಯಾತನೆಯನ್ನು ತೋರಿಸುತ್ತವೆ. ಇಲ್ಲಿ ವಾಸಿಸುವ ನೀಗ್ರೋ ಗಳು ಇಲ್ಲಿಯ ಸಾರ್ವಜನಿಕ ಮತ್ತು ಸ್ವಂತ ಜಾಗಗಳನ್ನು ಅತ್ಯಂತ ಅಸ್ವಚ್ಛ ವಾತಾವರಣದಲ್ಲಿ ಇಟ್ಟಿರುತ್ತಾರೆ, ಮನೆಯ ಕಟ್ಟೆಗಳ ಮೇಲೆ ರಸ್ತೆ ಚೌಕ ಗಳಲ್ಲಿ ಕುಳಿತು ನಾಲ್ಕಾರು ಜನ ಸೇರಿ ಮದ್ಯಪಾನ ಮಾಡುತ್ತಾರೆ. ಸಮ ಯಕ್ಕೆ ಬೆಲೆ ಕೊಡದೆ ನಿರಂತರ ಹರಟೆ ಹೊಡೆಯುತ್ತಾರೆ. ಪಾರ್ಕುಗಳಂತೂ ಭೀಕರವಾಗಿವೆ. ಮುದುಕಿಯರು, ಹರೆಯದವರು ಏಕಾಕಿಯಾಗಿ ದೊರೆತರೆ ಅವರ ಮಾನ ಪ್ರಾಣ ಉಳಿಯುವ ಸಂಭವವಿಲ್ಲ. ಪಾರ್ಕುಗಳ ಬೆಂಚಿನ ಮೇಲೆ ಹುಲ್ಲು ಹಾಸಿನಮೇಲೆ ವಿಪರೀತ ಗಲೀಜು ಮಾಡುತ್ತಾರೆ. ಈ ಎಡೆ ಗಳಲ್ಲಿ ಒಂದು ರೀತಿಯ ಭಯಮಿಶ್ರಿತ ವಾತಾವರಣ ಆವರಿಸುತ್ತದೆ. ನೀಗ್ರೊ. ಸಮಸ್ಯೆಯ ನಿವಾರಣೆಗೆ ಪರಸ್ಪರ ಮದುವೆಗಳೇ ಸಾಧನವೆಂದು ಹೇಳ ಬಹುದು. ಅನೇಕ ಶ್ವೇತಕನ್ಯೆಯರು ಕಪ್ಪು ಯುವಕರನ್ನು, ಕಪ್ಪು ಕನ್ಯೆಯ ರನ್ನು ಶ್ವೇತ ಯುವಕರೂ ಮದುವೆಯಾಗುತ್ತಿರುವುದು ಸಂತೋಷದ ಸಂಗತಿ: ಕಪ್ಪು ಜನರಲ್ಲಿ ಅಡಗಿರುವ ಕಲಾತ್ಮಕತೆ, ಹುಟ್ಟು ಜೀವನ ರಸಿಕತೆ ಮತ್ತು ಬಿಳಿಯರಲ್ಲಿ ಅಳವಟ್ಟಿರುವ ನಾಗರಿಕ ಸಂಸ್ಕಾರ ಪರಸ್ಪರ ಪೂರಕವಾಗಿ ಬೆಳೆದು ನವ್ಯ ಅಮೇರಿಕೆಗೆ ಶಕ್ತಿಯುತ ನವಸಂತಾನವನ್ನು ಪ್ರಸಾರಿಸಬಹುದು.

ಇಲ್ಲಿ ಸದ್ಯ ಜನರಂಜಕವಾಗಿ ನಡೆಯುತ್ತಿರುವ ನಾಟಕದ ಹೆಸರು "ಓಹ್ ಕಲ್ಕತ್ತಾ". ಈ ನಗ್ನ ದೃಶ್ಯಗಳ ನವ್ಯನಾಟಕಕ್ಕೂ ಕಲ್ಕತ್ತೆಯ ಹೆಸರಿಗೂ ಸಂಬಂಧವೇ ಇಲ್ಲ. ನಾಟಕಕರ್ತ ಹೆಸರಿಗಾಗಿ ಹುಡುಕುತ್ತಿದ್ದಾಗ ದುರ ದೃಷ್ಟವಶಾತ್, ಧ್ವನಿಯುಕ್ತವಾಗಿ ಕಂಡ 'ಕಲ್ಕತ್ತೆ' ನಾಟಕಕ್ಕೆ ಶಿರೋನಾಮೆ ಯಾಯಿತು.

ನ್ಯೂಯಾರ್ಕಿನ ನಮ್ಮ ಜೀವನದಲ್ಲಿ ನಮಗೆ ಕೊಂಚ ಶಾಂತಿ ನೀಡಿದವರು ದರ್ಶನ್ ದಂಪತಿಗಳ ಮಕ್ಕಳು. ಕಿರಿಯ ಮಗು ರವೀನಾ ಮತ್ತು ಶೀಲಾ ಮನೆಯಲ್ಲಿ ಮಕ್ಕಳನ್ನು ಬಿಟ್ಟು ದೂರದ ನಾಡಿಗೆ ಬಂದ ನಮಗೆ ಮನೆಯಿಂದ ದೂರದ ಮನೆಯೊಂದನ್ನು ತೋರಿದರು. ಅಲ್ಲೇ ಮಾತುಗಳಿಂದ ತುಂಟಾಟಗಳಿಂದ ಮತ್ತು ಮಕ್ಕಳಾಟಿಕೆಯಿಂದ ಮುಗ್ಧಪ್ರೇಮದಿಂದ ಅಂತಃ

ಕರಣವನ್ನು ಕಲಿಕಿದರು ಈ ಎಳೆಯರು. ಒಂದು ದಿನ ರಾತ್ರಿ ಸುತ್ತಾಡಿ ಮರಳಿ ಮನೆಗೆ ಬರುವಾಗ ಪಾರ್ಕವೇ ವಿಲೇಜಿನಲ್ಲಿ ನಮಗೆ ದಾರಿ ತಪ್ಪಿತು. ಹಾದಿಯಲ್ಲಿ ಎದುರಾದ ಮಹನೀಯರೊಬ್ಬರು ಭಾರತೀಯ ನಿವಾಸಿಯೋರ್ವನ ಮನೆಗೆ ಕರೆದೊಯ್ದರು. ಆತನ ದಯದಿಂದ ಪಕ್ಕದ ರಸ್ತೆಯಲ್ಲಿಯೇ ಇದ್ದ ಮನೆ ಸೇರಿದೆವು. ಇಲ್ಲಿ ಮತ್ತು ಯೂರೋಪಿನಲ್ಲಿ ಜನ ತುಂಬಾ ಸಹಾಯಾಸಕ್ತರು. ಇಂಗ್ಲೆಂಡಿನಲ್ಲಂತೂ ನಾವು ಕೇಳುವುದಕ್ಕಿಂತ ಮುಂಚೆಯೇ ಜನರು ನಿಮಗೆ ನೆರವು ಬೇಕೇ ಎನ್ನುತ್ತಿದ್ದರು. ನ್ಯೂಯಾರ್ಕ್ ತನ್ನ ರಾಕ್ಷಸಾಕಾರದಿಂದ, ದೈತ್ಯ ಯಂತ್ರಶಕ್ತಿಯಿಂದ, ಅನಂತ ಮಾನವತೆಯಿಂದ. ನಿರ್ದಯತೆಯಿಂದ ಮತ್ತು ಶ್ರೀಮಂತಿಕೆಯ ಅಟ್ಟಹಾಸದಿಂದ ಗಮಿಮಾನವನಿಗೆ ಬೇಸರ ತಂದ ಕಾಮಾಸಕ್ತಿಯಿಂದ, ಭೀಕರ ನಿಷ್ಠುರ ವಾಸ್ತವತೆಯಿಂದ, ಅಂತರರಾಷ್ಟ್ರೀಯತೆಯಿಂದ ಪೌರ್ವಾತ್ಯ ಆಗಂತುಕನನ್ನು ದಂಗುಗೊಳಿಸುತ್ತದೆ. ಗಂಡಸುತನಕ್ಕೆ ಸವಾಲು ಹಾಕುತ್ತದೆ. ಸವಾಲನ್ನು ಮೆಟ್ಟಿ ಎದುರಿಸಲು ಸಾಹಸ ಮಾಡಿದ ಜನ ನ್ಯೂಯಾರ್ಕಿನ ಭಾಗವಾಗುತ್ತಾರೆ. ಅದರ ಪ್ರೀತಿಗೊಳಗಾಗುತ್ತಾರೆ.

ಅಮೇರಿಕನ್ ಏರ್‌ಲೈನ್ಸ್ ಸಾರಿಗೆಯಲ್ಲಿ ಲಾಗ್ವಾರ್ಡಿಯಾದಿಂದ ನ್ಯೂಯಾರ್ಕ್ ಬಿಡುವಾಗ ನಮಗೆ ತೃಪ್ತಿಯೇನೋ ಆಗಿರಲಿಲ್ಲ. ನಮ್ಮ ವಿಮಾನ ವಾಷಿಂಗ್‌ಟನ್ ಡಿ.ಸಿ.ಯ ಜಾನ್ ಫಾಸ್ಟರ್ ಡಲ್ಲೆಸ್ ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ಇಳಿದಾಗ ನಮ್ಮ ಮನಸ್ಸು ಇನ್ನೂ ನ್ಯೂಯಾರ್ಕಿನ ಅನಂತ ಮುಖಗಳ ಮೆಲುಕು ಹಾಕುತ್ತಿತ್ತು. ಇಷ್ಟೊಂದು ಜನ ಅಂಥ ಒಂದು ಚಿಕ್ಕ ಪ್ರದೇಶದಲ್ಲಿ ಯಾವುದೇ ರೀತಿಯಲ್ಲಿ ಬದುಕು ನಡೆಸಿರುವುದೊಂದೇ ನಿಜವಾದ ವಿಷಯ. ಬದುಕಿನ ರೀತಿಯನ್ನು ಯಾರೂ ರೂಪಿಸುವುದಿಲ್ಲ. ನಗರದ ಬೆಳವಣಿಗೆಯ ಘಟ್ಟಗಳು ತನ್ನಷ್ಟಕ್ಕೆ ತಾನು ಒಂದು ಜೀವನಧರ್ಮವನ್ನು ನಿರ್ಮಿಸುತ್ತವೆ. ಅದು ಬಿಡುಗಡೆಯಿಲ್ಲದ ಬಂಧನ.

ವಾಷಿಂಗ್‌ಟನ್ ಡಿ.ಸಿ. : ಅಮೇರಿಕನ್ ಏರ್‌ಲೈನ್ಸ್ ಕಂಪನಿಯ ಈ ಸಾರಿಗೆ ಮೂರು ತಾಸು ತಡವಾಗಿ ವಾಷಿಂಗ್‌ಟನ್ ಸೇರಿತು. ಬಹುಶಃ ವಿಮಾನದ ಕೊರತೆಯಿಂದಲೋ ಅನಿರೀಕ್ಷಿತ ಪ್ರಯಾಣದುಬ್ಬರದಿಂದಲೋ ಏನೋ ಸಮಯಕ್ಕೆ ಸರಿಯಾಗಿ ಈ ಸಾರಿಗೆ ಜರುಗಲಿಲ್ಲ. ವಿಮಾನ ಏರಿದ

ಮೇಲೆ ಆ ಅಮಾನುಷ ಶಬ್ದದಲ್ಲಿ ಒಂದು ತಾಸು ಪರ್ಯಂತ ರನ್‌ವೇ ಖಾಲಿ ಇಲ್ಲದ ಕಾರಣ ಕಾಯುತ್ತಾ ಸಿಲ್ದಾಣದಲ್ಲಿಯೇ ನಿಂತಿದ್ದಂತೂ ಶುದ್ಧವಾದ ಹಿಂಸೆ. ವಾಷಿಂಗ್‌ಟನ್ನಿನ ನ್ಯಾಷನಲ್ ನಿಲ್ಮನೆಗೆ ಸೇರಬೇಕಾಗಿದ್ದ ನಾವು ಅಪರಾತ್ರಿಯಾದ ಕಾರಣ ಅತ್ಯಾಧುನಿಕವಾದ ಡಲ್ಲೆಸ್ ಅಂತಾರಾಷ್ಟ್ರೀಯ ನಿಲ್ಮನೆಗೆ ಇಳಿದೆವು. ಅಲ್ಲಿಂದ ನಗರದ ಟರ್ಮಿನಲ್‌ಗೆ ತಾಸಿನ ಮೇಲೆ ಪಯಣಿಸಿ ನಮ್ಮ ಗಮ್ಯಸ್ಥಾನ ಮಾಂಜರ್ ಅನಾಪೊಲೀಸ್(MANGER ANNAPOLIS) ಸೇರುವ ಹೊತ್ತಿಗೆ ಮಾರನೆಯ ದಿನದ ಪ್ರಸವ ನಡೆದಿತ್ತು.

ಅಬ್ರಹಾಂ ಲಿಂಕನ್‌ಗೆ ದೇಶ ಸಲ್ಲಿಸಿದ ಕೃತಜ್ಞತೆಯ ಕುರುಹು ಲಿಂಕನ್ ಮೆಮೋರಿಯಲ್. ೧೮ ಅಡಿ ಎತ್ತರದ ಆಜಾನುಬಾಹು ಶಿಲಾವಿಗ್ರಹ ವಿರೋಧಿಯನ್ನು ಮಣಿಸುತ್ತದೆ. ಒಳಿತಿನ ಅಖಂಡ ಸತ್ತ್ವವನ್ನು ಅಬ್ರಹಾಮನ ವರ್ಚಸ್ಸಿನಲ್ಲಿ ಕಾಣುತ್ತೇವೆ ಅವನ ದಾರಿದೀಪದಂತಹ ಮಾತುಗಳನ್ನು ಗೋಡೆಯ ಮೇಲೆ ಕೆತ್ತಿದ್ದಾರೆ. ಆ ಮಾತುಗಳ ಹಿಂದಿನ ಸುಸಂಸ್ಕೃತ ಹೃದಯ, ದೂರಗಾಮೀ ಭಾವನೆ, ಕಾಲವನ್ನು ಮೆಟ್ಟಿನಿಂತ ಧೀರತೆ ಅಬ್ರಹಾಮನನ್ನು ಅಮರಗೊಳಿಸಿವೆ. ಸ್ಮಾರಕವನ್ನು ಸುತ್ತುವರಿದ ಮಂಟಪದ ಮೇಲುಕುಂಚಿಯನ್ನು ಸಂಯುಕ್ತ ಸಂಸ್ಥಾನದ ೫೧ ರಾಜ್ಯಗಳು ಮರ್ಯಾದೆ ತೋರಿ ಎತ್ತಿ ಹಿಡಿದಿವೆ. ಅಬ್ರಹಾಮನ ಎದುರಿಗೆ ನೇರವಾಗಿ ಎರಡು ಮೈಲಿನ ಮೇಲಿರುವ ವಾಷಿಂಗ್‌ಟನ್ ಕೋನಶಿಲೆ ೨೫೦ ಅಡಿಗಳಿಗೆ ಮೇಲ್ಪಟ್ಟು ಎತ್ತರವಾದ ಸುಭದ್ರಗವಾದ ಕುಂದಿಲ್ಲದ ಸ್ತಂಭ. ಈ ಸ್ತಂಭದ ಗರ್ಭದಲ್ಲಿ ಅದರ ತುದಿಗೇರಲು ವಿದ್ಯುತ್ತೊಟ್ಟಿಲಿನ ವ್ಯವಸ್ಥೆ ಮಾಡಿದ್ದಾರೆ. ಯಾರೂ ಮುಟ್ಟದ ಎತ್ತರಕ್ಕೆ ನಿಮಿರಿ ನಿಂತು, ಹೊಸ ತತ್ತ್ವವನ್ನು, ಮಾನುಷ್ಯನ ಮೂಲಭೂತ ಸ್ವಾತಂತ್ರ್ಯವನ್ನು ಎತ್ತಿ ಹಿಡಿದ ಕಾರಣಪುರುಷ ವಾಷಿಂಗ್‌ಟನ್ ಅಮೇರಿಕೆಯ ಪುಣ್ಯಪುರುಷರಲ್ಲಿ ಅಗ್ರನಾಗಿದ್ದಾನೆ. ಇದರಂತೆ ಅಮೇರಿಕೆಯ ಘಟನಾರಚಯಿತ ಮತ್ತು ಸ್ವಾತಂತ್ರ್ಯ ಭಾಷ್ಯಕಾರ ಥಾಮಸ್ ಜೆಫರ್‌ಸನ್ ಹದಿನೆಂಟು ಅಡಿ ಎತ್ತರದ ಶಿಲಾವಿಗ್ರಹದಲ್ಲಿ ನಿಂತು ಅಮೇರಿಕನರಿಗೆ ಸ್ವಾತಂತ್ರ್ಯ ರಕ್ಷಣೆಯ ಭಾರವನ್ನು ಮತ್ತೆ ಮತ್ತೆ ಎಚ್ಚರಿಸುತ್ತಿದ್ದಾನೆ. ಫ್ರಾಂಕ್ಲಿನ್

ರೂಸ್‌ವೆಲ್ಟ್‌ರ ಕಾಲದಲ್ಲಿ ಕಟ್ಟಲ್ಪಟ್ಟ ಜೆಫರ್‌ಸನ್ ಸ್ಮಾರಕ ಲಿಂಕನ್ ಸ್ಮಾರಕದ ಮಾದರಿಯದೇ ಆದರೂ ಶಿಲ್ಪವೈಶಿಷ್ಟ್ಯವನ್ನು ಪಡೆದಿದೆ. ವಾಷಿಂಗ್‌ಟನ್ ನಗರದ ಪರಮ ದುಃಖಮಯ ಸ್ಥಳವೆಂದರೆ ಆರ್ಲಿಂಗ್‌ಟನ್ ಶ್ಮಶಾನ. ಭಗವತ್ ಕೃಪೆಯಿಂದ ನಾಡಿನ ಉದ್ಧಾರಕ್ಕಾಗಿ ಜನಿಸಿದ ಅಮೂಲ್ಯ ನಾಯಕರಾದ ಜಾನ್ ಮತ್ತು ರಾಬರ್ಟ್ ಕೆನಡಿಯವರ ಸಮಾಧಿಗಳಷ್ಟು ದುಃಖ ಮತ್ತು ಸಂತಾಪದಾಯಕ ಸ್ಥಳಗಳು ಪ್ರಪಂಚದಲ್ಲಿ ವಿರಳವೆಂದೇ ಹೇಳಬೇಕು. ವಿಶ್ವದ ಇತಿಹಾಸವನ್ನೇ ಬದಲು ಮಾಡುವ ಚೈತನ್ಯದ ದರ್ಶನ ಮಾಡಿಸಿದ್ದ ಈ ನಾಯಕರು ರಾಕ್ಷಸೀ ಶಕ್ತಿಗಳ ಗುಂಡಿಗೆ ಬಲಿಯಾದದ್ದು ಅಮೇರಿಕೆಯ ಇತಿಹಾಸದಲ್ಲಿ ಅಳಿಸಲಾರದ ಕಲಂಕ ಮತ್ತು ಭರಿಸಲಾರದ ನಷ್ಟ. ಅನೇಕ ಆಂತರಿಕ ಮತ್ತು ಅಂತಾರಾಷ್ಟ್ರೀಯ ಸಂಕಷ್ಟಗಳ ಮಧ್ಯೆ ಬಳಲುತ್ತಿರುವ ಅಮೇರಿಕೆಯಂತಹ ಬಲಿಷ್ಠ ರಾಷ್ಟ್ರಕ್ಕೆ ದೇಶದ ಆತ್ಮಜ್ಞಾನವುಳ್ಳ ನಾಯಕರು ಬೇಕು. ಅಂತಹ ನಾಯಕರು ಬಂದರೂ ಅವರನ್ನು ಉಳಿಸಿಕೊಳ್ಳಲಾರದೆ ಹೋದುದು ದೊಡ್ಡ ದುರಂತ. ಏರುಂಜವ್ವನದಲ್ಲಿ ಪ್ರಕಾಶಮಾನರಾಗಿ, ಬಳಲಿದ ಮಾನವರಿಗೆ ಆಶಾಜ್ಯೋತಿಯಾಗಿ ನಭಕ್ಕೇರಿದ್ದ ಈ ಪುರುಷೋತ್ತಮರನ್ನು ನೆನೆಸಿ ಕಣ್ಣೀರಿಡದ ಜನಾಂಗವೇ ಇಲ್ಲ. ಇವರ ಸಮಾಧಿಯ ಮುಂದೆ ನಿಂತು ಅಶ್ರುತರ್ಪಣ ನೀಡದ ಮನುಜನಿಲ್ಲ. ಆರ್ಲಿಂಗ್‌ಟನ್ ಶ್ಮಶಾನದಲ್ಲಿ ಇಂಥದೇ ಇನ್ನೊಂದು ಭಾಗ ವಿಯಟ್ನಾಂ ವೀರರ ಸಮಾಧಿಗಳು. ಎಳೆ ಹರೆಯದ ಹೈದರನ್ನು ಬಲವಂತದಿಂದ ಸೈನ್ಯಕ್ಕೆ ಸೇರಿಸಿಕೊಂಡು ಅಮಾನುಷ ಹತ್ಯಾಕಾಂಡದಲ್ಲಿ ಬಲಿಕೊಡುತ್ತಿರುವುದು ಅಮೇರಿಕೆಯ ತಾಯಿಯ ಮಹಾಪಾಪದ ಫಲವೇನು ? ಆರ್ಲಿಂಗ್‌ಟನ್ ಮಸಣ ಕೆಟ್ಟ ಕನಸಿನ ನಾಡು.

ಗುರುತಿಲ್ಲದ ಸೈನಿಕನ ಸಮಾಧಿಗೆ ನೀಡುತ್ತಿರುವ ಮರ್ಯಾದೆ ಲಾಂಛನೀಯವಾಗಿದೆ. ಇಲ್ಲಿ ನಡೆವ ಗಾರ್ಡ್ ಬದಲಾವಣೆ ಇಂಗ್ಲೆಂಡಿನ ಬಕಿಂಗ್ಹಾಂ ಪ್ಯಾಲೇಸ್‌ನಲ್ಲಿ ನಡೆವ ಗಾರ್ಡ್ ಬದಲಾವಣೆಯಷ್ಟು ಆಕರ್ಷಕವಿಲ್ಲ. ಆದರೆ ಗಂಭೀರವಾಗಿದೆ. ಹತ್ತಿರದಲ್ಲಿಯೇ ಇರುವ ಇವೋಜಿಮಾ ಮೆರೀನ್ ಮೆಮೋರಿಯಲ್ ಎರಡನೆಯ ಪ್ರಪಂಚ ಸಮರದಲ್ಲಿ ಅಮೇರಿಕನ್ ವಿಜಯದ ಅಂತಿಮ ಘಟ್ಟದ ಹೃದಯಸ್ಪರ್ಶಿ ಸ್ಮಾರಕವಾಗಿದೆ. ಇವೋಜಿಮಾ

(Iwojima) ದ್ವೀಪದ ಮೇಲೆ ಅಳಿದುಳಿದ ಐದು ಜನ ಅಮೇರಿಕನ್ ಯೋಧರು ದೇಶೀಯ ಧ್ವಜವನ್ನು ನಾಟಿದ ಈ ಮಹತ್ತರ ಸನ್ನಿವೇಶ ಅವರ ಇತಿಹಾಸದ ಅಪೂರ್ವ ಘಟ್ಟ. ಈ ಐದು ಜನರ ಪೈಕಿ ಒಬ್ಬರಿನ್ನೂ ಜೀವಿಸಿರುವುದು ಅಚ್ಚರಿಯ ಮತ್ತು ಆಮೋಘ ಸಂಗತಿ. ಅದರಲ್ಲಿ ಒಬ್ಬನಂತೂ ಕಾಳಗದ ಕನಸುಗಳಿಂದಲೇ ಬೆದರಿ ಸತ್ತನಂತೆ. ಪ್ರಪಂಚದಲ್ಲಿಯೇ ಬಲಿಷ್ಠ ಸೇನೆಯನ್ನು ನಿರ್ವಹಿಸುವ ಮತ್ತು ಪ್ರಪಂಚದ ಭವಿಷ್ಯವನ್ನು ಹೆಚ್ಚುಕಡಿಮೆ ನಿರ್ಧರಿಸುವ ಪೆಂಟಗಾನ್ ಕಟ್ಟಡ(ಅಮೇರಿಕೆಯ ರಕ್ಷಣಾ ಖಾತೆ) ವನ್ನು ದೂರದಿಂದಲೇ ನೋಡಿದೆವು.

ಅಮೇರಿಕೆಯ ಅಧ್ಯಕ್ಷನಿವಾಸ ವೈಟ್‌ಹೌಸ್ ಸುಂದರವಾದ ಭವನ. ಅದರ ಸುತ್ತಣ ಉದ್ಯಾನ ಎಲ್ಲಕ್ಕಿಂತ ಅಂದವಾಗಿದೆ. ವೈಟ್‌ಹೌಸ್ ನೋಡುವ ಸಂಭ್ರಮಕ್ಕಾಗಿ ಒಂದು ಘಂಟೆ ಕಾಲ ಕ್ಯೂನಲ್ಲಿ ಕಾದು ಪ್ರವೇಶ ಪಡೆದಾಗ ಅವರು ನಮಗೆ ತೋರಿಸಿದ್ದು ಆ ಬೃಹತ್ ಭವಂತಿಯ ಕೆಲವೇ ಕೋಣೆ ಗಳನ್ನು ಮಾತ್ರ. ಕೆಂಪುಕೋಣೆ, ಹಸಿರು ಕೋಣೆ, ನೀಲಿಕೋಣೆ ಮತ್ತು ಹಳದಿ ಕೋಣೆಗಳಲ್ಲಿ ಪ್ರತ್ಯೇಕವಾಗಿ ಆಯಾ ಬಣ್ಣಗಳನ್ನು ಮಾತ್ರವೇ ಉಪಯೋಗಿಸಲಾಗಿದೆ. ಇಲ್ಲಿರುವ ಅನೇಕ ಐತಿಹಾಸಿಕ ವಸ್ತುಗಳನ್ನೇ ಆಗಲೀ ಪ್ರಮುಖ ವರ್ಣಚಿತ್ರಗಳನ್ನೇ ಆಗಲೀ ಯಾರೂ ಗಮನಿಸುವುದಿಲ್ಲ. ಸುಮ್ಮನೆ ಹರಟೆಯಲ್ಲಿ ದಾರಿ ಸಾಗಿಸಿ ವೈಟ್‌ಹೌಸ್ ಹೊರಗೆ ಬಂದು ಉಸ್ಸಪ್ಪಾ ಈ ಕೆಲಸ ಮುಗಿಯಿತಲ್ಲಾ ಎನ್ನುತ್ತಾರೆ. ಅಮೇರಿಕೆಯ ವಿಧಾನಸೌಧ (ಕ್ಯಾಪಿಟಾಲ್) ನೋಡತಕ್ಕ ಸೌಧ. ನಗರದ ಎತ್ತರದ ದಿಣ್ಣೆಯ ಮೇಲೆ ನಿರ್ಮಿತವಾದ ಈ ಕಟ್ಟಡವನ್ನೂ ವೈಟ್‌ಹೌಸ್‌ನ್ನೂ ಕ್ರೂರ ಬ್ರಿಟಿಷ್ ಅಧಿಕಾರಿಗಳು ಒಮ್ಮೆ ಸುಟ್ಟುಹಾಕಿದ್ದರಂತೆ. ಭದ್ರವಾದ ಬುನಾದಿಯ ಮೇಲೆ ಪುನರ್ ನಿರ್ಮಿತವಾದ ಕ್ಯಾಪಿಟಾಲ್‌ನಲ್ಲಿ ಅಮೇರಿಕೆಯ ಕಾಂಗ್ರೆಸ್(ಲೋಕಸಭೆ) ಮತ್ತು ಸೆನೇಟ್ (ರಾಜ್ಯಸಭೆ)ಸಭಾಭವನಗಳು, ಬೇರೆ ಬೇರೆ ಕಾರ್ಯಾಂಗದ ಕಛೇರಿಗಳು ಇವೆ. ಈ ಸಭಾಭವನಗಳು ಅನಾದಿಕಾಲದಿಂದ ಒಂದೇ ರೀತಿಯಲ್ಲಿ ಕಾಪಾಡಿಕೊಂಡು ಬರಲ್ಪಟ್ಟಿವೆ. ಕ್ಯಾಪಿಟಾಲ್‌ನ ಕೇಂದ್ರ ಹಾಲ್‌ನಲ್ಲಿ ಪ್ರತಿಯೊಂದು ಅಂಗರಾಜ್ಯದಿಂದ ಇಬ್ಬರು ಮಾನನೀಯ ಜನರ ಮೂರ್ತಿಶಿಲ್ಪಗಳಿಗೆ

ಅವಕಾಶ ಮಾಡಿದ್ದಾರೆ. ಅಲ್ಲದೆ ಅಮೇರಿಕೆಯ ಇತಿಹಾಸದ ಪ್ರಮುಖ ವ್ಯಕ್ತಿಗಳು ಶಿಲಾರೂಪ ಧರಿಸಿ ನಿಂತಿದ್ದಾರೆ. ಕಬ್ಬಿಣದಿಂದ ನಿರ್ಮಿತವಾದ ಈ ಭವನದ ಕೇಂದ್ರಗೋಲವು ಪ್ರಪಂಚದಲ್ಲಿಯೇ ಮೂರನೆಯದೆಂದು ಅವರ ಅಭಿಪ್ರಾಯ. ಈ ಗೋಲವು ನೆತ್ತಿಯ ಮೇಲೆ ಅಮೇರಿಕಾ ದೇವತೆ (೧೮ ಅಡಿ ಎತ್ತರವಾದ ವಿಗ್ರಹ) ನಿಂತಿದ್ದಾಳೆ ಈ ದೇವತೆಯ ತಲೆಯ ಮೇಲೆ ಇವರ ಹಾಗು ರೆಡ್ ಇಂಡಿಯನ್ನರ ತಲೆಪಾಗಿನಂತೆ ಇರುವ ಕಾರಣ ಆಕೆ ರೆಡ್ ಇಂಡಿಯನ್ ರಾಜಕುವರಿ ಎಂದು ಕೆಲವರ ವಾದ. ಆದರೆ ನಮ್ಮ ಬಸ್ ಡ್ರೈವರ್‌ನ ಪ್ರಕಾರ ಅದು ರೋಮನ್ ಹೆಲ್‌ಮೆಟ್. ಸರಿ, ನಮಗಂತೂ ಆಕೆ ಅಮೇರಿಕಾ ಮಾತೆ. ಈ ಕಟ್ಟಡದಲ್ಲಿ ಮಾಡಿರುವ ಮೊಸಾಯಿಕ್ ಮತ್ತು ಟೈಲ್ಸ್ ಕೆಲಸ, ವರ್ಣಚಿತ್ರದ ಕೆಲಸ ಅದ್ವಿತೀಯವೆನಿಸಿದೆ.

ಈ ಕ್ಯಾಪಿಟಾಲ್ ಹಿಲ್ ಮೇಲೆ ಒಂದು ಕಡೆ ಸುಪ್ರೀಮ್ ಕೋರ್ಟಿನ ಕಟ್ಟಡವಿದೆ. ಮತ್ತೊಂದೆಡೆ ಕಾಂಗ್ರೆಸ್‌ನ ಲೈಬ್ರರಿ, ಷೇಕ್ಸ್‌ಪಿಯರ್ ಲೈಬ್ರರಿ ಮುಂತಾದ ಪ್ರಮುಖ ಕಟ್ಟಡಗಳಿವೆ. ಕಾಂಗ್ರೆಸ್‌ನ ಲೈಬ್ರರಿ ಪ್ರಪಂಚಪ್ರಸಿದ್ಧವಾದುದು. ಇಲ್ಲಿರುವ ಅಗಾಧ ಗ್ರಂಥರಾಶಿ ಬೇರೆಲ್ಲಿಯೂ ಇಲ್ಲ. ಸದ್ಯ ಆಧುನಿಕ ಪ್ರಿಂಟ್ಸ್, ವಾಲ್ಟ್, ವಿಟ್‌ಮನ್, ಜಿಯೋಗ್ರಾಫಿಕಲ್ ಮ್ಯಾಗಜೀನ್ ಫೋಟೋ ಗ್ಯಾಲರಿ ಎಂಬ ಮೂರು ಪ್ರದರ್ಶನಗಳು ನಡೆಯುತ್ತಿದ್ದವು. ಆಧುನಿಕ ಪ್ರಿಂಟ್ಸ್ ನೋಡಲು ಕಣ್ಣಿಗೆ ನಾನಾ ವಿಧವಾಗಿ ಕಂಡವಷ್ಟೆ. ಇನ್ನು ವಾಲ್ಟ್ ವಿಟ್‌ಮನ್‌ನ ಜೀವನ ಮತ್ತು ಸಾಧನೆಯ ಕುರಿತಾದ ಪ್ರದರ್ಶನದಲ್ಲಿ ಅನೇಕ ಮಹತ್ವದ ಕಾಗದ ಪತ್ರಗಳೂ ಕುತೂಹಲಕಾರಕ ಸನ್ನಿವೇಶಗಳ ವಿವರಣೆಗಳೂ ಶುಭಾಶಯಗಳೂ ನಿಂದನೆ ವಂದನೆಗಳೂ ಇದ್ದವು. ಓರ್ವ ಕವಿಯು ಸಫಲತೆಯನ್ನು ಪಡೆಯಬೇಕಾದರೆ ದಾಟಿ ಹೋಗಬೇಕಾದ ಅನೇಕ ಸ್ತರಗಳನ್ನು ವಿಟ್‌ಮನ್ ಜೀವನದಲ್ಲಿ ಕಾಣಬಹುದು. ಜಿಯೋಗ್ರಾಫಿಕಲ್ ಮ್ಯಾಗಜೀನ್‌ರವರ ಫೋಟೋ ಗ್ಯಾಲರಿಯಲ್ಲಿ ಇರಾನ್‌ನ ಷಾ ಅವರ ಪಟ್ಟಾಭಿಷೇಕದ ಅಟ್ಟಹಾಸ, ಅಮೇರಿಕೆಯ ಕಿಂದರಜೋಗಿ ಎಂದು ಹೆಸರು ಪಡೆದಿದ್ದ ರಾಬರ್ಟ್ ಕೆನಡಿಯ ಚುನಾವಣಾ ಪ್ರಚಾರ, ಅಧ್ಯಕ್ಷ ಜಾನ್‌ಸನ್ ಅವರ ಯಾರೂ ಗಮನಿಸದ ಘಳಿಗೆಗಳು ತುಂಬಾ ಮನಸೆಳೆಯುವಂತಿದ್ದವು.

ಈ ಲೈಬ್ರರಿಯಲ್ಲಿ ಲಿಂಕನ್, ಜೆಫರ್‌ಸನ್, ವಾಷಿಂಗ್‌ಟನ್ ಅವರಿಗೆ

ಸೇರಿದಂತೆ ಅನೇಕ ಕಾಗದಪತ್ರಗಳು, ಸ್ವಾತಂತ್ರ್ಯಘೋಷಣೆಯ ಮೂಲ ಪ್ರತಿಯುಂತಾದ ಅಮೂಲ್ಯ ಐತಿಹಾಸಿಕ ಮಹತ್ವದ ಕಾಗದಪತ್ರಗಳೂ ಪ್ರದರ್ಶನಕ್ಕೆ ಇವೆ. ಇಲ್ಲಿಯ ರೀಡಿಂಗ್ ರೂಮಿನಲ್ಲಿನ ಅಂತಸ್ತಿನಿಂದ ಅಮೇರಿಕೆಯ ಮತ್ತು ಪಶ್ಚಿಮದ ಅನೇಕ ಪ್ರತಿಭಾವಂತ ಕವಿಗಳೂ ವಿಜ್ಞಾನಿಗಳೂ ದಾರ್ಶನಿಕರೂ ಶಿಲಾರೂಪದಲ್ಲಿ ಇಣಿಕಿ ನೋಡುತ್ತಿದ್ದಾರೆ ಅಥವಾ ಹರಸುತ್ತಿದ್ದಾರೆ. ಇದೊಂದು ಅಪೂರ್ವವಾದ ಮತ್ತು ಅನಂತವಾದ ಸರಸ್ವತೀ ಭಂಡಾರ. ಯಾವ ಅಮೇರಿಕನ್ನನೇ ಆಗಲೀ ತನ್ನಲ್ಲಿದ್ದ ಯಾವುದೇ ಮಹತ್ವದ ದಾಖಲೆಯನ್ನೂ ಗ್ರಂಥವನ್ನೂ ಕಾಂಗ್ರೆಸ್ ಲೈಬ್ರರಿಗೆ ಕಳುಹಿಸಬಹುದು. ಕಾನೂನಿನ ಪ್ರಕಾರ ಲೈಬ್ರರಿ ಅದನ್ನು ಕಾಪಾಡುತ್ತದೆ.

ನಗರದಲ್ಲಿ ಮಹಾನವ ಪುರುಷ ಅಬ್ರಹಾಂ ಲಿಂಕನ್ ಧೂರ್ತನೊರ್ವನ ಅಪಕ್ವ ಯೋಚನೆಯ ಗುಂಡಿಗೆ ಆಹುತಿಯಾದ ಥಿಯೇಟರ್ ನೋಡಿದೆವು. ಥಿಯೇಟರನ್ನು ಸದ್ಯ ಮೊದಲಿನ ಸ್ಥಿತಿಯಲ್ಲಿಯೇ ಪುನರುಜ್ಜೀವನಗೊಳಿಸಿ ಲಿಂಕನ್ ಮ್ಯೂಜಿಯಂನಂತೆ ಪರಿವರ್ತನೆಗೊಳಿಸಿದ್ದಾರೆ. ಈ ಥಿಯೇಟರ್‌ನ ಪಾತಾಳಗೃಹದಲ್ಲಿ ಲಿಂಕನ್ ಜೀವನ, ಧ್ಯೇಯ ಮತ್ತು ಸಾಧನೆಯ ಬಗ್ಗೆ ಚಿತ್ರಮಯ ಪ್ರದರ್ಶನವಿದೆ. ಚಿತ್ರಮಯ ಪ್ರದರ್ಶನವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದ್ದಾರೆ. ಪ್ರತಿಯೊಂದು ಭಾಗ ಲಿಂಕನನ ಜೀವಿತದ ಒಂದೊಂದು ಘಟ್ಟವನ್ನು ಸೂಚಿಸುತ್ತದೆ. ಆಯಾ ಭಾಗದ ಮುಂದೆ ನಿಂತರೆ ಲಿಂಕನ್ನನೇ ಸ್ವತಃ ತನ್ನ ಜೀವನದ ಬಗೆಗೆ ಹೇಳಿದಂತೆ ಆತನ ಆತ್ಮಚರಿತ್ರೆಯಿಂದ ರೆಕಾರ್ಡಾದ ವಾಕ್ಯಗಳು ಕೇಳುತ್ತವೆ. ಈ ರೀತಿ ಮನುಷ್ಯನೋರ್ವನ ಸಹಾಯವಿಲ್ಲದೇ, ಲಿಂಕನ್ನನ ಪೂರ್ಣ ಜೀವನವನ್ನು ಆತನ ಬಾಯಿಯಿಂದಲೇ ಕೇಳಬಹುದು. ಅನಂತರ ಲಿಂಕನ್ನನ ಭಾಷಣಗಳನ್ನು ಅವುಗಳ ಸ್ವಭಾವಕ್ಕೆ ಅನುಸರಿಸಿ ನಾಲ್ಕಾರು ಭಾಗ ಮಾಡಿ ಚಿಕ್ಕ ಚಿಕ್ಕ ಬೂತ್‌ಗಳನ್ನೂ ಮಾಡಿದ್ದಾರೆ. ನಮಗೆ ಬೇಕಾದ ವಿಭಾಗವನ್ನು ಆರಿಸಿಕೊಂಡು ನಮ್ಮಿಷ್ಟಕ್ಕೆ ನಾವು ಲಿಂಕನ್ ಮಾತುಗಳನ್ನು ಕೇಳಿ ಆನಂದಿಸಬಹುದು. ಇನ್ನೊಂದು ಭಾಗದಲ್ಲಿ ಲಿಂಕನ್ ಕೊಲೆಗಾರ ಬೂತ್ ಮಹಾಶಯನಿಗೆ ಸಂಬಂಧಿಸಿದ ವಿವರ ಪ್ರದರ್ಶನವಿದೆ. ಅವನ ದುರಾಲೋಚನೆ, ಸಂಗಡಿಗರು, ಕೊಲೆ, ಪಲಾಯನ, ಅವನಿಗಾಗಿ ನಡೆದ ಬೇಟೆ, ಜಾಹಿರಾತು. ಸೆರೆಹಿಡಿಯುವುದು, ಕೊಲೆ ಮಾಡಿದ ಪಿಸ್ತೂಲು, ಅವನ ಡೈರಿ, ಅವನ ಕಾಲಿಗೆ

ಪಟ್ಟಿ ಹಾಕಿದ ವೈದ್ಯನ ಅವಸ್ಥೆ, ದಂಡನೆ, ದಂಡನೆಗಳ ಸಾಲುಸಾಲು, ವಾದ ವಿವಾದ ಓದಲು, ತಿಳಿಯಲು ತುಂಬಾ ರಂಜಕವಾಗಿವೆ. ಜ್ವರಪೀಡಿತ ದೇಶದ ಅವಸ್ಥೆ ಏನಾಗುತ್ತದೆಂಬುದು ಈ ವಿವರಗಳಲ್ಲಿ ಎದ್ದು ಕಾಣುತ್ತದೆ.

ಗುಂಡಿನೇಟಿಗೆ ಗುರಿಯಾದ ಅಬ್ರಹಾಮನನ್ನು ಥಿಯೇಟರ್ ಎದುರಿಗಿನ ಮನೆಯೊಂದರಲ್ಲಿ ಮಲಗಿಸಿ ಚಿಕಿತ್ಸೆಗೆ ಗುರಿಪಡಿಸಿದ್ದರು. ಗಟ್ಟಿಮುಟ್ಟು ಪ್ರಕೃತಿಯ ಲಿಂಕನ್ ಹದಿನಾಲ್ಕು ತಾಸುಗಳವರೆಗೆ ಜೀವನ ಮರಣಗಳ ಮಧ್ಯೆ ಹೋರಾಡಿ ಇಲ್ಲಿಯೇ ಅಸು ನೀಗಿದ್ದಾನೆ. ಈ ಮನೆ ಇಂದು ರಾಷ್ಟ್ರೀಯ ಸ್ಮಾರಕವಾಗಿದೆ.

ವಾಷಿಂಗ್‌ಟನ್ ನಗರದ ನ್ಯಾಷನಲ್ ಮ್ಯೂಜಿಯಂ ನಾವು ಇದುವರೆಗೆ ನೋಡಿದ ಮ್ಯೂಜಿಯಂಗಳ ಪೈಕಿಯೇ ಅತ್ಯುತ್ತಮ ವ್ಯವಸ್ಥೆಯನ್ನು ಒಳಗೊಂಡಿದೆ. ಅಸಂಖ್ಯಾತ ಕಲಾಕೃತಿಗಳನ್ನು ಒಳಗೊಂಡಿರುವ ಈ ಮ್ಯೂಜಿಯಂ ಬೃಹತ್ತಾಗಿದೆ. ಅನೇಕ ಕೋಣೆಗಳನ್ನೊಳಗೊಂಡಿದೆ, ಮೊದಲನೆಯದಾಗಿ ಪತ್ರಿಕೆ ಕೋಣೆಯಲ್ಲಿರುವ ಚಿತ್ರ ಮತ್ತು ಕಲಾಕೃತಿಗಳ ವಿವರವಾದ ಪರಿಚಯ ಪತ್ರಿಕೆ ಪ್ರತ್ಯೇಕವಾಗಿ ಆಯಾ ಕೋಣೆಯಲ್ಲಿಯೇ ದೊರೆಯುತ್ತದೆ, ಅಲ್ಲಿಯೇ ಇರುವ ಆರಾಮ ಆಸನಗಳ ಮೇಲೆ ಕುಳಿತು ಪ್ರತಿಯೊಂದು ಕಲಾಕೃತಿಯ ಹಿನ್ನೆಲೆ ಗರಿಮೆ ಮತ್ತು ಕಲಾವಿದನ ಸಂಪ್ರದಾಯದ ಬಗ್ಗೆ, ಕೈಚಳಕದ ಬಗ್ಗೆ ತಿಳಿಯಬಹುದು. ಕಲಾಕೃತಿಗಳ ಪ್ರತಿಚಿತ್ರಗಳೊಂದಿಗೆ ವಿವರವುಳ್ಳ ಚಿಕ್ಕ ಚಿಕ್ಕ ಪುಸ್ತಕಗಳು ಕೂಡಾ ಅತಿ ಕಡಿಮೆ ಬೆಲೆಗೆ ಇಲ್ಲಿಯೇ ದೊರೆಯುತ್ತವೆ. ಬೇಕಾದರೆ ಪುಸ್ತಕಗಳನ್ನು ಪೆಟ್ಟಿಗೆಯಲ್ಲಿರುವ ಚಿಕ್ಕ ಪುಸ್ತಕಗಳನ್ನು ಹಣ ತೆತ್ತು ಖರೀದಿಸಬಹುದು. ಮ್ಯೂಜಿಯಂನ ಅಂಗಡಿಯಲ್ಲಿ ಬೇಕಾದಷ್ಟು ಸ್ಲೈಡ್ಸ್, ಪ್ರತಿಕೃತಿಗಳು, ಪುಸ್ತಕಗಳು ದೊರೆಯುತ್ತವೆ. ಎಲ್ಲಕ್ಕಿಂತ ಮುಖ್ಯವಾದುದೆಂದರೆ ಮ್ಯೂಜಿಯಂ ಒಳಗಡೆ ಅತ್ಯುತ್ತಮವಾದ ಕಾಫಿ ಮತ್ತು ತಿಂಡಿ ಹೋಟೆಲ್. ನಮ್ಮ ಮ್ಯೂಜಿಯಂಗಳಲ್ಲಿ ಇದನ್ನು ಒದಗಿಸಬೇಕು. ಮಳೆಯಂಗಿ, ಓವರ್‌ಕೋಟ್ ವಗೈರಾ ತೂಗು ಹಾಕಲು ಹ್ಯಾಂಗರ್ಸ್ ದೊರೆಯುತ್ತವೆ. ಮಕ್ಕಳನ್ನು ಕರೆದುಕೊಂಡು ಬಂದಿದ್ದರೆ ಚಿಕ್ಕ ಚಿಕ್ಕ ತಳ್ಳಿಕೊಂಡು ಹೋಗುವ ಬಂಡಿಗಳಲ್ಲಿ ಕೂಡಿಸಿಕೊಂಡು ಮ್ಯೂಜಿಯಂ ತುಂಬಾ ಕರೆದೊಯ್ಯಬಹುದು. ಕುಡಿಯುವ ನೀರಿನ ಸೌಲಭ್ಯ ಮತ್ತು ಏರ್ ಕಂಡಿಷನ್ ವ್ಯವಸ್ಥೆ ಎಲ್ಲೆಡೆಗೆ ಇದೆ. ತಕ್ಕ ಪ್ರಮಾಣದಲ್ಲಿ

ಪಾಯಖಾನೆ ಮತ್ತು ಒಚ್ಚಲಮನೆಗಳನ್ನು ಏರ್ಪಡಿಸಿದ್ದಾರೆ. ಕಲಾಭ್ಯಾಸಿಗಳಿಗೆ ಕೆಲ ಕಲಾಕೃತಿಗಳನ್ನು ಬಾಡಿಗೆಯ ಮೇಲೆ ಅಥವಾ ಸದಸ್ಯತ್ವದ ಹಕ್ಕಿನ ಮೇಲೆ ನೀಡುತ್ತಾರೆ. ಕಲೆಯಲ್ಲಿ ಆಸಕ್ತಿಯುಳ್ಳವರು ಇಲ್ಲಿ ನಡೆವ ಕಲೆಯ ಮೇಲಿನ ಭಾಷಣಗಳನ್ನು ಕೇಳಬಹುದು. ಶಬ್ದಚಿತ್ರಗಳನ್ನೂ ನೋಡಬಹುದು. ಇದೊಂದು ಸಜೀವವಾದ ಮ್ಯೂಜಿಯಂ. ಇದು ಪ್ರತಿಕ್ಷಣ ಬೆಳೆಯುತ್ತಿದೆ. ಕಲೆಯನ್ನು ರಕ್ಷಿಸುತ್ತದೆ. ಬೆಳೆಸುತ್ತದೆ.

ಅದೃಷ್ಟದ ವಿಷಯವೆಂದರೆ ನಾವು ಇಲ್ಲಿರುವಾಗ ಅಮೇರಿಕನ್ನರ ಸ್ವಾತಂತ್ರ್ಯ ದಿವಸ (ಜುಲೈ ೪) ಆಚರಣೆ ನಡೆಯಿತು. ಅನಿರೀಕ್ಷಿತವಾಗಿ ಶನಿವಾರ ಆದಿವಾರಗಳ ಜೊತೆಗೂಡುವಂತೆ ಜುಲೈ೪ ಬಂದ ಕಾರಣ ವಾರದ ಕೊನೆಯನ್ನು ವಾಷಿಂಗ್‌ಟನ್‌ದಲ್ಲಿ ಕಳೆಯಲು ದೇಶದ ಮೂಲೆಮೂಲೆಗಳಿಂದ ಸಹಸ್ರಾರು ಜನರು ಬಂದಿದ್ದರು. ವಾಷಿಂಗಾಟನ್ ಸ್ಮಾರಕದ ಸುತ್ತಣ ವಿಶಾಲ ಬೈಲಿನಲ್ಲಿ ಬೀಡು ಬಿಟ್ಟ ಈ ಜನ ಒಂದು ರೀತಿಯ ಜಾತ್ರೆಯ ವಾತಾವರಣವನ್ನು ತಂದಿದ್ದರು. ಅನೇಕ ಅಂಗಡಿಗಳೂ, ಹೋಟಲುಗಳೂ, ವಿನೋದ ಕೇಂದ್ರಗಳೂ ತಿಂಡಿ ಕೋಕಾ ಕೋಲಾ ಮಾರುವವರೂ, ಹಾಡುಗರೂ, ಹಿಪ್ಪಿಗಳೂ ನಾನಾವಿಧ ಜನರೂ ಸೇರಿ ಅದನ್ನೊಂದು ನಿಜವಾದ ಜಾತ್ರೆಯನ್ನಾಗಿ ಮಾಡಿದ್ದರು. ಗಿಟಾರ್ ಹಿಡಿದು ಬಾರಿಸುತ್ತಾ ಜಗತ್ತನ್ನೇ ಇಲ್ಲವಾಗಿಸುವ ಆ ಹೃದರು ಜೀವನವನ್ನು ಸವಿಯುತ್ತಿದ್ದರು. ಅನೇಕ ವರ್ಣದ ಉತ್ಸಾಹಕರ ನಮೂನೆಯ ಬಟ್ಟೆಗಳನ್ನು ತೊಟ್ಟು ಗುಂಪು ಗುಂಪಾಗಿ ಕುಳಿತು ಹರಟೆ ಹೊಡೆಯುತ್ತಾ ಕಾಲ ಕಳೆಯುತ್ತಿದ್ದರು. ಚಳಿಯಿಂದ ಹಿಮದಿಂದ ಮನೆಯೊಳಗಣ ಜೀವನದಿಂದ ಬೇಸತ್ತ ಈ ಜನ ಬಿಸಿಲಿಗಾಗಿ ಬಯಲಿಗಾಗಿ ಹೊರಗಿನ ಹವೆಗಾಗಿ ಹಾತೊರೆಯುತ್ತಾರೆ. ಬಿಸಿಲಿನಲ್ಲಿ ಚರ್ಮದ ಆರೋಗ್ಯಕ್ಕಾಗಿ ಮೈಬಿಟ್ಟು ಮಲಗುತ್ತಾರೆ.

ಒಂದು ಕಡೆಯಲ್ಲಿ ಅಮೇರಿಕೆಯ ಸೈನ್ಯದ ಬ್ಯಾಂಡ್ ಅನೇಕ ಗೀತೆಗಳನ್ನು ಬಾರಿಸುತ್ತಿತ್ತು. ಟೆಲಿವಿಷನ್ ಹೇಳಿಕೆಯ ಪ್ರಕಾರ ಇಲ್ಲಿ ಸೇರಿದ ಒಂದು ಲಕ್ಷ ಜನ ಸಾಯಂಕಾಲದ ಆಕಾಶಬಾಣಗಳ ಆಟಕ್ಕೆ ಕಾದಿದ್ದರು. ಯಥಾವಿಧಿಯಲ್ಲಿ ನಡೆದ ನಗರದ ಸ್ವಾತಂತ್ರ್ಯ ಸಮಾರಂಭದಲ್ಲಿ ಮೇಯರ್ ಪರವಾಗಿ ಅತಿ ಚಿಕ್ಕವಯಸ್ಸಿನ ನೀಗ್ರೋ ಕೌನ್ಸಿಲರ್ ಭಾಷಣ ಓದಿದ. ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿರುವ ಓರ್ವ ನೀಗ್ರೋ ಹುಡುಗ ಆ ಕಾಲದಲ್ಲಿ ಥಾಮಸ್

ಜೆಫರ್‌ಸನ್ ರಚಿಸಿದ ಅಮೇರಿಕೆಯ ಸ್ವಾತಂತ್ರ್ಯ ಘೋಷಣೆಯನ್ನು ಓದಿದ. ಮುಕ್ಕಾಲುಪಾಲು ಅವನಿಗೆ ಕಂಠಪಾಠ ಬರುತ್ತಿತ್ತು. ಈ ಸ್ವಾತತ್ರ್ಯ ಘೋಷಣೆಗೆ ಮೊದಲ ಬಾರಿಗೆ ಅಂಕಿತ ಹಾಕಿದ ೧೪ ರಾಜ್ಯಗಳನ್ನು ಆಯಾ ರಾಜ್ಯದ ಇಬ್ಬಿಬ್ಬರು ಪ್ರಜೆಗಳು ಸಂಬಂಧಿಸಿದ ಧ್ವಜದೊಂದಿಗೆ ಪ್ರತಿನಿಧಿಸಿದ್ದರು. ಸ್ಥಳೀಯ ನಾಯಕರು ಭಾಷಣ ಮಾಡಿದರು. ಅನಂತರ ಒಂದು ತಾಸಿನವರೆಗೆ ನಮ್ಮ ದೀಪಾವಳಿಯಲ್ಲಿ ಬಾಣ ಬಿರುಸುಗಳನ್ನು ಹಾರಿಸುವಂತೆ ಡಿಸ್ಟ್ರಿಕ್ಟ್ ಆಫ್ ಕೊಲಂಬಿಯಾ ಸರಕಾರದ ವತಿಯಿಂದ ಅಮೋಘವಾದ ಆಕಾಶಬಾಣಗಳ ಹಾರಿಸುವಿಕೆ ನಡೆಯಿತು. ವಿಶೇಷ ಆಸಕ್ತಿಯಿಂದ ತಯಾರಿಸಲ್ಪಟ್ಟ ಈ ಬಾಣಗಳೂ ಗಗನದಲ್ಲಿ ರಚಿಸುತ್ತಿದ್ದ ವಿಚಿತ್ರ ರಚನೆಗಳೂ ವಿಪರೀತ ಶಬ್ಧಗಳೂ ಜನರಿಂದ ಪ್ರತಿಧ್ವನಿಸಲ್ಪಡುತ್ತವೆ. ಜುಲೈ ನಾಲ್ಕು ಅಮೇರಿಕೆಯ ಜೀವನದ ಮಹತ್ವದ ದಿವಸ. ದೇಶದ ಕೇಂದ್ರ ರಾಜಧಾನಿ ವಾಷಿಂಗ್ಟನ್‌ನಲ್ಲಿ ನಡೆದ ಈ ಉತ್ಸವ ಅದ್ಭುತವಾಗಿತ್ತು. ಅಗಾಧ ಜನರಾಶಿ, ಆನಂದಮಯ ವಾತಾವರಣ, ಅಂಗಡಿ, ಹೋಟೆಲ್, ಸಿನಿಮಾ, ನಾಟಕ ಮತ್ತು ಸರ್ಕಸ್ ಪ್ರದರ್ಶನ ಪ್ರಪಂಚ ಮತ್ತು ಹಿಪ್ಪಿಗಳು ಇದಲ್ಲದರ ಜೊತೆಗೆ ಕೋಕಾ ಕೋಲಾ.

ವಾಷಿಂಗ್‌ಟನ್ ನಗರ ನಮ್ಮ ರಾಜಧಾನಿ ನವದೆಹಲಿಯಂತೆ ಚಂಡೀಘಡ ಮುಂತಾದ ಸ್ಥಳಗಳಂತೆ ತುಂಬಾ ಅಂದವಾಗಿದೆ. ರಾಜನಗರಿಗಳಾದ ಮೈಸೂರು, ಬರೋಡ ಮತ್ತು ಹೈದರಾಬಾದುಗಳಂತೆ ಇಲ್ಲಿ ವಿಶಾಲ ರಸ್ತೆಗಳೂ ,ಚೌಕಗಳೂ, ಸ್ಮಾರಕ ಶಿಲೆ ಮತ್ತು ಶಿಲ್ಪ ಭವನಗಳೂ ತುಂಬಿವೆ. ಪ್ರತಿಯೊಂದು ರಾಜ್ಯದ ಹೆಸರನ್ನೂ ಒಂದೊಂದು ರಸ್ತೆಗಿಟ್ಟಿದ್ದಾರೆ. ನಗರ ನಕ್ಷೆಯನ್ನು ತಯಾರಿಸಿದ ಫ್ರೆಂಚ್ ಶಿಲ್ಪಿ ನಗರದ ಜೀವನದ ಸುಸೂತ್ರ ವಹಿವಾಟಿಗೆ ಅನೇಕ ಉದ್ಯಾನಸ್ಥಳಗಳನ್ನೂ ಸಾರ್ವಜನಿಕರಿಗೆ ಮೀಸಲಿರಿಸಿದ್ದಾನೆ. ಸ್ವಚ್ಛವಾದ ರಸ್ತೆಗಳೂ ಸಾಧಾರಣ ಎತ್ತರದ ಸುಂದರವಾದ ಕಟ್ಟಡಗಳೂ ಸುಭಗವಾದ ಮತ್ತು ಭದ್ರವಾದ ವಾತಾವರಣ ಈ ನಗರವನ್ನು ಪ್ರಿಯಗೊಳಿಸುತ್ತವೆ. ಎಲ್ಲಕ್ಕಿಂತ ಎತ್ತರವಾದ ಕಟ್ಟಡವೆಂದರೆ ಕ್ಯಾಪಿಟಾಲ್. ಅದನ್ನು ಮೀರಿಸುವ ಎತ್ತರದ ಕಟ್ಟಡ ರಚನೆಗೆ ಇಲ್ಲಿ ಅವಕಾಶವಿಲ್ಲ. ಜನ ಗಂಭೀರರು. ಅಮೇರಿಕೆಯಂತಹ ಸುಪ್ರತಿಷ್ಠಿತ ರಾಜ್ಯದ ರಾಜಧಾನಿಯ

ನಾಗರಿಕರು ತಾವೆಂಬ ಅಭಿಮಾನ, ಜಾಗೃತಿ ಸರ್ವರಲ್ಲಿ ಎದ್ದು ಕಾಣುತ್ತದೆ. ಅಮೇರಿಕೆಯ ಅನೇಕ ವಿಸ್ಮೃತ ಸೇನಾಪತಿಗಳು ಇಲ್ಲಿ ಜನರ ನೆನಪಿಗಾಗಿ ರಸ್ತೆಯಂಚಿನಲ್ಲಿ ಶಿಲಾರೂಪ ಧರಿಸಿದ್ದಾರೆ. ಬೆಂಜಮಿನ್ ಫ್ರಾಂಕ್ಲಿನನು ಮಾತ್ರ ಪಾರಿವಾಳಗಳಿಗೆ ಪ್ರಿಯನಾಗಿದ್ದಾನೆ. ಅವನ ತಲೆಯ ಮೇಲೆ ಕಿವಿಯಲ್ಲಿ ನಿರಂತರವಾಗಿ ಪಾರಿವಾಳಗಳು ಏನೋ ಮಾಡುತ್ತಿರುತ್ತವೆ. ಶ್ರೀಯಾದರೂ ಕೂಡ ಜೀವಾರ್ಪಣೆ ಮಾಡಿದ ತತ್ವಜ್ಞ ಫ್ರಾಂಕ್ಲಿನ್ ಸಾರ್ಥಕ ಜೀವಿಯಲ್ಲವೆ ? ನಮ್ಮ ಮೂರು ದಿನಗಳ ವಾಸ್ತವ್ಯದ ನಂತರ ಬಾಲ್ಟಿಮೋರ್ ಫ್ರೆಂಡ್‌ಶಿಪ್ ವಿಮಾನ ನಿಲ್ದಾಣದಿಂದ ಯುನೈಟೆಡ್ ಸಾರಿಗೆ ಸಂಸ್ಥೆಯ ವಿಮಾನದಲ್ಲಿ ಗ್ರಾಂಡ್ ಕ್ಯಾನಿಯನ್‌ಗೆ ಪಯಣಿಸಿದೆವು. ನಮ್ಮ ವಿಮಾನ ನಮ್ಮ ಸ್ವಾಮಿ ವಿವೇಕಾನಂದರು ಅಮೇರಿಕೆಯನ್ನು ಅಚ್ಚರಿಗೊಳಿಸಿದ ಚಿಕಾಗೋದ ಓಹೆರ್ ವಿಮಾನತಾಣದಲ್ಲಿ ಒಂದು ತಾಸಿನವರೆಗೆ ತಂಗಿತು. ಭಾರತೀಯ ಅಧ್ಯಾತ್ಮ ಜೀವನದ ಅಮೃತಾಂಶವಾದ ಚಿಕಾಗೋ ಭಾಷಣದ ನೆನಪು ಇಲ್ಲಿ ನಮಗೆ ಅನೇಕ ಭಾವನೆಗಳನ್ನು ಉತ್ತೇಜಿಸಿತು. ವಿಮಾನ ನಿಲ್ದಾಣಗಳು ಇಲ್ಲಿ ಚಿಕ್ಕ ಪೇಟೆಯಂತೆಯೇ ಇರುತ್ತವೆ. ಅಂಗಡಿ ಸಾಲು ಹೋಟೆಲ್‌ಗಳು, ವಿರಾಮ ಗೃಹಗಳು ಇತ್ಯಾದಿ ಪ್ರವಾಸಿಗಳಿಂದ ನಿಬಿಡವಾಗಿರುತ್ತವೆ. ಸ್ವಲ್ಪ ಕಾಫಿ ಹೀರಿ ಅಲ್ಲಿ ತಿರುಗಾಡಿ ಮತ್ತೆ ವಿಮಾನ ಸೇರಿ ಗ್ರಾಂಡ್ ಕ್ಯಾನಿಯನ್‌ಗೆ ಪಯಣ ಬೆಳೆಸಿದೆವು. ಅರಿಜೋನಾ ರಾಜ್ಯದ ಜೂಜುಗಾರಿಕೆಯ ಪ್ರಸಿದ್ಧ ನಗರ ಲಾಸ್ ವೇಗಸ್ ವಿಮಾನತಾಣದಲ್ಲಿ ನಾವಿಳಿದಾಗ ಕಂಡದ್ದು ಅನೇಕ ಜುಗಾರಿ ಯಂತ್ರಗಳನ್ನು. ಇಲ್ಲಿ ಜುಗಾರಿ ಕಾನೂನುಬದ್ಧವಾಗಿದೆ. ಲಾಸ್ ವೇಗಸ್‌ನಲ್ಲಿ ಜೂಜಾಡಲು ಪ್ರಪಂಚದೆಲ್ಲ ಕಡೆಯಿಂದ ಜನ ಬರುತ್ತಾರೆ. ಅಮೇರಿಕೆಯಲ್ಲಿಯೇ ಪ್ರಸಿದ್ಧವಾದ ರಾತ್ರಿ. ವೇಶ್ಯಾವಾಟಿಗಳೂ ಈ ಊರಲ್ಲಿವೆ. ವಿಮಾನ ನಿಲ್ದಾಣದಲ್ಲಿಯೇ ಕ್ಲಬ್‌ಗಳು, ಅನೇಕ ವೇಶ್ಯೆಯರು ಗಿರಾಕಿ ಹುಡುಕುತ್ತಿರುತ್ತಾರೆ. ಹೊಸಬರಂತೆ ಕಾಣುವವರನ್ನು ಬೆಂಕಿಕಡ್ಡಿಯ ನೆಪ ಮಾಡಿ ಅಥವಾ ಇನ್ನಾವುದೋ ನೆಪ ಮಾಡಿ ಮಾತನಾಡಿಸಲು ಪ್ರಯತ್ನಿಸುತ್ತಾರೆ. ಅನೇಕ ಜನ ಹಾಲಿವುಡ್ ಸಿನಿಮಾ ತಾರೆಯರು ಇಲ್ಲಿಯ ನೈಟ್‌ಕ್ಲಬ್‌ಗಳಿಂದಲೇ ಮುಂದೆ ಬಂದಿದ್ದಾರೆ. ಲಾಸ್‌ವೇಗಸ್

ನಲ್ಲಿ ನಡೆವ ಒಂದು ವಾರದ ವಿಶೇಷ ಜೀವನದ ಮಾಹಿತಿ ಪತ್ರವನ್ನು ಪುಕ್ಕಟೆಯಾಗಿ ವಿಮಾನ ತಾಣದಲ್ಲಿಯೇ ಪಡೆಯಬಹುದು. ಇದು ಇದ್ರಂಪುರಿ. ಇಲ್ಲಿ ಜನ ಪುಕ್ಕಟೆ ಕುಡಿಸಿ, ಬೆತ್ತಲೆ ಹುಡುಗಿಯರನ್ನು ತೋರಿಸಿ ಶಕುನಿ ತಂತ್ರದ ಜೂಗಾರಿ ಆಡಿಸಿ ಸುಲಿಯುತ್ತಾರೆ. ಆದರೆ ಅನೇಕರಿಗೆ ಲಾಸ್ ವೇಗಸ್ ರಂಜನೀಯ ನಗರ; ಅರ್ಥಗರ್ಭಿತ ಅಮರಪುರಿ. ಜೀವನದಲ್ಲಿ ಒಮ್ಮೆಯಾದರೂ ಗುಡ್‌ಓಲ್ಡ್ ಲಾಸ್‌ವೇಗಸ್‌ಗೆ ತೆರಳಬೇಕೆಂಬ ಅಭೀಪ್ಸೆ.

ಒಂದು ತಾಸಿನ ನಂತರ ಏರ್‌ವೆಸ್ಟ್‌ಗೆ ಸೇರಿದ ಚಿಕ್ಕ ವಿಮಾನದಲ್ಲಿ ಇಲ್ಲಿಂದ ಆಧುನಿಕ ಪ್ರಪಂಚದ ಸಪ್ತ ಅದ್ಭುತಗಳಲ್ಲಿ ಒಂದಾದ ಗ್ರಾಂಡ್ ಕ್ಯಾನಿಯನ್‌ಗೆ ತೆರಳಿದೆವು. ದಾರಿಯಲ್ಲಿ ನಮ್ಮ ವಿಮಾನ ಗ್ರಾಂಡ್ ಕ್ಯಾನಿಯನ್‌ನ ಅಗಾಧ ಕೊಳ್ಳದ ಕೆಲ ಭಾಗಗಳ ಮೇಲೆಯೇ ಹಾರಿ ಹೋಗುತ್ತದೆ. ಅದೊಂದು ರೋಮಾಂಚಕ ಅನುಭವ. ಅಮೇರಿಕೆಯ ಕೊಲರಾಡೋ ಭಾರತೀಯ ಚರ್ಮಣ್ವತಿ (ಚಂಬಲ್) ಯಂತೆ ತನಗಡ್ಡಬಂದ ಬೆಟ್ಟದಿಣ್ಣೆಗಳನ್ನು ರಭಸದಿಂದ ನಿರಂತರವಾಗಿ ಕೊರೆದು ಒಂಬತ್ತು ಮಿಲಿಯನ್ ವರ್ಷಗಳವರೆಗೆ ಯಾರೂ ಹೊರಲಾರದಷ್ಟು ಮಣ್ಣನ್ನು ಹೊತ್ತು ಈ ಅಗಾಧ ಕಣಿವೆಯನ್ನು ನಿರ್ಮಿಸಿದ್ದಾಳೆ. ಈ ಕಣಿವೆಯ ಸ್ಥಳದಲ್ಲಿ ಭೂಗರ್ಭಶಾಸ್ತ್ರಜ್ಞರು ಎರಡು ಬಿಲಿಯನ್ ವರ್ಷಗಳ ಪೃಥ್ವಿಯ ಇತಿಹಾಸವನ್ನು ಕಂಡಿದ್ದಾರೆ. ಕೊಲರಾಡೋ (COLARADO) ನದಿಯ ಭಾರವನ್ನು ಕಡಿಮೆ ಮಾಡಲು ಅಮೇರಿಕೆಯ ಸರಕಾರ ಅಲ್ಲಲ್ಲಿಗೆ ಅಣೆಕಟ್ಟುಗಳನ್ನು ಕಟ್ಟಿ ನೀರು ನಿಲ್ಲಿಸಿ, ಮಣ್ಣಿನ ಸಾಗಾಣಿಕೆಯನ್ನು ಕಡಿಮೆ ಮಾಡಿ ನದಿಯ ವೇಗವನ್ನು ನಿಯಂತ್ರಿಸಿದ್ದಾರೆ. ಕೊಲರಾಡೋ ಭೋರ್ಗರೆವ ನಿನಾದ ೬೦೦೦ ಅಡಿಯ ಮೇಲೆ ನಿಂತ ನಮಗೆ ಧ್ಯಾನಿಸಿ ಕಿವಿಗೊಟ್ಟರೆ ಕೇಳಿಬರುತ್ತದೆ. ಬೆಟ್ಟಗುಡ್ಡಗಳನ್ನು ಕೊರೆವಾಗ ಮತ್ತು ಮಣ್ಣುಕಪ್ಪೆಯನ್ನು ಪೇರಿಸುವಾಗ ಆಕೆ ನಿರ್ಮಿಸಿದ ರೂಪುಗಳು ಚಿತ್ರವಿಚಿತ್ರವಾಗಿವೆ. ಸಂತೋಷದಾಯಕ ವಿಷಯವೆಂದರೆ ಇಲ್ಲಿಯ ಪೂರ್ವಜರು ಕೆಲವಕ್ಕೆ ಹಿಂದೂ ದೇವರುಗಳ ಹೆಸರು ಇಟ್ಟಿರುವುದು, ಶಿವನ ದೇವಾಲಯ, ವಿಷ್ಣುವಿನ ಆಲಯ, ಬುದ್ಧನ ವಿಹಾರ, ಕಾಳಿಯ ದೇಗುಲ ಕೃಷ್ಣನ ಆರಾಮ, ರಾಮನ ಆಶ್ರಮ, ಬ್ರಹ್ಮನ ಮಂದಿರ ಇಲ್ಲಿವೆ. ಇವಲ್ಲದೆ ಜೋರಾಸ್ಟರ್, ಕನ್‌ಫ್ಯೂಷಿಯಸ್‌ಗಳಿಗೂ ಸ್ಥಾನಗಳಿವೆ. ಆದರೂ ಹಿಂದೂ

ದೇವಾಲಯಗಳೇ ಎದ್ದು ಕಾಣುತ್ತವೆ. ಇವೇ ಪ್ರಮುಖ ಕಲ್ ಮತ್ತು ಮಣ್ಣು ರೂಪಗಳು. ಈ ಅಗಾಧ ಕೊಳ್ಳದ ಅಂಚಿನಲ್ಲಿಯೇ ನಡೆದು ತಪಸಿಯ ನೆಲೆ (ಹೆರ್ಮಿಟ್ಸ್ ರೆಸ್ಟ್) ವರೆಗೆ ನಡೆವಾಗ ಒಂದು ಪಾರ್ಶ್ವದ ನೋಟ ಸಿಗುತ್ತದೆ. ಇನ್ನೊಂದು ಅಂಚಿನಲ್ಲಿ ನಡೆದು ದೃಶ್ಯಗೋಪುರದ (ವಾಚ್ ಟವರ್) ವರೆಗೆ ನಡೆದರೆ ಮತ್ತೊಂದು ಪಾರ್ಶ್ವದ ದರ್ಶನವಾಗುತ್ತದೆ. ಅನೇಕ ಗಟ್ಟಿಗರು ಈ ಪ್ರದೇಶದ ತರಬೇತಿಗೊಳಿಸಿದ ಕತ್ತೆಗಳು (ಟ್ರೇನ್ಡ್ ಮ್ಯೂಲ್ಸ್) ಮೇಲೆ ಕುಳಿತು ಕೊಳ್ಳದ ತಳಕ್ಕೆ ಇಳಿಯುತ್ತಾರೆ. ಅಲ್ಲಿ ಊಟದ ಕೊಳ, ತಂಗುವ ವ್ಯವಸ್ಥೆ ಮತ್ತೆಲ್ಲವೂ ಇವೆ. ಆದರೆ ಅಲ್ಲಿ ನೂರ ಹದಿನೆಂಟು ಡಿಗ್ರಿ ಉಷ್ಣತೆಯಿರುತ್ತದೆ. ಕತ್ತೆಗಳು ಬಹು ಹುಷಾರಿನಿಂದ ಕೆಳಗೆ ಇಳಿಯುತ್ತವೆ. ದಾರಿಯಲ್ಲಿ ಸಾಕಷ್ಟು ಕುಡಿಯುವ ನೀರಿನ ವ್ಯವಸ್ಥೆಯಿದೆ. ಮೂರು ತಾಸಿನ ಪಯಣ ಗಂಡಾಂತರಕಾರಿಯಾದ ಕಾರಣ ಅನೇಕರು ಈ ಪ್ರಯತ್ನದಲ್ಲಿ ತೊಡಗುವುದಿಲ್ಲ. ಆದರೂ ಈ ಅವಕಾಶಕ್ಕಾಗಿ ಮುಂಗಡವೇ ಟಿಕೆಟ ಕೊಳ್ಳಬೇಕು. ಮೂರು ಮೂರು ತಿಂಗಳ ಮುಂಗಡ ಎಲ್ಲ ಕತ್ತೆಗಳೂ ಬುಕ್ ಆಗಿರುತ್ತವೆ.

ಸೂರ್ಯೋದಯದಿಂದ ಸೂರ್ಯಾಸ್ತಮದವರೆಗೆ ಸೂರ್ಯನ ಪ್ರಖರತೆಯ ಏರಿಳಿವಿನಲ್ಲಿ ಕೊಳ್ಳದ ಚಂದ ಬದಲಾಗುತ್ತಾ ನಡೆಯುತ್ತದೆ. ಸುಣ್ಣದ ಕಲ್ಲಿನಿಂದ ತುಂಬಿರುವ ಈ ಕೊಳ್ಳ ಬೇರೆ ಬೇರೆ ಸಮಯಗಳಲ್ಲಿ ಬೇರೆ ಬೇರೆ ಪ್ರಖರ ವರ್ಣಗಳನ್ನು ಪಡೆಯುತ್ತದೆ. ಈ ಬಣ್ಣದಾಟ ಕಣ್ಣಿಗೊಂದು ಹಬ್ಬ. ದಿಬ್ಬಗಳು ಕತೆ ಹೇಳುತ್ತವೆ. ಕೊಳ್ಳದ ಹಕ್ಕಿಗಳು ಗೀತೆ ನುಡಿಸುತ್ತವೆ; ಕೊಲರಾಡೋ ಕಾಲಪ್ರವಾಹದಂತೆ ನಿರಂತರ ಸಾಕ್ಷಿ ಹೇಳುತ್ತವೆ.

ನಮಗೆ ಇಲ್ಲಿ ಮುಂಬಯಿಯ ದಂಪತಿಗಳಾದ ಮೊಕಾಶಿ ಮತ್ತು ಶ್ರೀಮತಿ ಮೊಕಾಶಿ ದೊರೆತರು. ಭಾರತೀಯರು ದೊರತರೆ ಬಂಧುಗಳು ದೊರೆತಂತೆ ಆಗುತ್ತದೆ. ಲಾಸ್ ಏಂಜಲೀಸ್‌ನಿಂದ ಬಂದ ಅವರು ನಮಗೆ ಅನೇಕ ವಿಷಯಗಳನ್ನು ತಿಳಿಸಿದ್ದಲ್ಲದೆ ಡಿಸ್ನಿ ಲ್ಯಾಂಡ್‌ನ ಕೆಲ ಟಿಕೇಟುಗಳನ್ನೂ ಕೊಟ್ಟರು.

ಈ ಪ್ರದೇಶದ ಮೂಲ ನಿವಾಸಿಗಳಾದ ರೆಡ್ ಇಡಿಯನ್ನರು ಈಗ

ತಮಗಾಗಿ ನಿರ್ದಿಷ್ಟಗೊಳಿಸಿದ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಅಮೇರಿಕನರು ಒಂದು ಹಳೆಯ ಒಪ್ಪಂದದ ಪ್ರಕಾರ ಇವರಿಗೆ ಕೆಲ ಸಾವಿರಾರು ಎಕರೆ ಜಮೀನು ನಿಗದಿಗೊಳಿಸಿ ಅಲ್ಲಿ ಬಿಳಿಯರು ಪ್ರವೇಶಿಸಕೂಡದೆಂದು ಹೇಳಲಾಗಿದೆ. ಆದರೆ ರೆಡ್ ಇಂಡಿಯನ್ನರು ಅನೇಕ ಬಿಳಿಯರಿಗೆ ತಮ್ಮ ಜಾಗಗಳ ಬಹ್ವಂಶಗಳನ್ನು ಲೀಸ್ ಮೇಲೆ ನೀಡಿದ್ದಾರೆ. ತೀರಾ ಬಡತನದ ರೀತಿಯ ಜೀವನ ನಡೆಸುತ್ತಾ ವಿದ್ಯಾಭ್ಯಾಸವಿಲ್ಲದೆ ಉತ್ತಮ ಹವ್ಯಾಸಗಳಿರದೆ ಬರೀ ಕುಡಿತದಲ್ಲಿಯೇ ಜೀವನ ಕಳೆವ ಆಲಸಿ ರೆಡ್ ಇಂಡಿಯನ್ನರು ಅಮೇರಿಕೆಗೆ ಒಂದು ಸಮಸ್ಯೆಯಾಗಿದ್ದಾರೆ. ಈ ನಿಗದಿಗೊಳಿಸಿದ ವಲಯಗಳಲ್ಲಿ (ರಿಜರ್ವ್ಡ್ ಏರಿಯಾಸ್) ಅಮೇರಿಕೆಯ ಯಾವ ಕಾನೂನಾಗಲೀ ತೆರಿಗೆಗಳಾಗಲೀ ಜಾರಿಯಲ್ಲಿಲ್ಲ. ನಮ್ಮಲ್ಲಿರುವ ಗಿರಿಜನರ ಏಜೆನ್ಸಿಗಳಂತೆ ಈ ವಲಯಗಳಿವೆ. ಆದರೆ ಅತ್ಯಂತ ಶ್ರೀಮಂತ ಸಮಾಜದ ಮಧ್ಯೆ ತೊಳಲಾಡುತ್ತಿರುವ ಈ ಜನರ ಪಾಡು, ನಿಜಕ್ಕೂ ಶೋಚನೀಯ. ಅವರದಾದ ಸಂಸ್ಕೃತಿ, ಜೀವನಧರ್ಮ ನಶಿಸಿಹೋಗಿದೆ. ನಮ್ಮ ಜೀವನ ಅವರಿಗೆ ತೀರಾ ವಿದೇಶೀಯವೂ ಅಪರಿಚಿತವೂ ಕಷ್ಟಕರವೂ ಆಗಿ ಕಾಣುತ್ತದೆ. ಹಳೆಯದು ಹೋಗಿದೆ. ಹೊಸದನ್ನು ಹಿಡಿಯಲಾರರು ಎಂಬ ಸಂಕ್ರಮಣ ಪರಿಸ್ಥಿತಿಯಲ್ಲಿದ್ದಾರೆ. ಕೊಲಂಬಸ್ಸನು ಅಮೇರಿಕೆಯನ್ನು ಕಂಡುಹಿಡಿದಾಗ ಇದ್ದುದಕ್ಕಿಂತ ಹೆಚ್ಚು ಜನ ರೆಡ್ ಇಂಡಿಯನ್ನರು ಈಗ ಅಮೇರಿಕೆಯಲ್ಲಿದ್ದಾರೆ. ಈ ಜನರನ್ನು ಮಿಕ್ಕ ಅಮೇರಿಕನ್ನರ ಮಟ್ಟಕ್ಕೆ ತರುವುದು ಆ ರಾಷ್ಟ್ರದ ಪ್ರಖರ ಸಮಸ್ಯೆಯಾಗಿದೆ. ಸುಮಾರು ೨೦೦ ವರ್ಷಗಳ ಸಹಜೀವನದಲ್ಲಿ ಇದು ಸಾಧ್ಯವಾಗಿಲ್ಲ. ಸರಕಾರದ ಇಂಡಿಯನ್ ಅಫೇರ್ಸ್ ಕಛೇರಿ ಸಾಕಷ್ಟು ಯೋಜನೆಗಳನ್ನು ತಯಾರಿಸಿ ಈ ಜನರ ಅಭಿವೃದ್ಧಿಗೆ ಪ್ರಯತ್ನಿಸುತ್ತಿದೆ. ಆದರೆ ಸರಕಾರದ ಏಕಮುಖ ಪ್ರಯತ್ನ ಬೇಗನೆ ಸಫಲವಾಗುವುದಿಲ್ಲ ಎಂಬುದಕ್ಕೆ ನಮ್ಮ ಹರಿಜನ ಗಿರಿಜನ ಸಮಸ್ಯೆಯೇ ಸಾಕ್ಷಿ.

ಇಲ್ಲಿಯ ಎಲ್ಲ ಹೋಟೆಲ್ ಮತ್ತು ಪ್ರವಾಸೀ ಅನುಕೂಲಗಳನ್ನು ಫ್ರೆಡ್ ಹಾರ್ವೆ ಎಂಬ ಕಂಪನಿ ನಡೆಸುತ್ತದೆ. ಅತ್ಯುತ್ತಮ ಸೇವೆಗೆ ಇದು ಬೇರೊಂದು ಹೆಸರು. ಇಲ್ಲಿಯ ಎಲ್ ತೊವಾರ್ ಹೋಟೆಲ್ ಹತ್ತಿರ ಪ್ರತಿ

ಸಂಜೆ ೫–೩೦ ಗಂಟೆ ಹೋಪಿ ಇಂಡಿಯನ್ ಜನಾಂಗದವರಿಂದ ರೆಡ್ ಇಂಡಿಯನ್ ನೃತ್ಯ ನಡೆಯುತ್ತದೆ. ಇವರ ಪರಿಕರಗಳು ವರ್ಣಮಯವಾಗಿ ಆಕರ್ಷಕವಾಗಿರುತ್ತವೆ ಇವರ ನೃತ್ಯ ಬಹುಶಃ ವನ್ಯಮೃಗಗಳ ನಡಿಗೆ, ಓಟ ಮತ್ತು ಕುಣಿತದ, ಯುದ್ಧದ ಅನುಕರಣವಾಗಿರುತ್ತದೆ. ಈ ನೃತ್ಯದ ಸಂಕೇತಗಳಲ್ಲಿ ಬೇರಾವ ಭಾವಮುದ್ರೆಯಾಗಲೀ ಅರ್ಥವಾಗಲೀ ಅಡಕವಾದಂತೆ ಕಾಣಬರುವುದಿಲ್ಲ. ಸ್ವಾಭಾವಿಕವಾದ ಸರಳವಾದ ಮತ್ತು ನಿಸರ್ಗದ ಮಕ್ಕಳಾದ ಈ ಜನ ತಮ್ಮ ಕಲೆಗಳಲ್ಲಿ ಪ್ರಾಣಿಜೀವನವನ್ನು ಅನುಸರಿಸಿದ್ದು ವಿಶೇಷವೇನಲ್ಲ.

ಇಲ್ಲಿಯ ಬ್ರೈಟ್ ಏಂಜಲ್ ಲಾಡ್ಜ್‌ನಲ್ಲಿ ನಮ್ಮ ವಾಸವಿತ್ತು. ಇಲ್ಲಿಯ ಕ್ಯಾಂಟೀನ್‌ನಲ್ಲಿ ಕುಳಿತಾಗ ಸ್ಯಾನ್‌ಫ್ರಾನ್ಸಿಸ್ಕೋದ ಶ್ರೀ ಸ್ಮಿತ್ ದಂಪತಿಗಳ ಪರಿಚಯವಾಯಿತು. ಮೂಲದಲ್ಲಿ ಮೆಕ್ಸಿಕೋ ವಾಸಿಗಳಾದ ಸ್ಮಿತ್ ತುಂಬ ಸರಳಜೀವಿಗಳು. ಸಹೃದಯತೆಯಿಂದ ಭಾರತದ ಬಗ್ಗೆ, ಭಾರತೀಯ ಜನತೆ, ಭಾಷೆ ಸಂಸ್ಕೃತಿಗಳ ಬಗ್ಗೆ ವಿಚಾರಿಸಿದರು. ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ನಾವು ನೋಡಬೇಕಾದ ವಿಷಯಗಳ ಕುರಿತು ತಿಳಿಯ ಹೇಳಿದರಲ್ಲದೆ ಪರಿಚಿತರೊಬ್ಬರ ವಿಳಾಸ ಹೇಳಿ ಅಲ್ಲಿಗೆ ಹೋಗಲು ತಿಳಿಸಿದರು. ಮೆಕ್ಸಿಕೋದಲ್ಲಿರುವ ಮಾಯಾ ಜನಾಂಗದ ಸಂಸ್ಕೃತಿಗೂ ಭಾರತೀಯ ಸಂಸ್ಕೃತಿಗೂ ಇರುವ ನಿಕಟತೆಯ ಕುರಿತು ಕುತೂಹಲಕಾರಕ ಪ್ರಶ್ನೆ ಕೇಳಿದರು. ಮೆಕ್ಸಿಕೋ ಕಾಣದ ನಾವು ಅವರನ್ನೇ ಪ್ರಶ್ನೆ ಕೇಳಿದೆವು. ಶಿಶಿರ್ ಕುಮಾರ್ ಮಿತ್ರರು ಬರೆದ 'ವಿಷನ್ ಆಫ್ ಇಂಡಿಯಾ' ಓದಿದ್ದ ನನಗೆ ಮೆಕ್ಸಿಕೋದ ಬಗ್ಗೆ ಆರದ ಕುತೂಹಲವಿದೆ. ಅವರ ಸೂರ್ಯ ದೇವಸ್ಥಾನ, ಚಂದ್ರ ಮತ್ತು ವರುಣರ ದೇವಸ್ಥಾನ ಆರ್ಯರ ಪ್ರಭಾವದಿಂದ ಹೊರತಾದಂತೆ ಕಾಣಿಸುವುದಿಲ್ಲ.

ರಾತ್ರಿಕಾಲದಲ್ಲಿ ಚಂದ್ರನ ಬೆಳಕಿನಲ್ಲಿ ಈ ಅದ್ಭುತ ಕೊಳ್ಳದ ಶೃಂಗಾರವೇ ಶೃಂಗಾರ. ಕೊಳ್ಳವೆಲ್ಲಾ ತಿಳಿ ಹಾಲಿನ ಹೊನಲಿನಲ್ಲಿ ತೊಯ್ದಂತೆ ಕಾಣುತ್ತದೆ. ನಮ್ಮ ಬಸ್ ಡ್ರೈವರ್ ಟಾಂ ಹೇಳಿದಂತೆ ಬೇರೆ ಬೇರೆ ಋತುಗಳಲ್ಲಿ ಬೇರೆ ಬೇರೆ ಆಕರ್ಷಕ ರೂಪು ಧರಿಸುತ್ತದೆ ಈ ಕೊಳ್ಳ. ವಿಪರೀತ ಮಳೆ, ಮಂಜು, ಇಬ್ಬನಿಗಳ ಕಾಲ ಮಾತ್ರ ಉಪಯೋಗವಿಲ್ಲ. ಆದರೆ ಹಿಮಪಾತದ ಕಾಲದಲ್ಲಿಯ ಚೆಲುವೇ ಬೇರೆ.

ಮನ ದಣಿಯುವಷ್ಟು ಗ್ರ್ಯಾಂಡ್ ಕ್ಯಾನಿಯನ್ ನಲ್ಲಿ ಸುತ್ತಾಡಿ ಮತ್ತೆ ಏರ್ ವೆಸ್ಟ್ ಮೂಲಕ ಲಾಸ್ ವೇಗಸ್ ಕಡೆ ವಿಮಾನದಲ್ಲಿ ಪಯಣಿಸಿದಾಗ ಮನಸ್ಸು ಹಗುರವಾಗಿತ್ತು. ಪ್ರಕೃತಿಯ ಸನ್ನಿಧಾನ ಚೇತನಕಾರಿ; ಉತ್ಸಾಹದಾಯಕ.

ಲಾಸ್ ವೇಗಸ್‌ನಿಂದ ವೆಸ್ಟರ್ನ್ ಏರ್‌ಲೈನ್ಸ್ ಸಾರಿಗೆಯಲ್ಲಿ ರಮ್ಯಣೀಯ ಪಟ್ಟಣ ಲಾಸ್ ಏಂಜಲೀಸ್ ಸೇರಿದಾಗ ಮುಚ್ಚಂಜೆಯಾಗಿತ್ತು. ಅಮೇರಿಕೆಯ ಪೂರ್ವ ತೀರದ ಪಟ್ಟಣಗಳು ಉರಿಬೆಂಕಿಯಾದರೆ, ಪಶ್ಚಿಮ ತೀರದ ಪಟ್ಟಣಗಳು ಹಸನಾದ ಹವೆಯ ಹಸಿರುದ್ಯಾನದ ಪಟ್ಟಣಗಳು.

ಲಾಸ್ ಏಂಜಲೀಸ್ : ಪ್ರಪಂಚದ ಅತಿದೊಡ್ಡ ಸಿನಿಮಾ ಕೇಂದ್ರವಾದ ಲಾಸ್ ಏಂಜಲೀಸ್ ಎಲ್ಲರ ಮನಸ್ಸನ್ನೂ ಆಕರ್ಷಿಸುತ್ತದೆ. ಅದ್ಭುತಗಳ ಪಿತಾಮಹರೂ ಮನೋರಂಜನೆಯ ಮಾರ್ಗಗಳೂ ಹಣಗಳಿಸುವ ಕುಶಲತೆಯ ಬಂಡವಳಿಗರೂ ಸೇರಿರುವ ಈ ನಗರ ಅಮೇರಿಕೆಯಲ್ಲಿಯೇ ವಿಶಿಷ್ಟ ಸ್ಥಾನ ಪಡೆದಿದೆ. ಹಾಲಿವುಡ್ ಪ್ರಪಂಚದ ಪರಿಚಯ ಪಡೆಯಲೆಂದು ಯೂನಿವರ್ಸಲ್ ಸಿಟಿ ಸ್ಟುಡಿಯೋಗೆ ತೆರಳಿದೆವು. ನಮ್ಮಲ್ಲಿಯ ಸ್ಟುಡಿಯೋಗಳಂತೆಯೇ ಈ ನಿರ್ಮಾಣ ಸಂಸ್ಥೆಗಳು ಇವೆಯಾದರೂ ಇಲ್ಲಿ ಪ್ರತಿಯೊಂದೂ ಆಧುನಿಕವಾಗಿದೆ. ಸೆಟ್ ಒಳಗೆ (೧) ಪ್ರತಿಯೊಂದೂ ಅಗ್ನಿ ನಿರೋಧಕವಾಗಿರಿಸಲಾಗಿದೆ. ೨) ಸೆಟ್ ಮೇಲಿನ ಅಟ್ಟಣಿಗೆ ಸುಭದ್ರ ಮತ್ತು ಸುಸ್ಥಿತಿಯಲ್ಲಿದೆ. ೩) ಕಲಾವಿದರ ಮತ್ತು ತಂತ್ರಜ್ಞರ ಸುಖಕ್ಕಾಗಿ ಏರ್ ಕಂಡೀಷನಿಂಗ್ ವ್ಯವಸ್ಥೆ ಇದೆ ಚಿತ್ರಕ್ಕಾಗಿ ಸೆಟ್ ರಚಿಸುವ ರೀತಿ ಎಲ್ಲಾ ನಮ್ಮಂತಹುದೇ ಆದರೆ, ಚಿತ್ರೀಕರಿಸುವ ಉಪಕರಣ ಅತ್ಯುತ್ತಮವಾದುದು ಮತ್ತು ವಿಪುಲವಾದುದು. ಈ ಸ್ಟುಡಿಯೋದಲ್ಲಿ ಕೃತಕವಾಗಿ ಪ್ಯಾರಿಸ್, ಲಂಡನ್, ನ್ಯೂಯಾರ್ಕ್ ಇತರ ಅನೇಕ ಪಟ್ಟಣಗಳನ್ನೂ ಶ್ವೇತ ಭವನ ಇತ್ಯಾದಿ ಪ್ರಮುಖ ಭವಂತಿಗಳನ್ನೂ ನಿರ್ಮಿಸಲಾಗಿದೆ, ಅಡವಿಯಿದೆ; ಉದ್ಯಾನವನವಿದೆ; ಬೆಟ್ಟವಿದೆ; ನದಿಯಿದೆ; ಜಲಪಾತವಿದೆ; ಕೊಳ್ಳವಿದೆ; ಸೆರೆಮನೆ ಇದೆ, ಹೀಗಾಗಿ ಚಿತ್ರನಿರ್ಮಾಪಕ ಹೊರಾಂಗಣ ಚಿತ್ರೀಕರಣಕ್ಕೆ ಹೋಗುವುದೇ ಬೇಕಾಗಿಲ್ಲ. ವಿಯಟ್ನಾಂ, ವಾತಾವರಣ ಸಹಿತ ಇಲ್ಲಿ ನಿರ್ಮಿಸಲ್ಪಟ್ಟಿದೆ, ಇದೊಂದು ಅಪೂರ್ವ ರೀತಿಯಲ್ಲಿ ಸುಸಜ್ಜಿತವಾದ (ಬೃಹಾಂಡ)

ಸ್ಟುಡಿಯೋ. ಯುದ್ಧ ಪ್ರಸಂಗವೊಂದರ ಆಧಾರಿತ ಚಿತ್ರವೊಂದರ ಚಿತ್ರೀಕರಣವನ್ನೂ ನೋಡಿದೆವು.

ಈ ಸ್ಟುಡಿಯೋದಲ್ಲಿ ನೋಡಿದ ಗೊಂಬೆಯಾಟವನ್ನು ಮರೆಯಲು ಸಾಧ್ಯವೇ ಇಲ್ಲ. ಒಂದೊಂದು ಗೊಂಬೆಯ ಬೆಲೆ ಸಾವಿರಾರು ಡಾಲರು ಇರಬೇಕು. ಒಂದು ಗೊಂಬೆ ಮುನ್ನೂರು ತುಂಡಾದರೂ ಆದೀತು. ಆಕರ್ಷಕ ಮತ್ತು ಅಮೂಲ್ಯ ಉಡುಗೆ ತೊಡಿಗೆ ಮತ್ತು ವಿಪರೀತ ಚಲನೆ ತಂತ್ರ. ಜೀವಂತ ಮಕ್ಕಳಾಟಗೆಗಿಂತ ಸಹಜ ಮತ್ತು ಸುಂದರವಾಗಿತ್ತು. ಇಲ್ಲಿ ನಡೆವ ಸ್ಟಂಟ್ ಷೋ ಚಿತ್ರಗಳಲ್ಲಿ ಯಾವ ರೀತಿ ಜಂಗೀ ಹೊಡೆದಾಟಗಳನ್ನು ತೋರಿಸುತ್ತಾರೆ, ಅವುಗಳ ತಂತ್ರವೇನು ಎಂಬುದನ್ನು ಸ್ಪಷ್ಟವಾಗಿ ತಿಳಿಸಿತು. ಅನಿಮಲ್ ಷೋ ಈ ಸ್ಟುಡಿಯೋಕ್ಕೆ ಸೇರಿದ ಪಕ್ಷಿಗಳ ಪ್ರಾಣಿಗಳ ಆಟ. ಪ್ರಾಣಿಗಳ ಮತ್ತು ಪಕ್ಷಿಗಳ ಹೃದಯವನ್ನರಿತ ಜನ ಕೈಸನ್ನೆ ಮತ್ತು ಕಣ್ಸನ್ನೆಯ ಮೇಲೆ ಈ ಮೂಕ ಮತ್ತು ಸ್ವತಂತ್ರ ಪಕ್ಷಿಗಳನ್ನು ಕುಣಿಸುವುದು ನಿಜಕ್ಕೂ ಸಾಧನೆಯೇ ಸೈ. ಇವುಗಳಿಗೆ ಇಂಗಿತಜ್ಞಾನವುಂಟಾಗುವಂತೆ ಮಾಡುವುದು ಎಷ್ಟು ದುಸ್ತರ ಮತ್ತು ಆನಂದದಾಯಕ ಎನ್ನುವುದನ್ನು ಈ ಜನ ತಿಳಿಸಿಕೊಟ್ಟರು.

ಈ ಸ್ಟುಡಿಯೋವಲ್ಲಿ ಪ್ರಸಿದ್ಧ ತಾರೆ ಲಾನಾ ಟರ್ನರ್ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಆಕೆಯ ಅಭೀಷ್ಟದಂತೆ ಆಕೆಗಾಗಿ ನಿರ್ಮಿಸಿದ ಅಲಂಕಾರದ ಕೋಣೆ ಹಾಗೆಯೇ ಕಾದಿರಿಸಲ್ಪಟ್ಟಿದೆ. ಹಿರಿಯ ತಾರೆಯರ ಸಂತೋಷಕ್ಕಾಗಿ ಚಿತ್ರ ನಿರ್ಮಾಪಕರು ಏನೆಲ್ಲಾ ಮಾಡಬೇಕಾಗುತ್ತದೆಂಬುದಕ್ಕೆ ಇದೊಂದು ದೊಡ್ಡ ನಿದರ್ಶನ.

ಈ ಪ್ರವಾಸದಲ್ಲಿ ನಮಗೆ ದಿಲ್ಲಿಯ ವಕೀಲ ಶ್ರೀ ರಾಧೇಮೋಹನ ಗುಪ್ತ ದಂಪತಿಗಳು ದೊರೆತರು. ಇವರ ಮಗ ಈ ದೇಶದಲ್ಲಿ ಪ್ರೊಫೆಸರಾಗಿದ್ದಾರೆ. ಆತನ ಅಭೀಷ್ಟದಂತೆ ಈ ದಂಪತಿಗಳು ಪ್ರಪಂಚ ಪರ್ಯಟನೆಗೆ ಹೊರಟಿದ್ದಾರೆ. ಶ್ರೀ ಗುಪ್ತ ನಿಜವಾಗಿ ಯೋಚಿಸುತ್ತಿದ್ದರು, " ನಮ್ಮ ದೇಶ ಬಿಟ್ಟು ಹೊರಗೆ ಬಂದಾಗ ನಮ್ಮ ದೇಶದ ಬೆಲೆ ನಮಗೆ ತಿಳಿಯುತ್ತದೆ.

ನಮ್ಮಲ್ಲಿ ನೋಡತಕ್ಕದ್ದು ಬೇಕಾದಷ್ಟು ಇದೆ. ಜನರಿಗೆ ಹೊರಗೆ ಬಂದು ನಿಂತು ನೋಡಿ ನಮ್ಮ ಬೆಲೆಯನ್ನು ಅರಿತುಕೊಳ್ಳುವ ಅವಕಾಶ ಇರಬೇಕು. ಇದು ಸತ್ಯವಾದ ಮಾತು."

ಇಲ್ಲೇ ಸ್ಟೀವ್ ಮ್ಯಾಕ್ವಿನ್ ಮತ್ತು ಡಾನ್ ಫಾಯೆ ನಟಿಸಿದ 'ದಿ ಥಾಮಸ್ ಕ್ರೌನ್ ಅಫೇರ್' ಎಂಬ ಚಿತ್ರವನ್ನು ನೋಡಿದೆವು. ಅಮೇರಿಕೆಯಲ್ಲಿ ಯಾವ ರೀತಿಯಲ್ಲಿ ಬ್ಯಾಂಕ್ ವಗೈರಾ ಲೂಟಿಯಾಗುತ್ತವೆ. ಮತ್ತು ಯಾವ ರೀತಿಯಲ್ಲಿ ಆ ಜನ ತಪ್ಪಿಸಿಕೊಳ್ಳುತ್ತಾರೆ. ಎಂಬುದಕ್ಕೆ ಈ ಚಿತ್ರವೇ ಸಾಕ್ಷಿ. ಒಂದೇ ಬಾರಿಗೆ ಸರಪಳಿಯ ರೀತಿಯಲ್ಲಿ ಚಿಕ್ಕ ಫ್ರೇಮುಗಳ ಮೂಲಕ ಚಿತ್ರವನ್ನು ತೋರಿಸುವ ತಂತ್ರವನ್ನು ಈ ಚಿತ್ರ ನಿರ್ಮಾಣದಲ್ಲಿ ಸಫಲವಾಗಿ ಉಪಯೋಗಿಸಲಾಗಿದೆ. ಆಸೆಗೆ ಮಿತಿಯೇ ಇಲ್ಲವೆಂಬುದು ನಿಶ್ಚಿತ. ಇಂದು ಚಂದ್ರಮಂಡಲ, ನಾಳೆ ಬುಧಲೋಕ.

ಲಾಸ್ ಏಂಜಲೀಸ್ ಕೌಂಟ್ ಮ್ಯೂಜಿಯಂ ಒಳಗಿನ ಪ್ರದರ್ಶನಕ್ಕಿಂತ ಕಟ್ಟಡದಿಂದ ಪ್ರಸಿದ್ಧವಾಗಿದೆ. ಕೆಳಗಿನ ಅಂತಸ್ತು ಸಂಪೂರ್ಣ ನೀರಿನಲ್ಲೇ ನಿಂತ ಹಾಗೆ ತೋರುತ್ತದೆ. ಇಲ್ಲಿ ನಡೆವ ವಿಶೇಷ ಪ್ರದರ್ಶನಗಳು ಎಲ್ಲರ ಗಮನ ಸೆಳೆಯುತ್ತವೆ. ಹಿಂದಿನ ಕಲಾ ಜಗತ್ತಿಗಿಂತ ಇಂದಿನ ಮತ್ತು ಮುಂದಿನ ಕಲಾ ಪ್ರಗತಿಯ ಬಗ್ಗೆ ಈ ಮ್ಯೂಜಿಯಂ ಶ್ರಮಿಸುತ್ತದೆ.

ಲಾಸ್ ಏಂಜಲೀಸ್‌ನ ಪ್ರಾಣ ಪದಕ ವಾಲ್ಟ್ ಡಿಸ್ನಿ ಮಹಾಶಯ ನಿರ್ಮಿಸಿದ ಡಿಸ್ನಿಲ್ಯಾಂಡ್. ಪ್ರಸಿದ್ಧ ಚಿತ್ರನಿರ್ಮಾಪಕ ಮತ್ತು ಮಾನವ ಪುರುಷ ವಾಲ್ಟ್ ಡಿಸ್ನಿ ತನ್ನ ಮಕ್ಕಳೊಡನೆ ಆಗಾಗ ತಿರುಗಾಡಲು ಹೋಗುತ್ತಿದ್ದಾಗ, ಚಿಕ್ಕವರ ಸಂತೋಷಕ್ಕಾಗಿ ಇಂತಹ ಪ್ರಪಂಚವನ್ನು ನಿರ್ಮಿಸಬೇಕೆಂದು ಕನಸು ಕಂಡನಂತೆ. ನ ಭೂತೋ ನ ಭವಿಷ್ಯತಿ ಎಂಬ ಈ ಕನಸು ನಿಜವಾಗಲೇ ಬೇಕೆಂದರೆ ಹಲವಾರು ವರುಷಗಳೇ ಹಿಡಿದವು. ಅಪಾರ ವೆಚ್ಚದಲ್ಲಿ ಎರಡು ವರ್ಷಗಳ ಸತತ ದುಡಿಮೆಯಿಂದ ಈ ಡಿಸ್ನಿ ಸಾಮ್ರಾಜ್ಯ ನಿರ್ಮಾಣವಾಗಿದೆ. ಇದು ಮಕ್ಕಳ, ಹಿರಿಯರ, ಸರ್ವರ ಲೋಕ.

ಲಾಸ್ ಏಂಜಲೀಸಿನ ನಮ್ಮ ವಾಸ್ತವ್ಯದಲ್ಲಿ ಎರಡು ದಿನಗಳನ್ನು ನಾವು ವಾಲ್ಟ್ ಡಿಸ್ನಿ ನಿರ್ಮಿಸಿದ ಮಾಯಾಲೋಕದಲ್ಲಿ ಕಳೆದೆವು. ಮಕ್ಕಳಾಟಕ್ಕೆ

ನಿರ್ಮಿಸಿದ ಮಹಾಪಟ್ಟಣದಲ್ಲಿ ಇಪ್ಪತ್ತನೇ ಶತಮಾನದ ಸಾಧನೆಯನ್ನೆಲ್ಲಾ ಆಟಗಳ ಮೂಲಕ ತೋರಿಸಲಾಗಿದೆ.

ವಾಲ್ಟ್ ಡಿಸ್ನಿಯು ನೂರಾರು ಎಕರೆ ಪ್ರದೇಶದ ಈ ಭೂಮಿಯನ್ನು ಆರು ಭಾಗಗಳನ್ನಾಗಿ ಮಾಡಿದ್ದಾನೆ. ಮುಖ್ಯವಾಗಿ **ಫ್ರಾಂಟಿಯರ್ ಲ್ಯಾಂಡ್ :** ಇಲ್ಲಿ ಅಮೇರಿಕೆಯ ಇತಿಹಾಸ, ಮೂಲನಿವಾಸಿಗಳ ಪರಿಚಯ ಮತ್ತು ಜಾನಪದ ವೈವಿಧ್ಯದ ಪರಿಚಯವಿದೆ. **ಅಡ್ವೆಂಚರ್ ಲ್ಯಾಂಡ್ :** ಇಲ್ಲಿ ಸಾಹಸ ಮತ್ತು ವನ್ಯಜೀವಿಗಳಿಗೆ ಪ್ರಾಶಸ್ತ್ಯ ನೀಡಲಾಗಿದೆ. **ಫ್ಯಾಂಟಸಿ ಲ್ಯಾಂಡ್ :** ಇಲ್ಲಿ ಅನೇಕ ಅಮೇರಿಕನ್ ಮತ್ತು ಇಂಗ್ಲಿಷ್ ಜಾನಪದ ಕಥೆಗಳಿಗೆ ರೂಪಕ ನೀಡಲಾಗಿದೆ. **ಟುಮಾರೋ ಲ್ಯಾಂಡ್ :** ಇದು ನಾಳಿನ ಕುರಿತಾಗಿದೆ. ಇನ್ನು ಯು.ಎಸ್. ಎ. ಮೈನ್ ಸ್ಟ್ರೀಟ್ ನ್ಯೂ ಆರ್ಲಿಯನ್ಸ್ ಸ್ಕ್ವೇರ್‌ಗಳಲ್ಲಿ ಅಮೇರಿಕೆಯ ಅನೇಕ ಸಾಮಾಜಿಕ ಸಂದರ್ಭಗಳನ್ನು ಪುನರ್ರೂಪಿಸಲಾಗಿದೆ.

ಡಿಸ್ನಿಲ್ಯಾಂಡ್‌ನಲ್ಲಿ ಒಂದೆರಡು ದಿನ ಕಳೆದು ಬಂದರೆ ಜೀವನ ಮತ್ತಷ್ಟು ಆಕರ್ಷಕ ಎನಿಸುತ್ತದೆ. ಅಮೇರಿಕೆಯ ಮೂಲನಿವಾಸಿಗಳ ಜೀವನವಿಧಾನ, ಅವರು ಕಟ್ಟುತ್ತಿದ್ದ ನಾನಾ ತರಹೆಯ ಸೇತುವೆಗಳು, ಮಾರ್ಕ್‌ಟ್ವೈನ್ ಮಹಾಶಯನ ಹಡಗು, ಪ್ರಪಂಚದ ದೊಡ್ಡ ನದಿಗಳಾದ ಗಂಗಾ, ನೈಲ್, ಅಮೆಜಾನ್ ಕೊಲರಾಡೋ ನದಿಗಳಲ್ಲಿ ಯಾನ ಮಾಡುವಾಗ ಒಂದೆಡೆ ಗಣಪತಿಯ ದಿವ್ಯಮಂಗಳ ರೂಪವನ್ನು ಕಂಡಾಗ ಭಾರತೀಯರು ಕೇಕೆ ಹಾಕುತ್ತಾರೆ. ಆಲಿಸ್ ಇನ್ ವಂಡರ್‌ಲ್ಯಾಂಡ್ ಮತ್ತು ನಿದ್ರಾಸುಂದರಿಯ ಅರಮನೆಯ ರೂಪಕಗಳು ರಮಣೀಯವಾಗಿವೆ. ಅದೇ ಪೈರೇಟ್ಸ್ ಆಫ್ ದಿ ಕ್ಯಾರಿಬಿಯನ್ (PRIATES OF THE CARRIBEAN) ನೋಡುವಾಗ ಸಿಡ್ನಿಯು ನಿರ್ಮಿಸಿದ ಭೀಭತ್ಸ ವಾತಾವರಣದಿಂದ ಮೈನವಿರೇಳುತ್ತದೆ. ಸಬ್‌ಮೇರಿನ್‌ಗಳ ಮೂಲಕ ವಸುಂಧರೆಯ ಜಲನಿಧಿಯನ್ನು ವೀಕ್ಷಿಸುವಾಗ ಹೃದಯ ರಂಜಿಸುತ್ತದೆ. ಅವರ್ ಗ್ರೇಟ್ ಮೊಂಮೆಟ್ಸ್ ವಿತ್ ಲಿಂಕನ್ ಎಂಬಲ್ಲಿ ಅಬ್ರಹಾಂ ಲಿಂಕನ್ ಅವರು ನಿಂತು "ರೂಲ್ ಆಫ್ ದಿ ಪೀಪಲ್ ಫಾರ್ ದಿ ಪೀಪಲ್...." ಮುಂತಾಗಿ ಘೋಷಿಸಿದಾಗ ಮೈ ಮರೆಯುತ್ತೇವೆ.

ಬ್ಯಾಂಕ್ ಆಫ್ ಅಮೇರಿಕಾದವರ 'ಇದೊಂದು ಸಣ್ಣ ಪ್ರಪಂಚ' ಎಂಬ ರೂಪಕದಲ್ಲಿ ಪ್ರಪಂಚದ ಛಪ್ಪನ್ನಾರು ದೇಶಗಳ ನೂರಾರು ಜನಾಂಗದ ಲಕ್ಷಾಂತರ ಮಕ್ಕಳು ಉತ್ಸಾಹದಿಂದ ಮೈ ತುಂಬಿ ಆಯಾ ದೇಶಗೀತೆಗಳನ್ನು ಹಾಡಿದಾಗ ಅಂತಃಕರಣದಲ್ಲಿ ಕುಣಿದಾಡುತ್ತೇವೆ, ಮೈನ್ ಸ್ಟ್ರೀಟ್ ಸಿನಿಮಾ ದಲ್ಲಿ ಪುರಾತನ ಸಿನಿಮಾ ನೋಡಿದಾಗ ನಮ್ಮ ಪಿತಾಮಹರ ಬಗ್ಗೆ ಕರುಣೆ ಕಂಡು ಬರುತ್ತದೆ. ಸ್ವಿಸ್ ಕುಟುಂಬದ ವೃಕ್ಷ ತುದಿಯ ಮನೆ ನೆನೆಯಲು ಸಾಧ್ಯವಾಗದಷ್ಟು ವಾಸ್ತವವಾಗಿದೆ. ಈಗಲೂ ಜನ ಹಾಗಿದ್ದರೆ ಎಷ್ಟು ಒಳ್ಳೆಯದಾಗುತ್ತಿತ್ತು. ಹಳೆಯ ಲಂಡನ್ ನಗರದಲ್ಲಿ ಒಂದು ರೈಡ್ ಎಂತಹ ಸಂಪ್ರದಯವಾದೀ ಇಂಗ್ಲಿಷರನ್ನೂ ನಗಿಸುತ್ತದೆ. ಮ್ಯಾಡ್ ಟೀ ಪಾರ್ಟಿಯ ಬಸರುಗಳಲ್ಲಿ ಕುಳಿತು ಕಪ್ಪನ್ನು ತಿರ್ರನೆ ತಿರುವಿದಾಗ ಪ್ರಪಂಚವೇ ರಣ ವೇಗದಿಂದ ತಿರುಗಿ ಕರುಳು, ಹಿಂಡಿದಂತಾಗುತ್ತದೆ. ರಾಕೆಟ್‌ಗಳಲ್ಲಿ ಯಾನ ಮಾಡಿದಾಗ, ಮಾನೋರೇಲ್‌ನಲ್ಲಿ ಪಯಣಿಸಿದಾಗ ಮುಂಬರುವ ಕಾಲದ ಬಗ್ಗೆ ಆಶೆ ಹುಟ್ಟುತ್ತದೆ. ಪಾಂಟನ್ ಹಾಬ್ಲೆಡ್ಸ್‌ನಲ್ಲಿ ಪಯಣಿಸಿ ಮರಳಿದಾಗ ಎಂತಹ ರಕ್ತಹೀನನ ಮೈಯೂ ರಕ್ತೋದ್ದೀಪಿತವಾಗುತ್ತದೆ. 'ಟಿಕಿ' ರೂಂನ ಪಕ್ಷಿಗಳ ಮಾತನ್ನು ಮರೆಯಲಸಾಧ್ಯ.

ಹೀಗೆ ಒಂದಲ್ಲ ಎರಡಲ್ಲ, ಡಿಸ್ನಿಲ್ಯಾಂಡ್ ಮಕ್ಕಳ ಕನಸಿನ ಲೋಕ. ರಾತ್ರಿ ಕಾಲದಲ್ಲಿ ಆಕಾಶದಲ್ಲಿ ಅಪ್ಸರೆಯರ ಹಾರಾಟ, ಅದ್ಭುತ ದೀಪಗಳ ಓಕುಳಿಯಾಟ, ಮತ್ತೊಂದೆಡೆ ರಂಗುರಂಗಿನ ಪಟಾಕಿಯಾಟ, ರಾಜ್ಯದ ಎಳೆ ಯರಿಂದ ನೃತ್ಯಗಾನ ರಸಮಂಜರಿ. ಎಲ್ಲಿ ನೋಡಿದರಲ್ಲಿ ಉತ್ಸಾಹವೇ ಉತ್ಸಾಹ. ಯಾವ ಮುಖದಲ್ಲಿಯೂ ಸಪ್ಪೆ ಕಳೆಯೇ ಇಲ್ಲ. ದಿನಕ್ಕೆ ಎರಡು ಬಾರಿ ಮೆರವಣಿಗೆ ಬರುವ ವಾಲ್ಟ್ ಡಿಸ್ನಿಯ ಪಾತ್ರಗಳ ಬ್ಯಾಂಡ್ ಅಂತೂ ಅಲ್ಲಿ ಮಾತ್ರವೇ ಸಿಗುವುದು. ದುಃಖಭರಿತ ಯಂತ್ರವಿರಚಿತ ಅಮಾನುಷ ಪ್ರಪಂಚದ ಮಧ್ಯೆ ಡಿಸ್ನಿ ನಿರ್ಮಿಸಿರುವ ಈ ತಾಣ ಈ ಮಹಾನಗರ ಉತ್ಸಾಹ ಉಲ್ಲಾಸಗಳ ಆಗರ. ಹ್ಯಾಪಮೋರೆಯ ಮರಣೋತ್ಸಾಹಿ ಕೂಡ ಇಲ್ಲಿ ಬಂದರೆ ಬದುಕಿನ ಅಂದವನ್ನು ಕಂಡು ನಕ್ಕುನಲಿದು ಹರ್ಷಗೊಂಡಾನು,

ಡಿಸ್ನೀ, ನೀನು ನಿಜಕ್ಕೂ ಮಹಾನುಭಾವ, ಮಹಾನವ ಕುಟುಂಬಿ. ನಿನಗೆ ನಿನ್ನ ಹೃದಯ ವೈಶಾಲ್ಯಕ್ಕೆ ಸಮನಿಲ್ಲ.

ವೆಸ್ಟರ್ನ್ ಏರ್‌ಲೈನ್ಸ್ ಮೂಲಕ ಲಾಸ್ ಏಂಜಲೀಸ್‌ನಿಂದ ಸ್ಯಾನ್ ಫ್ರಾನ್ಸಿಸ್ಕೋಗೆ ತೆರಳಿದೆವು. ಸ್ಯಾನ್‌ಫ್ರಾನ್ಸಿಸ್ಕೋ ಹಲವಾರು ಬೆಟ್ಟಗಳ ಮೇಲೆ ಸ್ಥಿತಗೊಂಡಿದೆ. ಪೋಸ್ಟ್ ರಸ್ತೆಯ ಹೋಟಲ್ ಮಾರೀಸ್‌ನಲ್ಲಿ ಇಳಿದೆವು. ಈ ಹೋಟಲ್‌ನ ೧೭ ನೇ (ಕೊನೆಯ) ಅಂತಸ್ತಿನಲ್ಲಿ ನಮ್ಮ ಕೋಣೆ. ಕಿಟಕಿಯ ಪರದೆ ಸರಿಸಿದರೆ ವಿಸ್ತಾರವಾಗಿ ಹರಡಿದ ಸ್ಯಾನ್‌ಫ್ರಾನ್ಸಿಸ್ಕೋದ ನಗ್ನ ನೋಟ ಕಾಣಿಸುತ್ತದೆ.

ಬಂಧುಗಳಾದ ಶ್ರೀ ಅಮ್ರಿಕ್‌ಸಿಂಗ್ ದಂಪತಿಗಳನ್ನು ಭೇಟಿಯಾದೆವು. ಇವರು ಬರ್ಕಲಿಯಲ್ಲಿ ಅಂಜತಾ ಎಂಬ ಹೆಸರಿನ ಹಿಂದೀಯ ಹೋಟಲ್ ನಡೆಸುತ್ತಿದ್ದಾರೆ. ಪಕ್ಕಾ ಭಾರತೀಯ ವಾತಾವರಣದ ಈ ರೆಸ್ಟೋರಾ ತುಂಬಾ ಚೆನ್ನಾಗಿದೆ. ಅವರ ಮಕ್ಕಳು ಸಂಗೀತ ಮತ್ತು ಅಜ್ಮತ್‌ಸಿಂಗ್ ನಮಗೆ ಜೊತೆಯಾದರು. ಶ್ರೀ ಅಮ್ರಿಕ್ ಸಿಂಗ್ ನಮ್ಮನ್ನು ತಮ್ಮ ಇಂಪಾಲಾದಲ್ಲಿ ಎಲ್ಲ ಕಡೆಗೆ ಕರೆದೊಯ್ದರು. ಪ್ರಪಂಚ ಪ್ರಸಿದ್ಧವಾದ ಗೋಲ್ಡನ್ ಗೇಟ್ ಬ್ರಿಡ್ಜ್ ಎರಡನೆಯ ಪ್ರಪಂಚದ ಸಮರಕಾಲದ ಟೆಲಿಗ್ರಾಫ್ ಟವರ್. ಇಲ್ಲಿ ಸುಂದರ ಮತ್ತು ಆಕರ್ಷಕವಾದ ಕೊಲಂಬಸ್‌ನ ವಿಗ್ರಹವಿದೆ, ಈ ನಗರದ ಭಾಗವಾಗಿ ಅತಿ ದೊಡ್ಡ ಚೈನಾ ಟೌನ್ ಇದೆ. ಇಲ್ಲಿಯ ರೆಸ್ಟೋರಾಗಳು ಆ ಡ್ರಾಗನ್‌ನ ಭೀಕರ ಪ್ರದರ್ಶನಗಳು ಒಂದು ರೀತಿಯ ಭಯಾನಕ ವಾತಾವರಣ ಕಲ್ಪಿಸಿವೆ. ಎಂಪ್ರೆಸ್ ಆಫ್ ಚೈನಾ ಎಂಬ ರೆಸ್ಟೋರಾದಲ್ಲಿ ಭೋಜನ ಮಾಡಿದೆವು. ಈ ಜನರೆಲ್ಲಾ ಕಮ್ಯುನಿಸ್ಟರ ಕೈ ಮೇಲಾಗುತ್ತಲೇ ತಮ್ಮ ದೇಶ ತ್ಯಜಿಸಿ ಬಂದವರು, ಚೈನಾ ಟೌನ್‌ಗಳ ಕಾರ್ಯಭಾರ ಪೂರ್ಣವಾಗಿ ಚೈನೀಯರ ಕೈಯಲ್ಲಿಯೇ ಇದೆ. ಅಮೇರಿಕೆಯ ಬಹುತೇಕ ಕಾಯಿದೆಗಳು ಇಲ್ಲಿ ಬರಲು ಅಂಜುತ್ತವೆ.

ಸ್ಯಾನ್ ಫ್ರಾನ್ಸಿಸ್ಕೋ ಸಮುದ್ರತೀರಕ್ಕೆ ಅಂಟಿದಂತೆ ಅನೇಕ ದ್ವೀಪಗಳಿವೆ. ಇವುಗಳ ಪೈಕಿ ಗೋಲ್ಡನ್ ಗೇಟ್ ಬ್ರಿಡ್ಜ್ ಆ ಕಡೆ ಇರುವ ಸಾಲ್ಸೋಲಿಟಾ ವಿಲೇಜ್ ಎಲ್ಲರನ್ನೂ ಆಕರ್ಷಿಸುತ್ತದೆ. ಸಾವಿರಾರು ಹಿಪ್ಪಿಗಳು ಇಲ್ಲಿ ನೆರೆದಿ

ರುತ್ತಾರೆ. ಇಲ್ಲಿಯ ಷಾಪಿಂಗ್ ಸೆಂಟರಿನಲ್ಲಿ ಬೇಕಾದ್ದು ಸಿಗುತ್ತದೆ. ಇಲ್ಲಿ ನಮಗೆ ಕಾರು ನಿಲ್ಲಿಸಲು ಜಾಗ ದೊರೆಯಬೇಕಾದರೆ ಅರ್ಧತಾಸಿನ ಮೇಲಾಯಿತು. ಇಲ್ಲಿಯ ರಸ್ತೆಯ ಒಂದು ಕಡೆ ಕೆಲ ಬಿಳಿಯರು ತಲೆ ಬೋಳಿಸಿ ಗೋಪಾದದಷ್ಟು ಜುಟ್ಟು, ಕಾವಿಯ ಪಂಚೆ ಉಟ್ಟು, ಮೇಲುಡಿಗೆ ತೊಟ್ಟು ಗಂಧಾಕ್ಷತೆಗಳನ್ನು ಧರಿಸಿ ತಂಬೂರಿ ಮತ್ತು ತಾಳಮೇಳಗಳೊಂದಿಗೆ "ಹರೇ ಕೃಷ್ಣ ಹರೇ ರಾಮ" ಎಂದು ಭಜನೆ ಮಾಡುತ್ತಿದ್ದರು. ಒಬ್ಬನು ವಕ್ರ ವಕ್ರವಾಗಿ ಮದ್ದಳೆ ಬಾರಿಸುತ್ತಿದ್ದ. ಇವರ ಕಾಲಿನಲ್ಲಿ ಹಾಕಿದ ಸಾಕ್ಸ್ ಮತ್ತು ಷೂಸ್ ಮಾತ್ರ ಅಪ್ರಸ್ತುತವೆನಿಸಿದ್ದವು. ಈ ಕುಣಿತಕ್ಕೆ ಕೃಷ್ಣಾ ಡ್ಯಾನ್ಸ್ ಎಂದು ಕರೆಯುತ್ತಾರೆ. ಈ ಭಜನೆಯನ್ನು ಅವರು ಏಕೆ ಮಾಡುತ್ತಾರೋ ನಾನರಿಯೆ. ಹಿಪ್ಪಿಗಳು ಹಿಂದೂ ಮತ್ತು ಚೈನೀ ವೇದಾಂತದ ದುರುಪಯೋಗವನ್ನಷ್ಟೇ ನಡೆಸಿದ್ದಾರೆ.

ಸ್ಯಾನ್‌ಫ್ರಾನ್ಸಿಸ್ಕೋ ಬೀಚ್ ಅತಿ ಸುಂದರವಾದುದು. ಬಿಸಿಲು ಕಾಲವಾದದ್ದರಿಂದ ಸೂಜಿಯಿಡಲು ಬಿಡುವಿಲ್ಲದಂತೆ ಜನ ಮೈಕಾಯಿಸುತ್ತಾ ಮಲಗಿರುತ್ತಾರೆ. ನೋಡಿದಷ್ಟು ದೂರಕ್ಕೆ ಶಾಂತವಾಗಿ ರುದ್ರಭೀಕರವಾಗಿ ಕಾಣುತ್ತದೆ ಪೆಸಿಫಿಕ್.

ಇಲ್ಲಿಯ ಫಿಷರ್‌ಮನ್ ವಾರ್ಫ್ ಒಂದು ಪ್ರಸಿದ್ಧ ಪ್ರವಾಸಿ ಕೇಂದ್ರ. ನಾವಿದ್ದ ಜಾಗೆಯಿಂದ ಪ್ರಪಂಚದ ಪ್ರಸಿದ್ಧ ಕೇಬಲ್ ಕಾರ್ ಮೂಲಕ ಅಲ್ಲಿಗೆ ತೆರಳಿದೆವು. ಅತಿ ಪ್ರಾಚೀನವಾದ ಸ್ಪೇನಿಷ್ ಆಸ್ತಿ ಈ ಕೇಬಲ್‌ಕಾರ್. ವಿಪರೀತ ಏರಿಳಿವಿನ ಮತ್ತು ವಕ್ರ ರಸ್ತೆಯ ಈ ನಗರದಲ್ಲಿ ಹಿಂದೆ ಕೇಬಲ್‌ಕಾರ್ ಅತ್ಯಾವಶ್ಯಕವಾಗಿತ್ತು. ಭೂಮಿಯ ಒಳಗಡೆ ಹಾಕಿರುವ ಬಲವಾದ ತಂತಿಗಳ ಮೂಲಕ ಎಳೆಯಲ್ಪಡುವ ಕೇಬಲ್‌ಕಾರ್ ಈ ನಗರದ ಮುಖ್ಯ ಸ್ಮಾರಕವಾಗಿದೆ. ಫಿಷರ್‌ಮನ್ ವಾರ್ಫ್‌ನಲ್ಲಿ ರಿಪ್ಲೇ (RIPLEY)ಯ 'ನಂಬಿ ಅಥವಾ ನಂಬದಿರಿ' ಎಂಬ ಮ್ಯೂಜಿಯಂ ನೋಡಿದೆವು. ಪ್ರಂಪಚದಲ್ಲಿರುವ ವಿಚಿತ್ರ ಸಂಗತಿ ಮತ್ತು ವಸ್ತುಗಳ ಅನ್ವೇಷಣೆಯಲ್ಲಿ ರಿಪ್ಲೇ ಪ್ರಪಂಚದ ಎಲ್ಲ ಕಡೆ ಸುತ್ತಿದ. ಕಾಡು ಜನರ ಆಡುನುಡಿಯನ್ನು ಕಲಿತ, ವಿಶೇಷಗಳನ್ನು ಕಲೆಹಾಕಿ ಚಿತ್ರಮಯ ವಾರ್ತೆಗಳಲ್ಲಿ ಬೇರೆ ಬೇರೆ ಪತ್ರಿಕೆಗಳಿಗೆ ಬರೆದು

ಧನಾಢ್ಯನಾದ. ಅವನು ಸಂಪಾದಿಸಿದ ಅನೇಕ ವಸ್ತುಗಳ ಈ ಸಂಗ್ರಹ ಕುತೂಹಲಿಗೆ ಸುಗ್ರಾಸ ಭೋಜನದಂತಿದೆ. ಇಲ್ಲಿಯ ಅಂಗಡಿಯಲ್ಲಿ ಪಂಡಿತ್ ರವಿಶಂಕರರ ಸಿತಾರ್ ವಾದನದ ಮುದ್ರಿಕೆ ನುಡಿಯುತ್ತಿತ್ತು. ಕೆಲವೇ ದಿನಗಳಲ್ಲಿ ಭಾರತದ ಪ್ರಸಿದ್ಧ ವಾದ್ಯಗೋಷ್ಠಿಕಾರ ಜುಬಿನ್ ಮೆಹತಾ (ZUBIN MEHTA) ಇಲ್ಲಿಗೆ ಬರುವವರಿದ್ದರು.

ಇಲ್ಲಿಯ ಬ್ರಾಡ್ವೇ ಅಸಹ್ಯಮಯ ದಿವಾರಾತ್ರಿ ಕ್ಲಬ್‌ಗಳ ಬೀಡು. ಕಾಮುಕರಿಗೂ ವಾಕರಿಕೆ ಬರುವಷ್ಟು ಕಾಮೋತ್ಸಾಹ. ಇಲ್ಲಿಯ ವಿಶೇಷವೆಂದರೆ ಫಿಜೋಕಿಯರ. ಗಂಡಸರು ಹೆಂಗಸರಂತೆ ವೇಷಧರಿಸಿ ಕುಣಿಯುವ ಕ್ಲಬ್. ಈ ರಸ್ತೆಯಲ್ಲಿ ಕೂಡಾ ಹಿಪ್ಪಿಗಳ ಒಂದು ಗುಂಪು ಕೃಷ್ಣನೃತ್ಯವನ್ನು ನಡೆಸಿತ್ತು.

ಇಲ್ಲಿಯ ಗೋಲ್ಡನ್ ಗೇಟ್ ಪಾರ್ಕು ತುಂಬಾ ಅಂದವಾದ ಉದ್ಯಾನವನ. ಒಂದಾನೊಂದು ಕಾಲದಲ್ಲಿ ಬೆಂಗಳೂರಿನ ಕಬ್ಬನ್‌ಪಾರ್ಕ್ ಕೂಡ ಆ ರೀತಿ ಇತ್ತು. ಈ ಪಾರ್ಕಿನಲ್ಲಿ ಅದ್ಭುತವಾದ ಅಕ್ವೇರಿಯಂ ಇದೆ. ಮನ ಸೆಳೆವ ಜಪಾನೀ ತೋಟವಿದೆ. ಮತ್ತು ಅಪೂರ್ವ ವಸ್ತುಗಳಿಂದೊಡಗೂಡಿದ ಬೇಯಾಂಗ್ ಮ್ಯೂಜಿಯಂ ಇದೆ.

ಸ್ವಲ್ಪ ದೂರದಲ್ಲಿರುವ ಜೋಡೀ ಶಿಖರ (ಟ್ವಿನ್ ಪೀಕ್ಸ್) ನೋಡಲು ಹೋದೆವು. ಆ ಎತ್ತರದಿಂದ ಕಾಣುವ ಸ್ಯಾನ್‌ಫ್ರಾನ್ಸಿಸ್ಕೋ ಅದ್ಭುತವಾಗಿ ತೋರುತ್ತದೆ. ಈ ಕೊಳ್ಳದ ಗರ್ಭದಲ್ಲಿಯೆ ಅಮೇರಿಕೆಯ ರಕ್ಷಣಾ ಇಲಾಖೆ ತನ್ನ ಅಗಾಧವಾದ ಸ್ಫೋಟಕ ವಸ್ತುಗಳನ್ನು ಶೇಖರಿಸಿದೆ ಎಂದು ಹೇಳುತ್ತಾರೆ. ಇಲ್ಲಿ ಅಮೇರಿಕನ್ ಸೈನ್ಯದ ದೊಡ್ಡ ತುಕಡಿಯೊಂದು ವಸತಿಗೊಂಡಿದೆ. ಈ ಕೊಳ್ಳದ ಪಕ್ಕದಲ್ಲಿರುವ ತಪ್ಪಲಿನಲ್ಲಿರುವ ಮ್ಯುರ್‌ವುಡ್ಸ್‌ನಲ್ಲಿ ಸಂಯುಕ್ತರಾಷ್ಟ್ರ ಸಂಸ್ಥೆಯ ಛಾರ್ಟರ್‌ಗೆ ಅಂಗರಾಜ್ಯಗಳು ಅಂಕಿತ ಹಾಕಿದವು. ಈ ರಾಜ್ಯದಲ್ಲಿರುವ ಅನೇಕ ಕಾಡುಗಳಲ್ಲಿ ಸಾವಿರಾರು ವರ್ಷ ವಯಸ್ಸಾದ ಗಗನವನ್ನೇ ಇರಿಯುವ ಧೀರತೆಯಿಂದ ನಿಂತ ವೃಕ್ಷಗಳಿವೆ. ಒಂದು ವೃಕ್ಷದ ಕಾಂಡದಲ್ಲಿ ತೂತು ಕೊರೆದು ರಸ್ತೆ ಮಾಡಿದ್ದರಂತೆ, ಇತ್ತೀಚೆಗೆ ಅದು ತನ್ನ ಕಾಲ ಮುಗಿಸಿ ಕೆಳಗೆ ಬಿದ್ದಿತಂತೆ. ಮ್ಯುರ್‌ವುಡ್ಸ್ ರಾಜ್ಯರಕ್ಷಿತ ಉದ್ಯಾನವನ.

ಇಲ್ಲಿ ತಿರುಗಾಡಲು ಅನೇಕ ಕಾಲುದಾರಿಗಳಿವೆ. ಕಾಡಿನ ಮಧ್ಯೆ ಜುಳುಜುಳು ಹರಿವ ಚಿಕ್ಕ ತೊರೆಯೊಂದಿದೆ. ಈ ತೊರೆಯ ಮೇಲೆ ನಾಲ್ಕಾರು ಚಿಕ್ಕ ಸೇತುವೆಗಳಿವೆ. ಸೂರ್ಯನ ಬಿಸಿಲಿಗೆ ಛತ್ರಿ ಹಿಡಿದ ದೈತ್ಯಾಕಾರದ ವೃಕ್ಷಗಳ ಮಧ್ಯೆ ಎಷ್ಟು ಹೊತ್ತಿನವರೆಗೆ ನಡೆದಾಡಿದರೂ ಸಾಕೆನಿಸುವುದಿಲ್ಲ. ಇಲ್ಲಿಯೂ ಉಪಾಹಾರಗೃಹ ಮತ್ತು ಉಡುಗೊರೆಗಳ ಅಂಗಡಿಯಿದೆ. ನಮ್ಮ ದೇಶದಲ್ಲಿ ಈ ರೆಡ್‌ಉಡ್ ಜಾತಿಯ ಗಿಡಗಳ ಬೀಜಪ್ರಸಾರ ಮಾಡೋಣವೆಂಬ ಹಂಬಲ ದಿಂದ ಕೆಲ ಬೀಜ ತೆಗೆದುಕೊಂಡು ನಾಟಿಯ ವಿಷಯ ತಿಳಿದುಕೊಂಡೆ.

ಸ್ಯಾನ್‌ಫ್ರಾನ್ಸಿಸ್ಕೋ ಔದ್ಯಮಿಕ ನಗರವಾದ್ದರಿಂದ ಯಾವುದಾದರೂ ಉದ್ದಿಮೆಯನ್ನು ನೋಡೋಣವೆಂದು ಬಗೆದು ಸಹಾಯಕ್ಕಾಗಿ ನಮ್ಮ ದೇಶದ ವ್ಯಾಪಾರ ಕಛೇರಿಗೆ (ಟ್ರೇಡ್ ಕೌನ್ಸಿಲ್) ತೆರಳಿದೆವು. ಕಾಮರ್ಸ್ ಶಾಖೆಯ ಎಸ್. ಡಿ. ಸಿಂಗ್ ಖನ್ನಾ ತುಂಬಾ ಪ್ರಯತ್ನಮಾಡಿ ಖಾದ್ಯತೈಲ ತಯಾರಿಸುವ ಕೆಲ ಕಾರ್ಖಾನೆಗಳ ವಿಳಾಸ ತೆಗೆದರು. ಅಷ್ಟರಲ್ಲಿಯೇ ಕಾನ್ಸಲ್ ಅವರ ಫೋನ್ ಬಂತು. ನಮ್ಮ ದೇಶದ ವಿದೇಶಾಂಗ ಮಂತ್ರಿ ಶ್ರೀ ದಿನೇಶ್‌ಸಿಂಗ್ ಸ್ಯಾನ್‌ಫ್ರಾನ್ಸಿಸ್ಕೋಗೆ ಬಂದಿದ್ದರು. ಅವರಿಗೆ ಸದ್ಯ ಅಮೇರಿಕಾ ಭಾರತದಲ್ಲಿ ತೊಡಗಿಸಿರುವ ಬಂಡವಳಿನ ಅಂಕಿಸಂಖ್ಯೆ ಬೇಕಾಗಿತ್ತು. ಕಾನ್ಸಲ್ ಹೇಳಿದರು "ನನಗೆ ಈ ಮಾಹಿತಿ ೫ ನಿಮಿಷಗಳಲ್ಲಿ ಬೇಕು." ಅವರ ಕಛೇರಿಯ ಸಿಬ್ಬಂದಿ ೨೫ ನಿಮಿಷ ಹುಡುಕಿದರೂ ಕೂಡ ಅವರಿಗೆ ಈ ಮುಖ್ಯ ಅಂಕಿ ಅಂಶ ಸಿಗಲಿಲ್ಲ ದಿನೇಶ್‌ಸಿಂಗ್ ನಿರಾಶರಾಗಿರಬೇಕು. ಯಾವ ನೆಲವೇ ಆಗಲೀ ಯಾವ ನೀರೇ ಆಗಲೀ ನಾವು ನಾವೇ ಅಲ್ಲವೇ ! ಒಂದು ಗಂಟೆ ಕಾಯಿಸಿದ ನಂತರ ನಮ್ಮ ಪರವಾಗಿ ಖನ್ನಾ ಸಾಹೇಬರು ಕೆಲ ಕಾರ್ಖಾನೆಗಳಿಗೆ ಫೋನ್ ಮಾಡಿದರು. ಆದರೆ ಯಾವ ಕಾರ್ಖಾನೆಯಾದರೂ ಭಾರತೀಯ ನಿರೀಕ್ಷಕರಿಗೆ ಅನುಮತಿ ನೀಡುವ ಪರಿಸ್ಥಿತಿಯಲ್ಲಿರಲಿಲ್ಲ. ನಿರಾಶರಾಗಿ ಮನೆ ಸೇರಿದೆವು.

ಸಾನ್‌ಫ್ರಾನ್ಸಿಸ್ಕೋ ಇತ್ತೀಚಿನ ವರ್ಷಗಳಿಂದ ಭೀಕರವಾಗುತ್ತಾ ಇತ್ತು. ಆ ದಿನ ಬೆಳಗಿನಲ್ಲಿ ಈ ವರ್ಷದ ೮೭ ನೆಯ ಕೊಲೆ ನಡೆದಿತ್ತು. ಅಮಾಯಕ ಬೇಸ್‌ಬಾಲ್ ಆಟಗಾರ ವೃದ್ಧನೊಬ್ಬನನ್ನು ಯಾರೋ ಕೊಲೆ ಮಾಡಿದ್ದರು. ಇದಕ್ಕೆ ಕಾರಣವೇ ಇಲ್ಲವಂತೆ. ಕಾನೂನಿನ ಮತ್ತು ಭಯ ಕುಸಿದರೆ ಜೀವನ ಅರಕ್ಷಿತವಾಗುತ್ತದೆ. ಮಾನವ ಪಶುವಾಗುತ್ತಾನೆ.

ಬಂಧು ಅಮ್ರಿಕ್‌ಸಿಂಗ್ ಹೇಳಿದಂತೆ ಅಮೇರಿಕ ವಿಚಿತ್ರ ದೇಶ. ಅನೇಕ ಅಮೇರಿಕನರಿಗೆ ತಂದೆಯ ಹೆಸರೇ ಗೊತ್ತಿಲ್ಲವಂತೆ. ಆಸ್ಪತ್ರೆಯಲ್ಲಿರಬೇಕಾದ ಅನೇಕರು ಬೀದಿಗಳಲ್ಲಿದ್ದಾರಂತೆ. ಮಕ್ಕಳನ್ನು ಬೆಕ್ಕು ನಾಯಿಗಳಂತೆ ಕಾರಿನಲ್ಲಿ ಕಟ್ಟಿಹಾಕಿ ವಿಲಾಸೀ ತಿರುಗಾಟಕ್ಕೆ ಅಮೇರಿಕನ್ ನಾರಿಯರು ತೆರಳುತ್ತಾರಂತೆ. ಇಲ್ಲಿ ಮಾನ, ಮರ್ಯಾದೆ, ಗೌರವ, ಗೃಹಸ್ಥಾಶ್ರಮ ಮತ್ತು ಪ್ರೇಮಕ್ಕಿರುವ ಅರ್ಥವೇ ಗೌಣವಂತೆ. ಇದು ಶಿಬಿರ ರಾಜ್ಯ. ಇದನ್ನು ಸವಾಲು ಮಾಡಲು ಬಂದ ಹಿಪ್ಪೀ ತತ್ವದ ಪ್ರಪಂಚ ಕೇಂದ್ರ ಈ ನಗರದ ಹೇಟ್‌ಬೀದಿ (Haight Street). ಇಲ್ಲಿಂದ ಅನೇಕ ಹಿಪ್ಪಿ ಪತ್ರಿಕೆಗಳು ಹೊರಡುತ್ತವೆ. ಈ ಪತ್ರಿಕೆಗಳಲ್ಲಿ ಸ್ವಚ್ಛಂದ ಕಾಮವನ್ನು ಪ್ರೇಮವೆಂದು ಪ್ರತಿಪಾದಿಸಲಾಗುತ್ತದೆ. ಮಾದಕ ಮತ್ತು ಮಾರಕ ದ್ರವ್ಯಗಳನ್ನು ಭಗವದಾರಾಧನೆಗೆ ಅವಶ್ಯವೆಂದು ಹೇಳಲಾಗುತ್ತದೆ. ಹಿಂದೂ ದರ್ಶನಕ್ಕೆ ಹಚ್ಚಬಾರದ ಅರ್ಥ ಹಚ್ಚಿ ಹೇಳಲಾಗುತ್ತದೆ. ಇಂತಹ ಸುಲಭ ಮತ್ತು ಕಟ್ಟುಪಾಡಿಲ್ಲದ ಜೀವನಕ್ಕೆ ಆಕರ್ಷಿತರಾದ ಅಮೇರಿಕನ್ ಯುವಕ ಯುವತಿಯರು ತಮ್ಮ ಜೀವನದ ಸಫಲ ಆಯುಷ್ಯ ಭಾಗವನ್ನು ಕಳೆದುಕೊಂಡು ಪರಿತಪಿಸುತ್ತಾರೆ. ಮುತ್ತು ಜಾರಿದ ಮೇಲೆ ಆಯಿತಲ್ಲವೆ ?

ಸ್ಯಾನ್‌ಫ್ರಾನ್ಸಿಸ್ಕೋ ಆಧುನಿಕ ಅಮೇರಿಕೆಯ ಪ್ರತಿಬಿಂಬ. ಅಮೇರಿಕೆಯನ್ನು ಉನ್ನತಿಗೇರಿಸಿದ ಒಳಿತು ಇದೆ; ಅವನತಿಗೆ ಕಳಿಸುತ್ತಿರುವ ಕೊಳೆಯೂ ಇದೆ. ಇದು ಕಾಲ ಪರಿಪಾಕ. ಗಂಟೆಗೆ ಯೋಗ್ಯರೀತಿಯಲ್ಲಿ 4 ಸಂಪಾದಿಸುವ ಯೋಗ್ಯತೆಯುಳ್ಳವನು 4 ಗಂಟೆಗೆ 1 ಸಂಪಾದಿಸಲು ಸುಲಿಗೆ, ಕೊಲೆ, ಕಳವು, ದರೋಡೆಗೆ ಮನಸೋಲುವುದು ದೇಶದ ದುರ್ವಿಪಾಕವೇ ಸರಿ.

ಶ್ರೀ ಅಮ್ರಿಕ್ ಸಿಂಗ್‌ನ ಸಹವಾಸದಿಂದ ನಮಗೆ ತುಂಬಾ ವಿಷಯಗಳು ತಿಳಿದವು. ಈ ಕುಟುಂಬದವರು ನಾಲ್ಕು ಮಕ್ಕಳನ್ನೂ ಬಿಟ್ಟು ಬರುವಾಗ ನಮಗೆ ಮತ್ತೊಂದು ಮನೆಯನ್ನು ಬಿಟ್ಟು ಬಂದಂತೆ ಎನಿಸಿತು. ಆದರೆ ಅಮೇರಿಕೆಯನ್ನು ಬಿಟ್ಟು ಕೆನಡಾದ ವಾಂಕೂವರ್ ತಲುಪಿದಾಗ ಅಣ್ಣ, ಅತ್ತಿಗೆ ಮತ್ತು ಮುದ್ದಿನ ಮಕ್ಕಳಾದ ರವಿ ಮತ್ತು ಕೃಷ್ಣರನ್ನು ಸೇರುತ್ತೇವೆಂಬ ಲವಲವಿಕೆ ಉತ್ಸಾಹ ಒಂದು ಕಡೆ. ಕಡೆಗೊಮ್ಮೆ ಕೆನಡಿಯನ್ ಪೆಸಿಫಿಕ್ ಏರ್‌ಲೈನ್ಸ್ ಕಂಪನಿಯ ಸಾರಿಗೆಯಲ್ಲಿ ವಾಂಕೂವರ್‌ಗೆ ಪ್ರಯಾಣ ಮಾಡಿದೆವು.

ಮನೆಯಿಂದ ಹೊರಟು ಸುಮಾರು ೪೫ ದಿನಗಳವರೆಗೆ ಯೂರೋಪ್, ಯು.ಎಸ್.ಎ. ಮತ್ತು ಕೆನಡಾದ ಕೆಲವು ಭಾಗಗಳನ್ನು ಸುತ್ತಿ ಕಳೆದ ೧೫ ವರ್ಷಗಳಿಂದ ಕನ್ನಡಿಯ ಗಂಟೂ, ಕನಸೂ ಆಗಿದ್ದ ವ್ಯಾಂಕೂವರ್‌ಗೆ ಪಯಣ ಸುತ್ತಿರುವಾಗ ಮನಸ್ಸು ವಾಸ್ತವತೆಯನ್ನು ನಂಬಲಾರದ ಪರಿಸ್ಥಿತಿಯಲ್ಲಿತ್ತು. ಕಳೆದ ಹದಿನೈದು ವರುಷಗಳಿಂದ ವ್ಯಾಂಕೂವರ್‌ನಲ್ಲಿ ನೆಲೆಸಿರುವ, ಕೂಡ ಹುಟ್ಟಿದ ಹಿರಿ ಸೋದರನ ಗೃಹ, ಬಾಳ್ವೆ, ಸ್ಥಳಗಳನ್ನು ತಿಳಿಯುವ ಹಿರಿಯಾಸೆಯಿಂದ ಪೂರ್ಣಗೊಂಡಿದ್ದೆ. ಅಮೇರಿಕೆಯ ಪಶ್ಚಿಮ ತೀರದ ಸಿಯೇಟಲ್. ಪೋರ್ಟಲ್ಯಾಂಡ್ ಮುಂತಾದ ನಗರಗಳ ಮೇಲೂ ಗಿರಿವನಗಳ ಮೇಲೂ ವಿಮಾನ ಹಾರುತ್ತಾ ಸಮಯವನ್ನು ಧಿಕ್ಕರಿಸುತ್ತಿತ್ತು. ಇನ್ನೇನು ಅಣ್ಣ ಪರಿವಾರ ಸಮೇತ ಈಗಾಗಲೇ ವಿಮಾನ ನಿಲ್ದಾಣಕ್ಕೆ ಬಂದಿರಬೇಕು ಎಂದು ಮನಸ್ಸಿಗೆ ಎನಿಸುತ್ತಿತ್ತು. ಚಿತ್ರದಲ್ಲಿ ಮಾತ್ರವೇ ನೋಡಿದ ಅಣ್ಣನ ಮನೆ ಅವನ ಇತ್ತೀಚಿನ ಮತ್ತು ಎರಡನೆಯ ಮಗು ಕೃಷ್ಣಮೂರ್ತಿ ಹೇಗಿರುವರೋ ? ಎಂಬ ಪ್ರಶ್ನೆಯೊಂದಿಗೆ ವ್ಯಾಂಕೂವರ್‌ನ ಬಗ್ಗೆ ನೂರಾರು ಪ್ರಶ್ನೆ ಪುಂಖಾನುಪುಂಖವಾಗಿ ಮೇಲೇಳುತ್ತಿದ್ದವು. ಅನೇಕ ವಿಧ ಭಾವಗಳು, ಯೋಚನೆಗಳು, ಮಂಡಲಗಟ್ಟಿ ಹೃದಯದಲ್ಲಿ ಚಕ್ರವ್ಯೂಹ ರಚಿಸುತ್ತಿರುವಾಗ ನಮ್ಮ ವಿಮಾನ ವ್ಯಾಂಕೂವರ್ ವಿಮಾನ ನಿಲ್ದಾಣದಲ್ಲಿಳಿಯಿತು. ಅತ್ಯಾಧುನಿಕವಾಗಿ ತಯಾರಾಗಿರುವ ಈ ನಿಲ್ದಾಣ ಪ್ರಸನ್ನತೆಯನ್ನುಂಟುಮಾಡಿತು. ಕಸ್ಟಮ್ಸ್ ಇಲಾಖೆಯ ಮುಖಾಂತರ ಹಾದು ಬಂದು ಪರಿವಾರದೊಂದಿಗೆ ನಮಗಾಗಿ ಕಾಯುತ್ತಿದ್ದ ಅಣ್ಣ ಅತ್ತಿಗೆಯನ್ನು ಸೇರಿದಾಗ ನನ್ನ ಪ್ರಯಾಣದ ಮಹತ್ವದ ಒಂದು ಘಟ್ಟ ಮುಗಿದು ಮತ್ತೊಂದು ಭಾಗ ಪ್ರಾರಂಭವಾಯಿತು. ತಿಂಗಳ ಬೆಳಕಿನಲ್ಲಿ ವ್ಯಾಂಕೂವರನ್ನು ನಾವು ನೋಡಲೇ ಇಲ್ಲ. ಆ ಮಾತು, ಈ ಮಾತು ಆಡುತ್ತಿರುವಾಗಲೇ ಡನ್‌ಬಾರ್ ಮನೆ ಬಂದಿತು. ಮನೆಯಿಂದ ಹದಿನಾಲ್ಕು ಸಾವಿರ ಮೈಲಿ ದೂರದ ಮನೆಯನ್ನು ಸೇರಿ ಚೆಕ್‌ಔಟ್–ಚೆಕ್‌ಇನ್ ಬಾಧೆಯಿಂದ ಮುಕ್ತರಾದಂತೆ ಎನಿಸಿ ಮನೆಯಲ್ಲಿಯ ಟೆಲಿವಿಷನ್ ಮುಂದಿನ ಸೋಫಾದಲ್ಲಿ ಒರಗಿಕೊಂಡು ಕಾಫಿಯಲ್ಲಿ ಮಗ್ನರಾದೆವು.

ಪ್ರಿಯಬಂಧು ಅಮ್ರಿಕ್‌ಸಿಂಗ್ ದಂಪತಿಗಳನ್ನು ಕೈಬೀಸಿ ಬಿಳ್ಕೊಟ್ಟು ಕೆನೆಡಿಯನ್ ಪೆಸಿಫಿಕ್ ಏರ್‌ಲೈನ್ಸ್ ವಿಮಾನದಲ್ಲಿ ಸ್ಯಾನ್‌ಫ್ರಾನ್ಸಿಸ್ಕೋ

ಬಿಡುವಾಗ ವ್ಯಾಂಕೂವರ್ ನೋಡುವ ತನಕ ಮತ್ತು ಒಡಹುಟ್ಟಿದವರೊಂದಿಗೆ ಸೇರುವ ಅಮೂಲ್ಯ ಆಂತರಿಕ ಆರ್ದ್ರತೆ ತೀವ್ರವಾಗಿದ್ದವು. ರಾತ್ರಿ ಮಸುಕು ಬೆಳಕಿನಲ್ಲಿ ವ್ಯಾಂಕೂವರಿನ ಡನ್‌ಬಾರ್ ಮನೆಯನ್ನು ಸೇರಿದಾಗ ಚಂದ್ರಲೋಕ ಯಾನ ಮಾಡಿ ಕೃತಾರ್ಥರಾದಷ್ಟು ಭಾಸವಾಗತೊಡಗಿತ್ತು. ಬಡತನದ ಭಾರತದ ಹಳ್ಳಿಯ ಹೃದಯದಲ್ಲಿ, ಹದಿನಾಲ್ಕು ಸಾವಿರ ಮೈಲು ದೂರದ ಹೊಸ ಪ್ರಪಂಚದ ವ್ಯಾಂಕೂವರ್ ಎಲ್ಲಿ ? ಭಾರತೀಯ ಮನೋಭಾವದ ಋಣಾನು ಸಂಬಂಧ ನಿಜವಲ್ಲವೆ ?

ಅಣ್ಣ ಹುಟ್ಟಿದಾಗಿನಿಂದ ನಾವು ಮತ್ತು ನನ್ನ ತಂದೆ ತಾಯಿ ಅವನ ಬಗ್ಗೆ ಕಂಡ ಕನಸೇನು ? ಇರಿಸಿಕೊಂಡ ಆಸೆ ಆಕಾಂಕ್ಷೆಗಳೇನು ? ಅದಕ್ಕೂ ಈಗ ಅವನು ದೂರದ ಈ ನಾಡಿನಲ್ಲಿ ನಡೆಸುತ್ತಿರುವ ಯಶಸ್ವೀ ಜೀವನಕ್ಕೂ ಎಷ್ಟು ದೂರ. ಅಪ್ಪ ಅನೇಕ ಬಾರಿ ಅಣ್ಣನನ್ನು ವ್ಯಾಪಾರದಲ್ಲಿ ತೆಗೆದುಕೊಳ್ಳುವ ಯೋಚನೆ ಮಾಡಿರಬೇಕು. ನಾನು ಕೂಡಾ ಅಣ್ಣ ಇಂಜಿನೀಯರಿಂಗ್ ಮುಗಿಸಿದ ಮೇಲೆ ಸರಕಾರೀ ಸೇವೆ ಸೇರುತ್ತಾನೆ, ಯಥಾವಿಧಿಯಾಗಿ ಆಫೀಸರಾಗಿ ಮೆರೆಯು ತ್ತಾನೆ,ಇಲ್ಲವೇ ಒಂದು ಕನ್‌ಸ್ಟ್ರಕ್ಷನ್ ಕಂಪನಿ ತೆರೆಯುತ್ತಾನೆ, ನಾವೆಲ್ಲ ಜೊತೆಯಲ್ಲಿ ಕೆಲಸ ಮಾಡಬಹುದು ಎಂದುಕೊಂಡಿರಲಿಲ್ಲವೆ ? ದೈವ ಮನುಷ್ಯನ ಜೀವನ ನಿರ್ಮಾಣದಲ್ಲಿ ಅನಂತವಾಗಿ ಮತ್ತು ಅವಿರತವಾಗಿ ಕೆಲಸ ಮಾಡುತ್ತದೆ. ದೈವವೇ ಅಣ್ಣನನ್ನು ಭಾರತದಿಂದ ಬಹುದೂರ ವ್ಯಾಂಕೂವರ್‌ಗೆ ಕರೆದೊಯ್ದು ಸ್ಥಾಪಿಸಿತು ಅಲ್ಲಿಯೇ ಮದುವೆ ಮಾಡಿ ಕೆನಡಾ ದೇಶಕ್ಕೆ ಕೊಂಚಮಟ್ಟಿಗಾದರೂ ಉಪಕಾರ ಮಾಡಿತು. ಅವನ ಅಲ್ಲಿಯ ವಾಸ್ತವ್ಯದಲ್ಲಿ ನಾನಾಗಲಿ ನಮ್ಮ ಮನೆಯ ಯಾರೇ ಆಗಲೀ ಕೆನಡಾಕ್ಕೆ ಪ್ರಯಾಣ ಮಾಡಿ ಅವನ ಬಾಳುವೆ ಯಲ್ಲಿ ಕೆಲ ದಿನವಾದರೂ ಭಾಗವಾಗುತ್ತೇವೆಂದು ನನಗೆ ಭರವಸೆಯೇ ಇರಲಿಲ್ಲ. ಇಲ್ಲಿಯ ಋಣಾನುಸಂಬಂಧ ನೆನೆಸದ ಕಹಿಯನ್ನು ನೀಡುವಂತೆ ಸಿಹಿಯನ್ನೂ ನೀಡಿತು. ಪರನಾಡಿನಲ್ಲಿ ಅವನು ಕೆಲಸ ಮಾಡುತ್ತಿದ್ದುದರಿಂದ ಈ ನನ್ನ ಪ್ರಪಂಚ ಪ್ರವಾಸ ಸಾಧ್ಯವಾಯಿತು. ನೆನೆಸಿದಷ್ಟೂ ಯೋಚನೆಯ ಆಳಕ್ಕೆ ನಡೆದಷ್ಟೂ ನನಗೆ ಈ ಋಣಾನುಸಂಬಂಧ ಕರ್ಮಸಿದ್ಧಾಂತಗಳು ನೆಚ್ಚಿಗೆಯಾಗ ತೊಡಗುತ್ತವೆ. ಉದಾಹರಣೆಗಳು ಫಲಾಫಲಗಳು, ಅದರಂತೆ ನಿಚ್ಚಳವಾಗಿ ಕಣ್ಮುಂದೆ ತೋರುತ್ತವೆ.

ಡನ್‌ಬಾರ್ ಬೀದಿಯ ೬೬೬೧ ನೇ ನಂಬರಿನ ಈ ಮನೆ ಎರಡು ಸಾಧಾರಣ ಗಾತ್ರದ ಕುಟುಂಬಗಳಿಗೆ ಯೋಗ್ಯವಾಗಿ ನಿರ್ಮಿಸಲ್ಪಟ್ಟಿದೆ. ಪಾತಾಳ ಗೃಹ (ಬೇಸ್‌ಮೆಂಟ್) ಬರಿ ನಿತ್ಯೋಪಯೋಗಿಯಲ್ಲದ ಮತ್ತು ಕೆಲಸಕ್ಕೆ ಬಾರದ ಸಾಮಾನುಗಳ ಉಗ್ರಾಣ, ಮೇನ್ ಫ್ಲೋರ್‌ನಲ್ಲಿ ದಿವಾನ್‌ಖಾನೆ (ಪಡಸಾಲೆ) ಮತ್ತು ಫೈರ್‌ಪ್ಲೇಸ್, ಸ್ಟಡೀ, ಎರಡು ಬೆಡ್‌ರೂಂ, ಬಾತ್, ಅಡಿಗೆ ಮನೆ ಡೈನಿಂಗ್ ಇವೆ. ಪೇಷಿಯೋ (ಸಿಟ್ ಔಟ್) ಇದೆ. ಮೇಲಿನ ಮಹಳಿಗೆಯಲ್ಲಿ ಎರಡು ರೂಮು, ಅಡಿಗೆ, ಡೈನಿಂಗ್ ಮತ್ತು ಬಾತ್ ಇವೆ. ಮೇಲು ಮಹಳಿಗೆಗೆ ಪ್ರತ್ಯೇಕ ಪ್ರವೇಶದ್ವಾರವಿದೆ. ಹಿಂದೆ ಸಾಕಷ್ಟು ಬಯಲು, ಪಕ್ಕದಲ್ಲಿ ಕಾರ್ ಗ್ಯಾರೇಜ್ ಇದೆ. ಮನೆಯಿಂದ ಹನ್ನೆರಡು ಸಾವಿರ ಮೈಲು ದೂರದಲ್ಲಿ ಬೇರೊಂದು ನಾಡಿನಲ್ಲಿ ನನ್ನದು ಎಂದು ಹೇಳಿಕೊಳ್ಳಬಲ್ಲ ಈ ಮನೆಯನ್ನು ಹೊಕ್ಕಾಗ ಹಂಡೆ ಹಾಲು ಹೊಟ್ಟೆಗೆ ಹೊಯಿದಂತಾಯಿತು. ಭವ್ಯ ಜೀವನದ ಕನಸನ್ನು ನನಸು ಮಾಡಲು ಇಲ್ಲಿ ನೆಲಸಿದ ನನ್ನ ಒಡಹುಟ್ಟಿದ ಹಿರಿಯಾ ನೊಂದಿಗೆ ನಾನು ಕಳೆದ ಈ ಮೂರು ವಾರಗಳು ನನ್ನ ಅಂತಃಕರಣದಲ್ಲಿ ಅಚ್ಚಳಿ ಯದೆ ಉಳಿಯುವ ಸುದಿನಗಳು.

ಅತ್ತಿಗೆಯ ಸಿದ್ಧಹಸ್ತದಿಂದ ತಯಾರಾದ ನಿತ್ಯನೂತನ ತಿನಿಸುಗಳು, ಹಾಲುಗಲ್ಲದ ನಲ್ನುಡಿಯ ಕೃಷ್ಣನ ಒಡನಾಟ, ತುಂಟತನದ ರವಿ ಮತ್ತು ಹಾಸ್ಯ ಭರಿತ ಸಂಭಾಷಣೆಯ ಅಣ್ಣಂದಿರೊಂದಿಗೆ ಮೂರು ವಾರಗಳು ಮೂರು ನಿಮಿಷ ದಂತೆ ಕಳೆದವು. ಈ ಅವಧಿಯಲ್ಲಿ ನಾವು ನಾಲ್ಕಾರು ಕಡೆ ಪ್ರವಾಸ ಹೋಗಿದ್ದೆವು. ಮೊದಲನೆಯದಾಗಿ ಯು.ಎಸ್. ಗೆ ಸೇರಿದ ಸಿಯಾಟಲ್‌ಗೆ ಹೋಗಿದ್ದೆವು.

ಸಿಯಾಟಲ್‌ನಲ್ಲಿ ಪ್ರಪಂಚ ಫೇರ್ ನಡೆದ ಮೇಲೆ ಅಲ್ಲಿಯ ಭವನಗಳನ್ನು ನಾಗರಿಕರ ಮನರಂಜನೆಗೆಂದು ಉಪಯೋಗಿಸುತ್ತಾರೆ. ಸ್ಪೇಸ್ ನೀಡ್ಲ್ (SPACE NEEDLE) ಇಂದಿಗೂ ಅಸಂಖ್ಯಾತ ಜನರನ್ನು ಆಕರ್ಷಿ ಸುತ್ತದೆ. ಇಲ್ಲಿಯ ಇನ್ನೊಂದು ಭವನದಲ್ಲಿ ಸೈನ್ಸ್ ಮ್ಯೂಜಿಯಂ ಏರ್ಪಡಿಸಿ ಅದರಲ್ಲಿ ಅಮೇರಿಕ ವ್ಯೋಮಾಂತರ ಯಾನದಲ್ಲಿ ಸಾಧಿಸಿದ ಪ್ರಗತಿಯನ್ನು ಪ್ರದರ್ಶಿಸಿದ್ದಾರೆ. ಅಪೋಲೊ ಒಂಬತ್ತರವರೆಗಿನ ಪ್ರತಿಯೊಂದು ವಸ್ತುವನ್ನೂ ಇಲ್ಲಿ ಇರಿಸಿದ್ದಾರೆ. ಇಲ್ಲಿ ಎರಡು ಸಿನಿಮಾ ಹಾಲ್‌ಗಳಿವೆ. ಒಂದನೆಯ ಸಿನಿಮಾ

ಹಾಲ್‌ನಲ್ಲಿ ಸಾಕ್ಷ್ಯಚಿತ್ರಗಳನ್ನೂ, ಎರಡನೆಯದರಲ್ಲಿ ವೈಜ್ಞಾನಿಕ ಚಿತ್ರಗಳನ್ನೂ ತೋರಿಸುತ್ತಾರೆ. ಇದಲ್ಲದೆ ಇನ್ನೊಂದು ಕೃತಕ ನಭೋಮಂಡಲ (ಆರ್ಟಿಫಿಷಿಯಲ್ ಪ್ಲಾನಿಟೇರಿಯಂ) ಕೂಡ ಇದೆ. ಮೊದಲನೆಯ ಮಂದಿರ ದಲ್ಲಿ ಕೆನಡಾ ದೇಶದ ಕುರಿತಾದ ಎರಡು ಸಾಕ್ಷ್ಯಚಿತ್ರಗಳನ್ನು ನೋಡಿದೆವು. ೭೦ ಎಂ.ಎಂ. ಮತ್ತು ವರ್ಣಮಯವಾಗಿ ತಯಾರಿಸಿದ ಈ ಚಿತ್ರಗಳನ್ನು ಮರೆಯಲು ಸಾಧ್ಯವೇ ಇಲ್ಲ. ಹಿನ್ನೆಲೆಯಾಗಿ ಮಾತಿನ ಆಡಂಬರವೇ ಇಲ್ಲದೆ ಬರೀ ಚಿತ್ರಗಳ ಮೂಲಕ ನಾಡಿನ ಅನಂತ ಪ್ರಗತಿಯ ಕುರಿತು ತೋರಿಸಿದ ಈ ತಂತ್ರ ಶ್ಲಾಘನೀಯವಾಗಿದೆ. ಚಿತ್ರದ ಹಿಂದೆ ಚಿತ್ರ–ಪಕ್ಕದಲ್ಲಿ–ಮೇಲೆ–ಕೆಳಗೆ ಸುರುಳಿ ಸುರುಳಿಯಾಗಿ ನಾಡಿನ ಪ್ರಕೃತಿ–ಜನ–ಇತಿಹಾಸ–ಉದ್ಯಮ–ವಾಣಿಜ್ಯ –ಋತುಮಾನ–ಕಲೆ ನಮ್ಮ ಕಣ್ಣಮುಂದೆ ಬಿಚ್ಚಿ ನಮ್ಮನ್ನು ಸೆರೆಹಿಡಿಯುತ್ತದೆ. ಅಪೋಲೊ ಒಂಬತ್ತರವರೆಗೆ ಇಲ್ಲಿ ಇರಿಸಿದ ಮೂಲ ವಸ್ತುಗಳನ್ನು ನೋಡಿದಾಗ ಅಮೇರಿಕನ್ನರ ತಂತ್ರಾಧಿಕ್ಯದ ಬಗ್ಗೆ ಅಭಿಮಾನವೆನಿಸುತ್ತವೆ. ಮುಂದೆ ಎರಡು ದಿನಗಳ ನಂತರ ವ್ಯಾಂಕೂವರ್ ಮನೆಯಲ್ಲೆ ಟೆಲಿವಿಷನ್ ಮೂಲಕ ಅಪೋಲೊ ಹನ್ನೊಂದರ ಯಾನ ಮತ್ತು ಮರುಯಾನದ ಸರ್ವವನ್ನೂ ನೋಡಿದೆವು. ಸಿಯಾಟಲ್ ಬಹುಮುಖ್ಯ ವಿಮಾನ ನಿರ್ಮಾಣ ಕೇಂದ್ರ. ಪಶ್ಚಿಮ ತೀರದ ಮುಖ್ಯ ಬಂದರು. ದೊಡ್ಡ ವಿದ್ಯಾಕೇಂದ್ರ. ಈ ನಗರದಲ್ಲಿರುವಷ್ಟು ಎಕ್ಸ್‌ಪ್ರೆಸ್ ದಾರಿಗಳ ಪ್ರಾಬಲ್ಯ ಎಲ್ಲಿಯೂ ಇಲ್ಲ. ಧಾರವಾಡದಂತೆ ಆರೆಂಟು ಬೆಟ್ಟಗಳ ಮೇಲೆ ತಲೆ ಎತ್ತಿ ನಿಂತಿರುವ ಸಿಯಾಟಲ್ ಪಟ್ಟಣವನ್ನು ಸ್ಪೇಸ್ ನೀಡ್ಲ್ ಗೋಪುರದಿಂದ ನೋಡಬೇಕು. ಈ ಪಟ್ಟಣದ ಸನ್ನಿ ಜಿಂ (SUNNY JIM) ಎಂಬ ಕಂಪನಿಗೆ ಹೋಗಿ ಕಡಲೇಬೇಳೆ, ಬೆಣ್ಣೆ, ಜಾಂ, ಮಾರ್ಮಲೇಡ್, ಫಾಂಟಾ, ಕೋಕಾ ಕೋಲಾ ಮುಂತಾದ ಖಾದ್ಯ ವಸ್ತುಗಳ ತಯಾರಿಯನ್ನು ನೋಡಿಬಂದೆವು.

ಇಲ್ಲಿ ನಮಗೆ ಪರಿಚಿತರಾದ ಶ್ರೀ ಜರ್ರಿ ಮತ್ತು ಹ್ಯಾರಿಯೆಟ್ ಅವರ ಮನೆಯಲ್ಲಿ ವಸತಿ ಮಾಡಿದೆವು. ಜೆರ್ರಿ ಸ್ಟೋರೊಂದರಲ್ಲಿ ಕೆಲಸ ಮಾಡುತ್ತಾರೆ. ಶ್ರೀಮತಿ ಹ್ಯಾರಿಯೆಟ್ ಕಂಪನಿಯೊಂದರ ಆಫೀಸಿನಲ್ಲಿ ಕೆಲಸ ಮಾಡುತ್ತಾರೆ. ಇವರ ಓರ್ವನೇ ಮಗ ಸ್ಯಾಂಡಿ, ಅದೂ ಇದೂ ಮಾಡಿ, ಈಗ ಚಿಕ್ಕ ಪಿಕ್‌ಅಪ್

ವ್ಯಾನ್ ಇಟ್ಟುಕೊಂಡು ಡೆಲವರೀ ಕೆಲಸ ಮಾಡುತ್ತಾರೆ. ಮನೆಯನ್ನು ಈ ನೂರು ಜನ ಬೆಳಗಿನ ಏಳು ಗಂಟೆಗೆ ಬಿಟ್ಟು ಕೆಲಸಕ್ಕೆ ಹೊರಡುತ್ತಾರೆ.

ಸಂಜೆ ೫-೩೦ ರವರೆಗೆ ಮನೆಯಲ್ಲಿ ಜೆರ್ರಿಯ ತಾಯಿ (MA) ಮತ್ತು ಹ್ಯಾರಿಯೇಟ್ ತಾಯಿ (ಗ್ರ್ಯಾಂಡ್ ಮಾ) ಮಾತ್ರ ಇರುತ್ತಾರೆ. ರಸ್ತೆಯ ಪಕ್ಕದ ಇಳಿಜಾರಿನಲ್ಲಿರುವ ಇವರ ಮನೆ ಗಿಡಮರಗಳಿಂದಾವೃತವಾಗಿ ತಂಪಾಗಿದೆ. ಮನೆಯ ಹಿಂದೆ ಜಳಜಳ ನೀರಿನ ತೊರೆಯಿದೆ. ಸಾಯಂಕಾಲ ಮನೆಗೆ ಮರಳಿದ ಜರ್ರಿ ಹಿಂಬಯಲಿನ ಬಾರ್ಬಿಕ್ಯೂ ಕುಂಡದಲ್ಲಿ ಬೇಕಿ ಮಾಡಿ ಪಕ್ಕದ ಬೆಂಚಿನ ಮೇಲೆ ಕುಳಿತು ಡಿನ್ನರ್ ಹೊಡೆದು ಅನಂತರ ಬೀರ್ ಸವಿಯುತ್ತಾ ಸಮಯ ಕಳೆಯುತ್ತಾನೆ. ಸಾಧಾರಣ ಎಲ್ಲರೂ ಸೇರಿ ಈ ಕೆಲಸ ಮಾಡುತ್ತಾರೆ. ಮಗ ಸ್ಯಾಂಡಿ ಮಾತ್ರ ಯಾವಾಗ ಬರುತ್ತಾನೋ ಅವನಿಗೇ ಗೊತ್ತು. ವಿಶಿಷ್ಟ ರೀತಿಯ ಅಮೇರಿಕನ್ ಕುಟುಂಬವೊಂದರ ಪರಿಚಯ ಇಲ್ಲಿ ನನಗಾಯಿತು ಈ ಜನ ಸ್ವಭಾವತಃ ಒಳ್ಳೆಯವರು, ಸ್ನೇಹಪರರು. ನಾವು ಭಾರತೀಯರೆಂದು ನಮಗೆ ಭಾರತೀಯ ರೀತಿಯ ಅಡುಗೆ ಮಾಡಿ ನಮ್ಮೊಡನೆ ಕೂಡಿ, ಭುಜಿಸಿದರು. ಅಭಿಮಾನದಿಂದ ಮನೆಯನ್ನು ಸಿಂಗರಿಸುತ್ತಾರೆ. ಸುಖೋದ್ದೇಶದಿಂದ ಬಾಳುತ್ತಾರೆ.

ಇನ್ನೊಮ್ಮೆ ಶ್ರೀ ಜಗದೇವ್‌ಸಿಂಗ್ ಧಿಲ್ಲನ್ ಎಂಬ ಭಾರತೀಯರೊಂದಿಗೆ ಹತ್ತಿರದ ಶಿಲ್ಲಿವಾಕ್ ಎಂಬ ಊರಿಗೆ ಹೋಗಿದ್ದೆ. ಈ ಪ್ರವಾಸ ನನಗೆ ಅನೇಕ ರೀತಿಯಿಂದ ಉಪಕಾರ ಮಾಡಿತು. ಶಿಲ್ಲಿವಾಕ್ ಫ್ರೇಸರ್ ಕಣಿವೆಯ ಸಸ್ಯಸಮೃದ್ಧ ಬಯಲು. ಇಲ್ಲಿ ಅಸಂಖ್ಯಾತ ಹೈನದ ಕೇಂದ್ರಗಳಿವೆ. ಮಾದರಿ ಹೈನದ ಕೇಂದ್ರವೊಂದನ್ನು ನೋಡುವುದು ನನ್ನ ಪ್ರವಾಸದ ಮುಖ್ಯ ಉದ್ದೇಶವಾಗಿತ್ತು. ಶ್ರೀ ಜಗದೇವ್‌ಸಿಂಗ್ ಧಿಲ್ಲನ್ ಈ ಪ್ರದೇಶದ ಅಚ್ಚ ಭಾರತೀಯ ಕುಟುಂಬವಾದ ಮೆಸರ್ಸ್ ಜಿ. ಹೆಚ್ ಸಿಂಗ್ ಅಂಡ್ ಸನ್ಸ್ ಅವರ ಮನೆಯಲ್ಲಿ ನನ್ನನ್ನು ಬಿಟ್ಟರು. ಬಹುಶಃ ಎರಡು ತಲೆಮಾರುಗಳ ಹಿಂದೆ ಕೆನಡಾಕ್ಕೆ ವಲಸೆ ಬಂದ ಕುಟುಂಬವಿದು. ಜ್ಞಾನಿ ಹರದಯಾಳ ಸಿಂಗ್ ನಾಲ್ಕು ಜನ ಗಂಡು ಮಕ್ಕಳನ್ನೂ ಒಬ್ಬ ಮಗಳನ್ನೂ ಪಡೆದು ತೀರಿಕೊಂಡ ಮೇಲೆ ಆತನ ಪತ್ನಿ ಮನೆಯ ಜವಾಬ್ದಾರಿಯನ್ನು ಹೊತ್ತು ಇಲ್ಲಿನ ಐಸಿರಿಗೆ

ಕಾರಣವಾಗಿದ್ದಾರೆ. ಇವರ ಮುಖ್ಯ ಉದ್ಯೋಗ ಟ್ರಕ್ಕಿಂಗ್. ನಾಲ್ಕಾರು ಟ್ರಕ್ ಇಟ್ಟಿದ್ದಾರೆ. ಪ್ರತಿಯೊಂದು ಟ್ರಕ್ಕನ್ನೂ ತಾವೇ ನಡೆಸುತ್ತಾರೆ. ಟ್ರಕ್ಕಿನ ಕ್ಯಾಬಿನ್‌ಗೆ ಏರ್‌ಕಂಡೀಷನ್ ಮಾಡಿಸಿಕೊಂಡಿದ್ದಾರೆ. ಸಾಕಷ್ಟು ಶ್ರೀಮಂತ ರಿದ್ದಾರೆ. ಆದರೆ ಮನೆಯಲ್ಲಿ ಜೀವನ ಮಟ್ಟದಲ್ಲಿ ವ್ಯತ್ಯಾಸವಿಲ್ಲ-ಆಚಾರ ವಿಚಾರದಲ್ಲಿ ಬದಲಿಲ್ಲ. ಮನೆಯ ಸುತ್ತಲಿನ ಪ್ರದೇಶ ಅರಣ್ಯದಂತಿದೆ. ಹೈನದ ಕೊಟ್ಟಿಗೆ ಯಾವ ಸುಧಾರಣೆಯನ್ನೂ ಕಂಡಿಲ್ಲ. ಮಕ್ಕಳು ಭಾರತದಲ್ಲಿಯಂತೆ ಉಡುಗೆ, ಸಿಖ್ ರುಮಾಲು ಧರಿಸುತ್ತಾರೆ. ಹೋಗಿ ಬಂದು ಅದೂ ಇದೂ ತಿನ್ನುತ್ತಲೇ ಇರುತ್ತಾರೆ. ಇಂಗ್ಲಿಷ್ ಬರುತ್ತಾದರೂ ಪಂಜಾಬಿ ಯಲ್ಲಿಯೇ ಮಾತನಾಡುತ್ತಾರೆ. ಮನೆಯಲ್ಲಿಯೇ ಗುರುದ್ವಾರ. ಇವರ ಆಸ್ತಿ ಪಾಸ್ತಿಯ ಬೆಳವಣಿಗೆಯಲ್ಲಿ ಮತ್ತು ಆತ್ಯಂತಿಕ ಉಪಯೋಗಗಳಲ್ಲಿ ಕೂಡಾ ಭಾರತೀಯ ಸಾಹುಕಾರಿಕೆ ಮನೋಭಾವ ಎದ್ದು ಕಾಣುತ್ತದೆ.

ಮಗಳಿಗೆ ಭಾರತದಿಂದ ಅಳಿಯನನ್ನು ಆರಿಸಿ ಕರೆಸಿ ಅವನಿಗೆ ಬಂಡವಾಳ, ಭೂಮಿ, ಹಸು ನೀಡಿ ಹೈನದ ಕೇಂದ್ರ ಮಾಡಿಕೊಟ್ಟು ಇಲ್ಲಿಯೇ ಉಳಿಸಿ ಕೊಂಡಿದ್ದಾರೆ. ಅವರ ಮನೆಯಾದರೂ ಅಷ್ಟೆ. ಶ್ರೀ ಗ್ಯಾನಿಸಿಂಗ್ ತುಂಬಾ ಸರಳ ಮತ್ತು ಸುಸ್ವಭಾವೀ. ತನ್ನೊಡನೆ ಕೆಲಸಕ್ಕಾಗಿ ಆತ ತನ್ನ ತಮ್ಮ ಹರಭಕ್ಷಸಿಂಗ್‌ನನ್ನ ಕರೆಸಿಕೊಂಡಿದ್ದಾನೆ.

ಇಲ್ಲಿಯ ಡಚ್ ನಿವಾಸಿಯೋರ್ವರ ಹೈನದ ಕೇಂದ್ರವನ್ನು ನೋಡಿದಾಗ ಮನಸ್ಸಿಗೆ ತೃಪ್ತಿಯಾಯಿತು. ಅತ್ಯಂತ ವ್ಯವಸ್ಥಿತವಾದ ಕೇಂದ್ರವಿದು. ಉಷ್ಣತಾ ನಿಯಂತ್ರಿತ ಟ್ಯಾಂಕಿನಲ್ಲಿ ಬೀಳುವವರೆಗೆ ಹಾಲನ್ನು ಯಾರೂ ಸೋಂಕುವುದೇ ಇಲ್ಲ. ಕರುಗಳಿಗೆ ಬೇರೆ ಕೊಠಡಿ. ಬೆದೆಗೆ ಬಂದವುಗಳಿಗೆ, ಗರ್ಭಿಣೀ ಗೋವು ಗಳಿಗೆ ಬೇರೆ, ಹೈನದ ಗೋವುಗಳಿಗೆ ಬೇರೆ, ನಿರುಪಯೋಗಿ ಗೋವುಗಳಿಗೆ ಬೇರೆ ಆವರಣಗಳು, ಯಾವ ದನವನ್ನೂ ಕಟ್ಟುವುದಿಲ್ಲ. ಯಾವ ದನವನ್ನೂ ಮೈತೊಳೆಯುವುದಿಲ್ಲ. ದನ ತುಂಬಾ ಸೂಕ್ಷ್ಮ. ಗೋದಲಿಗೆ ಬಂದು ಮಲಗುತ್ತದೆ. ಮೇಯುತ್ತದೆ. ತನಗಾಗಿ ಹಾಸಿದ ಮೆತ್ತನೆಯ ಹುಲ್ಲಿನ ಮೇಲೆ ಹಾಗೊಮ್ಮೆ ಹೀಗೊಮ್ಮೆ ಗೋದಲಿಯ ಮೇವು ನಿಯಂತ್ರಿತ ಎಲಿವೇಟರುಗಳ ಮೂಲಕ ಕೆಳಗೆ ಮೇಲೆ ಆಗುತ್ತದೆ. ಕೊಂಬು

ಗಳನ್ನು ಕೊಯ್ದುಬಿಡುವುದರಿಂದ ಹಾಯ್ದಾಡುವ ಭಯವೇ ಇಲ್ಲ. ಹಿಂಡುವ ದನವನ್ನು ಸಮಯಕ್ಕೆ ಸರಿಯಾಗಿ ಪ್ರತ್ಯೇಕ ಕೊಠಡಿಗೆ ಕರೆದೊಯ್ದೊಡನೆಯೇ ಮಂತ್ರಮುಗ್ಧವಾದಂತೆ ಹಸು ಯಂತ್ರದಲ್ಲಿ ನಿಲ್ಲುತ್ತದೆ. ಮುಂದಿನ ಬಾರಲಿಯಲ್ಲಿ ಆಮ್ಯತಾನ್ನ ಹಸುವಿಗೆ ಸಿಗುತ್ತದೆ. ಹಿಂದಿನ ಪೈಪಿನಲ್ಲಿ ಅಮೃತ ಇಳಿದು ಟ್ಯಾಂಕುಗಳಿಗೆ ಹರಿಯುತ್ತದೆ. ಗಾಜಿನ ಕೊಳವೆಗಳ ಮೂಲಕ ತುಂಬಿ ಹರಿಯುವ ಹಾಲನ್ನು ನೋಡಬಹುದು. ಗೋದಲಿಗಳ ಹತ್ತಿರ ಪ್ರತಿಯೊಂದು ಆಕಳಿಗೆ ಸಿಗುವಂತೆ ಕುಡಿದಂತೆ ಬರುವ ನೀರಿನ ನಳಗಳನ್ನಿಟ್ಟಿದ್ದಾರೆ. ಬೆಳಗಿನಲ್ಲಿ ಅರ್ಧಗಂಟೆ ಸಮಯದಲ್ಲಿ ಚಿಕ್ಕ ಯಂತ್ರದ ಸಹಾಯದಿಂದ ಕೊಟ್ಟಿಗೆಯನ್ನು ಸ್ವಚ್ಛ ಮಾಡುತ್ತಾರೆ. ಕೇಂದ್ರದ ಸುತ್ತ ವಿದ್ಯುತ್ತಂತಿಯ ಬೇಲಿಯಿರುವುದರಿಂದ ಹಸುಗಳು ಆವರಣದ ಒಳಗೆ ಮೇಯುತ್ತವೆ.

ಹಾಲನ್ನು ಫ್ರೇಸ್ ವ್ಯಾಲಿ ಮಿಲ್ಕ್ ಪ್ರೊಡ್ಯೂಸರ್ಸ್ ಅಸೋಸಿಯೇಷನ್ನಿನ ಲಾರಿ ಪ್ರತಿದಿನ ಎರಡು ಬಾರಿ ಒಯ್ಯುತ್ತದೆ. ಹಾಲಿನ ಬೆಲೆಯನ್ನು ಸರ್ಕಾರಿ ಮಿಲ್ಕ್ ಬೋರ್ಡ್ ಪ್ರತಿ ಮೂರು ತಿಂಗಳಿಗೊಮ್ಮೆ ನಿರ್ಧರಿಸುತ್ತದೆ. ಇದರ ಮೇಲೆ ಕಂಪೆನಿಯವರು ಹಾಲಿನ ಸ್ವಚ್ಛತೆ ತರಗತಿಯ ಮೇಲಿನ ಬೆಲೆ ಹೆಚ್ಚುವರಿ ನೀಡುತ್ತಾರೆ. ಪ್ರತಿಯೊಂದು ಹೈನುಗಾರನಿಗೆ ನಿರ್ದಿಷ್ಟ ಕೋಟಾ ಬೆಲೆಯೊಂದು ಇರುತ್ತದೆ. ಈ ಕೋಟಾವನ್ನು ಈ ಕಂಪನಿಯ ಉತ್ಪಾದನಾ ಶಕ್ತಿಯ ಆಧಾರದ ಮೇಲೆ ಪ್ರತಿ ಷೇರುದಾರನಿಗೆ ಇಷ್ಟಿಷ್ಟೆಂದು ನಿಗದಿ ಮಾಡುತ್ತಾರೆ.

ಸಾಧಾರಣವಾಗಿ ಈ ಕೋಟಾ ಬೆಲೆ ಸಾಮಾನ್ಯ ಬೆಲೆಗಿಂತ ಹೆಚ್ಚೇ ಇರುತ್ತದೆ. ನಿಗದಿ ಮಾಡಿದ್ದಕ್ಕಿಂತ ಹೆಚ್ಚುವರಿ ಹಾಲನ್ನು ನೀಡಿದಲ್ಲಿ ಸಾಮಾನ್ಯ ಬೆಲೆಯನ್ನು ಕೊಡುತ್ತಾರೆ. ಈ ಕಂಪನಿಯುವರು ಹಾಲಿನಿಂದ ಚೀಜ್, ಯೋಗರ್ಟ್, ಸೋರ್ ಕ್ರೀಮ್, ಕ್ರೀಮ್, ನಾನ್‌ಫ್ಯಾಟ್ ಮಿಲ್ಕ್, ೨% ಮಿಲ್ಕ್, ಹೋಲ್ ಮಿಲ್ಕ್. ಬಟರ್, ಹೋಮೋಜಿನೈಜ್ಡ್ ಮಿಲ್ಕ್ ಅಲ್ಲದೆ ಐಸ್‌ಕ್ರೀಮ್‌ಗಳನ್ನು ತಯಾರಿಸುತ್ತಾರೆ. ಈ ಕಂಪನಿಯ ಡೈರೀ ಲ್ಯಾಂಡ್ ಎಂಬ ವ್ಯಾಂಕೂವರ್ ಫ್ಯಾಕ್ಟರಿಯನ್ನು ಮುಂದೆ ಸಂದರ್ಶಿಸಿದೆವು. ಇವರು ತಯಾರಿಸಿರುವ ವಸ್ತುಗಳೆಲ್ಲಾ ಆಯಾ ದಿನ ದೇಶದ ಬೇರೆ ಬೇರೆ ಕಡೆಗೆ ರಫ್ತಾಗುತ್ತವೆ.

ಹಸುಗಳನ್ನು ಮಾರುವುದಾಗಲೀ ಕೊಳ್ಳುವುದಾಗಲೀ ಹರಾಜಿನಮೂಲಕ ನಡೆಯುತ್ತದೆ. ಹರಾಜಿಗೆ ಬಂದ ಹಸುಗಳನ್ನು ಪರೀಕ್ಷಿಸಿದ ಪಶು ವೈದ್ಯ ನಿಷ್ಪಕ್ಷಪಾತವಾಗಿ ಒಂದನೆಯ ತರಗತಿಯ ಹಸು, ಎರಡನೆಯ ತರಗತಿಯ ಹಸು, ಕಟುಕರ ಮನೆಗೆ ಸೇರಬೇಕಾದ ಹಸು ಎಂದು ನಿರ್ಧರಿಸಿ ಹಸಿರು, ಕೆಂಪು ಮುಂತಾದ ಬಣ್ಣಗಳಿಂದ ಗುರುತಿಸುತ್ತಾನೆ. ಹರಾಜಿಗೆ ಮುಂಚೆ ಎರಡು ಮೂರು ತಾಸು, ಖುಲ್ಲಾ ಪರೀಕ್ಷೆಗೆ ಅವಕಾಶವಿರುತ್ತದೆ. ಹರಾಜಿನ ಮನೆ ಒಳ್ಳೆಯ ಆಕರ್ಷಕವಾಗಿರುತ್ತದೆ.

ಚಿಕ್ಕ ಕಟಕಟೆಯ ಸುತ್ತ ಮೆಟ್ಟಲು ಮೆಟ್ಟಲಾಕಾರದ ಗ್ಯಾಲರಿ ಪೀಠಗಳನ್ನು ನಿರ್ಮಿಸಿರುತ್ತಾರೆ. ಕಟಕಟೆಯಲ್ಲಿ ದನವನ್ನೂ ನಿಲ್ಲಿಸುತ್ತಾರೆ. ಸುತ್ತಲಿನ ಪೀಠಗಳಲ್ಲಿ ಕುಳಿತ ಜನ ಹರಾಜು ಮಾಡುತ್ತಾರೆ. ಹೋರಿ ಕರುಗಳ ಪೈಕಿ ಬೀಜಕ್ಕಾಗಿ ಕೆಲವನ್ನು ಉಳಿಸಿ ಉಳಿದುವನ್ನು ಕಟುಕರ ಕೈಗೆ ಮಾರುತ್ತಾರೆ. ಮುದ್ದಾದ ಬಿನ್ನವನ್ನರಿಯದ ಎಳೆಯ ಬಸವಣ್ಣಗಳನ್ನು ಕಟುಕರಿಗೆ ಮಾರುವುದನ್ನು ನೋಡಲಾಗದು. ಆದರೆ ಇದು ಕಠೋರ ಜಗತ್ತು ಬೇಕಿಲ್ಲದ ವಸ್ತುವಿಗೆ ಇಲ್ಲಿ ಜಾಗ ಇಲ್ಲ. ಬೇಕಾದೆಡೆ ಅದರ ಪಯಣ.

ಹಸುಗಳ ಆರೋಗ್ಯವನ್ನು ಪಶುಪಾಲನಾ ಇಲಾಖೆಯು ಅತ್ಯಂತ ದಕ್ಷತೆಯಿಂದ ನೋಡಿಕೊಳ್ಳುತ್ತದೆ. ಪ್ರತಿಯೊಂದು ಪಶುವಿನ ಫೋಟೋ ಸಹಿತ ನೊಂದಾವಣೆ ಮಾಡಿಕೊಳ್ಳುತ್ತಾರೆ. ಕಲಬೆರಕೆಯಿಲ್ಲದ ಸ್ವಚ್ಛಜಾತಿಯ ಜರ್ಸಿ ಅಥವಾ ಹೈಫರು ಪಶುಗಳಿಗೆ ಪ್ರತ್ಯೇಕ ರಿಜಿಸ್ಟರ್ ಇಡುತ್ತಾರೆ. ಮಾಲೀಕನಿಗಿಂತ ಹೆಚ್ಚಿನ ಆಸ್ಥೆಯನ್ನು ಸರಕಾರ ವಹಿಸುತ್ತದೆ. ಗರ್ಭಧಾರಣೆ ಮಾಡಿಸುವಾಗ.ಜಾತಿಯನ್ನನುಸರಿಸಿ ಪಶುವಿಗೆ ತಕ್ಕಂತಹ ಬೀಜಾರೋಪಣ ಮಾಡುತ್ತಾರೆ. ಇದಕ್ಕೆಲ್ಲಾ ಅತೀ ಕಡಿಮೆ ಫೀ ಆಕರಿಸುತ್ತಾರೆ. ಮೇಲಿಂದ ಮೇಲೆ ಹೈನದ ಕೊಟ್ಟಿಗೆಗೆ ಭೇಟಿ ಇತ್ತು ಸಲಹೆ ನೀಡುತ್ತಾರೆ. ಆಪತ್ತಿನ ಸಮಯದಲ್ಲಿ ಪಶುಗಳನ್ನೇ ಸಂಪತ್ತೆಂದು ಸರಕಾರ ಭಾವಿಸುತ್ತದೆ. ಪ್ರತಿಯೊಂದು ಹಸುವಿನ ಬೆಲೆ ಸುಮಾರು ಮೂರು ಸಾವಿರದವರೆಗೆ ಎನ್ನಬಹುದು. ಭೂಮಿಯ ಬೆಲೆ ೫೦೦೦ ದಿಂದ ೬೦೦೦ ರೂಪಾಯಿಗೆ ಎಕರೆ ಎನ್ನಬೇಕು. ಹೈನಗಾರರಿಗೆ ವಿಶೇಷ ಆದಾಯಕರ ಸೌಲಭ್ಯಗಳಿವೆ. ಮುನಿಸಿಪಲ್ ತೆರಿಗೆ ಸೌಲಭ್ಯ

ಗಳಿವೆ. ಪತ್ತಿನ ಸೌಲಭ್ಯವಂತೂ ಹೇರಳವಾಗಿವೆ. ಮಕ್ಕಳಿಲ್ಲದ ಇಂಗ್ಲಿಷ್ ವೃದ್ಧನೋರ್ವನ ಹೈನ ಕೇಂದ್ರವಂತೂ ಸ್ವರ್ಗದಂತಿದೆ.

ಶ್ರೀ ಜಗದೇವ್‌ಸಿಂಗ್ ಧಿಲ್ಲನ್ ಚಿಲ್ಲಿವಾಕ್‌ಗೆ ಟೌನ್ ಪ್ಲಾನಿಂಗ್ ಡೈರೆಕ್ಟರ್ ಆಗಿ ನೇಮಕಗೊಂಡಿದ್ದರಿಂದ ಅವರಿಗೆ ಬಾಡಿಗೆಗಾಗಲೀ ಖರೀದಿಗಾಗಲೀ ಮನೆ ಬೇಕಾಗಿತ್ತು. ಹೀಗಾಗಿ ಅವರೊಂದಿಗೆ ಮನೆ ಮನೆ ಅಲೆದಾಡಿದ್ದರಿಂದ ಇಲ್ಲಿಯ ರಿಯಲ್ ಎಸ್ಟೇಟ್ ವ್ಯಾಪಾರದ ಪರಿಚಯ ವಾಯಿತು,

ಇಲ್ಲಿ ಜನ ಜಾಗಕ್ಕೆ, ಮನೆಗೆ, ನಗರಕ್ಕೆ, ಬೀದಿಗೆ ಅಂಟದೆ ಬದಲಾವಣೆಯ ಮನೋಭಾವದವರಾಗಿರುವ ಕಾರಣ ರಿಯಲ್ ಎಸ್ಟೇಟ್ ವ್ಯಾಪಾರ ತುಂಬಾ ದೊಡ್ಡ ವ್ಯಾಪಾರ. ಮನೆ ಮಾರಬೇಕೆನ್ನುವವರೂ ಇಂತಹ ಒಂದು ಏಜೆನ್ಸಿಗೆ ತಮ್ಮ ಇಚ್ಛೆಯನ್ನು ತಿಳಿಯಪಡಿಸಿ ಮನೆಯ ಬೆಲೆ, ಕಂತಿನ ಏರ್ಪಾಟು, ನಗದು ಮೊತ್ತ ಎಲ್ಲಾ ತಿಳಿಸಿರುತ್ತಾರೆ. ಆಗ ಈ ಕಂಪನಿಯವರು ಸದ್ರಿ ಮನೆಯ ಮುಂದೆ ಮಾರಾಟಕ್ಕಾಗಿ ಎಂಬ ಹಲಗೆಯನ್ನು ಹಾಕುತ್ತಾರೆ. ಮನೆ ಹೇಡಲು ಬಂದವರಿಗೆ ಇಂತಹ ಮನೆಗಳಿಗೆ ಕರೆದೊಯ್ದು ತೋರಿಸಿ ವ್ಯಾಪಾರ ಕುದುರಿಸಲು ಪ್ರಯತ್ನಿಸುತ್ತಾರೆ. ಅವರ ದಲಾಲಿ ಸಾಧಾರಣ ಶೇಕಡ ನಾಲ್ಕರಿಂದ ಏಳರವರೆಗೆ. ಮನೆ ಮಾರುವವರಿಗೆ ಹಣ ಪೂರ್ತಿ ಮುಟ್ಟುವಂತೆ ಮೊದಲು ಮನೆಯನ್ನು ಬೇರೊಂದು ಹಣಕಾಸಿನ ಸಂಸ್ಥೆಗೆ ಒತ್ತೆ ಹಾಕಿಸಿ ಕಂತು ಬಡ್ಡಿ ಕಬ್ಜ ಏರ್ಪಾಟು ಮಾಡುತ್ತಾರೆ. ಮನೆ ಮಾರಬೇಕೆನ್ನುವವರು ಸಾಧಾರಣವಾಗಿ ಮನೆಗೆ ಬಣ್ಣ ಮಾಡಿ ಅಲಂಕರಿಸಿ ಬಂದವರ ಮನವನ್ನು ಸೂರೆಗೊಳ್ಳಲು ಪ್ರಯತ್ನಿಸುತ್ತಾರೆ ಈ ಜನ ಮನೆಯೊಂದಿಗೆ ಮನೆಯಲ್ಲಿಯ ನೆಲಿ ಹಾಸಿನ ಜಮಖಾನೆ, ರೆಫ್ರಿಜಿರೇಟರ್, ಫ್ರೀಜರ್ ರೇಂಜ್, ಬಟ್ಟೆ ತೊಳೆವ ಯಂತ್ರ ಎಲ್ಲಾ ಮಾರುತ್ತಾರೆ. ಈ ಯಂತ್ರಗಳಿಗೆ ಅಷ್ಟೇನೂ ಬೆಲೆ ಇರುವುದಿಲ್ಲ. ಈಗಿನ ಹೊಚ್ಚ ಹೊಸದಾಗಿ ಸ್ಟೋರಿನಿಂದ ತಂದ ವಸ್ತು ನಾಳೆಯೇ ಮಾರಬೇಕೆಂದರೆ ಶೇಕಡ ಮೂವತ್ತು ಬೆಲೆ ಕಡಿತವಾಗುತ್ತದೆ. ಸಾಧಾರಣ ಎಲ್ಲ ಮನೆಗಳೂ ಒಂದೋ ಎರಡೋ ಒತ್ತೆಗೆ ಒಳಪಟ್ಟಿರುತ್ತವೆ. ಮಾರಿದವನ ಕೈಸೇರುವುದು ನಗದು ಮೊತ್ತವಾಗಿ

ಪಡೆದಷ್ಟು ಮಾತ್ರವೇ ಸೈ. ಇಲ್ಲಿ ಮನೆಗಳೆಲ್ಲಾ ಕಟ್ಟಿಗೆಯ ಗೂಡುಗಳು. ಆದರೆ ಒಳಗಿನ ಜೀವನಾನುಕೂಲ ಸೊಗಸು. ಅರಮನೆಯೇ ಸರಿ. ಮನೆಯ ಬೇಟೆಯಲ್ಲಿ ಬೇರೆ ಬೇರೆ ಸ್ತರದ ಬೇರೆ ಬೇರೆ ಆಸೆ ಆಮಿಷಗಳ ಜನರ ಮನೆಗಳನ್ನು ನೋಡಿದೆವು. ರಿಯಲ್ ಎಸ್ಟೇಟ್ ಸಂಸ್ಥೆಯ ಶ್ರೀ ಫ್ರಾಂಕ್ ದಿನವಿಡೀ ನಮ್ಮನ್ನು ಮನೆಯಿಂದ ಮನೆಗೆ ಹಸನ್ಮುಖಿಯಾಗಿ ಬೇಸರಿಸದೆ ತಿರುಗಿಸಿದ ; ವಿವರಿಸಿದ ; ಮನ ಒಲಿಸಲು ಪ್ರಯತ್ನಿಸಿದ. ಕೇಳಿದ ಬೆಲೆಯ ಸ್ತರದ ಮನೆಯನ್ನು ಆರಿಸಿ ತೋರಿಸುತ್ತಿದ್ದ. ಈ ವ್ಯವಹಾರಕ್ಕೆ ಸಾಕಷ್ಟು ತಾಳ್ಮೆ ಬೇಕು.

ಸಂಜೆಗೆ ನಾನೂ ಧಿಲ್ಲನ್ ಮತ್ತು ಗ್ಯಾನಿ ಕರ್ನವಲ್‌ಸಿಂಗ್ ಹತ್ತಿರದ ಕಲ್ಟನ್ ಲೇಕ್ ನೋಡಲು ಹೋದೆವು. ಹುಣ್ಣಿಮೆಯ ಹತ್ತಿರದ ಚಂದ್ರನ ಬೆಳಕು ಸರೋವರದ ಮೇಣೆ ಥಳಥಳಿಸುತ್ತಿತ್ತು. ಕಟ್ಟಿಗೆಯ ಸೇತುವೆಯ ಮೇಲೆ ಸರೋವರದ ಮಧ್ಯದವರೆಗೆ ಹೋಗಿ ನಿಂತೆವು. ಸುತ್ತಲಿನ ಪರ್ಯಂತ ಪರ್ವತದ ತಪ್ಪಲಿನಲ್ಲಿ ಮಿಣುಕು ಮಿಣುಕು ದೀಪದ ಮನೆಗಳು, ಅನೇಕ ಜನ ನಗರ ಜೀವನಕ್ಕೆ ರೋಸಿ ಮಣ್ಣಿನ ಮಕ್ಕಳಾಗಲು ಅರಸಿಬಂದ ರಜಾಕಾಲ ಸ್ಥಾನವಿದು, ಮತ್ತೊಂದೆಡೆ ಕತ್ತಲಿನಲ್ಲಿ ಬೆಂಕಿಮಾಡಿ ಕ್ಯಾಂಪ್ ಫೈರ್ ಆನಂದಿಸುತ್ತಿದ್ದ ಕ್ಯಾಂಪಿಂಗ್ ವ್ಯಾನ್‌ಗಳು. ನಮ್ಮ ಹಿಂದೆ ಹತ್ತಿರದ ಕೆಫೆಯಲ್ಲಿ ಉನ್ಮತ್ತ ಹಿಪ್ಪಿಗಳು, ಅಸುರ ನೃತ್ಯ ಮತ್ತು ಗಾನ ಸಂಪದ್ಭರಿತ ಹೃದಯವಂತಿಕೆಯ ವಾತಾವರಣದಲ್ಲಿ ಕೆಲಕಾಲ ನಿಶ್ಚಲರಾಗಿ ನಿಂತೆವು. ಇದೊಂದು ಅಮೃತಮಯ ವಾತಾವರಣ.

ಚಿಲ್ಲಿವಾಕ್‌ನಿಂದ ವ್ಯಾಂಕೂವರ್‌ಗೆ ಮರಳಿದ ಮೇಲೆ ಕೆನಡಾದ ವ್ಯವಸಾಯದಲ್ಲಿ ಆಸಕ್ತನಾದ ನಾನು ಧಾನ್ಯಶೇಖರಣೆ, ವರ್ಗೀಕರಣ ಮತ್ತು ರಫ್ತಿನ ವಿಚಾರ ತಿಳಿಯಲು ಸಂಕಾಚುವಾನ್ ರಾಜ್ಯದ ಗ್ರೇಟ್ ಎಲಿವೇಟರ್ಸ್ ನೋಡಲು ತೆರಳಿದೆನು. ಕೆನಡಾದ ಪ್ರಯರಿ ಪ್ರದೇಶದ ಸಂಕಾಚುವಾನ್ ಪ್ರಾಂತದ ಗೋಧಿ ಫ್ಲಾಕ್ಸ್ ಬಾರ್ಲಿ ಮತ್ತು ರೇಪ್ ಇತ್ಯಾದಿ ಬೆಳೆಗಾರರ ಸಹಕಾರೀ ಕಂಪನಿ ಇದು. ಇವರ ಎಲ್ಲ ಸರಕನ್ನೂ ಬೇಷರತ್ ಈ ಕಂಪನಿ ಕೊಳ್ಳುತ್ತದೆ. ಆಯಾ ಪ್ರದೇಶದಲ್ಲಿಯೇ ಕೆಲ ಹಣವನ್ನು ನೀಡಿ ವ್ಯಾಗನ್ ಮೂಲಕ

ಲಾರಿ ಮೂಲಕ ಧಾನ್ಯವನ್ನು ಬಂದರದಲ್ಲಿಯ ಎಲಿವೇಟರ್‌ಗಳಿಗೆ ಕಳುಹಿಸುತ್ತದೆ. ಇಲ್ಲಿ ಈ ಧಾನ್ಯವನ್ನು ಸ್ವಚ್ಛಮಾಡಿ, ಜಾತಿ ಪ್ರಕಾರ ವರ್ಗೀಕರಣ ಮಾಡಿ, ಹಸಿಯಿದ್ದರೆ ಒಣಗಿಸಿ ರಾಕ್ಷಸಾಕಾರದ ಬಿನ್‌ಗಳಲ್ಲಿ ಶೇಖರಿಸುತ್ತಾರೆ. ಕೆನಡಾದ ರಾಷ್ಟ್ರೀಯ ಗೋಧಿ ಮಂಡಳಿಯವರು ಇವರಿಂದ ಗೋಧಿ ಕೊಳ್ಳುತ್ತಾರೆ. ದೇಶದಲ್ಲಿ ಆಂತರ್ಯವಾಗಿ ಖರ್ಚಾಗಿ ಮಿಕ್ಕ ಗೋಧಿಯನ್ನು ಈ ಮಂಡಳಿ ಕೊಳ್ಳಲೇಬೇಕು. ರಾಷ್ಟ್ರೀಯ ಬೆಲೆ ನೀತಿಗನುಸರಿಸಿ ಬೇರೆ ಬೇರೆ ದರಗಳನ್ನು ನಿರ್ಧರಿಸಿ ಗೋಧಿಯನ್ನು ಈ ಮಂಡಳಿ ಕೊಳ್ಳುತ್ತದೆ. ಈ ಕ್ರಿಯೆಗಳನ್ನು ಆದ್ಯಂತವಾಗಿ ಯಂತ್ರಗಳ ಮೂಲಕ ಅತಿ ಸುಲಭವಾಗಿ ಮತ್ತು ಸುಖವಾಗಿ ಮಾಡುವುದನ್ನು ನೋಡಿದೆವು. ಮೂರು ನಾಲ್ಕು ವರ್ಷಗಳವರೆಗೆ ಕೆಡದಂತೆ ಧಾನ್ಯವನ್ನು ರಕ್ಷಿಸುತ್ತಾರೆ. ಹಡಗುಗಳಿಗೆ ಬಿಡುಗಡೆ ಮಾಡುವಾಗ ಗೋಧಿ ಮಂಡಳಿ ಮತ್ತೆ ಪರೀಕ್ಷೆಮಾಡುತ್ತದ. ಪ್ರತಿಯೊಂದು ಪೂಲ್‌ನಲ್ಲಿ (pool) ಸರಕಾರೀ ಅಧಿಕಾರಿಗಳಿರುತ್ತಾರೆ. ಅವರೇ ಕಾಳಿನ ವರ್ಗೀಕರಣ ಮಾಡುತ್ತಾರೆ. ಅತೃಪ್ತನಾದರೆ ರೈತ, ಅಪೀಲು ಮಾಡಬಹುದು. ಆಗ ಬೇರೆ ಸ್ಥಳಕ್ಕೆ ಸ್ಯಾಂಪಲ್ ಕಳಿಸಿ ವರ್ಗೀಕರಣ ಕೇಳುತ್ತಾರೆ. ಇಂತಹ ಪ್ರಸಂಗ ವರ್ಷಕ್ಕೆ ನಾಲ್ಕಾರು ಬಾರಿ ಬರುವುದುಂಟಂತೆ, ಕಾಳನ್ನು ನಷ್ಟವಾಗದಂತೆ ರಕ್ಷಿಸುವುದೂ ಜಾತಿಗುಣಕ್ಕನುಸರಿಸಿ ವರ್ಗೀಕರಣ ಮಾಡುವುದೂ ಎಲ್ಲರ ದೃಷ್ಟಿಯಿಂದ ಹಿತಕರವಾದುದು.

ವ್ಯಾಂಕೂವರ್‌ನಲ್ಲಿರುವ ಬ್ರಿಟಿಷ್ ಕೊಲಂಬಿಯಾ ಮತ್ತು ಸೈಮನ್ ಫ್ರೇಜರ್ ಎಂಬ ಎರಡು ವಿಶ್ವವಿದ್ಯಾಲಯಗಳನ್ನು ಸಂದರ್ಶಿಸಿದೆವು. ಈ ವಿಶ್ವವಿದ್ಯಾಲಯಗಳಲ್ಲಿ ಮುಖ್ಯವಾಗಿ ಕಂಡುದೆಂದರೆ ನಮ್ಮಲ್ಲಿಯಂತೆ ದೊಡ್ಡ ಕಟ್ಟಡಗಳ ಅಭಾವ. ಇಲ್ಲಿಯ ವಿಶ್ವವಿದ್ಯಾಲಯಗಳು ಅಲಂಕಾರಕ್ಕಾಗಲಿ ಗಾತ್ರಕ್ಕಾಗಲೀ ಬೆಲೆ ಕೊಡದೆ ಕೆಲಸಕ್ಕೆ ಬೇಕಾಗುವಷ್ಟು ಮಾತ್ರ ಕಟ್ಟಡಗಳನ್ನು ನಿರ್ಮಿಸಿಕೊಳ್ಳುತ್ತವೆ. ಅನೇಕ ಸುಂದರ ಮತ್ತು ತಕ್ಕಮಟ್ಟಿಗೆ ದೊಡ್ಡ ಕಟ್ಟಡಗಳು ದೇಣಿಗೆಯಿಂದ ನಿರ್ಮಿತವಾದವುಗಳು. ಬ್ರಿಟಿಷ್ ಕೊಲಂಬಿಯಾ ವಿಶ್ವವಿದ್ಯಾಲಯವು ಅನೇಕ ಕಡೆ ತಾತ್ಕಾಲಿಕ ಕಟ್ಟಿಗೆಯ ಇಮಾರತುಗಳನ್ನು ರಚಿಸಿಕೊಂಡಿದೆ. ಸೈಮನ್ ಫ್ರೇಜರ್ ವಿಶ್ವವಿದ್ಯಾಲಯಕ್ಕೆ ಅತ್ಯುತ್ತಮವಾದ

ಭವನವಿದೆ. ಬೆಟ್ಟವೊಂದರ ನೆತ್ತಿಯ ಮೇಲೆ ಚೌಕಾಕೃತಿಯಲ್ಲಿ ನಿರ್ಮಿತವಾದ ಈ ಭವಂತಿಯ ಮಧ್ಯಭಾಗದ ಬಯಲಿನಲ್ಲಿ ಬೆಟ್ಟದ ಶಿಖರ ಭಾಗವನ್ನು ಹಾಗೆಯೇ ಉಳಿಸಿ ಅದಕ್ಕೆ ಮೆಟ್ಟಲು ಕಟ್ಟಿ ಸುಲಕ್ಷಣಗೊಳಿಸಿದ್ದಾರೆ. ಇಲ್ಲಿ ವಿದ್ಯಾರ್ಥಿಗಳ ಸಭಾಭವನವೂ ವಿಶಿಷ್ಟವಾಗಿದೆ. ಬಯಲಿನಂತೆ ಕಾಣುವ ಈ ಭವನವು ಮುಂದೆ ಹಿಂದೆ ಸರಿಸುವ ಮುಚ್ಚುವ ತೆರೆದುಕೊಳ್ಳುವ ಸೌಲತ್ತುಳ್ಳ ಛಾವಣಿಯನ್ನು ಪಡೆದಿದೆ. ವ್ಯಾಂಕೂವರನ ಶಿಶುವಾದ ಈ ವಿದ್ಯಾಲಯದ ಮೇಲೆ ಸರಕಾರಕ್ಕೆ ಅವ್ಯಾಜ ಅಂತಃಕರಣವಂತೆ. ಆದರೆ ಇಲ್ಲಿ ಅನೇಕ ಕ್ರಾಂತಿ ಮನೋಭಾವದ ಬಿಸಿರಕ್ತದ ಪ್ರಾಧ್ಯಾಪಕರಿರುವುದರಿಂದ ವಿದ್ಯಾರ್ಥಿ ಗಲಭೆಗಳಿಗೆ ತೌರುಮನೆಯಾಗಿ ಬಾಲಗ್ರಹಪೀಡಿತವಾಗಿದೆ.

ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು ನಾ ಮುಂದೆ ತಾ ಮುಂದೆ ಎಂದು ಸಂಶೋಧನೆಗಾಗಿ ಅನೇಕ ಕಡೆಯಿಂದ ಹಣ ದೊರಕಿಸುತ್ತಾರೆ. ಸಂಪದ್ಭರಿತ ವಾದ ಅನೇಕ ಸಂಘ ಸಂಸ್ಥೆಗಳಿಗೆ ತಮ್ಮ ಆಶಯಗಳನ್ನು ಮನಗಾಣಿಸಿ ಪ್ರವಾಸಕ್ಕೆ, ಶಿಷ್ಯವೃತ್ತಿಗೆ ಮತ್ತು ಸಂಶೋಧನೆಗೆ ಹೇರಳ ಹಣ ದೊರಕಿಸು ತ್ತಾರೆ. ಸರಕಾರ ಕೊಡುವ ಹಣದಿಂದ ಏನು ಮಾಡಲೂ ಸಾಧ್ಯವಿಲ್ಲ. ಯಾವುದೇ ಪ್ರಾಧ್ಯಾಪಕನ ಏರು ಇಳಿವು, ಅವನ ವಿಭಾಗದ ಪಂಡಿತರು ತನ್ನ ಸಂಶೋಧನೆಯ ಹಣ(Research Grant), ಅದರ ಉಪಯೋಗ ಮತ್ತು ಫಲದ ಮೇಲೆ ಅವಲಂಬವಾಗಿರುತ್ತದೆಯೇ ಹೊರತು, ಅವನು ವಿಶ್ವವಿದ್ಯಾಲಯಗಳಲ್ಲಿ ಕಳೆದ ವಸಂತಗಳ ಮೇಲಲ್ಲ.

ವಿದ್ಯಾಲಯಗಳಲ್ಲಿ ಬೇರೆ ಬೇರೆ ಘಟಕಗಳ ಮಧ್ಯೆ ತರಾತುರಿ ನಡೆ-ದಿರುತ್ತದೆ. ಸೆನೆಟ್ ಸಭೆಯಲ್ಲಿ ಸಂಬಂಧಿಸಿದ ಕಮಿಟಿಗಳಲ್ಲಿ ಸಾಕಷ್ಟು ವಾಗ್ಯುದ್ಧ ನಡೆದರೂ ಕೂಡ ಜನ ಸದ್ಭಾವದಿಂದ ನಡೆಯುತ್ತಿರುವುದು ಕಾಣಬರುತ್ತದೆ. ನಮ್ಮಲ್ಲಿ ಸಾಧಾರಣವಾಗಿ ನಡೆದಂತೆ ವೈಯಕ್ತಿಕ ಹಟಾಹಠಗಳಾಗಲೀ ದೋಷಾರೋಪಣೆಯಾಗಲೀ ಬಹುತೇಕ ನಡೆಯುವುದಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ಯೋಗ್ಯ ಜನರಿಗೆ ಈ ಖಂಡದಲ್ಲಿ ಇರುವ ಮನ್ನಣೆ ಮತ್ತು ಬೇಡಿಕೆ. ವಿದ್ಯಾಲಯದ ನೇಮಕಗಳೆಲ್ಲ ಒಪ್ಪಂದದಂತೆ ಇರುತ್ತವೆ. ಮನಸ್ಸಿಗೆ ಬಾರದಿದ್ದರೆ ಸಮಯ ಕಳೆದ ಕೂಡಲೇ ಬಿಡಬಹುದು,

ಬಿಡಿಸಬಹುದು. ಯೋಗ್ಯ ಜನರನ್ನು ಕಳೆದುಕೊಳ್ಳಲು ಯಾವ ಅಧಿಪತಿಯೂ ಇಷ್ಟಪಡುವುದಿಲ್ಲ. ಕೆಲಕಾಲ ಕಳೆದು ನೆಮ್ಮದಿಗೊಂಡ ಮೇಲೆ ಖಾಯಂ ಆಧಾರದ ಮೇಲೆಯೂ ನೇಮಕಗಳು ನಡೆಯುತ್ತವೆ. ಆರು ವರ್ಷಗಳಿಗೊಮ್ಮೆ ಒಂದು ವರ್ಷಕಾಲ ಪ್ರತಿಯೊಬ್ಬ ಅಧ್ಯಾಪಕನಿಗೆ ಸಂಶೋಧನೆಗೆ ಎಂದು ಅರ್ಧ ಸಂಬಳದ ಮೇಲೆ ಲೀವ್ ಕೊಡುತ್ತಾರೆ. ವರ್ಷಕ್ಕೆ, ಎರಡು ವರ್ಷಕ್ಕೆ ಸಂಬಂಧಿಸಿದ ವಿಭಾಗದ ಡೀನರು, ಅಧ್ಯಾಪಕರು ಮಾಡಿದ ಸಂಶೋಧನೆ, ಪ್ರಕಟಿಸಿದ ಬರವಣಿಗೆ ಗಣಿಸುತ್ತಾರೆ. ಆಸಾಮಿ ಜಡವಾಗುತ್ತಾ ಇದ್ದಾನೆಂದೆನಿಸಿದರೆ ಕರೆದು ಒಳಿತಾದ ಮಾತಿನಲ್ಲಿ ನಾಲ್ಕಾರು ತಿಂಗಳ ರಜೆ ನೀಡಿ ತಲೆ ಸ್ವಚ್ಛಮಾಡಿಕೊಳ್ಳಲು ಅವಕಾಶ ನೀಡುತ್ತಾರೆ.

ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವಾಗ ಶೋಸಿ ತೆಗೆದುಕೊಳ್ಳುತ್ತಾರೆ, ಇದರ ಮೇಲೆ ಮುಂದಿನ ಆರುತಿಂಗಳಲ್ಲಿ ವಿದ್ಯಾರ್ಥಿಯ ಹಾಜರಿ, ಪರೀಕ್ಷೆಗಳಲ್ಲಿ ಗ್ರೇಡ್, ಆಸಕ್ತಿ ಮುಂತಾದ್ದನ್ನು ಪರಿಶೀಲಿಸಿ ತರಗತಿಯಲ್ಲಿ ಮುಂದುವರಿಯಲು ಅಥವಾ ಬೇರೆ ಕೋರ್ಸ್ ನೋಡಿಕೊಳ್ಳಲು ತಿಳಿಸಿರುತ್ತಾರೆ. ವರ್ಷದ ಕೊನೆಗೆ ಅಥವಾ ಎರಡು ವರ್ಷದ ಕೊನೆಗೆ ಪರೀಕ್ಷೆ ಮಾಡಿ ಅನಂತರ ಫೇಲು ಮಾಡಿ ಸಮಯ ಹಾಳುಮಾಡುವ ಬದಲು ಈ ರೀತಿ ಮಾಡಿದರೆ ವಿದ್ಯಾರ್ಥಿ ಬೇರೆ ಏನಾದರೂ ನೋಡಿಕೊಳ್ಳಲು ಸಾಧ್ಯವಿರುತ್ತದೆ. ಸಾಧಾರಣವಾಗಿ ಹೀಗಾಗಿ ಫೇಲು ಮಾಡುವುದು ಕಡಿಮೆ. ಆದರೆ ಉನ್ನತ ಶ್ರೇಣಿ ದೊರೆಯುವುದು ಕಠಿಣ. ಉಪಾಧ್ಯಾಯರು ವಿದ್ಯಾಸಕ್ತರಾಗಿ ಸಚ್ಚಾರಿತ್ರ್ಯವಂತರಾದರೆ ಇಂತಹ ಪದ್ಧತಿ ಅತ್ಯುತ್ತಮ.

ಇಲ್ಲಿಯ ವಾಸ್ತವದಲ್ಲಿ ಮರೆಯಲಾಗದ ಒಂದು ಸಂದರ್ಭವೆಂದರೆ ಬೆಲ್‌ಫಾಂಟೆ ಎಂಬ ನೀಗ್ರೋ ಸಂಗೀತಕಾರನ ಒಂದು ಕಾರ್ಯಕ್ರಮ. ಕಿಕ್ಕಿರಿದು ತುಂಬಿದ ಸಭಾಂಗಣದಲ್ಲಿ ಮೂರು ಗಂಟೆಗಳ ಕಾಲ ನಡೆದ ಆತನ ಕಾರ್ಯಕ್ರಮ ಅಂತಃಕರಣವನ್ನು ಕವಲಿಸುವಂತಿತ್ತು. ಹತ್ತಾರು ಹಾಡುಗಳ ಪೈಕಿ ಎರಡು ಹಾಡು ನನಗೆ ಪ್ರಿಯವೆನಿಸಿತು. ಕೆನಡಾದ ಗೇಯಕಾರನೋರ್ವನ 'ಸೆಟ್ ಟು ಸೈಲ್ ಅಪಾನ್ ಮೈ ವೇ, ವೋಂಟ್ ಬಿ ಬ್ಯಾಕ್ ಫಾರ್ ಮೆನಿ ಎ ಡೇ' ಎಂಬ ಹಾಡು ದೂರ ಪ್ರವಾಸಕ್ಕೆ

ಹೊರಟ ವ್ಯಕ್ತಿ ತನ್ನ ಪ್ರಿಯತಮೆಗೆ ನೀಡಿದ ಸಂದೇಶ. ಇದನ್ನು ಕೇಳಿ ದೊಡನೆ ವಿನಾಯಕರ ' ಇಲ್ಲಿಯೇ ಇರು, ಅಲ್ಲಿಗೆ ಹೋಗಿ ಮಲ್ಲಿಗೆಯನು ತರುವೆ ' ಎಂಬ ಕವನ ನೆನಪಾಯಿತು. ಆತನ ಹಾಡಿಕೆ ಮತ್ತು ಹಾಡು ಭಾವನಿರ್ಭರವಾಗಿದ್ದವು. ಎರಡನೆಯದಾಗಿ ಆತ ಹೇಳಿದ ಕಡೆಯ ಹಾಡು ನೀಗ್ರೋ ಜನಾಂಗದ ಕರುಳ ಕೂಗಿನಂತಿದ್ದು ಅಂತಃಕರಣವನ್ನು ಹಿಂಡಿತು.

Has anybody seen here,
My Friend-Abraham, John, Martin, and Bobby?

ಒಂದೊಂದು ನುಡಿಯ ಅಂತ್ಯದಲ್ಲಿ His name is John Abrahamಎಂದು ಮುಂತಾಗಿ ಒಂದೊಂದೇ ಹೆಸರನ್ನು ಕೂಗಿ ಆತ ಮಾಡಿದ ಪ್ರಶ್ನಾರ್ಥಕ ಚಿಹ್ನೆಯನ್ನು ಸ್ತಬ್ಧವಾಗಿ ಕುಳಿತ ಮೂರು ಸಾವಿರ ಜನ ಕಣ್ಣು ಮುಚ್ಚಿ ನುಂಗಿದುದು ನನಗೆ ಇಂದಿಗೂ ನೆನಪಾಗುತ್ತದೆ. ಜಗತ್ತು ನತದೃಷ್ಟವಾದುದು ಅವರು ಅಳಿದರೂ ಈ ಸನ್ನಿವೇಶದಲ್ಲಿ ನೆಳಲು ಬೆಳಕಿನ ಪ್ರಭಾವ, ಕಂಚಿನಂತಹ ಬೆಲ್‌ಫಾಂಟೆಯ ಕಂಠ ಕಟುಕನನ್ನೂ ಕದಲಿಸುವಂತಿದ್ದವು.

ಭಾರತದಿಂದ ಇಲ್ಲಿಗೆ ವಲಸೆ ಬಂದು ಇಲ್ಲಿ ಶ್ರೀಮಂತರಾಗಿರುವ ಜನರನ್ನು ನೋಡುವ ಒಂದು ಸಂದರ್ಭ ಸಾಬು ಅವರ ಪಾರ್ಟಿಗೆ ಹೋದಾಗ ಒದಗಿತ್ತು. ಇಲ್ಲಿಯ ಭಾರತೀಯ ಜನರ ಅನಭಿಷಿಕ್ತ ಮುಖಂಡ ಮೂಲ ಮದರಾಸಿನವರಾದ ಡಾಕ್ಟರ್ ಪಾಂಡ್ಯನ್. ಲಂಡನ್ ವಿಶ್ವವಿದ್ಯಾಲಯದ ಪಿಹೆಚ್.ಡಿ. ಮತ್ತು ಬಾರ್-ಅಟ್-ಲಾ ಮುಗಿಸಿದ ಇವರು ಇಂಗ್ಲಿಷ್ ಮಹಿಳೆಯೋರ್ವಳನ್ನು ವರಿಸಿದ್ದಾರೆ. ಭಾರತೀಯರ ಸಕಲ ಸಮಸ್ಯೆಗಳ ನಿವಾರಣೆಗೆ ಇವರು ತಯಾರು. ಅದೇ ಅವರ ಜೀವನದ ಆಧಾರ. ಈ ಮಹಾಶಯರ ಜನ್ಮೋತ್ಸವ ಪಾರ್ಟಿಯನ್ನು ಸಾಬು ಏರ್ಪಡಿಸಿದ್ದರು. ಲುಂಸ್ಲೀ ಎಂಬ ವಿಸ್ತರಣದಲ್ಲಿ ಅವರ ಫಾರಂನಲ್ಲಿಯ ಮನೆಯಲ್ಲಿ ಈ ಪಾರ್ಟಿ. ಇಲ್ಲಿಗೆ ಅನೇಕ ಹಿಂದೂ ಶ್ರೀಮಂತರು ಆಗಮಿಸಿದ್ದರು. ಅವರ ತಾತ ಮುತ್ತಾತಂದಿರು ಇಲ್ಲಿಗೆ ವಲಸೆ ಬಂದ ಕಾರಣ ಈ ಜನರಲ್ಲಿ ಅತಿರೇಕವೊಂದನ್ನು ಬಿಟ್ಟರೆ ಬೇರಾವ ಭಾರತೀಯ ಗುಣ ಕಂಡು ಬರಲಿಲ್ಲ, ಡಾಕ್ಟರ್ ಪಾಂಡ್ಯನ್ ಅವರು ನನಗೆ ಕೆನಾಡದಲ್ಲಿಯೇ ಉಳಿದುಬಿಡಲು ಬಹಳ ಹೇಳಿದರು. ಕೆಲ

ದಿನಗಳ ಹಿಂದೆ ಪಂಜಾಬಿನಿಂದ ನೂರು ಜನ ನಿರಕ್ಷರಕುಕ್ಷಿ ಪಿಂಡಾರಿ ಸಿಖ್‌ರು ದೇಶ ನೋಡುವ ಸೋಗಿನಿಂದ ಬಂದು ಇಲ್ಲಿಯೇ ಉಳಿದರಂತೆ. ಅವರಲ್ಲೊಬ್ಬ ಭಾರತದಲ್ಲಿ ಖೂನಿ ಕೇಸೊಂದರಲ್ಲಿ ಸಿಲುಕಿದ್ದರಿಂದ ಅವನನ್ನು ಮರಳಿ ಕಳುಹಿಸಲು ಸರಕಾರೀ ಅಧಿಕಾರಿಗಳು ಪ್ರಯತ್ನಿಸುತ್ತಿರುವಾಗ ಸ್ಥಳೀಯ ನಾಗರಿಕಳಾದ ಪಂಜಾಬ್ ಯುವತಿಯೋರ್ವಳನ್ನು ಅವನಿಗೆ ಮದುವೆ ಮಾಡಿ ದರಂತೆ ಹತಾಶರಾದ ಅಧಿಕಾರಿಗಳು ಇವರ ಕೈ ಬಿಟ್ಟರಂತೆ. ಕೆನಡಾದ ಕಾರ್ಖಾನೆಗಳಲ್ಲಿ ಸೇವೆಗಳಲ್ಲಿ ದುಡಿಯುವ ಜನ ಬೇಕು. ದಷ್ಟ ಪುಷ್ಟ ಪಂಜಾಬಿಗಳು ಎಂತಹ ಹವೆಯಲ್ಲೂ ಇರಬಲ್ಲರು. ದುಡಿಯಬಲ್ಲರು.

ಈ ಪಾರ್ಟಿಗೆ ಬಂದ ಅನೇಕರು ಅರ್ಧ ಗಂಟೆಯಲ್ಲಿ ಸಿಕ್ಕಾಪಟ್ಟೆ ಕುಡಿದು ತೂಗುತ್ತಾ ಮನೆಗೆ ನಡೆದರು. ಕುಡಿತ ಕುಣಿತ ಬೆಳಗಿನವರೆಗೂ ನಡೆಯುತ್ತವೆಂದರು ಫಿಜಿಯಿಂದ ಬಂದ ಕೆಲ ಭಾರತೀಯರು ವಾದ್ಯ ಮೇಳ ನಡೆಸಿದ್ದರು. ವ್ಯಾಂಕೂವರದ ಸಮುದ್ರತೀರದ ಸೂರ್ಯಾಸ್ತಮಯ ಚೆನ್ನಾಗಿರುತ್ತದೆಂದು ಅತ್ತಿಗೆ ನೆನಪಿಸಿದುದರಿಂದ ನಾವು ನಮಸ್ತೇ ಮಾಡಿ ನಡೆದವು.

ಇಲ್ಲಿಯ ಜನರ ಜೀವನದ ಬಗ್ಗೆ ಕೊಂಚ ಮಾಹಿತಿ ನೀಡಿದ ಸಂದರ್ಭ ಗಳೆಂದರೆ ಇನ್ನೂ ಎರಡು ಪರಿಮಿತ ಪಾರ್ಟಿಗೆ ಓರ್ವ ಪ್ರೊಫೆಸರರೂ ಓರ್ವ ವಿಮಾ ಏಜೆಂಟರು, ಓರ್ವ ಇಂಜಿನಿಯರು, ಓರ್ವ ಲಾಯರು ದಂಪತಿ ಸಮೇತರಾಗಿ ಆಮಂತ್ರಿತರಾಗಿದ್ದರು. 2-4 ಘಂಟೆಗಳ ಕಾಲ ನಡೆದ ಮಾತುಕತೆಯಲ್ಲಿ ಕಂಡು ಬಂದ ಮುಖ್ಯ ಅಂಶಗಳೆಂದರೆ :

ವಿವಿಧ ರಂಗಗಳಲ್ಲಿ ಬಾಳ್ವೆ ಮಾಡುತ್ತಿರುವ ಜನ ತಮ್ಮ ತಮ್ಮ ರಂಗಕ್ಕೆ ಮಾತ್ರ ಸೀಮಿತರಾಗದೆ ಬೇರೆ ಹವ್ಯಾಸ ವಿಷಯಗಳಲ್ಲಿ ಕೂಡಾ ಸಜೀವ ಆಸಕ್ತಿಯಿಂದ ಭಾಗವಹಿಸುತ್ತಾರೆ. ತಿಳಿದಿದ್ದನ್ನು ಅತ್ಯಂತ ಸುಲಭ ರೀತಿಯಲ್ಲಿ ನಿಷ್ಕೃಷ್ಟವಾಗಿ ತಿಳಿಸಲು ಹವಣಿಸುತ್ತಾರೆ. ಮತ್ತು ಹೆಚ್ಚಿನ ವಿಷಯ ಗಳನ್ನು ಶ್ರೀಮದ್ಗಾಂಭೀರ್ಯವಿಲ್ಲದೆ ಅರಿಯಲು ತವಕಿಸುತ್ತಾರೆ. ಒಣಜಂಭ ವಂತೂ ಕಾಣಲಿಲ್ಲ.

ಎರಡನೆಯ ಪಾರ್ಟಿಯಲ್ಲಿ ಯೂನಿವರ್ಸಿಟಿಯಲ್ಲಿ ಡೀನರಾದ ಶ್ರೀ ಕವಾನ್ (Cowan) ದಂಪತಿಗಳು ಮತ್ತು ವೈದ್ಯರಾದ ಡಾಕ್ಟರ್ ಲೂ ದಂಪತಿಗಳು ಬಂದಿದ್ದರು. ಡಾ. ಕವಾನ್ ಮೂಲತಃ ಸ್ಕಾಟ್ಲೆಂಡಿನವರು. ಸುಪ್ರಸಿದ್ಧ ಪ್ರಾಣಿಶಾಸ್ತ್ರಜ್ಞರೆಂದು ಹೆಸರಾಗಿದ್ದಾರೆ. ವನ್ಯಜೀವಿಗಳಲ್ಲಿ ಅವರಿಗೆ ಅಮಿತ ಆಸಕ್ತಿ, ಇಷ್ಟರಲ್ಲಿಯೇ ಭಾರತಕ್ಕೆ ಸಮ್ಮೇಳನವೊಂದಕ್ಕೆ ತೆರಳಲಿದ್ದ ಅವರಿಗೆ ಭಾರತೀಯ ವನ್ಯಜೀವಿಗಳಲ್ಲಿ ಆಸಕ್ತಿ. ಗುಜಾರಾತಿನ ಸಿಂಹ, ಅಸ್ಸಾಮಿನ ಖಡ್ಗಮೃಗ. ಮೈಸೂರಿನ ಹುಲಿ ಆನೆ, ರಂಗನತಿಟ್ಟಿನ ಪಕ್ಷಿಕಾಶಿ ಎಲ್ಲಾ ತಿಳಿಸಲಾಗಿ ಅವರು ವಿಶೇಷ ಕುತೂಹಲಿಗಳಾದರು, ಕಾಶ್ಮೀರದ ಕಸ್ತೂರೀ ಮೃಗದ ಬಗ್ಗೆ ಅವರಿಗೆ ಅಧ್ಯಯನ ನಡೆಸಲಾಸೆ.

ಡಾ. ಲೂ ಸದ್ಯ ರಷ್ಯದ ಭಾಗವಾಗಿರುವ ಇಸ್ಟೋನಿಯಾ ದೇಶದವರು. ರಷ್ಯದಲ್ಲಿ ಕಮ್ಯೂನಿಸಂ ಹರಡಿ ಇಸ್ಟೋನಿಯಾ ಸ್ವಾಹಾ ಆದಾಗ ಅವರು ತಮ್ಮ ದೇಶವನ್ನು ತ್ಯಜಿಸಿ ಇಲ್ಲಿಗೆ ವಲಸೆ ಬಂದರು. ಅವರ ಪತಿ ಡಾ. ಹೇನು ಅವರಿಗೆ ಫೋಟೋಗ್ರಫಿಯಲ್ಲಿ ವಿಶೇಷ ಆಸಕ್ತಿ. ಈ ನಾಲ್ಕು ಸಜ್ಜನರೊಂದಿಗೆ ಕಳೆದ ನಾಲ್ಕಾರು ಗಂಟೆ ಸರ್ವಜ್ಞನ ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ ಎಂಬ ಮಾತನ್ನು ಮನಗಾಣಿಸಿದವು. ಮುಂದೆ ಡಾ. ಲೂ ಅವರು ನಮ್ಮನ್ನು ತಮ್ಮ ಮನೆಗೆ ಆಹ್ವಾನಿಸಿದರು. ಅಲ್ಲಿಗೆ ಮಾತ್ರಿಬ್ಬರು ಡಾ. ದಂಪತಿಗಳು ಆಗಮಿಸಿದ್ದರು. ಅವರು ಮೆಕ್ಸಿಕೋ ನೋಡಿ ಬಂದವರು. ಅವರಿಗೆ ಹಿಂದೂ ದರ್ಶನದಲ್ಲಿ ವಿಪರೀತ ಆಸಕ್ತಿ. ದೇವರಿಗೆ ಅಷ್ಟೊಂದು ತಲೆಗಳೇಕೆ? ಕೈಗಳೇಕೆ? ನಟರಾಜ ನಾಟ್ಯಮಾಡುವನೇಕೆ ? ಮೆಕ್ಸಿಕೋದ ಮಾಯಾ ಜನರ ಸಂಸ್ಕೃತಿಗೂ ದೇವಾಲಯಗಳಿಗೂ ಹಿಂದೂ ದರ್ಶನ ಜೀವನಗಳಿಗೂ ಸಂಬಂಧವುಂಟೆ ? ಎಂದು ಹಲವಾರು ಪ್ರಶ್ನೆ ಮಾಡಿದರು. ನನಗೆ ತಿಳಿದಷ್ಟು ಉತ್ತರಿಸಿದೆ. ಮೆಕ್ಸಿಕೋದ ದೇವಾಲಯಗಳಿಗೂ ಕಾಂಬೋಡಿಯಾದ ಆಂಕರ್‌ವಾಟ್‌ನ ದೇವಾಲಯಗಳಿಗೂ ದಕ್ಷಿಣ ಭಾರತದ ದೇವಾಲಯಗಳಿಗೂ ಗ್ವಾಟೆಮಾಲಾದ ದೇವಾಲಯಗಳಿಗೂ ತೀರ ಹತ್ತಿರದ ಸಂಬಂಧವಿದೆ ಎಂದು ಶ್ರೀ ದಿವಾನ್ ಚಮನ್‌ಲಾಲ್ ಮತ್ತು ಶ್ರೀ ಶಿಶಿರ್‌ಕುಮಾರ್ ಮಿತ್ರ ಈಗಾಗಲೇ ಸ್ಥಾಪಿಸಿದ್ದಾರೆ.

ಒಮ್ಮೆ ವಿದ್ಯುತ್ ತೊಟ್ಟಿಲದ ಮೂಲಕ ಗ್ರಾಸ್ ಮೌಂಟನ್ ನೆತ್ತಿಯನ್ನೇರಿ ವ್ಯಾಂಕೂವರ್‌ನ ಆಕಾಶ ರೂಪವನ್ನು ನೋಡಿದೆವು. ಸಾಹಸಿಗಳಾದ ಈ ಜನ ಈ ಗುಡ್ಡದ ಮೇಲೆ ಬೇಸಿಗೆಯ ಮನೆ ಕಟ್ಟಿಕೊಂಡಿದ್ದಾರೆ. ನಿರ್ಭೀತರು. ಮತ್ತೊಮ್ಮೆ ಇಲ್ಲಿಯ ಬೃಹತ್ ಉದ್ಯಾನವನವಾದ ಸ್ಟೇನ್ಲೆ ಪಾರ್ಕಿಗೆ ಹೋದೆವು. ಇಲ್ಲಿ ಮಕ್ಕಳಿಗೆ ಚಿಕ್ಕ ರೈಲುಗಾಡಿ, ಮಧ್ಯದಲ್ಲಿ ಹಂಸ ಮತ್ತು ತಾವರೆಯ ಕೊಳ, ವಿಧವಿಧ ಪ್ರಾಣಿಗಳು ರೆಸ್ಟೊರಾ ಎಲ್ಲ ಇದೆ. ನಿರಂತರ ದುಡಿಮೆಯಿಂದ ಸೋತ ಜನ ಸಕುಟುಂಬ ಇಂತಹ ಪಾರ್ಕುಗಳಿಗೆ ಶರಣಾಗತರಾಗುತ್ತಾರೆ. ರಾಷ್ಟ್ರೀಯ ಪಾರ್ಕು ಸಂಸ್ಥೆ ಇವುಗಳನ್ನು ಅತ್ಯಂತ ಸ್ವಚ್ಛವಾಗಿ ಕಾಪಾಡಿಕೊಂಡು ಬರುತ್ತದೆ.

ಅಮೇರಿಕೆಯ ಎಲ್ಲ ಊರುಗಳಂತೆ ಇಲ್ಲಿಯೂ ಚಿಕ್ಕ ಚೈನಾ ಟೌನ್ ಇದೆ. ಆದರೆ ಇಲ್ಲಿಯ ಚೈನಾ ಟೌನ್ ಕೊಂಚ ಸ್ವಚ್ಛವಾಗಿದೆ. ಸಿಯಾಟಲ್‌ನಲ್ಲಿ ಜಗ್ಗಿಯವರ ಮನೆಯಲ್ಲಿ ಬಾರ್ಬಕ್ಯೂ ಕುಂಡವನ್ನು ನೋಡಿದ ನಮಗೆ ಮನೆಯ ಹಿಂಭಾಗದಲ್ಲಿ ಅದರಂತೆ ನಾವೇಕೆ ಒಂದು ಬಾರ್ಬಕ್ಯೂ ಕಟ್ಟಬಾರದು ಎಂದು ಅನಿಸತೊಡಗಿತು. ಸರಿ. ಕಲ್ಲಿಗಾಗಿ ಕಾರ್ ತೆಗೆದುಕೊಂಡು ಹೊರಟೆವು. ಸಮುದ್ರದ ದಂಡೆಯಲ್ಲಿ ಕಲ್ಲೇ ಇಲ್ಲ. ಕಡೆಗೆ ೨೫ ಮೈಲು ದೂರದಲ್ಲಿ ಫ್ರೇಜರ್ ನದಿ ಪಾತಳಿಯಲ್ಲಿ ಗುಂಡುಕಲ್ಲು ಕಂಡೆವು. ಹತ್ತಿರದ ದಂಡೆಯ ಮೇಲೆ ಕಾರು ನಿಲ್ಲಿಸಿ ಡಿಕ್ ತೆಗೆದು ಕಲ್ಲು ಹೊತ್ತು ತುಂಬಿದೆವು. ಕಾಯಕಷ್ಟ ಮಾಡಿ ಅಭ್ಯಾಸವಿಲ್ಲದ ನಾವು ಎಣಿಸಿ ಎಣಿಸಿ ನಲವತ್ತೈದು ಕಲ್ಲು ತುಂಬಿದೆವು. ಮನೆಗೆ ಬಂದು ಒಂದೆಡೆ ಕೆಸರಿಗೆ ನೀರು ಬಿಟ್ಟೆವು. ಆದರೆ ನಾಳೆ ಕಟ್ಟಿದರಾಯಿತೆಂದು ರೆಸ್ಟ್ ತೆಗೆದುಕೊಂಡೆವು. ಮಾರನೆಯ ದಿನ ಸಾಯಂಕಾಲ ಕೆಸರು ಕಲಸಿದೆವು. ನಾನು ಕೆಸರು ಕಲಸಿ ಸಿವೆಲ್‌ನಲ್ಲಿ ತೆಗೆದು ತೆಗೆದು ನೀಡಿದೆ. ಚಿಕ್ಕ ಸೋದರ ಮಂಜು ಕೆಸರು ಹಾಕಿ ಕಲ್ಲು ಸೇರಿಸ ತೊಡಗಿದ. ಅಣ್ಣನ ಮತ್ತು ಅಣ್ಣನ ಮಗ ರವಿ ಕಲ್ಲು ನೀಡುತ್ತಿದ್ದರು. ಒಂದುಗಂಟೆಯ ನಿರಂತರ ಕಟ್ಟಡ ನಿರ್ಮಾಣದಲ್ಲಿ ಕಲ್ಲು ಮುಗಿದವು. ಸುಮಾರು ಎರಡು ಸುತ್ತು ಕಟ್ಟಡವಾಗಿತ್ತು. ಮಧ್ಯದಲ್ಲಿ ಮಣ್ಣು ತುಂಬಿದೆವು. ಆದರೆ ಕುರ್ಚಿಯ ಮೇಲೆ ಕುಳಿತು ಬೆಂಕಿ ಕಾಯಿಸಬೇಕೆಂದರೆ ಇನ್ನೂ ಎರಡು

ಸುತ್ತು ಕಟ್ಟಬೇಕು. ಇಂದು ನಾಳೆ ಎಂದು ಮತ್ತೆ ನಾವು ಕಲ್ಲು ತರುವ ಹೊತ್ತಿಗೆ ನಾಲ್ಕಾರು ದಿನ ಸಂದವು. ಅದೊಮ್ಮೆ ಕಲ್ಲು ತಂದೆವು. ಆದರೆ ಮತ್ತೆ ಕಟ್ಟಿ ಮುಗಿಸಬೇಕೆನ್ನುವಲ್ಲಿ ಗಡಿಬಿಡಿಯಾಗಿ ನನ್ನ ವಾಸ್ತವ್ಯದ ಅವಧಿ ಮುಗಿದು ವಿಮಾನ ಏರುವ ದಿನ ಬಂತು. ಬಾರ್ಬೆಕ್ಯೂ ಕುಂಡವನ್ನು ಕಟ್ಟಿ ಮುಗಿಸಿ, ಮೊದಲನೆಯ ಅಗ್ನಿಸ್ಪರ್ಶವನ್ನು ಬೇಗನೆ ಮಾಡಿರೆಂದು ತಿಳಿಸಿ ಪಯಣ ಸನ್ನಾಹ ಮಾಡಿದೆ.

ಉತ್ತರ ಅಮೇರಿಕ ಎಲ್ಲ ದೇಶದ ಜನರ ಬದುಕಿನಲ್ಲಿ ಎರಡೇ ಸಂಗತಿಗಳು ಖಚಿತವೆಂದು ಹೇಳಲಾಗುತ್ತದೆ. ಒಂದನೆಯದು ಜನನ ಮತ್ತು ಎರಡನೆಯದು ಅಪಘಾತ (ಬರ್ತ್ ಅಂಡ್ ಆಕ್ಸಿಡೆಂಟ್). ಜೀವನದಲ್ಲಿ ಅನಿಯಂತ್ರಿತವಾಗಿ ಉದ್ಭವಿಸಿರುವ ವೇಗದಿಂದ ಜನರಿಗೆ ಅವರ ಅನಂತ ಜೀವನದಲ್ಲಿ ನಂಬಿಕೆಯಿಲ್ಲ. ಕ್ರೆಡಿಟ್ ಕಾರ್ಡಲ್ಲಿರುವಷ್ಟು ವಿಶ್ವಾಸ ಅವರಿಗೆ ಸೂರ್ಯಚಂದ್ರರಲ್ಲಿಲ್ಲ. ನಿರಂತರವಾಗಿ ಆಸರವಾಗಬಲ್ಲ ಕುಟುಂಬ ವ್ಯವಸ್ಥೆಯಾಗಲೀ ಬಾಂಧವ್ಯ ಸಂಪರ್ಕವಾಗಲೀ ಇಲ್ಲ. ನೇರವಾದ ವೈಯಕ್ತಿಕವಾದ ಸಮಾಜದ ವ್ಯವಸ್ಥೆ. ಅನೇಕ ಬಾರಿ ನಿರುದ್ಯೋಗಿಯಾದಾಗ ಸರಕಾರ ವಾರಕ್ಕೆ ಇಷ್ಟೆಂದು ಹಣಸಹಾಯ ನೀಡುತ್ತದೆ. ಅಂಗವಿಕಲರಾದರೆ ಮತ್ತು ವೃದ್ಧಾಪ್ಯದಲ್ಲಿ ಪೆನ್‌ಶನ್ ದೊರೆಯುತ್ತದೆ. ಆದರೆ ಆಕಸ್ಮಾತ್ ಜರುಗುವ ಅವಘಡದಲ್ಲಿ ಮಡಿದವರ ಮಕ್ಕಳನ್ನು ಸರಕಾರ ತನ್ನ ವಶಕ್ಕೆ ತೆಗೆದುಕೊಂಡು ಮಡಿದವರ ಆಸ್ತಿ ಸ್ವಾಸ್ತಿ ಇನ್ಶೂರೆನ್ಸ್ ಹಣದಿಂದ ಮಕ್ಕಳನ್ನು ವಯಸ್ಕರಾಗುವವರೆಗೆ ಸಂಬಂಧಿಸಿದ ಸರಕಾರಿ ವಿಭಾಗದ ಮೂಲಕ ವ್ಯವಸ್ಥೆಮಾಡುತ್ತದೆ. ಸಂಬಂಧಿಕರಾರೇ ಆಗಲಿ ಸ್ವಪ್ರೇರಣೆಯಿಂದ ಮಕ್ಕಳನ್ನು ತಮ್ಮ ವಶಕ್ಕೆ ತೆಗೆದುಕೊಂಡರೆ ಕೂಡಾ ಹಣಕಾಸು ಸರಕಾರದ ವಶದಲ್ಲಿಯೇ ಇದ್ದು ಮಕ್ಕಳ ವಿದ್ಯಾಭ್ಯಾಸದ ವೆಚ್ಚಗಳಿಗೆ ರಶೀತಿ ಪಡೆದು ರಕ್ಷಕನಿಗೆ ಹಣ ನೀಡಲಾಗುತ್ತದೆ. ಆದರೆ ಬಹುತೇಕ ಸಂದರ್ಭಗಳಲ್ಲಿ ವಿಲ್ ಬರೆದಿರುತ್ತಾರೆ. ಆ ವಿಲ್ ಪ್ರಕಾರವಾಗಿ ಸರಕಾರ ಮಕ್ಕಳ ರಕ್ಷಣೆ ಮಾಡುತ್ತದೆ.

ಕೆನಡಿಯವರ ಜೀವನದಲ್ಲಿ ಬಹುಮುಖ್ಯವಾಗಿ ಕಾಣುವ ಅಂಶವೆಂದರೆ ಅಮೇರಿಕೆಯ ಪ್ರಭಾವ. ಬಲಿಷ್ಠವಾದ ಸ್ನೇಹಿತ ರಾಷ್ಟ್ರವೊಂದು ಪಕ್ಕದಲ್ಲಿರುವುದರಿಂದ ಕೆನಡಿಯನರು ಸೇನೆಯನ್ನು ಕಡಿತ ಮಾಡಿದ್ದಾರೆ. ಕೆನಡಾದ ಶೇಕಡಾ

ಶಿಂ ರಷ್ಟು ಅರ್ಥವ್ಯವಸ್ಥೆ ಯಾವುದೋ ರೀತಿಯಲ್ಲಿ ಯು. ಎಸ್. ಅನ್ನು ಆಧರಿಸಿದೆ. ಈ ಎರಡೂ ದೇಶಗಳ ಮಧ್ಯೆ ಕಳೆದ ನೂರು ವರ್ಷದಿಂದ ದ್ವಾರಮುಕ್ತವಿದೆ. ಅಮೇರಿಕೆ ಮತ್ತು ಕೆನಡಾದ ಗಡಿಯಲ್ಲಿರುವ ಮಹಾ ದ್ವಾರದ ಮೇಲೆ ಹೆಮ್ಮೆಯಿಂದ "These gates were never closed since a hundred years" ಎಂದೂ Brethren live in peace ಎಂದೂ ಸುವರ್ಣಾಕ್ಷರಗಳಲ್ಲಿ ಬರೆಯಲಾಗಿದೆ. ವಿಯೆಟ್ನಾಂ ಯುದ್ಧವನ್ನೊಪ್ಪದೆ ಸೈನ್ಯಕ್ಕೆ ಬಲಾತ್ಕಾರದಿಂದ ಭರ್ತಿ (Draft) ಆಗುವುದನ್ನು ತಪ್ಪಿಸಿಕೊಳ್ಳಲಿಚ್ಛಿಸುವ ಅನೇಕ ಅಮೇರಿಕನ್ ಹೈದರು ಈ ಮುಕ್ತದ್ವಾರದ ಮೂಲಕ ಕೆನಡಾಕ್ಕೆ ಜಾರುತ್ತಾರೆ. ಕೆನಡಾದಲ್ಲಿ ಅಪರಾಧಿಗಳು ಈ ಮುಕ್ತದ್ವಾರದಿಂದ ಅಮೇರಿಕೆಗೆ ಪಲಾಯನ ಮಾಡುತ್ತಾರೆ. ಆದರೆ ಈ ಮುಕ್ತತೆಯಿಂದ ಉಭಯ ದೇಶಗಳಿಗೆ ಆಗಿರುವ ಲಾಭವೇ ಹೆಚ್ಚು.

ಕೆನಡಾವಾಸಿಗಳ ಮುಖ್ಯ ಭಾವವೆಂದರೆ ತಮ್ಮದು ವಿಶಾಲವಾದ ಸಮೃದ್ಧವಾದ ಸುಂದರವಾದ ಹೊಸ ದೇಶ ಎಂಬುದು. ಬಹಳ ಜನರಿಗೆ ಯು.ಎಸ್.ನೊಂದಿಗೆ ಸ್ಪರ್ಧೆ ಬೇಕಾಗಿಲ್ಲ. ಯು.ಎಸ್.ದ ಸಾನ್ನಿಧ್ಯವನ್ನೂ ಸ್ನೇಹವನ್ನೂ ಸರಿಯಾಗಿ ಉಪಯೋಗಿಸಿ ಶುಭ್ರವಾದ ಮತ್ತು ಸುಖವಾದ ಬಾಳನ್ನು ನಿರ್ಮಿಸಬೇಕೆಂಬುದೇ ಆಶೆ. ಹರೆಯದ ಜನರಿಗೆ ಆದಷ್ಟು ಬೇಗನೆ ಯು.ಎಸ್.ದಲ್ಲಿ ರೋಮಾಂಚಕ ಜೀವನ ನಡೆಸಬೇಕೆಂಬ ಅಭಿಲಾಷೆ. ಮುದುಕರಿಗೆ ಕೊಂಚ ಕೊಂಚ ಹೆಚ್ಚುತ್ತಿರುವ ನೀರು ಗಾಳಿ ಮತ್ತು ಆಹಾರಗಳ ಪೊಲ್ಯೂಷನ್ (Pollution) ಬಗ್ಗೆ ಚಿಂತೆ. ಆದರೆ ಯು.ಎಸ್.ದ ಬಾಳ್ವೆಗಿಂತ ಕೆನಡಾದ ಬಾಳ್ವೆ ಸುಭದ್ರ ಸುಂದರ ಮತ್ತು ಶಾಂತಿಯುತವಾದುದು. ಇಲ್ಲಿಯ ನಗರದಲ್ಲಿಯ ಜೀವನ ವಿಶಾಲವಾದ ಉದ್ಯಾನದಲ್ಲಿ ಜೀವಿಸಿದಂತೆ. ವಿಶಾಲವಾದ ಬಯಲಿನ ಮನೆಗಳು. ಸದಾ ಹಸಿರಿನ ಹುಲ್ಲುಹಾಸು. ಮನೆ ಮನೆಯ ಮುಂದೆ ಮೈಯೆಲ್ಲಾ ಹೂ ಬಿಟ್ಟ ಗುಲಾಬಿಯ ಗಿಡಗಳು. ಪಥಿಕನಿಗೆ ನೆರಳಾಗುವಂತೆ ಆಕಾಶಕ್ಕೆ ಛತ್ರಿ ಹಿಡಿದು ನಿಂತ ದೈತ್ಯ ವೃಕ್ಷಗಳು. ಬೇಗುದಿಯ ಬಿಸಿಯಿಲ್ಲದ ಸೂರ್ಯ ಕಿರಣ, ಆರು ತಿಂಗಳು ತುಂತುರು ಮಳೆ ಮತ್ತು ಮೂರು ತಿಂಗಳು ರೇಷ್ಮೆಯಂತಹ ಹಿಮಪಾತ

ಹೀಗೆ ನಿಬಿಡವಾದ ಕಾರ್ಯಕ್ರಮಗಳ ಮಧ್ಯೆ ಅನೇಕ ಬಾರಿ ನಮಗೆ ಮಾತನಾಡಲು ಸಮಯ ದೊರೆಯುತ್ತಿದ್ದುದು ರಾತ್ರಿ ಎಂಟರ ಮೇಲೆ. ಮನೆಯ ಪಡಸಾಲೆಯಲ್ಲಿ ಟೆಲಿವಿಷನ್ ನೋಡುತ್ತಾ ಚಿಕ್ಕಂದಿನ ದಿನಗಳ ಬಗ್ಗೆ, ಮನೆಯ ವಹಿವಾಟುಗಳ ಬಗ್ಗೆ, ಓದಿನ ಬಗ್ಗೆ, ಭಾರತೀಯ ರಾಜಕೀಯದ ಬಗ್ಗೆ ಅನೇಕ ಬಾರಿ ರಾತ್ರಿ ಹನ್ನೆರಡರವರೆಗೆ ಮಾತನಾಡುತ್ತಾ ಕುಳಿತುಕೊಳ್ಳುತ್ತಿದ್ದೆವು. ಮಧ್ಯೆ ಮಧ್ಯೆ ಆ ಈ ತಿನಿಸು ತಿನ್ನುತ್ತಾ ಟೀ ಅಥವಾ ಕಾಫಿ ಕುಡಿಯುತ್ತಾ ಮಾತು ನಡೆಯುತ್ತಿತ್ತು. ಬೆಳಗಿನ ಎಂಟು ಗಂಟೆಗೆ ಅಣ್ಣ ವಿಶ್ವವಿದ್ಯಾಲಯಕ್ಕೆ ತೆರಳುತ್ತಿದ್ದ. ಅತ್ತಿಗೆ ಅದೇ ಹೊತ್ತಿಗೆ ಬೇಸಿಗೆ ಕಾಲದ ಒಂದು ಆರ್ಟ್‌ಕೋರ್ಸಿಗಾಗಿ ತೆರಳುತ್ತಿದ್ದರು. ಕೃಷ್ಣ ಮತ್ತು ರವಿಯನ್ನು ಬೇಬಿ ಸಿಟ್ಟರ್ ಲಿಂಡಾ (Lynda) ನೋಡಿಕೊಳ್ಳುತ್ತಿದ್ದಳು. ಒಮ್ಮೊಮ್ಮೆ ಹನ್ನೊಂದು ಘಂಟೆಯ ಹೊತ್ತಿಗೆ ನಾವು ವಿಶ್ವವಿದ್ಯಾಲಯಕ್ಕೆ ಹೋಗಿ ಅಣ್ಣನ ಜೊತೆ ಫ್ಯಾಕಲ್ಟಿ ಕ್ಲಬ್‌ನಲ್ಲಿ ಲಂಚ್ ಮುಗಿಸುತ್ತಿದ್ದೆವು, ಇಲ್ಲವಾದರೆ ಫ್ರಿಜ್‌ನಿಂದ ಸಾಮಗ್ರಿ ತೆಗೆದು ಸ್ಯಾಂಡ್‌ವಿಚ್ ಮಾಡಿ ಮಾವಿನಕಾಯಿ ಉಪ್ಪಿನಕಾಯಿ ನಂಜಿಕೊಳ್ಳುತ್ತಾ ಹೊಡೆಯುತ್ತಿದ್ದೆವು. ಈ ಕಾಲದಲ್ಲಿ ಟೆಲಿವಿಷನ್‌ನಲ್ಲಿ ನೋಡಿದ ಮುಖ್ಯ ಕಾರ್ಯಕ್ರಮಗಳೆಂದರೆ (೧) ಅಪೋಲೋ–೧೧ ರ ಕಾರ್ಯಕ್ರಮ (೨) ರಿಚರ್ಡ್ ನಿಕ್ಸನ್ನರ ಪ್ರಪಂಚ ಯಾತ್ರೆ ಮತ್ತು (೩) ಲಾರ್ಡ್ ಮೌಂಟ್‌ಬ್ಯಾಟನ್‌ರ ಜೀವನದ ಮೂರು ಭಾಗಗಳು. ಅಲ್ಲದೆ ಪೌರ್ವಾತ್ಯ ಧರ್ಮಗಳ ಬಗೆಗಿನ ಒಂದು ಕಾರ್ಯಕ್ರಮ. ಟೆಲಿವಿಷನ್ ತುಂಬಾ ಪ್ರಭಾವಕಾರಿಯಾದುದು. ಇದರಲ್ಲಿ ಯಾವುದೇ ಕಾರ್ಯಕ್ರಮ ನೋಡಲು ಕುಳಿತರೆ ಏಳುವ ಮನಸ್ಸೇ ಆಗದು. ಈ ಜಗತ್ತಿನ ಮಕ್ಕಳು ಅನೇಕ ವಿಷಯಗಳನ್ನೂ ಅನೇಕ ಶಬ್ದಗಳನ್ನೂ ಅಮಿತ ಧೈರ್ಯವನ್ನೂ ಅಲ್ಪ ವಯಸ್ಸಿನಲ್ಲೇ ಟೆಲಿವಿಷನ್ ಮೂಲಕ ಗಳಿಸುತ್ತಾರೆ.

ಮೂರು ವಾರಗಳ ವಾಸ್ತವ್ಯದ ನಂತರ ಆಗಸ್ಟ್ ಐದು, ೧೯೬೯ ರಂದು ಕೈಬೀಸಿ ಜಪಾನ್‌ಗೆ ವಿಮಾನ ಏರಿದಾಗ ಕರುಳು ಕೃಷ್ಣನನ್ನು ಮರೆಯದಾಗಿತ್ತು. ಅಣ್ಣನ ಮಗ ಪುಟ್ಟ ಕೃಷ್ಣ, ನಾಲ್ಕು ಮಕ್ಕಳನ್ನು ಮನೆಯಲ್ಲಿ ಬಿಟ್ಟು ೮೦ ದಿವಸಗಳ ಪ್ರವಾಸದಲ್ಲಿ ಬಂದ ನನಗೆ ಅನೇಕ ರೀತಿಯಲ್ಲಿ ಹೃದಯದಾಸರೆ

ಯಾಗಿದ್ದ. ಅವನ ತೊದಲ್ನುಡಿ, ಅವನ ಪುಟ್ಟ ಪುಟ್ಟ ಹೆಜ್ಜೆ, ಅವನ ಕೇಕೆ, ಅವನ ಪ್ರೀತಿಯ ಕರೆ ದಿನದ ಮೇಲೆ ದಿನವನ್ನು ನಿಮಿಷದಂತೆ ಕಳೆಸಿದ್ದವು ಎರಡನೆಯದಾಗಿ ಸೋದರ ಮಂಜು ಕಳೆದ ೨೦ ವರ್ಷಗಳಲ್ಲಿ ನನಗೆ ಎಡೆ ಬಿಡದ ಒಡನಾಡಿ. ಅವನನ್ನು ಇನ್ನು ಕನಿಷ್ಠ ಮೂರು ವರ್ಷಗಳವರೆಗೆ ಕಾಣುವ ಸಂಭವವಿಲ್ಲವಲ್ಲ ಎಂಬ ಕೊರಗು ಇನ್ನೊಂದೆಡೆ. ಆದರೆ ಜೀವನ ಅನಿವಾರ್ಯಗಳ ಮುಂದೆ. ಕೆನಡಿಯನ್ ಪೆಸಿಫಿಕ್ ಏರ್‌ಲೈನ್ಸ್‌ನಲ್ಲಿ ಹತ್ತು ಗಂಟೆಗಳ ಪ್ರವಾಸ ಮಾಡಿ ಟೋಕಿಯೋದ ಹನೇಡಾ ವಿಮಾನ ತಾಣ ಸೇರಿದಾಗ ಒಂದು ದಿನ ಪುಕ್ಕಟೆಯಾಗಿ ಕಳೆದಿತ್ತು. ಅಂತರರಾಷ್ಟ್ರೀಯ ತಾರೀಖು ರೇಖೆಯನ್ನು ದಾಟಿ ಬಂದದ್ದರಿಂದ ಒಂದು ದಿನ ಹುಸಿಯಾಗಿತ್ತು. ಹತ್ತು ಘಂಟೆಗಳ ಈ ಸುಖ ಮಯ ಸುದೀರ್ಘ ಪ್ರವಾಸದಲ್ಲಿ ಲಂಚ್ ಆಗಿತ್ತು ; ನಿದ್ರೆಯಾಗಿತ್ತು ; ಡಿನ್ನರ್ ಆಗಿತ್ತು ; ನಿದ್ರೆಯಾಗಿತ್ತು ; ಕೋಲಾ, ಕಾಫಿ, ಟೀ, ಐಸ್‌ಕ್ರೀಮ್ ಆಗಿತ್ತು ; ಪತ್ರಿಕೆ ಆಗಿತ್ತು. ಈ ವಿಮಾನದ ಗಗನಸಖಿಯೋರ್ವಳು ನಾನು ಭಾರತೀಯನೆಂದು ತಿಳಿದು ನಿಮಗೆಷ್ಟು ಜನ ಹೆಂಡಂದಿರು ? ಎಂದಳು. ಕಾನೂನಿನ ಪ್ರಕಾರ ಒಬ್ಬಳಿಗೇ ಅನುಮತಿ. ಏನು ಮಾಡುವುದು ? ಎಂದಾಗ ಆಕೆಗೆ ತಡೆಯಲಾರದ ನಗು. ಸಮಯಕ್ಕೆ ಸರಿಯಾಗಿ ನಮ್ಮ ವಿಮಾನ ಹನೇಡಾ ತಲುಪಿದರೂ ಕೂಡ ಅರ್ಧ ಘಂಟೆ ಕಾಲ ಆಕಾಶದಲ್ಲಿಯೇ ಹಾರಾಡಲು ಹೇಳಲಾಯಿತು. ರನ್‌ವೇ ಖಾಲಿ ಇಲ್ಲದ ಕಾರಣ ಅಧಿಕಾರಿಗಳು ಹನ್ನೊಂದು ವಿಮಾನಗಳನ್ನು ಬೇರೆ ಬೇರೆ ಸ್ತರದಲ್ಲಿ (ಸ್ಟ್ಯಾಕಿಂಗ್) ಹಾರಾಡುತ್ತಾ ಇರಲು ಹೇಳಿದ್ದರು. ಪೂರ್ವ ಪಶ್ಚಿಮಗಳ ಸಂಗಮದಂತಿರುವ ಹನೇಡಾದಲ್ಲಿ ತುಂಬಾ ಗಜಿಬಿಜಿ. ವಿಮಾನ ಹಾರಬೇಕೆಂದರೆ ಕ್ಯೂ. ಇಳಿಯಬೇಕೆಂದರೆ ಸ್ಟ್ಯಾಕಿಂಗ್.

೧೦ ಅನತಿಪೂರ್ವದ ಅದಮ್ಯ ಶಕ್ತಿ: ಜಪಾನ್

ಎರಡನೆಯ ಪ್ರಪಂಚ ಸಮರದ ಸಮಯದಲ್ಲಿ ಅಣುಬಾಂಬಿನ ದಾಳಿಗೆ ಗುರಿಯಾಗಿ, ನೆಲಸಮವಾಗಿದ್ದ ಜಪಾನ್ ಅಹರ್ನಿಶಿ ದುಡಿತದಿಂದ ಅನಂತ ತ್ಯಾಗದಿಂದ ಪುನರುಜ್ಜೀವನಗೊಂಡು ಇಂದು ಏಷ್ಯಾದ ಅದಮ್ಯ ಶಕ್ತಿಯಾಗಿ ನಿಂತಿದೆ. ಜಪಾನರು ಇತರ ಏಷಿಯನರಂತೆ ಏನೇ ಮಾಡಲಿ ಅತಿರೇಕವಾಗಿ ಮಾಡುತ್ತಾರೆ. ಯುದ್ಧಾನಂತರ ತಮ್ಮ ಆರ್ಥಿಕ ವ್ಯವಸ್ಥೆಯನ್ನು ಪುನರ್‌ನಿರ್ಮಿಸಲು ಕಟಿಬದ್ಧರಾದರು. ವಸ್ತುಗಳ ಸಂಖ್ಯೆಯನ್ನು ಅಸಂಖ್ಯ ಮಾಡಿದರು. ಯಾವತ್ತಿಗೂ ಪೇಟೆಯಲ್ಲಿ ಪ್ರಮುಖರೆಂದೆನಿಸಿಕೊಂಡವರನ್ನು ಹಿಮ್ಮೆಟ್ಟಿಸಿ ದಾಪುಗಾಲು ಹಾಕಿ ಮುಂದೆ ಬಂದರು. ಜನಸಂಖ್ಯೆಯನ್ನು ಹಿಡಿತದಲ್ಲಿಡಬೇಕೆಂದು ಅವರಿಗನಿಸಿತು. ಸರಿ, ಇಂದು ಜನಸಂಖ್ಯೆಯ ಅಭಾವದ ಸಮಸ್ಯೆಯ ಮಾತು ಕೇಳಿಬರುತ್ತದೆ. ಈ ಅವಸರದ ಅತಿರೇಕದ ಭರಾಟೆಯಲ್ಲಿ ಆದ ಅತಿ ದೊಡ್ಡ ತಪ್ಪೆಂದರೆ ಟೋಕಿಯೋ-ಒಸಾಕ ಸೆಕ್ಟರ್‌ನಲ್ಲಿ ಉದ್ಯಮಗಳ ಕೇಂದ್ರೀಕರಣ. ಇದರಿಂದ ವಸ್ತುಗಳ ಸಂಖ್ಯೆ ಬೆಳೆಯಿತಾಗಲೀ ಜೀವನದ ತರಗತಿ ಹೆಚ್ಚಲಿಲ್ಲ. ಟೋಕಿಯೋ ಯಾವಾಗಲೂ ಕಾರಖಾನೆಯ ಹೊಗೆಯಿಂದ ದಟ್ಟವಾಗಿ ಮುಚ್ಚಿರುತ್ತದೆ. ಒಕಾಸಾ ವಿಭಾಗದಲ್ಲಿ ೧೦೦ ಕ್ಕೆ

೨೫ರಷ್ಟು ಮಕ್ಕಳಿಗೆ ಅಸ್ತವಮಾ ಜಾಡ್ಯ. ಕ್ಯೋಟೊ ವಿಭಾಗದಲ್ಲಿ ಮರ್ಕ್ಯುರಿ ಎಕ್ಸಾಸ್ಟ್‌ನಿಂದ ಮೀನುಗಳ ಆರೋಗ್ಯ ಕೆಟ್ಟು ಅವನ್ನು ತಿಂದ ಜನರಿಗೆ ಕ್ಯಾನ್ಸರ್. ಗಾಳಿಯ ಅಶುಭ್ರತೆ, ನೀರಿನ ಅಶುಭ್ರತೆ, ವಾತಾವರಣದ ಕಲುಷತೆಯಿಂದ ಬಾಳು ಬಳಲುತ್ತಲಿದೆ. ಉದ್ಯಮಗಳ ಕೇಂದ್ರೀಕರಣದಿಂದ ಒಂದೇ ಕಡೆ ಇರಬಾರದಷ್ಟು ಜನ ಗುಂಪುಗೂಡಿದ್ದಾರೆ. ಕೆಲಸಕ್ಕೆ ಹೋಗುವ ಸಮಯದಲ್ಲಿ ಮನೆಗೆ ಮರಳುವ ಸಮಯದಲ್ಲಿ ರಸ್ತೆಯಲ್ಲಿ, ರೈಲು, ಬಸ್, ಟ್ಯಾಕ್ಸಿ, ನಿಲ್ದಾಣಗಳಲ್ಲಿ ಜಾತ್ರೆಯಂತೆ ಜನವೋ ಜನ. ಜನರನ್ನು ಮನೆಯಿಂದ ಕಾರ್ಯಸ್ಥಾನಕ್ಕೆ ಮತ್ತು ಮರಳಿ ಮನೆಗೆ ಕರೆದೊಯ್ಯುವುದು ದೊಡ್ಡ ಸಮಸ್ಯೆ. ಈ ಸಮಸ್ಯೆಯನ್ನು ಜಪಾನರು ಅತಿ ಸರಳವಾಗಿ ಬಿಡಿಸಿದ್ದಾರೆ. ಇಲ್ಲಿಯ ರೈಲು ವ್ಯವಸ್ಥೆ ಪ್ರಪಂಚದಲ್ಲಿಯೇ ವಿನೂತವಾಗಿದೆ. ಸಬರ್ಬನ್ ರೈಲು ಒಂದರ ಹಿಂದೆ ಇನ್ನೊಂದರಂತೆ ಸಾಲು ಹಿಡಿದಿರುತ್ತವೆ. ನಾವು ಕುಳಿತ ರೈಲಿನಿಂದ ಮುಂದೆ ಹೋಗುವ ರೈಲನು ಹಿಂದೆ ಬರುವ ರೈಲನ್ನು ನೋಡಬಹುದು. ಟೋಕಿಯೋಕ್ಕೆ ಎರಡು ಡಜನ್‌ಗೆ ಮೇಲ್ಪಟ್ಟು ಲೈನುಗಳು ಬಂದು ಸೇರುತ್ತವೆ. ಇದರ ಮೇಲೆ ಮೋನೋರೇಲ್, ಸಬ್‌ವೇ ಅಲ್ಲದೇ ಕೆಲವೆಡೆ ಟ್ರಾಂ-ಕಾರ್ ಕೂಡಾ ಇದೆ. ಎಲ್ಲ ಸಮಾನೆಯ ಸಾರಿಗೆ ವಿಧಾನದ ಸಹಜೀವನವನ್ನು ಜಪಾನರು ಸಾಧಿಸಿದ್ದಾರೆ. ಪ್ರಪಂಚದಲ್ಲಿಯೇ ಅತಿವೇಗವಾಗಿ ಚಲಿಸುವ ಟೋಕಿಯೋ-ಒಸಾಕ ಬುಲೆಟ್ ಎಕ್ಸ್‌ಪ್ರೆಸ್‌ನಲ್ಲಿ ಪಯಣಿಸುವುದೊಂದು ಆನಂದ. ೧೩೫ ಮೈಲು ವೇಗದಲ್ಲಿ ಧಾವಿಸುವ ಈ ವಿಮಾನದಂತಹ ರೈಲು ಜಪಾನರು ಎಲೆಕ್ಟ್ರಾನಿಕ್ಸ್‌ನಲ್ಲಿ ಸಾಧಿಸಿದ ಪ್ರಗತಿಗೆ ನಿತ್ಯಸಾಕ್ಷಿ.

ಜಪಾನರ ಉದ್ಯಮದಲ್ಲಿ ಆಸಕ್ತಿಯುಳ್ಳ ನಾನು ಟೋಕಿಯೋ ಇಂಡಸ್ಟ್ರಿಯಲ್ ಟೂರ್ ಸೇರಿದೆ. ಮೊದಲನೆಯದಾಗಿ ಸೋನಿ ಕಾರ್ಪೊರೇಷನ್ನಿನ ರೇಡಿಯೋ, ಟೇಪ್ ರೆಕಾರ್ಡರ್ ಕಾರ್ಖಾನೆಗೆ ತೆರಳಿದೆವು. ಜಪಾನರ ಅತಿಥಿ ಸತ್ಕಾರದ ಕುರುಹಾಗಿ ಮೊದಲಿಗೆ ನಮಗೆ ಸಿಹಿತಿನಿಸು, ಜಪಾನೀ ಚಹಾ ನೀಡಿ ಕಂಪನಿಯ ಕುರಿತ ಪುಸ್ತಕ ಮತ್ತು ಚಿಕ್ಕ ಉಡುಗೊರೆ ನೀಡಿದರು. ಅನಂತರ ಕಂಪನಿಯ ಪ್ರಗತಿಯ ಮತ್ತು ಉತ್ಪಾದನೆಗಳ ಕುರಿತು ಒಂದೆರಡು ಚಲನಚಿತ್ರ ತೋರಿಸಿದರು. ಅನಂತರ ಕಾರ್ಖಾನೆಯ ಷೋರೂಮಿಗೆ ನಡೆ

ದೆವು. ಅಲ್ಲಿ ಸದ್ಯ ತಯಾರಾಗುತ್ತಿರುವ ವಸ್ತುಗಳಲ್ಲದೆ ಮುಂದೆ ಬರಲಿರುವ ವಸ್ತುಗಳನ್ನೂ ಇರಿಸಿದ್ದರು. ನಿರಂತರ ಶೋಧನೆಯಿಂದ ಈ ಜನ ಎಲ್ಲರಿಗಿಂತ ಮೊದಲು ಹೊಸ ಹೊಸ ಉಪಕರಣಗಳನ್ನು ತಯಾರಿಸುತ್ತಾರೆ. ಅಪೋಲೋ ಹನ್ನೊಂದರ ಜೊತೆಗೆ ಸೋನಿ ಟೇಪ್‌ರಿಕಾರ್ಡರ್ ಯಶಸ್ವಿಯಾಗಿ ವ್ಯೋಮಕ್ಕೆ ಹೋಗಿಬಂದಿತೆಂಬುದು ಈ ಕಂಪನಿಯ ಹೊಸ ಕೋಡು. ಮುಂದೆ ಬರಲಿರುವ ಉಪಕರಣಗಳಲ್ಲಿ ಟೆಲಿ-ವಿ-ಫೋನ್ (TELE-V-PHONE) ಅಂದರೆ ಟೆಲಿ ಫೋನು ಸಂಭಾಷಣೆ ಮಾಡುತ್ತಿರುವಾಗಲೇ ಪರಸ್ಪರ ಮುಖದರ್ಶನ ಅಥವಾ ನೋಡುತ್ತಾ ಮಾತನಾಡುವ ಟೆಲಿಫೋನ್ ಮತ್ತು ಎರಡನೆಯದು ಆಡಿಯೋ ವಿಷುಯಲ್ ಟೇಪ್‌ರಿಕಾರ್ಡರ್—ಟೆಲಿವಿಷನ್‌ನಲ್ಲಿ ಬರುವ ಕಾರ್ಯಕ್ರಮಗಳನ್ನು ಮನೆಯಲ್ಲಿಯೇ ಕುಳಿತು ರಿಕಾರ್ಡು ಮಾಡುವುದು, ಅಲ್ಲದೆ ಅದನ್ನು ಮತ್ತೆ ಟೆಲಿವಿಷನ್‌ಗೆ ಉಪಕರಣವೊಂದರ ಸಹಾಯದಿಂದ ಸೇರಿಸಿ ಕಾರ್ಯಕ್ರಮಗಳನ್ನು ಮತ್ತೆ ಮತ್ತೆ ನೋಡುವುದು. ಎಲೆಕ್ಟ್ರಾನಿಕ್ಸ್‌ನಲ್ಲಿ ಇದು ಬಹಳ ಕ್ರಾಂತಿಕಾರೀ ಪ್ರಗತಿಯೆನಿಸುತ್ತದೆ. ಸೋನಿಯವರು ಈಗಾಗಲೇ ಸೂರ್ಯನ ಬೆಳಕಿನಲ್ಲಿ ನೋಡಬಹುದಾದ ಟೆಲಿವಿಷನ್ ತಯಾರಿಸಲಿದ್ದಾರೆ

ಅವರ ಕಾರ್ಖಾನೆ ಸಂಪೂರ್ಣ ಸ್ವಚ್ಛ ಮತ್ತು ಏರ್‌ಕಂಡೀಷನ್ಡ್ ಆಗಿದೆ. ಬಹುತೇಕ ಕೆಲಸಗಾರರೆಲ್ಲ ಹದಿನೆಂಟು ಇಪ್ಪತ್ತರವರೆಗಿನ ಹುಡುಗಿಯರು. ಸರಿಯಾದ ಟೇಬಲ್ ಮುಂದೆ ಕುಳಿತ ಪ್ರತಿಯೊಬ್ಬ ಕೆಲಸಗಾರ್ತಿ ತನ್ನ ಮುಂದೆ ಬರುವ ವಸ್ತುವಿಗೆ ತಾನು ಮಾಡಬೇಕಾದ ಚಿಕ್ಕ ಕೆಲಸವನ್ನು ನಿಯಂತ್ರಿತ ಸಮಯದಲ್ಲಿ ಮುಗಿಸಿ ಮುಂದೆ ಸಾಗಲು ದಾರಿ ಮಾಡಬೇಕು. ಪ್ರತಿಯೊಬ್ಬರಿಗೆ ಬಹು ಚಿಕ್ಕ ಕೆಲಸ ಪಾಲಿಗೆ ಬರುತ್ತದೆ. ಯಾರೂ ಬಿಡುವಿಲ್ಲದೆ ಕೆಲಸ ಮಾಡುತ್ತಲೇ ಇರುತ್ತಾರೆ. ಪ್ರತಿಯೊಂದು ಉಪಕರಣ ಸಾಮಗ್ರಿ ಕುಳಿತಲ್ಲಿಯೇ ಕೈಗೆ ಸಿಗುವಂತೆ ಇರುತ್ತದೆ. ಹುಡುಕಾಟ ಮತ್ತು ಹೆಚ್ಚಿನ ಶ್ರಮದ ಅಗತ್ಯವೂ ಇಲ್ಲ. ಏಕೆಂದರೆ ಉಪಕರಣಗಳೆಲ್ಲಾ ವಿದ್ಯುಚ್ಚಾಲಿತ. ಸ್ಕ್ರೂ ತಲೆಯ ಮೇಲೆ ಸ್ಕ್ರೂ ಡ್ರೈವರ್ ಇಟ್ಟರೆ ಸಾಕು ಕ್ಷಣಾರ್ಧದಲ್ಲಿ ಸ್ಕ್ರೂ ಸ್ಥಾನ ಸೇರುತ್ತದೆ. ನಿಮಿಷಕ್ಕೆ ಮೂರು ರೇಡಿಯೋ ತಯಾರಾಗುತ್ತವಂತೆ. ಈ ಕಂಪನಿಯು ಸ್ಟೀರಿಯೋ ರಿಕಾರ್ಡರ್, ಇಂಟಗ್ರೇಟೆಡ್ ಸರ್ಕ್ಯೂಟ್ ರೇಡಿಯೋ

ಗಳು ಅದ್ಭುತವಾಗಿವೆ. ಪ್ರಪಂಚದಲ್ಲಿ ಜರ್ಮನ್ ಮತ್ತು ಅಮೇರಿಕನ್ನರನ್ನು ಮೀರಿಸಿ ನಿಂತವರು ಇಂದು ಜಪಾನೀಯರು.

ಎರಡನೆಯದಾಗಿ ಕ್ಯಾನನ್ (CANNON) ಕಂಪನಿಗೆ ತೆರಳಿದೆವು. ಈ ಕಂಪನಿ ಅನೇಕ ರೀತಿಯ ಕ್ಯಾಮರಾಗಳನ್ನು ತಯಾರಿಸುತ್ತದೆ. ಆದರೆ ನಾವು ನೋಡಿದ್ದು ಕ್ಯಾನನ್ ಚಲನಚಿತ್ರ ಕ್ಯಾಮರಾ ನಿರ್ಮಾಣದ ಘಟಕ. ಇಲ್ಲಿ ಕೂಡಾ ಕೋಕಾಕೋಲಾ ನೀಡಿ ಸತ್ಕರಿಸಿ ನಂತರ ಕಂಪನಿಯ ಕುರಿತಾದ ಪುಸ್ತಕ ಉಡುಗೊರೆ ನೀಡಿ ಎರಡು ಚಲನಚಿತ್ರಗಳನ್ನು ತೋರಿಸಿದರು. ಅನಂತರ ಕಾರ್ಖಾನೆಯನ್ನು ಸಂದರ್ಶಿಸಿದೆವು. ಈ ಕಾರ್ಖಾನೆಯಲ್ಲಿ ಕೂಡಾ ಹುಡುಗಿಯರೇ ಬಹ್ವಂಶ ಕಂಡುಬಂದರು. ದೃಷ್ಟಿ ಸರಿಯಿರುವವರೆಗೆ ಇಲ್ಲಿ ಉದ್ಯೋಗ. ಇಲ್ಲಿಯ ಮೆಷೀನ್ ಷಾಪ್, ಲೆನ್ಸ್ ಷಾಪ್ ಮತ್ತು ಕ್ಯಾಮರಾ ಅಸೆಂಬ್ಲಿ ಷಾಪ್ ನೋಡಿದೆವು. ಮೆಷೀನ್ ಷಾಪ್‌ನಲ್ಲಿ ಕ್ಯಾಮರಾದ ಲೋಹ ಭಾಗಗಳನ್ನೆಲ್ಲಾ ತಯಾರಿಸುತ್ತಾರೆ. ಲೆನ್ಸ್ ಷಾಪ್‌ನಲ್ಲಿ ಒರಟು ಗಾಜನ್ನು ನಯಮಾಡಿ ತಕ್ಕ ಅಳತೆಗೆ, ಪ್ರಮಾಣಕ್ಕೆ, ಗುಣಕ್ಕೆ ತಯಾರು ಮಾಡುತ್ತಾರೆ. ಈ ಕ್ಯಾಮರಾಕ್ಕೆ, ಬೇಕಾಗುವ ಇತರ ಭಾಗಗಳನ್ನು ಇದೇ ಕಂಪನಿಯ ಬೇರೆ ಬೇರೆ ಘಟಕಗಳಲ್ಲಿ ತಯಾರಿಸುತ್ತಾರೆ. ಇಲ್ಲೇ ಅವನ್ನೆಲ್ಲಾ ಜೋಡಿಸುತ್ತಾರೆ. ಕೆಲಸಗಾರರು ಸೂಕ್ಷ್ಮ ಕಾರ್ಯದಲ್ಲಿ ತೊಡಗಿರುವ ಕಾರಣ, ಅವರಿಗೆ ಸರಿಯಾದ ವಾತಾವರಣ ಕಲ್ಪಿಸಲು ಸಮಶೀತ ಉಷ್ಣವ್ಯವಸ್ಥೆ ಮಾಡಿದ್ದಾರೆ. ಇವರ ಷೋರೂಮಿನಲ್ಲಿ ಅನೇಕ ರೀತಿಯ ಕ್ಯಾಮರ, ಬೈನಾಕ್ಯುಲರ್ಸ್, ಲೆನ್ಸಸ್, ಮತ್ತು ಫಿಲ್ಟರ್‌ಗಳು ವಗೈರಾ ಇಟ್ಟಿದ್ದಾರೆ. ೧ ಮಿಲಿಮೀಟರಿನ ಚಲನಚಿತ್ರ ಕ್ಯಾಮರಾವನ್ನು ಹೊಸದಾಗಿ ಇವರು ತಯಾರಿಸಿದ್ದಾರೆ. ಎಂಟುಮಿಲಿಮೀಟರಿನ ಕ್ಯಾಮರ ಉಪಯೋಗಿಸುವ ನನಗೆ ಈ ಕಾರಖಾನೆಯ ಸಂದರ್ಶನ ಭಾರೀ ಕುತೂಹಲಕಾರಕವಾಗಿತ್ತು. ಪ್ರತಿಯೊಂದು ಅಂಶದಲ್ಲಿ ಪ್ರತಿಯೊಂದು ಸ್ತರದಲ್ಲಿ ಅತ್ಯಂತ ದಕ್ಷತೆಯನ್ನು ವಹಿಸುತ್ತಾರೆ.

ಕಡೆಯದಾಗಿ ಜಪಾನಿನ ಅತಿ ದೊಡ್ಡ ಬೀರ್ ವಿಸ್ಕಿ ಕಾರ್ಖಾನೆ ಸಂಟೋರಿ (SUNTORY) ಗೆ ತೆರಳಿದೆವು. ೧೯೨೦ ರಲ್ಲಿ ಪ್ರಾರಂಭವಾದ

ಈ ಕಂಪನಿ ಅತಿ ದೊಡ್ಡ ವಿದೇಶೀ ರಫ್ತುಗಾರನೂ ಆಗಿದೆ. ಈ ಕಂಪನಿಯಲ್ಲಿ ೨೦-೩೦ ವರ್ಷ ವಯಸ್ಸಾದ ವಿಸ್ಕಿ ಇದೆ. ವಯಸ್ಸಾದ ವಿಸ್ಕಿ ಎಂದರೆ ಬಾಯಿ ಬಿಡುವ ಪಾಶ್ಚಾತ್ಯರು ಆಸೆಯಿಂದ ಕೊಳ್ಳುತ್ತಾರೆ. ಇವರು ಕೂಡಾ ಮೊದಲು ತಮ್ಮ ಕಂಪನಿಯ ಇತಿಹಾಸ, ಉತ್ಪಾದನೆಯಬಗ್ಗೆ ಚಲನಚಿತ್ರ ತೋರಿಸಿದರು. ಪುಕ್ಕಟೆಯಾಗಿ ಬೀರು, ವಿಸ್ಕಿ ಮತ್ತು ಫಲರಸ ಕುಡಿಸಿದರು. ಚಿಕ್ಕ ವಿಸ್ಕಿ ಬಾಟಲ್ ಉಡುಗೊರೆ ನೀಡಿದರು. ನಮ್ಮೊಂದಿಗಿದ್ದ ಮುಂಬ ಯಿಯ ವ್ಯಾಪಾರಿಯೊಬ್ಬರು ನನ್ನ ಪಾಲಿನ ಸೀಸೆಯನ್ನೂ ತೆಗೆದುಕೊಂಡರು. ಈ ಕಂಪನಿಯಲ್ಲಿ ಅತಿ ಕಡಿಮೆ ಜನರಿಂದ ಕೆಲಸ ಮಾಡಲ್ಪಡುತ್ತದೆ, ಕುಡಿಯುವ ಪೇಯವಾದ್ದರಿಂದ ಮನುಷ್ಯನ ಕೈ ತಾಕಿದರೆ ಅಶುದ್ಧವಾಗುತ್ತದೆಂದು ಬಹುತೇಕ ಯಂತ್ರ ಸಹಾಯದಿಂದಲೇ ಕೆಲಸ ನಡೆವಂತೆ ಮಾಡಿದ್ದಾರೆ. ಇವರ ಉಗ್ರಾಣ ದಲ್ಲಿ ತಲೆಯೆತ್ತಿ ನೋಡುವಷ್ಟು ಮಾಲು ಶೇಕರವಾಗಿರುತ್ತದೆ. ಜಪಾನಿನಲ್ಲಿ ವಿಸ್ಕಿ ತಯಾರಿಸಲೆಂದು ವಿಪರೀತ ಬಾರ್ಲಿ ಬೆಳೆಯುತ್ತಾರೆ.

ನಮ್ಮ ಟೂರಿನ ಕಡೆಯ ಹಂತವಾಗಿ ಜಪಾನ್ ಸಿಲ್ಕ್ ಸೆಂಟರಿಗೆ ತೆರಳಿ ದೆವು. ಅಲ್ಲಿ ನಮಗೆ ಜಪಾನ್ ಸಿಲ್ಕ್ ಇತಿಹಾಸ ಮತ್ತು ಸ್ಯಾಂಪಲ್ ರೇಷ್ಮೆ ನೀಡಿದರು. ಅನೇಕರು ಅನೇಕ ರೇಷ್ಮೆ ಉಡುಗೊರೆಗಳನ್ನು ಖರೀದಿಸಿದರು. ಮೈಸೂರಿನವರಾದ ನಮಗೆ ಮೈಸೂರು ರೇಷ್ಮೆಗಿಂತ ಅದೇನೂ ವಿಶೇಷವೆನಿಸ ಲಿಲ್ಲ. ಟೋಕಿಯೋದ ಕೆಂಪೇಗೌಡ ರೋಡ್ ಮತ್ತು ಚಿಕ್ಕಪೇಟೆ ಎಂದರೆ-ಗಿಂಜಾ. ಈ ರಸ್ತೆಯಲ್ಲಿ ಈ ದೇಶದ ಎಲ್ಲಾ ಕಂಪನಿಯ ಷೋ ರೂಮ್‌ಗಳಿವೆ. ಬೃಹ್ಮಾಂಡಗಾತ್ರದ ಸ್ಟೋರ್‌ಗಳಿವೆ. ಅತಿವೆಚ್ಚದ ರೆಸ್ಟೋರಾ ಗಳಿವೆ. ಅಪ್ಸರಾಲೋಕದ ನೈಟ್ ಕ್ಲಬ್‌ಗಳಿವೆ, ಸಿನಿಮಾಗಳಿವೆ, ಏನೆಲ್ಲಾ ಇದೆ. ಮುಖ್ಯವಾಗಿ ಪ್ರವಾಸಿಗಳು ಇಲ್ಲಿಗೆ ಹೋಗುವುದು ತೆರಿಗೆ ವಿನಾಯಿತಿ ಅಂಗಡಿಗಳಿಗಾಗಿ. ಪಾಸ್‌ಪೋರ್ಟ್ ತೋರಿಸಿದರೆ ತೆರಿಗೆಯಿಲ್ಲದೆ ಸಾಮಾನು ಗಳು ದೊರೆಯುತ್ತವೆ. ಆದರೆ ಹೀಗೆ ಕೊಂಡ ಸಾಮಾನು ದೇಶದಿಂದ ಹೊರಗೆ ಹೋಗಬೇಕು. ಅಕಸ್ಮಾತ್ ನೀವು ದೇಶದಲ್ಲಿಯೇ ಉಳಿವ ನಿರ್ಧಾರ ಮಾಡಿದರೆ ತೆರಿಗೆ ವಿನಾಯಿತಿಯಿಂದ ಕೊಂಡ ಸಾಮಾನಿಗೆ ಕರ ತೆರಬೇಕು. ವಿಮಾನ ನಿಲ್ದಾಣದಲ್ಲಿ ಸುಂಕದ ಅಧಿಕಾರಿಗಳು ನೀವು ಖರೀದಿಸಿದ ಸಾಮಾನಿನ

ಪಟ್ಟಿಯೊಂದಿಗೆ ತಯಾರಿರುತ್ತಾರೆ. ಅಲ್ಲಿ ಖಾತ್ರಿಯಾದರೆ ಆಯಿತು, ರಾತ್ರಿ ಕಾಲದಲ್ಲಿ ಗಿಂಜಾ ಅಮರಾವತಿಯೆಂದರೆ ಸರಿಯೇ, ಎಲ್ಲಿ ನೋಡಿದರಲ್ಲಿ ವಾರಾಂಗನೆಯರು ಮತ್ತು ಅವರ ದಳ್ಳಾಳಿಗಳು ಜಪಾನಿನ ಬೊಕ್ಕಸಕ್ಕೆ ಗಿಂಜಾ ತುರ್ತಾಗಾಲುವೆಯಂತೆ ಹರಿಯುತ್ತದೆ.

ಟೋಕಿಯೋಕ್ಕಿಂತ ಮುಂಚೆ ಜಪಾನಿನ ರಾಜಧಾನಿ ಕಾಮಕುರಾ (KAMAKURA). ಕಾಮಕುರಾದಲ್ಲಿ ಎಲ್ಲರನ್ನೂ ಆಕರ್ಷಿಸುವುದು ಬಯಲಿನಲ್ಲಿ ಕಟ್ಟೆಯ ಮೇಲೆ ಸುಖಾಸನ ಹಾಕಿ ಕುಳಿತ ಬೃಹತ್ ಕಂಚಿನ ಬುದ್ಧ. ೧೨೫೨ ನೇ ವರ್ಷದಲ್ಲಿ ಕಂಚಿನಲ್ಲಿ ಎರಕಹೊಯ್ದು ತಯಾರಿಸಿದ ಈ ಬುದ್ಧನ ಪ್ರತಿಮೆ ಪುರುಷೋತ್ತಮ ಎನಿಸಿಕೊಳ್ಳಲು ಅರ್ಹವಾಗಿದೆ, ಈ ಪ್ರತಿಮೆಯ ಮೇಲೆ ಕಟ್ಟಿದ ಕಟ್ಟಿಗೆಯ ಗುಡಿ ಸಮುದ್ರರಾಯನ ಆಟೋಪಕ್ಕೆ ಸಿಲುಕಿ ಇಲ್ಲವಾಗಿದೆ. ಆದರೆ ಸ್ಥಿತಪ್ರಜ್ಞನಾದ ಬುದ್ಧ ಆಕಾಶವನ್ನೇ ತಲೆಗೆ ಕೊಡೆಯಾಗಿ ಮಾಡಿಕೊಂಡು ಅಮರನಾಗಿದ್ದಾನೆ. ಈ ಮೂರ್ತಿಯ ಮುಖದ ಮೇಲಿನ ಮುಗ್ಧ ಮಂದಹಾಸ ಅದ್ವಿತೀಯವಾಗಿದೆ. ಮೂರ್ತಿಯ ಒಳಗಡೆ ಟೊಳ್ಳಾಗಿರುವುದಲ್ಲದೆ ನೋಡಲು ಪ್ರವೇಶವಿದೆ.

ಕಾಮಕುರಾದಲ್ಲಿ ಕರುಣೆಯ ದೇವರ ಗುಡಿಯೊಂದಿದೆ, ಬುದ್ಧನಂತೆಯೇ ಇರುವ ಮೂರ್ತಿಗೆ ೧೧ ತಲೆಗಳನ್ನು ಮಾಡಿ ಚತುರ್ಭುಜಗಳನ್ನು ನಿರ್ಮಿಸಿ ಬೇರೆ ಬೇರೆ ಆಯುಧಗಳನ್ನು ನೀಡಿದ್ದಾರೆ. ಇಂದಿಗೂ ಇಲ್ಲಿ ಪೂಜೆ ನಡೆಯುತ್ತದೆ. ಕ್ರೈಸ್ತ ದೇವಾಲಯಗಳಲ್ಲಿ ಹಚ್ಚಿದಂತೆ ಮೇಣದಬತ್ತಿಯನ್ನಾಗಲೀ, ಹಿಂದೂ ದೇವಾಲಯದಲ್ಲಿ ಹಚ್ಚಿದಂತೆ ಊದುಬತ್ತಿಯನ್ನಾಗಲೀ ಹಚ್ಚುತ್ತಾರೆ ಭಕ್ತರು. ಬೃಹದಾಕಾರದ ಕರುಣೆಯ ದೇವತೆಯ ಕಣ್ಣಲ್ಲಿ ಕರುಣೆ ನಿಜವಾಗಿ ಉಕ್ಕಿಹರಿಯುತ್ತದೆ. ಹತ್ತಿರದಲ್ಲಿಯೇ ಬೌದ್ಧ ವಿಹಾರಗಳಿವೆ. ಈ ವಿಹಾರಗಳಲ್ಲಿ ಚಲಿಸುವಾಗ ಸನಾತನ ಕಾಲದಲ್ಲಿ ಇಂತಹ ವಿಹಾರಗಳಲ್ಲಿ ವಿದ್ಯಾಭ್ಯಾಸ ನಡೆಯುತ್ತಿದ್ದ ಛಾತ್ರನಿಗೆ ಯಾವ ಆನಂದ ದೊರೆಯುತ್ತಿತ್ತೆಂದು ಊಹಿಸಲು ಯತ್ನಿಸಿದೆ. ಬೆಟ್ಟದ ತಪ್ಪಲಿನ ಸ್ಥಳ, ಗಗನಾಚ್ಛಾದಿತ ವೃಕ್ಷಗಳು, ಜುಳು ಜುಳು ಹರಿಯುವ ಚಿಕ್ಕ ನಿರ್ಝರಿಣಿ. ಅದರ ಪಥದಲ್ಲಿ ಉಂಟಾದ ಜಲಪಾತ. ಅಲ್ಲೊಂದು ಮೂಲೆಯಲ್ಲಿ ಬೃಹತ್ ಗಂಟೆ. ಇಲ್ಲಿ ದಾರಿಯಲ್ಲಿ

ಎಡಬಲಗಳಿಗೆ ಕಂದೀಲು ಕಂಬ. ವಸತಿಗಾರರಿಗೆ ಚಿಕ್ಕ ಚಿಕ್ಕ ಪಂಚವಟಿಗಳು ಧ್ಯಾನಕ್ಕೆ ಮಂದಿರ· ಅಧ್ಯಯನಕ್ಕೆ ಪಾಠಶಾಲೆ, ದಾರಿ ತೋರಿಸಲು ಗುರು. ಮತ್ತೇನು ಬೇಕಾಗಿತ್ತು ?

ನಗರ ಮಧ್ಯದಲ್ಲಿ ಜಪಾನಿನ ಪುರಾತನ ಅರಸನ ಸ್ಮರಣೆಗೆ ನಿರ್ಮಿಸಲ್ಪಟ್ಟ ಬೌದ್ಧಾಲಯ ಒಂದಿದೆ. ಆಲಯಕ್ಕಿಂತ ಆಲಯಕ್ಕೆ ಕರೆದೊಯ್ವ ಮಾರ್ಗ ಆಕರ್ಷಕವಾಗಿದೆ. ಈ ಆಲಯದಲ್ಲಿರುವ ಚಿಕ್ಕ ವಸ್ತುಸಂಗ್ರಹಾಲಯದಲ್ಲಿ ಕೆಲ ಅಮೂಲ್ಯ ವಿಗ್ರಹಗಳಿವೆ.

ಕಾಮಕುರಾ ಸಮುದ್ರತೀರ ಪ್ರಸಿದ್ಧವಾದುದು. ನಾಲ್ಕಾರು ಮೈಲು ಉದ್ದದ ಈ ತೀರದಲ್ಲಿ ೨೪ ಗಂಟೆ ಜಪಾನೀಯರನ್ನು ಕಾಣಬಹುದು. ಮೈಸುಡುವ ಬಿಸಿಲಲ್ಲಿ ಅರೆಬೆತ್ತಲೆಯಾಗಿ ಮಲಗಿದ ಹೆಣ್ಣು ಗಂಡು ಈ ತೀರಕ್ಕೆ ಅಲಂಕಾರ.

ಕಾಮಕುರಾಕ್ಕಿಂತ ಮುಂಚೆ ಜಪಾನಿನ ರಾಜಧಾನಿಯಾಗಿದ್ದುದು ಕ್ಯೋಟೋ ಮತ್ತು ನಾರಾ. (KYOTO AND NARA) ಪ್ರಥಮತಃ ನಾರಾ ಜಪಾನಿನ ರಾಜಧಾನಿಯಾಗಿತ್ತು. ಆದರೆ ಧಾರ್ಮಿಕ ಸಂಸ್ಥೆಗಳು ಪ್ರಬಲವಾಗಿ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಲು ಹವಣಿಸುತ್ತಿದ್ದುದನ್ನು ಅರಿತ ಓರ್ವ ಅರಸು ರಾಜಧಾನಿಯನ್ನು ಕ್ಯೋಟೋಕ್ಕೆ ಕೊಂಡೊಯ್ದನು. ಈ ಸ್ಥಳಗಳನ್ನು ನೋಡುವ ಕಾತುರದಿಂದ ಜಪಾನ್ ಟ್ರಾವಲ್ ಬ್ಯೂರೋ ಅವರ ಎರಡು ದಿನಗಳ ಪ್ರವಾಸವನ್ನು ಸೇರಿದೆ· ಟೋಕಿಯೋದಿಂದ ಬುಲೆಟ್ ಎಕ್ಸ್‌ಪ್ರೆಸ್‌ನಲ್ಲಿ ಕ್ಯೋಟೋಕ್ಕೆ ತೆರಳಿಸುತ್ತಾಡಿ ಮಾರನೆಯ ದಿನ ಮತ್ತೆ ಬುಲೆಟ್ ಎಕ್ಸ್‌ಪ್ರೆಸ್‌ನಲ್ಲಿ ಮರಳುವುದು ಕಾರ್ಯಕ್ರಮ. ಗಂಟೆಗೆ ೧೩೫ ಮೈಲು ಚಲಿಸುವ ಈ ರೈಲಿನಲ್ಲಿ ಟೋಕಿಯೋ ಬಿಟ್ಟೆವು. ಪ್ರತಿಯೊಬ್ಬರಿಗೆ ಪ್ರತ್ಯೇಕವಾದ ಆರಾಮಾಸನಗಳಿವೆ. ಟಿಕೆಟ್ ನೀಡುವಾಗ ಕಂಪಾರ್ಟ್‌ಮೆಂಟ್ ನಂಬರ ಮತ್ತು ಸೀಟ್ ನಂಬರು ಕೂಡಾ ತಿಳಿಸುತ್ತಾರೆ. ಪ್ಲಾಟ್‌ಫಾರಂನಲ್ಲಿ ಇಂಥ ನಂಬರಿನ ಕಂಪಾರ್ಟ್‌ಮೆಂಟ್ ಇಂಥಲ್ಲೇ ಬರುತ್ತದೆ ಎಂದು ಫಲಕಗಳಿರುತ್ತವೆ. ಸುಲಭವಾಗಿ ಗಲಭೆಯಿಲ್ಲದೆ ನಮ್ಮ ಸ್ಥಳ ನಮಗೆ ದೊರೆಯುತ್ತದೆ. ಪ್ರತಿಯೊಂದು ಕಂಪಾರ್ಟ್

ಮೆಂಟಿನ ಕೊನೆಯಲ್ಲಿ ಹೆಚ್ಚಿನ ಲಗ್ಗೇಜಿಗೆ ರ್‍ಯಾಕ್, ಕಸದಬುಟ್ಟಿ, ವಾಷ್ ರೂಮ್ ಮತ್ತು ಕ್ರ್ಯೂವ್ (CREW) ಕೋಣೆ ಇರುತ್ತದೆ. ರೈಲಿನ ಮಧ್ಯಭಾಗಕ್ಕೆ ಸರಿಯಾಗಿ ಬಫೆ (BUFFET) ಕಾರ್. ಒಂದು ಕಂಪಾರ್ಟ್‌ಮೆಂಟಿನಿಂದ ಇನ್ನೊಂದಕ್ಕೆ ಸಾಗಲು ದಾರಿಯಿರುತ್ತದೆ. ಬಾಗಿಲುಗಳು ತಮ್ಮಷ್ಟಕ್ಕೆ ತಾವೇ ತೆರೆದುಕೊಂಡು ಪಥಿಕರಿಗೆ ದಾರಿ ನೀಡಿ ಮತ್ತೆ ಮುಚ್ಚಿಕೊಳ್ಳುತ್ತವೆ. ಬಫೆ ಕಾರ್ ಹತ್ತಿರವೇ ಟೆಲಿಫೋನ್ ಇರುತ್ತದೆ. ಅಲ್ಲಿಂದ ನೀವು ಎಲ್ಲಿಗಾದರೂ ಫೋನ್ ಮಾಡಬಹುದು. ರೈಲಿಡೀ ಏರ್‌ಕಂಡಿಷನ್ ಮಾಡಿದ್ದಾರೆ. ಬಫೆ ಕಾರಿನ ಕೆಲಸಗಾರರು ಅಲ್ಲಿ ಮಾರುವುದಲ್ಲದೆ ಪ್ರತಿಯೊಂದು ಕಂಪಾರ್ಟ್‌ಮೆಂಟಿಗೂ ತಿಂಡಿ ತಿನಿಸು, ಎಲ್ಲ ನಮೂನೆಯ ಪಾನೀಯ ಮಾರಲು ಬರುತ್ತಾರೆ. ಜಪಾನರು ಬಹುತೇಕ ಮಾದಕ ಪಾನೀಯ ಸೇವಿಸುತ್ತಾರೆ. ಪ್ರತಿಯೊಂದು ಆಸನದ ಮುಂದೆ ಬೂದಿ ಕೆಡವಲು ಟ್ರೇ ಮತ್ತು ತಿನಿಸಿಗಾಗಿ ಚಿಕ್ಕ ಮಡಿಸುವ ಟೇಬಲ್ ಇರುತ್ತವೆ. ಅತ್ಯಾಧುನಿಕ ಸ್ಪ್ರಿಂಗ್ ತಂತ್ರದ ಮೇಲೆ ಈ ರೈಲು ನಿರ್ಮಿತವಾಗಿರುವ ಕಾರಣ ವೇಗವೇ ನಮಗೆ ತಿಳಿಯುವುದಿಲ್ಲ. ರೈಲು ಸೀಟಿ ಊದಿದ್ದಂತೂ ನಾನು ಕೇಳಲೇ ಇಲ್ಲ.

ಈ ಪ್ರವಾಸದಲ್ಲಿ ಸ್ವಿಸ್ ಮಹನೀಯ ಶ್ರೀ ಫೆಡರಿಕ್ ಮ್ಯುಲ್ಲರ್ ನನಗೆ ಗೆಳೆಯರಾದರು. ಸ್ವಿಸ್ ಕಂಪನಿಯೊಂದರ ಟೈವಾನ್ ಆಫೀಸಿನಲ್ಲಿ ಕೆಲಸ ಮಾಡುವ ಇವರು ತುಂಬಾ ಸಹೃದಯರು. ಜಪಾನಿನಲ್ಲಿ ಇಂಗ್ಲಿಷ್ ಮಾತನಾಡುವ ಜನ ದೊರೆತರೆ ದೊರೆವ ಸಂತೋಷವನ್ನು ಬಲ್ಲವರೇ ಬಲ್ಲರು. ನಾವು ಚರ್ಚಿಸದ ವಿಷಯವೇ ಉಳಿಯಲಿಲ್ಲ.

ಕ್ಯೋಟೋ ಸ್ಟೇಷನ್ ಹೋಟಲಿನಲ್ಲಿ ಲಂಚ್ ಆದ ಮೇಲೆ ೧೦೦೧ ಬುದ್ಧರ ದೇವಾಲಯಕ್ಕೆ ತೆರಳಿದೆವು. ಜಪಾನಿನಲ್ಲಿಯೇ ಅತಿ ದೊಡ್ಡ (ಉದ್ದದಲ್ಲಿ ಕಟ್ಟಿಗೆಯ ದೇವಾಲಯವಾದ ಇಲ್ಲಿ ಒಂದು ಸಾವಿರ ಚಿಕ್ಕ ಬುದ್ಧರು, ಮಧ್ಯದಲ್ಲಿ ಒಬ್ಬ ದೊಡ್ಡ ಬುದ್ಧನೂ ಸ್ಥಾಪಿಸಲ್ಪಟ್ಟಿದ್ದಾರೆ. ಕರ್ಪೂರದ ಮರದ ಕಾಂಡದಿಂದ ಮಾಡಲ್ಪಟ್ಟ ಈ ದೇವರುಗಳಿಗೆ ಬಂಗಾರದ ಲೇಪ ಮಾಡಲಾಗಿದೆ. ಕರುಣೆಯ ದೇವರಂತೆ-ಅನೇಕ ಕೈ, ಕಿರೀಟ, ವಿವಿಧ ಶಸ್ತ್ರಾಸ್ತ್ರ ಧಾರಣೆ ಮಾಡಿದ್ದಾರೆ. ಹಿಂದೂ ಸಂಪ್ರದಾಯದ ಪ್ರಖರವಾದ ಪ್ರಭಾವ

ಮಹಾಯಾನ ಸಂಪ್ರದಾಯದ ಮೇಲೆ ಆದುದರ ಪರಿಣಾಮ ಈ ಎಲ್ಲಾ ಅಲಂಕಾರ ಮತ್ತು ವೈಭವ. ಈ ದೇವಾಲಯದ ಹಿಂಬದಿಯಲ್ಲಿ ಒಂದು ಕೊನೆಯಿಂದ ಇನ್ನೊಂದು ಕೊನೆಗೆ ಬಾಣ ಬಿಡುವ ಸ್ಪರ್ಧೆ ಪ್ರತಿ ವರ್ಷ ನಡೆಯುತ್ತದೆ. ನಮ್ಮ ದೇವಾಲಯಗಳಲ್ಲಿರುವಂತೆ ಇಲ್ಲಿಯೂ ದ್ವಾರ ಪಾಲಕರಿದ್ದಾರೆ. ಆದರೆ ಈ ದ್ವಾರಪಾಲಕರು ದುಷ್ಟ ಶಕ್ತಿಗಳನ್ನು ದೇವಾಲಯದಿಂದ ಪ್ರತಿಬಂಧಿಸಲೆಂದು ಉಗ್ರರೂಪ ತಾಳಿದ್ದಾರೆ. ಬಲಗಡೆಯ ದ್ವಾರಪಾಲಕ 'ಆ' ಎಂದರೆ ಎಡಗಡೆಯ ದ್ವಾರಪಾಲಕ 'ಉಮ್' ಎನ್ನುತ್ತಾನೆ 'ಆ' ಎಂದರೆ ಆರಂಭ, 'ಉಮ್' ಎಂದರೆ ಮುಕ್ತಾಯವಂತೆ. ಎಲ್ಲ ವಿಗ್ರಹ ಗಳನ್ನೂ ಕಟ್ಟಿಗೆಯಲ್ಲಿಯೇ ಮಾಡಿದ್ದಾರೆ. ಇಲ್ಲಿಯ ಬುದ್ಧಬಿಕ್ಷುಗಳು ಪಾಲೀ, ಸಂಸ್ಕೃತ ಪಠಿಸುತ್ತಾರೆ. ಇಲ್ಲಿಯ ಮುಖ್ಯವಾದ ಆಧುನಿಕ ದೇವಾಲಯ ವೆಂದರೆ ಎರಡನೆಯ ಪ್ರಪಂಚ ಸಮರದ ನಂತರ ನಿರರ್ಥಕ ಯುದ್ಧದಲ್ಲಿ ಜೀವ ತೆತ್ತ ಅನಂತ ಜೀವಗಳನ್ನು ಸಮಾಧಾನಪಡಿಸಲು ೧೯೫೫ ರಲ್ಲಿ ನಿರ್ಮಿಸಿದ ಥೋಜಾನ್ ಕ್ಯಾನನ್ ಆಲಯ (THOJAN CANNON) ದೇವಾಲಯದ ಛಾವಣಿಯ ಹಿಂದೆ ಬೃಹದಾಕಾರವಾಗಿ ಸಿಮೆಂಟ್ ಕಾಂಕ್ರೀಟ್ ನಲ್ಲಿ ಕರುಣೆಯ ದೇವರನ್ನು ನಿರ್ಮಿಸಿದ್ದಾರೆ. ಕಂಚಿನ ಬುದ್ಧನಂತೆ ಈ ಮೂರ್ತಿ ಅರ್ಥಗರ್ಭಿತವಾಗಿ ಸಕಲ ಮಾನವರೆಡೆ ಕೈ ಮಾಡಿ ಶಾಂತಿ ಸ್ಥಾಪಿಸಲು ಕರೆ ನೀಡುವಂತೆ ತೋರುತ್ತದೆ. ದೇವಾಲಯದ ಒಳ ಆವಾರದಲ್ಲಿ ಪ್ರವೇಶಿಸಿ ದೊಡನೆ ಈ ಮೂರ್ತಿಯ ಪ್ರಭಾವಕ್ಕೊಳಗಾದವರು ಬೇಗನೆ ತಪ್ಪಿಸಿ ಕೊಳ್ಳುವುದು ಕಷ್ಟಸಾಧ್ಯ. ಜೆನ್ (ZEN BUDDHISM) ಜಾತಿಯ ಗುಡಿಗಳು ಇಲ್ಲಿ ಅನೇಕವಾಗಿವೆ. ಕೆಲವು ಗುಡಿಗಳು ಸಾಕಷ್ಟು ಉದ್ಯಾನ ಪ್ರದೇಶವನ್ನೊಳಗೊಂಡಿವೆ. ಇಂಥಲ್ಲಿ ಪ್ರಸಿದ್ಧವಾದ ಜಪಾನೀ ತೋಟವನ್ನು ನಿರ್ಮಿಸಿರುತ್ತಾರೆ.

ನಾನು ಮತ್ತು ಶ್ರೀ ಮ್ಯುಲ್ಲರ್ ಸಾಯಂಕಾಲದ ವೇಳೆಯಲ್ಲಿ ಕ್ಯೋಟೋ ಪೇಟೆಗಳಲ್ಲಿ ಸುತ್ತಾಡಿದೆವು. ಇಲ್ಲಿಯ ಒಂದು ವಿಶೇಷವೆಂದರೆ ಹೋಟೆಲ್‌ನವರು ತಮ್ಮ ಬಾಗಿಲಿನ ಹತ್ತಿರ ಗಾಜಿನ ಕಪಾಟದಲ್ಲಿ ತಾವು ತಯಾರಿಸುವ ಬೇರೆ ಬೇರೆ ತಿನಸುಗಳು ಪ್ಲೇಟಿಗೆ ಹಾಕಿ ಎಷ್ಟೆಷ್ಟು ನೀಡು

ತ್ತೇವೆ, ಪ್ರತಿಯೊಂದು ತಿನಸಿನ ಬೆಲೆ ಎಷ್ಟು ಎಂಬುದನ್ನು ಪ್ರದರ್ಶಿಸಿರುತ್ತಾರೆ. ಇವೆಲ್ಲಾ ಪ್ಲಾಸ್ಟಿಕ್ ಮಾದರಿಗಳು. ಹೋಟೆಲ್ ಪ್ರವೇಶಕ್ಕೆ ಮುಂಚೆ ಪ್ರತಿಯೊಬ್ಬರೂ ಗಾಜಿನ ಕಪಾಟಿನಲ್ಲಿ ನೋಡಿ ತಮಗೆ ಬೇಕಾದ ವಸ್ತುವನ್ನು ಆರಿಸಿಕೊಂಡೇ ಒಳಸೇರುತ್ತಾರೆ. ಮೆನೂ ಗಲಾಟೆಯಿಲ್ಲ. ದರದ ದಾಂಧಲೆಯಿಲ್ಲ. ಆದರೆ ಭಾಷೆಯ ಕಷ್ಟ ಮಾತ್ರ ಉಂಟು.

ಇಲ್ಲಿಯ ಜಿಯಾನ್ (GION) ಸಾಂಸ್ಕೃತಿಕ ಕೇಂದ್ರದಲ್ಲಿ ಜಪಾನೀ ಸಾಂಸ್ಕೃತಿಕರ ಕಾರ್ಯಕ್ರಮವಿದೆ ಎಂದು ಕೇಳಿ ಟಿಕೆಟ್ ಪಡೆದೆವು. ಟಿಕೆಟ್‌ನಲ್ಲಿ ಹಾಕಿದ ನಕ್ಷೆ ನೋಡಿ ಇದು ಇಲ್ಲಿಯೇ ಎರಡನೆಯ ರಸ್ತೆಯಲ್ಲಿದೆ, ನಮಗೂ ಕೊಂಚ ವ್ಯಾಯಾಮವಾದಂತಾಯಿತು, ಉಳಿತಾಯವೂ ಆಯಿತು ಎಂದುಕೊಂಡು ನಕ್ಷೆಯ ಪ್ರಕಾರ ನಡೆದು ಹೊರಟೆ. ಮುಕ್ಕಾಲು ಗಂಟೆ ಕಾಲ ನಡೆದರೂ ಆ ರಸ್ತೆಯಾಗಲೀ ಆ ಹೆಸರಿನ ಸಂಸ್ಥೆಯಾಗಲೀ ಕಂಡುಬರಲಿಲ್ಲ. ಅಲ್ಲಿಯೇ ಹೋಗುತ್ತಿದ್ದ ಪೋಲಿಸನಿಗೆ ಕೇಳಿದೆ. ಅವನಿಗೆ ಇಂಗ್ಲಿಷ್ ಬಾರದು. ಸರಿ, ಇನ್ನೂ ಮುಂದೆ ಹೋಗಿ ಎಡಕ್ಕೆ ತಿರುಗಿ ಮತ್ತೆ ಮೂರನೆಯ ರಸ್ತೆಯಲ್ಲಿ ಬಲಕ್ಕೆ ತಿರುಗಬೇಕೆಂದು ಅರ್ಥ ಬರುವಂತೆ ಹೇಳಿದ. ಇನ್ನೊಂದು ಕಾಲುಗಂಟೆ ಆ ದಿಕ್ಕಿನಲ್ಲಿ ಪಯಣಿಸಿ ಕಡೆಗೆ ರೋಸಿ, ಟ್ಯಾಕ್ಸಿ ಹಿಡಿಯಲು ಪ್ರಯತ್ನಿಸಿದೆ. ಕಾರ್ಯಕ್ರಮಕ್ಕೆ ಇನ್ನೂ ಅರ್ಧ ಗಂಟೆ ಏನೋ ಇದೆ. ಆದರೆ ಒಂದು ಟ್ಯಾಕ್ಸಿಯವನೂ ನಿಲ್ಲಿಸಲೊಲ್ಲ. ಅದೃಷ್ಟವಶಾತ್ ಅಲ್ಲೊಂದು ರೈಲ್ವೇ ಗೇಟ್ ಇತ್ತು. ಅಲ್ಲಿ ಸಿಗ್ನಲ್ ನೀಡುತ್ತಿದ್ದ ಆಸಾಮಿಯನ್ನು ಹೇಗಾದರೂ ಒಂದು ಟ್ಯಾಕ್ಸಿ ದೊರಕಿಸಿಕೊಡಲು ಕೇಳಿದೆ. ಅವನ ಪ್ರಯತ್ನವೂ ನಿರರ್ಥಕವಾಯಿತು. ಅಷ್ಟರಲ್ಲೆ ನಮ್ಮ ಪರದಾಟವನ್ನು ಕಂಡ ಓರ್ವ ಮೋಟಾರ್ ಸೈಕಲ್ ಸವಾರಿಗ ನನ್ನೊಂದಿಗೆ ಬನ್ನಿ, ನಾನು ನಿಮ್ಮನ್ನಲ್ಲಿ ಬಿಡುತ್ತೇನೆ ಎಂದ. ಒಂದು ನಿಮಿಷ ಮನಸ್ಸು ಡೋಲಾಯಮಾನವಾಯಿತು ಈತನೊಂದಿಗೆ ಹೋದರೆ ಇವನಾವುದೋ ಗಲ್ಲಿಗೆ ಕರೆದೊಯ್ದು ಇದ್ದುದನ್ನೆಲ್ಲಾ ಕಸಿದುಕೊಂಡು ಕೈಬಿಟ್ಟರೆ ನನ್ನ ಗತಿಯೇನು ? ಎಂದು ಯೋಚಿಸಿದೆ. ಆದರೆ ಮರುಕ್ಷಣ ಧೈರ್ಯಮಾಡಿ ಅವನ ಹಿಂದೆ ಹತ್ತಿದೆ ಅವನು ಹೋದ ವೇಗ ಮತ್ತು ಗಲ್ಲಿಗಳ ಆ ಷಾರ್ಟ್‌ಕಟ್ ಮಾರ್ಗ ನೆನೆಸಿಕೊಂಡರೆ ಇಂದಿಗೂ ಅಧೈರ್ಯವೆನಿಸು

ತ್ತದೆ. ಇವನಾವನೋ ರಾಕೆಟ್ ಮನುಷ್ಯನ ಕೈಯಲ್ಲಿ ನನ್ನ ಜೀವವನ್ನಿತ್ತೆನಲ್ಲಪ್ಪಾ ಎನಿಸಿತ್ತು. ಅದರಲ್ಲಿ ಆ ಇಕ್ಕಟ್ಟಾದ ಬೀದಿಗಳಲ್ಲಿ ಹಿಡಿಯಲಾರದಷ್ಟು ಜನ, ದನ, ವಾಹನ. ಕಡೆಗೊಮ್ಮೆ ಆ ಮಹನೀಯ ಜಿಯಾನ್ ಸೆಂಟರ್ ಸೇರಿದಾಗ ಕೃತಜ್ಞತೆ ಸೂಚಿಸಿ ಕೈಮುಗಿದೆ. ಆತನಿಗೆ ಇಂಗ್ಲಿಷ್ ಬಾರದು.

ಇಲ್ಲಿ ಎರಡು ತಾಸಿನ ಕಾರ್ಯಕ್ರಮದಲ್ಲಿ ಜಪಾನಿನ ಕಲಾಸಂಪ್ರದಾಯದ ಕಿರುಪರಿಚಯವನ್ನು ಮಾಡಿಕೊಟ್ಟರು. ಚಹಾ ಉತ್ಸವ, ಕ್ಯೋಟೋ ವಾದ್ಯವಾದನ, ಬೊಂಬೆಯಾಟ, ಕ್ಯೋಟೋ ನೃತ್ಯ, ಹಾಸ್ಯನಾಟಕ ತೋರಿಸಲಾಯಿತು. ಕಾರ್ಯಕ್ರಮಗಳನ್ನು ಅತ್ಯಂತ ಆಸಕ್ತಿಯಿಂದ ಶಕ್ತಿಮೀರಿ ರಂಜನೀಯವಾಗಿ ಮತ್ತು ಗಂಭೀರವಾಗಿ ಮಾಡಲು ಪ್ರಯತ್ನಿಸುತ್ತಾರೆ. ಕ್ಯೋಟೋ ವಾದ್ಯ ಭಾರತದಿಂದ ಬಂದಿತೆಂದು ಹೇಳಿದರು. ಆದರೆ ಚೈನಾದ ಮೂಲಕ ಇಲ್ಲಿಗೆ ರೇಷ್ಮೆ ರಸ್ತೆಯಲ್ಲಿ ಪಯಣ ಬೆಳೆಸುವಾಗ ಬದಲಾವಣೆ ಹೊಂದಿದಂತೆ ತೋರುತ್ತದೆ. ನಾದ ಮಾತ್ರ ವೀಣೆಗೆ ಹತ್ತಿರ ಹತ್ತಿರ ಬರುತ್ತದೆ. ನೃತ್ಯದಲ್ಲಿ ಭಾರತದ ಸಾಂಪ್ರದಾಯಿಕ ಛಾಯೆ ಕಾಣಬರುತ್ತದೆ ಮಿಕ್ಕ ಅನೇಕ ವಾದ್ಯಗಳು ಚೈನಾದಿಂದ ಇಲ್ಲಿಗೆ ಬಂದು ಜಪಾನೀ ಪ್ರಭಾವದಿಂದ ರೂಪುಗೊಂಡವು.

ಜಪಾನಿನ ಮೊದಲ ರಾಜಧಾನಿ 'ನಾರಾ'ಗೆ ಮರುದಿನ ಬೆಳಗಿನಲ್ಲಿ ತೆರಳಿದೆವು ಕ್ರಿ. ಶ. ೭೮೪ ರ ವರೆಗೆ ಮೊದಲ ಜಪಾನಿನ ರಾಜಧಾನಿಯಾಗಿದ್ದ ನಾರಾ ಸಂಸ್ಕೃತಿ ಪರಂಪರೆಯನ್ನೇ ಸೃಷ್ಟಿಸಿದೆ. ನಾರಾದ ಏಳು ಪ್ರಸಿದ್ಧ ಗುಡಿಗಳ ಪೈಕಿ ಹೊರ್ಯುಜೀ ಗುಡಿ ಅತಿ ಹಳೆಯದು. ಕ್ರಿ.ಶ. ೬೦೭ ರಲ್ಲಿ ಸಾಮ್ರಾಟ್ ಷೊ ಟೊಕು ಬೌದ್ಧ ಧರ್ಮ ಪ್ರಸಾರಕ್ಕಾಗಿ ಈ ದೇಗುಲವನ್ನು ಕಟ್ಟಿಸಿದ್ದನಂತೆ. ಭಾರತದಿಂದ ಚೈನಾಕ್ಕೆ ಪಸರಿಸಿದ ಬುದ್ಧ ಸಂದೇಶ ಅಲ್ಲಿಂದ ಕೊರಿಯಾದ ಮೂಲಕ ಜಪಾನಿಗೆ ಆಗತಾನೇ ಪ್ರವೇಶಿಸಿತ್ತು. ಚೈನೀಯರ ಪ್ರಭಾವವನ್ನು ೧೩೦೦ ವರ್ಷ ವಯಸ್ಸಾದ ಈ ಕಟ್ಟಿಗೆಯ ಸುಭದ್ರ ಕಟ್ಟಡದ ರಚನೆಯಲ್ಲಿ, ಇಲ್ಲಿಯ ಮೂರ್ತಿಶಿಲ್ಪ ವಿನ್ಯಾಸದಲ್ಲಿ, ಪಗೋಡಾ ನಿರ್ಮಾಣದಲ್ಲಿ ನಿಚ್ಚಳವಾಗಿ ಕಾಣಬಹುದು.

ಎರಡನೆಯದಾಗಿ ಸಾಮ್ರಾಟ್ ಷೋಮು ೮ ನೆಯ ಶತಮಾನದಲ್ಲಿ ಕಟ್ಟಿಸಿದ ತೋಡೈಜ್ ಗುಡಿಗೆ ಹೋದೆವು. ಈ ರಾಜರು ಕಟ್ಟಿಸಿದ ಮೂಲ ಗುಡಿ ಅಗ್ನಿಗೆ ಆಹುತಿಯಾದುದರಿಂದ ಈಗಿರುವ ಕಟ್ಟಡವನ್ನು ೧೭೦೯ರಲ್ಲಿ ನಿರ್ಮಿಸಿದರಂತೆ. ಈಗಿರುವ ಈ ದೇವಾಲಯವು ಪ್ರಪಂಚದಲ್ಲಿಯೇ ಅತಿ ದೊಡ್ಡ ಕಟ್ಟಿಗೆಯ ದೇವಾಲಯವಾಗಿದೆ. ಆದರೆ ಮೂಲ ದೇವಾಲಯವು ಸುಮಾರು ಇದರ ಎರಡರಷ್ಟಿತ್ತಂತೆ. ಈ ದೇವಾಲಯದಲ್ಲಿ ಪ್ರಪಂಚದಲ್ಲಿಯೇ ದೊಡ್ಡದಾದ ಕಂಚಿನ ಬುದ್ಧ ವಿಗ್ರಹವಿದೆ. ೫೩ ಅಡಿ ಎತ್ತರದ ಈ ಮಹಾಕಾಯನ ತೂಕ ನೂನೂರ ಐವತ್ತೆರಡು ಟನ್ನಿಗಿಂತ ಹೆಚ್ಚಂತೆ. ಹೊರಗಿನ ದ್ವಾರದಲ್ಲಿ ರಾಕ್ಷಸಾಕಾರದ ದ್ವಾರಪಾಲಕರಿದ್ದಾರೆ. ಮೂಲ ದೇವಾಲಯದ ಹೊರಗಿನ ಕಟ್ಟೆಯ ಮೇಲೆ ಅಂತಃಕರಣವುಕ್ಕಿಸುವ ವೈದ್ಯಕಾರ ಭಿಕ್ಷುವಿದ್ದಾನೆ. ಮಕ್ಕಳ ರೋಗ ಅನಿಷ್ಟ ನಿವಾರಣೆಗೆ ಈತನ ಹರಕೆ ಸಾಕಂತೆ. ಮಂದಿರದ ಒಳಗಡೆ ನೆಲ ಬಾನುಗಳಿಗೆ ಏಕವಾಗಿ ಕುಳಿತ ಅಖಂಡವಾದ ಮಂದಸ್ಮಿತವದನ ಬುದ್ಧನ ಅಮೋಘ ಮೂರ್ತಿ ಎತ್ತರವಾದ ಕಟ್ಟೆಯ ಮೇಲೆ ಪ್ರತಿಷ್ಠಾಪಿಸಲ್ಪಟ್ಟದೆ. ಸುಖಾಸನ ಹಾಕಿ ಧ್ಯಾನಮುದ್ರೆಯಲ್ಲಿ ಕುಳಿತ ಈ ಬುದ್ಧ, ಭುವನಮೋಹನ ಮೂರ್ತಿ. ಸುವರ್ಣ ಲೇಪಿತನಾಗಿದ್ದರೂ ಆಕರ್ಷಕವಾದ ದಯಾಮಯವಾದ ಬುದ್ಧನ ಮಾಯಕ ನಗೆಯನ್ನು ಒಮ್ಮೆ ಕಂಡವರು ಮರೆಯಲಾರರು. ಎಂತಹ ಪಾಪಿಗೂ ಭಕ್ತಿಯುಂಟಾಗಿ ದೀರ್ಘದಂಡ ಹಾಕಿ ಬುದ್ಧಂ ಶರಣಂ ಗಚ್ಛಾಮಿ ಎನ್ನುವ ಮನಸ್ಸಾಗುತ್ತದೆ. ಈ ಮೂರ್ತಿಯ ಹಿಂದೆ ಮುಂದೆ ನಾಲ್ಕು ಮೂಲೆಗಳಲ್ಲಿ ಮಹಾಗಾತ್ರದ ಕಟ್ಟಿಗೆಯ ಚಿತ್ರಗುಪ್ತ, ಚಂಡಶಾಸನ ಮತ್ತು ಯಮಧರ್ಮರ ಮೂರ್ತಿಗಳಿವೆ. ಜನರಲ್ಲಿ ಪಾಪಭೀತಿಯನ್ನುಂಟುಮಾಡಲೇನೋ ಈ ವಿಗ್ರಹಗಳು ಅಕರಾಳ-ವಿಕರಾಳ ರೂಪು ಧರಿಸಿವೆ.

ಇಲ್ಲಿಯ ಕಾಸುಗ ಎಂಬ ಶಿಂಟೊ (SHINTO) ದೇವಸ್ಥಾನ ವಿಶಿಷ್ಟವಾಗಿದೆ. ಈ ದೇವಾಲಯ ಒಂದು ಬೆಟ್ಟದ ಮೇಲೆ ಇದೆ. ಶಿಂಟೋಗಳು ಮೂರ್ತಿಪೂಜಕರಲ್ಲ. ಈ ದೇವಾಲಯದಲ್ಲಿ ಕಲ್ಲಿನ, ಮರದ ಮತ್ತು ಲೋಹದ ಒಟ್ಟು ಮೂರು ಸಾವಿರಕ್ಕೆ ಮಿಕ್ಕಿ ದೀಪಸ್ತಂಭಗಳಿವೆ. ಕೆಲವೊಂದು ದೀಪಸ್ತಂಭಗಳು ೧೦೦೦ ವರ್ಷ ಹಳತಾಗಿವೆ. ವರ್ಷಕ್ಕೆ ಎರಡು ಬಾರಿ ಈ ದೀಪಗಳೆಲ್ಲವನ್ನೂ ಮುಂಡಿಸುತ್ತಾರೆ.

ಆಗಸ್ಟ್ ೧೫ ಅಂತಹ ದಿನಗಳಲ್ಲಿ ಒಂದು. ಈ ಆಲಯವನ್ನು ಫುಜಿವಾರ ಎಂಬ ವಂಶಸ್ಥರ ವಿದ್ಯಾಭ್ಯಾಸಕ್ಕೆ ಶಾಲೆಯೆಂದೂ ಕಟ್ಟಲಾಗಿತ್ತಂತೆ. ಜಪಾನ್ ಶಿಲ್ಪಕಲೆಯಲ್ಲಿ ಈ ದೇವಾಲಯದ ಶಿಲ್ಪಕ್ಕೆ ವಿಶೇಷ ಸ್ಥಾನ ವಿದೆಯಂತೆ.

ಫ್ಯುಷಿಮಿ ಇನಾರಿ ದೇವಾಲಯ ಅಕ್ಕಿ ಮತ್ತು ಅನ್ನದ ದೇವರಿಗಾಗಿ ನಿರ್ಮಿತವಾಗಿದೆ. ಇದು ಒಂದು ಚಿಕ್ಕ ಬೆಟ್ಟದ ಮೇಲಿದೆ. ಈ ದೇವಸ್ಥಾನಕ್ಕೆ ಏರಿಹೋಗುವ ಮಾರ್ಗ ಮತ್ತು ಅಕ್ಕಪಕ್ಕದ ಚಿಕ್ಕ ಚಿಕ್ಕ ಅಂಗಡಿಗಳು ನಮ್ಮಲ್ಲಿಯ ತೀರ್ಥಕ್ಷೇತ್ರಗಳನ್ನು ನೆನಪಿಗೆ ತರುತ್ತದೆ. ಇನಾರೀ ದೇವಾಲಯಗಳಲ್ಲಿ ಅನೇಕ ನರಿಗಳ ಮೂರ್ತಿಗಳಿರುತ್ತವೆ. ಈ ದೇವಾಲಯಕ್ಕೆ ಭಕ್ತರು ಹೆಚ್ಚು. ಇಹದಲ್ಲಿ ಸುಖವನ್ನು ಬಯಸುವವರು ಈ ದೇವರಿಗೆ ನಡೆಕೊಳ್ಳುತ್ತಾರೆ. ಇಲ್ಲಿ ನಮಗೆ ಷಿಂಟೋ ನೃತ್ಯ ಕಾರ್ಯಕ್ರಮ ನೋಡುವ ಅವಕಾಶ ದೊರೆಯಿತು. ಈ ದೇವಾಲಯವನ್ನು ನೋಡುತ್ತಿರುವಾಗ ಧಾರಾಕಾರವಾಗಿ ಮಳೆ ಸುರಿಯಲಾರಂಭಿಸಿತು. ನಾವು ಬಂದ ವಾಹನ ಸುಮಾರು ಫರ್ಲಾಂಗ್ ದೂರದಲ್ಲಿತ್ತು. ಕೊಂಚ ಸಮಯದ ಮೇಲೆ ಮಳೆಯ ರಭಸ ಕಡಿಮೆಯಾದ ಕೂಡಲೇ ನಾನು ಮತ್ತು ಶ್ರೀ ಮ್ಯುಲ್ಲರ್ ವಾಪಸು ದಾರಿ ಹಿಡಿದೆವು. ಅರ್ಧ ರಾತ್ರಿಯಲ್ಲಿ ಚಿಕ್ಕ ಹೋಟೆಲ್ ಕಂಡ ನಾವು ಕೊಂಚ ಏನಾದರೂ ಉದರಶಾಂತಿ ನಡೆಸುವ ಎಂದು ಒಳಹೊಕ್ಕೆವು. ಅದೊಂದು ಜಪಾನೀ ಪದ್ಧತಿಯ ಹೋಟಲ್. ನೆಲಕ್ಕೆ ಮೆತ್ತೆ ಹಾಸಿ ಒರಗು ದಿಂಬು ಹಾಕಿ ಮುಂದೆ ಚಿಕ್ಕ ಮೇಜನ್ನಿರಿಸಿ ಅದರ ಮೇಲೆ ತಿಂಡಿ ತೀರ್ಥ ನೀಡುತ್ತಿದ್ದರು. ನಾವು ಕೊಂಚ ಕುಳಿತು ಕೋಕಾ ಕೋಲಾ ಹೀರಲು ತೊಡಗಿದೆವು. ಸುಮ್ಮನಾಗಿದ್ದ ಮಳೆ ಮತ್ತೆ ಸುರಿಯಲಾರಂಭಿಸಿತು. ನಮಗೆ ವಿವಂಚನೆ ಎನಿಸತೊಡಗಿತು. ಆದರೆ ಆ ಹೋಟಲ್ ಮಾಲಿಕಳು ನಮ್ಮ ಕಾತರವನ್ನು ಕಂಡು ನಮಗೆ ಒಂದೊಂದು ಕೊಡೆ ತೆಗೆದುಕೊಂಡು ದಾರಿ ತೋರಿದಳು. ಭಾಷೆಯ ಉಪಯೋಗವಿಲ್ಲದೆ ಭಾವನೆಯ ಉಪಯೋಗದಿಂದ ಆ ಮಹಿಳೆ ತೋರಿದ ಸಹಾನುಭೂತಿ ಮತ್ತು ಸಹಾಯಕ್ಕೆ ನಾವು ಋಣಿಗಳಾದೆವು.

ನಂತರ ಫುಷಿಮಿ ಮೊಮೋಯಾಮಾ ಅರಮನೆಗೆ ಹೋದೆವು. ೧೫೯೪ ರಲ್ಲಿ ತೋಯೋತೋಮಿ ಹಿಡಿಯೋಷಿ ಎಂಬ ಭೂಸ್ವಾಮಿ ಕಟ್ಟಿಸಿದ ಅರಮನೆಯ ತದ್ವತ್ ರೂಪವಿದು. ಹಿಡಿಯೋಷಿ ಜಪಾನಿನ ಅಗ್ರನಾಯಕ. ಮೊಮೋ ಯಾಮಾ ಕಾಲದ ಕಲೆ ಇತಿಹಾಸದ ಕುರಿತಾದ ಸಾಕಷ್ಟು ವಸ್ತುಗಳ ಪ್ರದರ್ಶ ನವನ್ನು ಇಲ್ಲಿ ಇಟ್ಟಿದ್ದಾರೆ. ಈ ಅರಮನೆಗೆ ಅಂಟಿದಂತೆ ವಿಶಾಲವಾದ ಮನೋರಂಜನೆ ಕೇಂದ್ರ ಮತ್ತು ಈಜುಗೊಳವಿದೆ. ಈ ಕಟ್ಟಡದ ವರ್ಣ ಸಂಯೋಜನೆ ಭಾರತೀಯ ಸಂಪ್ರದಾಯದ ಪ್ರಕಾರ ಉಜ್ವಲವಾಗಿದೆ. ಈ ಅರಮನೆಯ ಸುತ್ತ ನೂರಾರು ನವಿಲುಗಳು ವಾಸಿಸುತ್ತವೆ. ಇವು ಯಾರಿಗೂ ಹೆದರುವುದಿಲ್ಲ. ಯಾರನ್ನೂ ಲಕ್ಷಿಸುವುದಿಲ್ಲ.

ಕಡೆಯದಾಗಿ ನಾರಾದ 'ಜಿಂಕೆಗಳ ವನ'ಕ್ಕೆ ತೆರಳಿದೆವು. ನಾರಾದ ಬೌದ್ಧ ದೇವಾಲಯಕ್ಕೆ ಧಾರ್ಮಿಕ ಚಿಹ್ನವಾದ ಕನ್ನಡಿಯನ್ನು ಎಂದು ಜಿಂಕೆಯೊಂದು ಹೊತ್ತು ತಂದಿತೋ ಅಂದಿನಿಂದ ಇಲ್ಲಿ ಜಿಂಕೆ ಪವಿತ್ರವಾಗಿದೆ. ಐದು ನೂರು ಎಕರೆ ವಿಸ್ತೀರ್ಣದ ಈ ವನದಲ್ಲಿ ಸಾಧು ಜಿಂಕೆ ಮಂಥರ ಪುರದ ಆಕಳುಗಳಂತೆ ಅತ್ತಿತ್ತ ಓಡಾಡುತ್ತಿರುತ್ತವೆ. ಭಾವುಕರು ನೀಡುವ ಬಿಸ್ಕತ್ತು ತಿನ್ನುತ್ತಾ ತಿರುಗುತ್ತವೆ. ಗಂಡುಜಿಂಕೆಯ ಕೋಡುಗಳನ್ನು ವರ್ಷಕ್ಕೊಮ್ಮೆ ನಿಶ್ಚಿತ ತಿಥಿ ಮತ್ತು ನಕ್ಷತ್ರದಂದು ಹಿಡಿದು ಕತ್ತರಿಸುತ್ತಾರೆ. ಕತ್ತರಿಸಿದ ಈ ಕೋಡು ದೇವರ ಮುಡಿಪು. ಪವಿತ್ರ ವಸ್ತು. ಕ್ಯೋಟೋ ಮತ್ತು ನಾರಾಗಳ ಎರಡು ದಿನದ ಪ್ರವಾಸದ ಮುಕ್ತಾಯಘಟ್ಟವಾಗಿ ಮತ್ತೆ ಬುಲೆಟ್ ಎಕ್ಸ್‌ಪ್ರೆಸ್ ಹಿಡಿದೆವು. ಸಿಂಗಪುರದ ಡಾಕ್ಟರ್ ಮಾತ್ರರ್ ದಂಪತಿಗಳು ನಮಗೆ ಈ ಪ್ರವಾಸದಲ್ಲಿ ಪರಿಚಿತರಾದರು. ಅವರು ಸಿಂಗ ಪುರಕ್ಕೆ ಮರೆಯದೆ ಭೇಟಿ ನೀಡಲು ಮತ್ತೆ ಮತ್ತೆ ಹೇಳಿದರು. ಬುಲೆಟ್ ಎಕ್ಸ್‌ಪ್ರೆಸ್‌ನ ಆರಾಮ ಆಸನದಲ್ಲಿ ಕುಳಿತು ಒಂದು ಜೊಂಪು ನಿದ್ರೆ ಮಾಡುವು ದರೊಳಗೆ ಟೋಕಿಯೋ ಬಂದಿತ್ತು. ಶ್ರೀ ಮ್ಯುಲ್ಲರ್ ಬೀಳ್ಕೊಡುವಾಗ ಅನೇಕ ದಿನಗಳ ಪರಿಚಿತರನ್ನು ಬೀಳ್ಕೊಡುವಂತೆ ಕಂಠ ಗದ್ಗದಿತವಾಯಿತು. ಜೀವನವೇ ಹೀಗೆ.

ಮತ್ತೊಂದು ಅರ್ಧ ದಿನ ಟೋಕಿಯೋದಲ್ಲಿ ಸುತ್ತಾಡಿ ಹಾಂಕಾಂಗ್

ಗೆಂದು ಪಯಣಿಸಲು ಬಿ.ಓ.ಎ.ಸಿ. (BOAC) ಯ ವಿಮಾನ ಏರಿದೆ. ಈ ಸಂದರ್ಭದಲ್ಲಿ ಮದರಾಸಿನ ಸಿನಿಮಾ ಪ್ರೊಡ್ಯೂಸರ್ ಮತ್ತು ಮಾನವ ಕೇಶದ ವ್ಯಾಪಾರಿ ಶ್ರೀ ಚೌಧುರಿ ಪರಿಚಿತರಾದರು. ಆಂಧ್ರಪ್ರದೇಶದ ಏಲೂರಿನವ ರಾವ ಇವರು ತೆಲುಗರು. ಅವರಿಗೆ ತೆಲುಗು ಮಾತನಾಡುವವರು ದೊರೆ ತದ್ದು ಅದೃಷ್ಟವೆನಿಸಿತು. ಆ ಮಾತು ಈ ಮಾತು ಆಡುವ ಹೊತ್ತಿಗೆ ಹಾಂಕಾಂಗಿನ ಕೈಟಾಕು ವಿಮಾನ ತಾಣ ಬಂದಿತ್ತು.

೧೧ ಹಾಂಕಾಂಗ್: ಬಾಡಿಗೆಯ ಭೂಮಿ, ಗುಳೇಕಾರ ಜನ

ಕೈಟಾಕು ವಿಮಾನ ತಾಣವನ್ನು ಬ್ರಿಟಿಷರು ಸಮುದ್ರದಲ್ಲಿ ಕಲ್ಲು ಮಣ್ಣು ತುಂಬಿ ಮರಳಿ ಪಡೆದ ಕಿರುಭೂಮಿಯಲ್ಲಿ ರಚಿಸಿದ್ದಾರೆ. ವಿಮಾನ ಕೆಳಗೆ ಇಳಿಯುವಾಗ ಇಕ್ಕೆಲಗಳಲ್ಲಿ ಸಮುದ್ರವನ್ನೇ ಕಾಣುತ್ತೇವೆ. ನಮ್ಮ ವಿಮಾನ ಸಮುದ್ರಕ್ಕೆಲ್ಲಿ ಅಪ್ಪಳಿಸುತ್ತದೋ ಸಮುದ್ರದಲ್ಲಿಯೋ ಎಲ್ಲಿ ಇಳಿಯುತ್ತದೋ ಎಂಬ ಭ್ರಮೆಯಾಗುತ್ತದೆ. ಕಸ್ಟಮ್ಸ್ ಗೇಟ್ ದಾಟಿ ಬರುವ ಹೊತ್ತಿಗೆ ನಿಮಗೊಂದು ಸಂತೆಯೇ ಕಾಣಿಸುತ್ತದೆ. ಊರಿನ ಪ್ರತಿ ಹೋಟಲ್‌ನವರು ತಮಗೆ ಬರಬೇಕಾದ ಪ್ರವಾಸಿಗರನ್ನು ಕರೆತರಲು ಮಿನಿ ಬಸ್ ಕಳಿಸಿರುತ್ತಾರೆ. ಪ್ರತಿಯೊಬ್ಬರೂ ನಿಮ್ಮನ್ನು ನಿಲ್ಲಿಸಿ ಯಾವ ಹೋಟಲ್ ಎಂದು ಕೇಳುವವರೇ. ಈ ಗಲಾಟೆಯಲ್ಲಿ ಹತ್ತಾರು ಜನ ಭಾರತೀಯ ಪ್ರವಾಸಿಗಳು ಕಂಡುಬಂದರು. ಅಮೇರಿಕೆಯ ವಿಮಾನ ಕಂಪನಿಯೊಂದರಲ್ಲಿ ಕೆಲಸಮಾಡುವ ತೆಲಗು ಮಹನೀಯರು ಮತ್ತು ಅವರ ಹೆಂಡತಿ, ಕಲ್ಕತ್ತೆಯ ಓರ್ವ ದಂಪತಿಗಳೂ, ಸಿಖ್‌ರೂ, ಸಿಂಧಿಗಳೂ ಹಲವಾರು ಜನರಿದ್ದರು.

ಚೀನಾವನ್ನು ಮಂಚೂರಿಯಾ ದೊರೆಗಳು ಪಾಲಿಸುತ್ತಿದ್ದಾಗ ಒಂದು ಒಪ್ಪಂದದ ಮೂಲಕ ಬ್ರಿಟಿಷರು ಹಾಂಕಾಂಗ್ ನೆಲೆಯನ್ನು ವ್ಯಾಪಾರಿ ಅನುಕೂಲಕ್ಕಾಗಿ ಸ್ಥಾಪಿಸಿದರು. ಅನಂತರ ಜನಸಂಖ್ಯೆ ಬೆಳೆದ ಕಾರಣ ಮತ್ತೊಂದು ಒಪ್ಪಂದದ ಪ್ರಕಾರ ಕೌಲೂನ್ ಪ್ರಾಂತ್ಯವನ್ನೂ ಇನ್ನೊಂದು ಲೀಸ್ ಪ್ರಕಾರ ಹೊಸ ಹೊಸ ಟೆರಿಟೊರಿಗಳನ್ನೂ ಸ್ಥಾಪಿಸಿದರು. ಹಾಂಕಾಂಗ್ ಕ್ರೌನ್ ಕಾಲೊನಿಯ ಹೆಚ್ಚಿನ ಜನತೆಯ ವ್ಯಾಪಾರ ವಹಿವಾಟು ಎಲ್ಲಾ ಹಾಂಕಾಂಗ್ ಮತ್ತು ಕೌಲೂನ್‌ಗಳಲ್ಲಿವೆ. ಹೊಸ ಟೆರಿಟರಿಯಲ್ಲಿ ಫಾರಂ ಗಳಿವೆ, ಕಛೇರಿಗಳಿವೆ, ಚೈನಾದಿಂದ ಬಂದ ನಿರ್ವಾಸಿತರಿದ್ದಾರೆ. ಈ ಕಾಲೊನಿಗೆ ಸೇರಿದಂತೆ ಅನೇಕ ಚಿಕ್ಕ ಚಿಕ್ಕ ಸಮುದ್ರ ಮಧ್ಯದ ಗಡ್ಡೆಗಳು ಇವೆ. ಹೊಸ ಟೆರಿಟೊರಿಯ ಲೀಸ್ ಇನ್ನೂ ೨೮ ವರ್ಷಕ್ಕೆ ಮುಗಿದು ಆ ಪ್ರದೇಶ ಮತ್ತೆ ಚೀನಾದ ವಶಕ್ಕೆ ಹೋಗಬೇಕು. ಚೀನಾ ಮತ್ತೊಮ್ಮೆ ಲೀಸ್ ನೀಡಬಹುದು ಅಥವಾ ನಿರಾಕರಿಸಬಹುದು. ಒಟ್ಟಿನ ಮೇಲೆ ಹಾಂಕಾಂಗ್ ಜೀವನ ಅನಿಶ್ಚಿತವಾಗಿದೆ. ಭಯಂಕರ ಜ್ವಾಲಾಮುಖಿಯಂತಿರುವ ಮಾವೋ ಚೀನಾ ಯಾವ ನಿಮಿಷಕ್ಕಾದರೂ ಅದನ್ನು ಕಬಳಿಸಬಹುದು. ಬಾಡಿಗೆಯ ಭೂಮಿ. ಆದರೆ ಚೈನಾಕ್ಕೆ ಹಾಂಕಾಂಗ್‌ನಿಂದ ಬಹಳ ಲಾಭವಿದೆ. ಹಾಂಕಾಂಗ್‌ಗೆ ಬಹಳ ಬೇಕಾಗುವ ಆಹಾರ ಸರಂಜಾಮಿನಲ್ಲಿ ೧೦೦ ಕ್ಕೆ ೮೦ ರಷ್ಟು ಚೈನಾ ಬಂಡವಲು ತೊಡಗಿಸಿದೆ. ಇದರಿಂದ ಹೇರಳವಾಗಿ ಮತ್ತು ಸುಲಭವಾಗಿ ಚೈನಾ ಒದಗಿಸುತ್ತದೆ. ಲೆಕ್ಕವಿಲ್ಲದಷ್ಟು ವ್ಯಾಪಾರಿ ಸಂಸ್ಥೆಗಳಲ್ಲಿ ಚೈನಾ ಬಂಡವಲು ತೊಡಗಿಸಿದೆ. ಇದರಿಂದ ಹೇರಳವಾಗಿ ಮತ್ತು ಸುಲಭವಾಗಿ ಚೈನಾ ವಿದೇಶೀ ವಿನಿಮಯ ಗಳಿಸುತ್ತದೆ. ಚೈನೀ ಸರಕುಗಳು ವಿನಿಮಯದ ಆಸೆಗಾಗಿ ಸಿಂಗಪುರದಂತಹ ಪ್ರದೇಶದಲ್ಲಿ ತಯಾರಿ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ಮಾರಲ್ಪಡುತ್ತವೆ. ಈ ವಿನಿಮಯವೆಲ್ಲಾ ಅಣುಬಾಂಬು ತಯಾರಿಗೆ ಬೇಕು.

ಹಾಂಕಾಂಗ್ ಕಾಲೋನಿಗೆ ರಾಷ್ಟ್ರೀಯತೆಯೇ ಇಲ್ಲ. ಜಗತ್ತಿನ ಯಾವ ದೇಶದ ಜನರನ್ನಾದರೂ ಇಲ್ಲಿ ನೋಡಬಹುದು. ನೂರಕ್ಕೆ ೮೦ ರಷ್ಟು ಚೈನೀಯರು, ಅದರಲ್ಲಿ ಮುಖ್ಯವಾಗಿ ಚೈನಾದ ಪೂರ್ವ ತೀರದ ಕ್ಯಾಂಟೀನ್

ಪ್ರದೇಶದವರು. ಅವರು ಮಾತಾಡುವ ಚೀನೀ ಭಾಷೆ ಕ್ಯಾಂಟೋನೀಸ್ ಮಿಕ್ಕವರೆಲ್ಲ ಬಹುಭಾಗ ಭಾರತೀಯರು. ಈ ಕಾಲೋನಿಯು ಒಳಾಡಳಿತ ಒಂದು ರೀತಿಯ ಪ್ರಜಾಪ್ರಭುತ್ವವೇ ಆದರೂ ಬ್ರಿಟಿಷರ ಸಂಪೂರ್ಣ ಹಿಡಿತ ದಲ್ಲಿದೆ. ೩೦ ಲಕ್ಷಕ್ಕಿಂತ ಹೆಚ್ಚಿರುವ ಜನಸಂಖ್ಯೆಗೆ ಆಹಾರ ಮತ್ತು ಕುಡಿಯಲು ನೀರು ಕಮ್ಯೂನಿಸ್ಟ್ ಚೈನಾದಿಂದಲೇ ಬರಬೇಕು. ಇಲ್ಲಿಯ ಆಖಾತ ದಲ್ಲಿ ಸಾಕಷ್ಟು ಮೀನು ಇರುವುದು ಒಂದು ಸುದೈವವೇ. ಈ ಕಾಲೋನಿಯ ಜೀವಾಳವೆಲ್ಲಾ ಇಲ್ಲಿ ಒದಗಿರುವ ಮುಕ್ತ ವ್ಯಾಪಾರ ಪರಿಸ್ಥಿತಿಯೇ ಆಗಿದೆ, ಪ್ರಪಂಚದ ಎಲ್ಲ ದೇಶದ ಬಹುತೇಕ ಎಲ್ಲ ಕಂಪನಿಗಳು ತಮ್ಮ ವಸ್ತುಗಳನ್ನು ಇಲ್ಲಿ ಮಾರಲು ಯತ್ನಿಸುತ್ತಾರೆ. ಯಾವ ದೇಶದಿಂದಲೇ ಆಗಲೀ ಯಾವ ವಸ್ತುವನ್ನೇ ಆಗಲೀ ಸುಂಕವಿಲ್ಲದೇ ತರಿಸಬಹುದು. ಸಿಗರೇಟ್ ಮತ್ತು ಮಾದಕ ಪಾನೀಯಗಳನ್ನು ಮಾತ್ರ ನಿಗದಿ ಪಡಿಸಿದ ಪ್ರಮಾಣದೊಳಗೆ ತರಿಸಬೇಕು. ಹಾಂಕಾಂಗ್ ಯಾತ್ರಿಕರಿಗೆ ದೊಡ್ಡ ಜಾತ್ರೆ. ಪ್ರಪಂಚ ದೆಲ್ಲೆಡೆಯ ಪ್ರವಾಸಿಗಳು ಹಣ ಉಳಿಸಿಕೊಂಡು ಬಂದು ಇಲ್ಲಿ ಖರ್ಚು ಮಾಡುತ್ತಾರೆ. ಇಲ್ಲಿ ಚಿಕ್ಕ ವ್ಯಾಪಾರ ನಡೆಸುವ ಆಂಧ್ರರೊಬ್ಬರು ನಮಗೆ ಪರಿಚಿತರಾದರು. ಕಳೆದ ೧೫ ವರ್ಷಗಳಿಂದ ಇವರು ಇಲ್ಲಿ ವ್ಯಾಪಾರ ನಡೆಸಿದ್ದಾರೆ. ಇವರು ದೊಡ್ಡದೊಂದು ಹಲವಾರು ಅಂತಸ್ತಿನ ಕಟ್ಟಡದಲ್ಲಿ ೧೨ ನೆಯ ಅಂತಸ್ತಿನಲ್ಲಿ ಒಂದು, ಮತ್ತು ಹದಿನಾರನೆಯ ಅಂತಸ್ತಿನಲ್ಲಿ ಒಂದು ಫ್ಲಾಟ್ ಖರೀದಿಸಿದ್ದಾರೆ. ಒಂದರಲ್ಲಿ ತಾವು ವಾಸಿಸಿದ್ದಾರೆ. ಮತ್ತೊಂದನ್ನು ಬಾಡಿಗೆಗೆ ನೀಡಿದ್ದಾರೆ. ೧೯೬೭ ರಲ್ಲಿ ಮಾವೋ ಅವರ ತುಪಾಕಿ ಮಕಾವ್ (MACAU) ಮತ್ತು ಟೈಪೆ ಕಡೆ ಅಗ್ನಿವರ್ಷ ಸುರಿಸಲು ಆರಂಭಿಸಿದಾಗ ಜನ ಹಾಂಕಾಂಗ್‌ನಿಂದ ರಾತ್ರೋರಾತ್ರಿ ಅನೇಕ ದೇಶಗಳಿಗೆ ಪರಾರಿಯಾಗಲು ಯತ್ನಿಸಿದ ಕತೆಯನ್ನು, ಸ್ಥಿರಾಸ್ತಿಗಳ ಬೆಲೆ ಒಮ್ಮೆಗೆ ಕುಸಿದುದರ ವಿಷಯವನ್ನು ಅವರು ರಂಜಕವಾಗಿ ತಿಳಿಸಿದರು. ಮಾವೋ ಕೊಂಚ ಶಾಂತರಾದರು. ಬೆಲೆಗಳು ಮತ್ತೆ ಸ್ಥಿರಗೊಂಡವು ಈ ಮಹನೀಯರು ಸಾಕಷ್ಟು ಸಂಪಾದಿಸುತ್ತಾ ನಾಲ್ಕಾರು ಭಾರತೀಯರನ್ನು ತಮ್ಮಲ್ಲಿ ಕೆಲಸಕ್ಕೆ ಇಟ್ಟುಕೊಂಡಿದ್ದಾರೆ. ಆದರೆ ಅವರ ಗುರಿಯೆಂದರೆ ಇನ್ನೂ ಕೆಲ

ಕಾಲ ಹಣ ಸಂಪಾದಿಸಿ ಭಾರತಕ್ಕೆ ಹಿಂತಿರುಗುವುದೇ ಹೊರತು ಇಲ್ಲಿ ಸ್ಥಿರಪಡುವುದಲ್ಲ. ಇಲ್ಲಿಯ ಹದಿನಾರನೇ ಅಂತಸ್ತಿನ, ಬಾಗಿಲು ಕಿಟಿಕಿ ಮುಚ್ಚಿಕೊಂಡ ಬಾಳುವೆ ನಮ್ಮ ನಗರ ಜೀವನಕ್ಕಿಂತ ತುಂಬಾ ಕಷ್ಟತರವಾದದ್ದು. ಈ ನಾಲ್ಕು ಕೋಣೆಯ ಮನೆಯಲ್ಲಿ ಅವರು ನಮಗೆ ಎರಡು ದಿನ ಬೆಳಗಿನ ಫಲಹಾರಕ್ಕೆ ಉಪ್ಪಿಟ್ಟು, ಕಾಫಿ ನೀಡಿದರು. ಒಂದು ದಿನ ರಾತ್ರಿ ಭೋಜನಕ್ಕೆ ಆಮಂತ್ರಿಸಿ ಅನ್ನ, ಹುಳಿ, ಆವಕಾಯ್, ಗೊಂಗೂರ ಪಚ್ಚಡಿ, ಕಾರಪುಡಿ, ಶುದ್ಧವಾದ ಆಂಧ್ರದ ತುಪ್ಪ, ಮೊಸರು ನೀಡಿದರು. ಹಾಂಕಾಂಗ್‌ನ ಅನಿಶ್ಚಿತ ಜೀವನದ ಕಾರಣ ಇವರಿಗಿನ್ನೂ ಮದುವೆಯಾಗಿಲ್ಲ. ಇವರ ಅಂಗಡಿಯಲ್ಲಿ ಕೆಲಸ ಮಾಡುವ ಕೇರಳದ ಮೆನನ್ ಮುಂಬಯಿಯ ಶ್ಯಾಂ, ಗುಜರಾತಿನ ಮೆಹತ, ಇದೇ ಮನೆಯಲ್ಲಿ ಒಟ್ಟಿಗೆ ಬದುಕುತ್ತಾರೆ. ಶ್ರೀ ಮೆನನ್ ರುಚಿಯಾದ ಅಡಿಗೆ ತಯಾರಿಸುತ್ತಾರೆ. ಅನೇಕ ಬಾರಿ ಇವರಿಗೆ ಇದೇ ಕಟ್ಟಡದಲ್ಲಿ ವಾಸಿಸುವ ಸಿಂಧೀ ಗುಜರಾತೀ ಕುಟುಂಬಗಳಿಂದ ಭೋಜನ ನಿಮಂತ್ರಣ ಇರುತ್ತದಂತೆ. ಈ ಸೌಹಾರ್ದ ನಮ್ಮ ನಾಡಿನಲ್ಲಿಯೋ ಬೆಳೆದು ಬಂದರೆ, ನಮ್ಮನ್ನು ಹಿಡಿವವರು ಇಲ್ಲ.

ಇಲ್ಲಿಯ ಸರಕಾರ ವಸತಿ ಸಮಸ್ಯೆಯನ್ನು ಬಿಡಿಸಲು ಬಹಳ ಶ್ರಮಿಸುತ್ತಿದೆ. ಬೆಟ್ಟಗಳನ್ನು ನೆಲಸಮ ಮಾಡಿ, ಅಲ್ಲಲ್ಲ ಬೃಹದಾಕಾರದ ಫ್ಲಾಟುಗಳನ್ನು ಕಟ್ಟುತ್ತಿದ್ದಾರೆ ಒಂದೊಂದು ಕಟ್ಟಡದಲ್ಲಿ ಸಾವಿರಾರು ಕುಟುಂಬಗಳಿಗೆ ವಸತಿ ಕಲ್ಪಿಸಿದ್ದಾರೆ. ಇವುಗಳನ್ನೆಲ್ಲಾ ನೋಡುತ್ತಾ ಚೈನಾದ ಗಡಿಯವರೆಗೆ ಹೋದೆವು. ಹಾಕಾಂಗ್ ಮತ್ತು ಕ್ಯಾಂಟನ್‌ಗೆ ಮೊದಲು ನಡೆಯುತ್ತಿದ್ದ ರೈಲು ಗಡಿಗೆ ನಿಲ್ಲುತ್ತದೆ. ಬಾಂಬೂ ಬಾರ್ಡರ್ ಎಂದು ಹೆಸರಾದ ಈ ಗಡಿಯಲ್ಲಿ ಕಮ್ಯೂನಿಸ್ಟ್ ಚೈನಾದ ಭದ್ರವಾದ ಕಾವಲಿದೆ. ಪ್ರತಿದಿನ ಮುಂಜಾನೆ ಮತ್ತು ಸಂಜೆ ಗಡಿಯ ಬಾಗಿಲುಗಳು ಕೊಂಚ ಕಾಲ ತೆರೆಯುತ್ತುವೆ. ಆಗ ಇತ್ತ ಕಡೆ ಭೂಮಿಯುಳ್ಳ ಕೆಲ ರೈತರು ಇತ್ತ ಕಡೆ ಸಾಗುಮಾಡಲು ಬರುತ್ತಾರೆ. ಈ ಕಡೆಯ ರೈತರಿಗೆ ಆ ಕಡೆ ಯಾವ ಹಕ್ಕೂ ಇಲ್ಲ. ಇಂತಹ ರೈತರಿಗೆ ಎರಡು ಸರಕಾರದವರೂ ಗುರುತಿನ ಕಾರ್ಡು ನೀಡಿರುತ್ತಾರೆ. ಅವರು ಸಂಜೆಗೆ ಮತ್ತೆ ಹಿಂತಿರುಗುತ್ತಾರೆ. ಗಡಿಯಾಚೆಯಿಂದ ಪ್ರತಿ ನಿತ್ಯ ಹೇರಳವಾಗಿ

ವಸ್ತುಗಳಾ ಮಾರಾಟಕ್ಕೆ ಹಾಂಕಾಂಗ್ ಪೇಟೆಗೆ ಬರುತ್ತವೆ. ಇಲ್ಲಿಯ ಚೈನೀಯರು ಚೈನಾದಲ್ಲಿಯ ತಮ್ಮ ಬಂಧುಗಳನ್ನು ಭೇಟಿಯಾಗಲು ಹೋಗಬೇಕೆಂದರೆ ಸರಿಯಾದ ಪರವಾನಗಿ ಪಡೆದು ಗಡಿಯ ಹತ್ತಿರ ಹಾಕಾಂಗ್ ರೈಲಿಳಿದು ಗಡಿಯ ಭಟರ ಅನುಮತಿ ಪಡೆದು ಗಡಿಯ ಒಳಗಡೆ ಫರ್ಲಾಂಗ್ ದೂರದಲ್ಲಿ ಮತ್ತೆ ಪ್ರಾರಂಭವಾಗುವ ಪುರಾತನ ಕ್ಯಾಂಟನ್ ರೈಲು ಏರಬೇಕು. ಗಡಿಯ ಹತ್ತಿರ ಬರುವ ಪಾಶ್ಚಾತ್ಯ ಪ್ರವಾಸಿಗರು ಚಿತ್ರವಿಚಿತ್ರ ಭಾವಗಳಿಂದ ಗಡಿಯಾಚೆ ಕಣ್ಣು ಕಾಣುವವರೆಗೆ ನೋಡುತ್ತಾರೆ. ಕ್ಯಾಮರಾದಿಂದ ಫೋಟೋ ತೆಗೆಯುತ್ತಾರೆ.

ಮಹಾರಾಷ್ಟ್ರದಲ್ಲಿದ್ದ ವಾಡೆ ಪ್ರಕಾರದ ದೊಡ್ಡ ಕುಟುಂಬದ ಅನೇಕ ಮನೆಗಳೂ ಇಲ್ಲಿವೆ. ಕೋಟೆಯಂತಿರುವ ಈ ಕಾಪೌಂಡಿನ ಮಧ್ಯೆ ಅನೇಕ ಮರಿಮನೆಗಳಿರುತ್ತವೆ. ಈ ವಾಡೆಯ ಸುತ್ತ ನೆಲ್ಲಿನ ಗದ್ದೆಗಳು. ಆಧುನಿಕ ಹಾಂಕಾಂಗನ್ನು ಅಲಕ್ಷಿಸಿ ಕೋಣಗಳಿಂದ ಉಳುತ್ತಾ ತಾತ ಮುತ್ತಾತಂದಿರ ಬಳಗದೊಂದಿಗೆ ಸುಖವಾಗಿದ್ದಾರೆ.

ಹಾಂಕಾಂಗ್‌ನಲ್ಲಿ ಖರೀದಿ ಮಾಡುವುದು ಒಂದು ರೋಮಾಂಚಕ ಅನುಭವವೇ ಸರಿ. ನೀವು ಕೊಂಚ ಅವಸರಿಸಿದರೆ ಬೆಲೆ ಒಂದಕ್ಕೆ ಎರಡು. ಕೊಂಚ ನಿಧಾನವಾಗಿ ಒಂದಲ್ಲದೆ ಎರಡು ಕಡೆ ತಿರುಗಾಡಿ ಚೌಕಾಸಿ ನಡೆಸಿದರೆ ಹೆಚ್ಚು ಕಡಿಮೆ ಸರಿಯಾದ ಬೆಲೆಗೆ ದೊರೆಯಬಹುದು. ಇಲ್ಲಿ ವಿಯಟ್ನಾಂದಿಂದ ರಜೆಯ ಮೇಲೆ ಬರುವ ಅಮೇರಿಕನ್ನರ ಹಾವಳಿ ವಿಪರೀತ. ವೇಶ್ಯಾವಾಟಿಕೆಗಳು ಹೆಚ್ಚಿವೆ; ಅಶ್ಲೀಲ ಚಿತ್ರಗಳು, ಇನ್ನೂ ಅನೇಕ ಅವ್ಯವಹಾರಗಳು ತಾಂಡವಾಡುತ್ತಿವೆ. ಇದು ತೀರಾ ಸಹಜವಾದ ಪ್ರತಿಫಲ.

೧೨ ಕಾಂಬೋಡಿಯಾ

ರಾಯಲ್ ಏರ್ ಕಾಂಬೋಜ್ ಸಾರಿಗೆಯಲ್ಲಿ ಹಾಂಕಾಂಗ್‌ನಿಂದ ಪಯಣಿಸುವಾಗ ಆಗಲೇ ನನಗೆ ಈ ಸಂತೆ ಬೇಸರವೆನಿಸಿತ್ತು. ಅದೇ ಯೋಚನೆಯಲ್ಲಿ ಒಂದೂವರೆ ತಾಸಿನ ಪಯಣದ ನಂತರ **ನಾಮ್ ಪೆನ್ (PNOM PENH)** ಸೇರಿದೆ. ಈ ಪಯಣದಲ್ಲಿ ನಾವು ಸದ್ಯದ ಕುರುಕ್ಷೇತ್ರವಾದ ದಕ್ಷಿಣ ವಿಯಾಟ್ನಾಂ ಮೇಲೆ ಸುಮಾರು ಅರ್ಧಗಂಟೆ ಕಾಲ ಪಯಣಿಸಿದೆವು. ವಿಮಾನ ದಳಪತಿ ಈ ವಿಷಯುವನ್ನು ತಿಳಿಸಿದಾಗ ಕಿಟಕಿಯಿಂದ ಹೊರ ನೋಡಿದೆ. ಕೆಳಗಿನ ನಾಡಿನಲ್ಲಿ ಅಲ್ಲೊಂದು ಇಲ್ಲೊಂದು ಮಿಣುಕುದೀಪ ಕಾಣಿಸುತ್ತಿದ್ದವು. ಬಾನು ಪ್ರಶಾಂತವಾಗಿತ್ತು. ಈ ನಾಡಿನ ಹಣೆಬರಹದ ಯಾವ ದುರ್ದೆಸೆಯೋ ಏನೋ, ನಾಡು ಕೊಲ್ಲಾಟದ ರಂಗವಾಗಿತ್ತು. ಮೇಲೆ ಹಾಯ್ದು ಹೋಗುವ ನಮಗೇ ಭಯಮಿಶ್ರಿತ ಭಾವನೆಗಳು ಸುಳಿಯುತ್ತಿರಬೇಕಾದರೆ ಆ ನಾಡವರ ಜೀವನ ಹೇಗಿದೆಯೋ ? ಎನಿಸಿತು. ಯುದ್ಧ ಕಾಲದಲ್ಲಿ ಜೀವನವೆಂಬುದು ಇರುತ್ತದೆಯೋ ?

ನಾಮ್‌ಪೆನ್ (ಕನ್ಯಾಪರ್ವತ) ಪುರಾತನ ಕಾಂಬೋಜದ ಆಧುನಿಕ ರಾಜಧಾನಿ. ಇಲ್ಲಿಯೇ ಇಳಿಯಬೇಕಾದ ನಾನು ಕೂಡಲೇ ಫ್ಲೈಟ್ ದೊರೆತುದರಿಂದ ನೇರವಾಗಿ ಸಿಯಾಂ ಸೀಪ್‌ಗೆ ಪಯಣಿಸಿದೆ. ಹಂಪೆಗೆ ಹೊಸಪೇಟೆ

ಯಂತೆ ಆ್ಯಂಕೊರ್‌ವಾಟಿಗೆ ಸಿಯ್ಂ ರೀಪ್. ಸಿಯ್ಂ ರೀಪ್ ಸೇರಿದಾಗ ಮಧ್ಯರಾತ್ರಿಯಾಗಿತ್ತು. ಸುದ್-ಎಸ್ಟ್-ಏಶಿಯದ ಪ್ರವಾಸೀ ಕಂಪನಿಯ ಶ್ರೀ ಹಿ ಸ್ರಾಂಗ್ (ಸಾರಂಗ್) ನನಗಾಗಿ ಕಾದಿದ್ದರು. ಅವರೊಡನೆ ಟ್ಯಾಕ್ಸಿಯಲ್ಲಿ ಅಬರೆ ರಾಯಲ್ ಡೆನ್ ಟೆಂಪಲ್ಸ್ ಹೋಟೆಲ್ ಸೇರಿದೆ. ದಾರಿಯ ಚೌಕಗಳಲ್ಲಿ ಹನುಮಂತ, ಗರುಡ, ರಾಮರ ವಿಗ್ರಹ ನಿಲ್ಲಿಸಿದು ದನ್ನು ನೋಡಿದೆ. ಭಾರತವನ್ನೇ ಸೇರಿದೆನೋ ಎಂಬ ಭಾವನೆ ಮೂಡಿತ್ತು.

ನಗರ-ನಕೋರ್-ಅಂಕೋರ್ ವಾಟ್-ಗುಡಿ

ಕ್ರಿಸ್ತ ಪೂರ್ವ ಹತ್ತನೇ ಶತಮಾನದಲ್ಲಿ ಅಪ್ರತಿಮ ಸಾಹಸದಿಂದ ಸಪ್ತ ಸಮುದ್ರಗಳ ಮೇಲೆ ಯಾನ ಮಾಡಿ ವ್ಯಾಪಾರ, ಧರ್ಮ ಪ್ರಸಾರ ಮಾಡಿದ ಭಾರತೀಯರು ಕಾಂಭೋಜ, ಬಾಲಿ, ಇಂಡೋಚೀನ, ಸಯಾಂ. ಜಪಾನ್ ಗಳಲ್ಲಿ ಅಲ್ಲದೆ ಅಮೇರಿಕೆಯ ಮೆಕ್ಸಿಕೋ ಮತ್ತು ಗ್ವಾಟೆಮಾಲಾಗಳಲ್ಲಿ ಕೂಡಾ ಪ್ರಭಾವ ಬೀರಿದ್ದರು. ಸುಮಾರು ಇದೇ ಕಾಲದಲ್ಲಿ ಮೊದಲನೆಯ ಹಿಂದುವು ಕಾಂಭೋಜದಲ್ಲಿ ತಾಳ, ಜಾಗಟೆ, ಮದ್ದಳೆ ಮತ್ತು ನೃತ್ಯಗಾರ ರಲ್ಲದೆ, ರಾಮಾಯಣ ಮತ್ತು ಮಹಾಭಾರತಗಳೊಂದಿಗೆ ಇಳಿದನೆಂದು ಕಾಂಭೋಜರು ಹೇಳುತ್ತಾರೆ. ಅವರು ಅವನಿಳಿದು ಬಂದ ಧಾಟಿಯನ್ನೂ ಅವನ ವಾದ್ಯ ವೈಖರಿಯನ್ನೂ ನೃತ್ಯ ಪ್ರಣಾಳಿಯನ್ನೂ ಇಂದಿಗೂ ನರ್ತಿಸಿ ತೋರಿಸುತ್ತಾರೆ. ಇವನಿಂದ ಆರಂಭವಾಯಿತು ಹಿಂದೂ ಧರ್ಮ ದರ್ಶನದ ಪ್ರಭಾವ-ಕಾಂಬು ಎಂಬ ಋಷಿಮೂಲದಿಂದ ಜನಿಸಿದ ಕಾಂಭೋಜರು ಆಗ ಇನ್ನೂ ಕಾಡುಮೇಡುಗಳಲ್ಲಿ ಜೀವಿಸುತ್ತಿದ್ದರು. ಹಿಂದುಗಳು ತಂಡ ತಂಡ ವಾಗಿ ವಲಸೆ ಬಂದು ಇಲ್ಲಿ ನಗರಗಳನ್ನು ಕಟ್ಟಿದರು. ಹೀಗೆ ಕಟ್ಟಿದ ಮೊದ ಲನೇ ನಗರ ಕ್ರಿಸ್ತಶಕ ೫೫೦ ಕ್ಕೆ ಸೇರಿದೆ. ಇದೊಂದು ಆಲಯ. ಕ್ರಿಸ್ತ ಪೂರ್ವ ಆರನೆಯ ಶತಮಾನದ ವೇಳೆಗೆ ಜಯವರ್ಮನೆಂಬ ರಾಜನು ಸಾಮ್ರಾಜ್ಯ ಪ್ರತಿಷ್ಠಾಪಿಸಿ ಕಾಂಭೋಜರನ್ನು ಒಂದು ರಾಷ್ಟ್ರವಾಗಿ ಮಾಡಿದನು.

ಇವನ ಅನಂತರ ಒಂಬತ್ತನೆಯ ಶತಮಾನದಲ್ಲಿ ಪಟ್ಟವೇರಿದ ಇಂದ್ರ ವರ್ಮನು ಶಿವನಿಗಾಗಿ ನಿರ್ಮಿಸಿದ ಬಾಕೋಂಗ್ ಮತ್ತು ಪ್ರಾಕೋ ದೇವಾ

ಲಯಗಳು ದಕ್ಷಿಣ ಭಾರತದ ದೇವಾಲಯಗಳನ್ನು ಅಂಶತಃ ಹೋಲುತ್ತವೆ. ಇಲ್ಲಿಯ ಗೋಪುರಗಳು ಅವುಗಳಲ್ಲಿಯ ಶಿವ ಮತ್ತು ಗೌರಿಯರ ಚಿತ್ರಗಳು ಅತಿ ಸೂಕ್ಷ್ಮ ಕೆಲಸವಾಗಿವೆ. ಇಲ್ಲಿನ ಶಿಲಾಶಾಸನದಲ್ಲಿ ಈ ವಿಷಯವೆಲ್ಲಾ ಉಕ್ತವಾಗಿದೆ. ಇವನ ನಂತರ ಅಧಿಪತಿಯಾದ ಇವನ ಮಗ ಯಶೋವರ್ಮ ನಾಂ-ಬಾಕೆಂಗ್ ಮತ್ತು ಪ್ರಾ-ವಿಹಾರ್ ದೇವಾಲಯಗಳನ್ನು ನಿರ್ಮಿಸಿದ ನಂತೆ. ಇವನ ನಂತರ ಬಂದ ನಾಲ್ಕನೆಯ ವಿಜಯವರ್ಮ (೯೨೧-೯೪೨) ಕೋ-ಕೆರ್‌ದಲ್ಲಿ ಹೊಸ ರಾಜಧಾನಿಯನ್ನು ನಿರ್ಮಿಸಿದನು. ಅನಂತರ ಸಿಂಹಾಸನ ವನ್ನೇರಿದ ಇಮ್ಮಡಿ ರಾಜೇಂದ್ರವರ್ಮ (೯೪೪-೯೬೮) ಆಂಕೋರದ ಸ್ಥಾಪನೆಯನ್ನು ಮಾಡಿ ಪ್ರಿ-ರೂಪ್ ನಾಂ-ಬಾಕೆಂಗ್ ಫಿಮೇನಾಕಾಸ್ ಎಂದು ಕರೆಯಲ್ಪಡುವ ಆಲಯಗಳನ್ನು ನಿರ್ಮಿಸಿದನು. ನಂತರದ ಮಹಾ ರಾಜ ಐದನೆಯ ಜಯವರ್ಮ (೯೬೮ ರಿಂದ ೧೦೦೧) ರಾಜೇಂದ್ರವರ್ಮನು ಕೆಲಸವನ್ನು ಮುಂದುವರಿಸಿ ರಾಜವಾಸವನ್ನು ಟಾ-ಕಿಯೋ ಫಿರವಿಾಡ್, ಉತ್ತರ ಕ್ಲೀಂಗ್ ಮತ್ತು ಬಾಂಟ್ ಶ್ರೀಯಲ್ಲಿರುವ ಪರಿಪೂರ್ಣ ಹಿಂದೂ ದೇವಾಲಯಗಳನ್ನು ನಿರ್ಮಿಸಿದನು. ಮುಂದೆ ಬಂದ ಪ್ರಜಾಪತಿ ಒಂದನೆಯ ಸೂರ್ಯವರ್ಮ (೧೦೦೨-೧೦೪೯) ಅರಮನೆಗೆ ಸಂಬಂಧಿಸಿದ ಅನೇಕ ಕಟ್ಟಡ ಗಳನ್ನು ನಿರ್ಮಿಸಿದುದೇ ಅಲ್ಲದೆ ಅನೇಕ ಕಡೆ ಅನೇಕ ದೇವಾಲಯಗಳನ್ನು ನಿರ್ಮಿಸಿದನು. ಅನಂತರ ರಾಜನಾದ ಇಮ್ಮಡಿ ಉದಯಾದಿತ್ಯವರ್ಮನು (೧೦೪೯ ರಿಂದ ೧೬೫) ರಾಜಧಾನಿಗೆ ಹೊಸ ರೂಪವನ್ನೇ ಕೊಟ್ಟನು. ಕಲ್ಲಿ ನಲ್ಲಿ ನಿರ್ಮಿಸಿದ ಭಾಫೌಂ ಗುಡಿ ಅದ್ಭುತವಾದ ಕಾಣಿಕೆ ಎನಿಸಿದೆ. ಅನಂತರ ಪಟ್ಟವೇರಿದ ಇಮ್ಮಡಿ ಸೂರ್ಯವರ್ಮನೇ (೧೧೧೩ ರಿಂದ ೧೧೫೨) ಆಂಕರಿನ ಭೋಜ, ಕೃಷ್ಣದೇವರಾಯ, ಪುಲಕೇಶಿ ಮತ್ತು ರಣಧೀರ ಕಂಠೀರವ·

ಇಮ್ಮಡಿ ಉದಯಾದಿತ್ಯವರ್ಮ ಮತ್ತು ಇಮ್ಮಡಿ ಸೂರ್ಯವರ್ಮರ ಕಾಲಕ್ಕೆ ಐದೇ ದಶಕಗಳ ಭೇದವಿದ್ದರೂ ಕೂಡ ಕಾಂಭೋಜದ ಶಿಲ್ಪಕಲೆ, ನೃತ್ಯ, ಸಂಗೀತ ಮತ್ತು ಸಾಹಿತ್ಯದಲ್ಲಿ ಮಹತ್ತರ ಬೆಳವಣಿಗೆಯಾಯಿತು. ಇಮ್ಮಡಿ ಸೂರ್ಯವರ್ಮನು ಚೌಶೇ ತವೋಡಾ ಮತ್ತು ತೊಮನ್ನಾನ್‌ದ ಸುಂದರ ಶಿವಾಲಯಗಳನ್ನು ನಿರ್ಮಿಸಿದ್ದಲ್ಲದೆ ಆಂಕರ್‌ವಾಟನ್ನೂ ನಿರ್ಮಿಸಿದನು. ಖ್ಮೇರ

ಜನಾಂಗದ ಕಲೆಯ ಮಹೋನ್ನತಿಯನ್ನು ಈ ಕಾಲದಲ್ಲಿ ಸಾಧಿಸಲಾಯಿತು. ದೇವಾಲಯಗಳು ವಾಸ್ತು, ಅಲಂಕಾರ, ಪ್ರತಿಯೊಂದು ವಿಧದಲ್ಲಿ ಪರಿಪೂರ್ಣತೆಯನ್ನು ಪಡೆದವು. ಪರಮವಿಷ್ಣು ಲೋಕವಾಸಿ ಎಂದು ಬಿರುದು ಧರಿಸಿದ ಸೂರ್ಯವರ್ಮನು ಆ್ಯಂಕರನ್ನು ತನ್ನ ಚರಮಶಿಲ್ಪವಾಗಿ ತನ್ನ ಆರಾಧ್ಯದೈವ ವಿಷ್ಣುವಿಗೆಂದು ನಿರ್ಮಿಸಿದನು.

ಈತನ ಅಸ್ತವಹನದ ತರುವಾಯ ಸ್ಥಳೀಯ ಅನಾಗರಿಕ ಜನಾಂಗವಾಗಿದ್ದ ಛಾಮರ ದಾಳಿಗೆ ತುತ್ತಾಗಿ ಆ್ಯಂಕರ್ ಅಗ್ನಿದಾಳಿಗೆ ಗುರಿಯಾಯಿತು. ಕಟ್ಟಿಗೆಯ ಇಮಾರತುಗಳೆಲ್ಲಾ ನಶಿಸಿ ಕಲ್ಲಿನ ಕಟ್ಟಡಗಳು ಭಗ್ನಾವಸ್ಥೆಯಲ್ಲಿ ನಿಂತವು. ಸ್ವಲ್ಪ ಕಾಲದಲ್ಲೆ ರಾಜ್ಯಭಾರ ಕೈಕೊಂಡ ಏಳನೆಯ ಜಯವರ್ಮನ (೧೧೮೧-೧೨೦೧) ರಾಜಧಾನಿಯನ್ನು ಪುನರ್‌ವ್ಯವಸ್ಥೆಗೊಳಿಸಿದನು.

ಈ ಕಾಲಕ್ಕೆ ಭಾರತದಿಂದ ಬುದ್ಧನ ಸಂದೇಶವು ಟಿಬೆಟ್, ಚೈನಾ ಕೊರಿಯಾ, ಇಂಡೋಚೀನ ಮಾರ್ಗವಾಗಿ ಕಾಂಭೋಜವನ್ನು ಪ್ರವೇಶಿಸಿತು. ಅರಸು ಜಯವರ್ಮನು ಬೌದ್ಧಮತವನ್ನು ಅಂಗೀಕರಿಸಿದನು, ಅಲ್ಲಿಗೆ ಹಿಂದೂ ಮತದ ಪ್ರಭಾವ ಮುಗಿಯಿತು, ಆದರೆ ರಾಮಾಯಣ ಭಾರತಗಳು ಉಳಿದವು, ಜಾತಕ ಕತೆಗಳು ಬಂದವು. ಜಯವರ್ಮಭೂಪಾಲನು ಅನೇಕ ದೇವಾಲಯಗಳನ್ನು ಬುದ್ಧ ಅವಲೋಕಿತೇಶ್ವರನಿಗೆ ಮೀಸಲು ಮಾಡಿದನು. ಆ್ಯಂಕರಿನಲ್ಲಿ ಕೂಡಾ ಬುದ್ಧನ ವಿಗ್ರಹವನ್ನು ಪ್ರತಿಷ್ಠಾಪಿಸಿದನು. ಆ್ಯಂಕರ್ ಥಾವ್ (ಕೇಂದ್ರ) ದಲ್ಲಿ ಬಾಯೋನ್ ಎಂಬ ಪ್ರಸಿದ್ಧ ದೇವಾಲಯವನ್ನೂ ಬ್ಯಾಂಟೀ ಕಡೆ ತಾ-ಪ್ರೋಂ ಪ್ರಾ-ಖಾನ್, ನಿಕ್ ಪೀನ್ ದೇವಾಲಯಗಳಲ್ಲಿ ಅವಲೋಕಿತೇಶನನ್ನು ಸ್ಥಾಪಿಸಿದನು. ಆ್ಯಂಕರಿನ ಸುತ್ತ ಅನೇಕ ಇಮಾರತುಗಳನ್ನು ಕಟ್ಟಿದನು. ಬ್ಯಾಂಟಿಷ್ಮೇರ್ ವಾಟ್ ಸಕೋರ್ ದೇವಾಲಯಗಳನ್ನು ನಿರ್ಮಿಸಿದನು. ಪ್ರಜಾವತ್ಸಲನಾದ ಈ ದೊರೆ ಅನೇಕ ರಸ್ತೆಗಳನ್ನು ನಿರ್ಮಿಸಿದನು. ಸುಂದರ ಸೇತುವೆಗಳನ್ನು ಕಟ್ಟಿದನು. ಪ್ರತಿ ಹತ್ತು ಮೈಲಿಗೊಂದರಂತೆ ಯಾತ್ರಿಕರಿಗೆ ತಂಗುಮನೆಗಳನ್ನೂ, ದೇಶಾದ್ಯಂತ ಆಸ್ಪತ್ರೆಗಳನ್ನೂ ನಿರ್ಮಿಸಿದನು. ಸುಮಾರು ೨೦ ವರ್ಷಗಳವರೆಗಿನ ಈ ಕಾಲ ಕಾಂಭೋಜದ ಸುವರ್ಣಯುಗವೇ ಸರಿ. ಅವನ ನಂತರ ಬಂದ ನಿರ್ಬಲ ರಾಜರು ಛಾಮರ

ಬಲವಾದ ದಾಳಿಗೆ ಸಿಲುಕಿ ಆ್ಯಂಕರ್‌ವಾಟನ್ನು ೧೪೩೨ ರಲ್ಲಿ ಬಿಟ್ಟು ದಕ್ಷಿಣಕ್ಕೆ ಪಯಣಿಸಿ ಇಂದಿನ ನಾಂಪೆನ್ ರಾಜಧಾನಿಯನ್ನು ನಿರ್ಮಿಸಿದರು. ಸದ್ಯ ಅರಸ್ರು ನರೋದವ್ ಶಿಹನೋಕ್ (ನರೊತ್ತಮ ಸಿಂಹನಾಯಕ) ಪರಿಪಾಲಿಸುತ್ತಿರು ವರು, ಕಾಂಭೋಜದ ನೃತ್ಯಸಂಪ್ರದಾಯ, ಶಿಲ್ಪಕಲೆ ಮತ್ತಿತರ ಕಲೆಗಳನ್ನು ಅರಮನೆ ಇಂದಿಗೂ ಪೋಷಿಸುತ್ತಿದೆ.

ಆ್ಯಂಕರ್‌ವಾಟ್ (ನಗರ ದೇವಾಲಯ) :

ಪರಮವಿಷ್ಣು ಲೋಕವಾಸಿ ಸೂರ್ಯವರ್ಮನ ಈ ನಿರ್ಮಾಣ ಇಂದೂ ಪ್ರಪಂಚದ ಅದ್ಭುತಗಳಲ್ಲಿ ಒಂದಾಗಿದೆ. ಒಂದು ಶತವರ್ಷದ ಕೆಳಗೆ ಪಾಶ್ಚಾತ್ಯ ಪ್ರವಾಸಿ ಹೆನ್ರಿ ಮಹೋತ್‌ರು ಆನೆಯ ಮೇಲೇರಿ ಕಾಂಬೋಡಿಯಾದ ಕಾನನ ಗಳಲ್ಲಿ ಸುತ್ತಾಡುತ್ತಿರುವಾಗ ಇದ್ದಕ್ಕಿದ್ದಂತೆ ಆ್ಯಂಕರ್‌ವಾಟನ್ನು ಕಂಡರು. ಆಗ ಅವರಿಗೆ ಕೊಲಂಬಸನು ಅಮೇರಿಕ ಕಂಡುಹಿಡಿದಾಗ ಆದ ಅನುಭವ, ಆರ್ಕಿಮಿಡೀಸ್‌ನು ತನ್ನ ಸೂತ್ರವನ್ನು ಕಂಡುಹಿಡಿದಾಗ ಆದ ಅನುಭವಕ್ಕಿಂತ ಹೆಚ್ಚಿನ ರೋಮಾಂಚನವಾಯಿತು.

ಯಾವುದನ್ನೋ ಕಂಡುಹಿಡಿಯಬೇಕೆಂಬ ಹಂಬಲದಿಂದ ಹೊರಟವರಲ್ಲ ಮಾಹೋತ್. ಅವರಿಗೆ ಆ್ಯಂಕರನ್ನು ಕಂಡಾಗ ಇದ್ದಕ್ಕಿದ್ದಂತೆ ಕತ್ತಲಿಂದ ಬೆಳಕಿಗೆ ಬಂದ ಅನುಭವವಾಯಿತಂತೆ. ಸುಮಾರು ಐದು ನೂರು ವರ್ಷಗಳ ಪರ್ಯಂತ ಪ್ರಕೃತಿಯ ದಾಳಿಗೆ ಗುರಿಯಾದ ಅಮೂಲ್ಯ ಕಲಾಭಂಡಾರವನ್ನು ಕಂಡ ಅವರು ಜಗತ್ತಿನ ಮನಕರಗುವಂತೆ ತಮ್ಮ ಪ್ರವಾಸದ ವರದಿಯನ್ನು ಬರೆದು ಆ್ಯಂಕರನ್ನು ಅಡವಿಯಿಂದ ಬಯಲಿಗೆ ಎಳೆದರು. ಅಂದು ಪ್ರಾರಂಭ ವಾದ ಪುನರ್‌ವ್ಯವಸ್ಥೀಕರಣ, ಪುನರುದ್ಧರಣ ಇನ್ನೂ ನಡೆದಿದೆ. ನಿರ್ಮಾಣ ವಾದ ಈ ಆಲಯಗಳಲ್ಲಿ ಮೃಗಗಳು ವಾಸಿಸತೊಡಗಿದವು. ಎಲ್ಲಿ ಬೇಕಾ ದರಲ್ಲಿ ಪಾಚಿಗಟ್ಟಿತ್ತು. ಪಾಚಿಯಲ್ಲಿ ವೃಕ್ಷಗಳ ಬೀಜಾಂಕುರವಾಗಿ ರಾಕ್ಷಸಾ ಕಾರದ ಮರಗಳು ಬೆಳೆದವು. ಮರಗಳಿಗೆ ಮರಿಗಳು ಬೆಳೆದವು. ಹೀಗಾಗಿ ಕಟ್ಟಡಗಳ ಮಾಡಿನಲ್ಲಿ, ಗೋಡೆಯಲ್ಲಿ, ಆಧಾರದ ಅಂಗಣದಲ್ಲಿ, ಗೋಪುರ ದಲ್ಲಿ ವೃಕ್ಷಗಳು ಬೆಳೆದು ಹೆಬ್ಬಾವಿನಂತೆ ಬೇರುಬಿಟ್ಟು ಹೆಡೆಮುರಿಗೆ ತಿರುವಿ ಆಕಾಶಕ್ಕೆ ತಿವಿದು ನಿಂತು ಕಟ್ಟಡಗಳನ್ನು ಕೆಡವಿದವು. ಆದರೆ ಅದಾವ

ಪುಣ್ಯದಿಂದಲೋ ಏನೋ ಆ್ಯಂಕರ್‌ವಾಟ್‌ನ ಪೂರ್ವ ಭಾಗವೊಂದನ್ನು ಬಿಟ್ಟರೆ ಉಳಿದ ಭಾಗವೆಲ್ಲಾ ಸುಸ್ಥಿತಿಯಲ್ಲಿದೆ. ಇದಕ್ಕೆ ಎರಡು ಕಾರಣ ಗಳಿರಬಹುದು. ದೊಡ್ಡ ದೇವಾಲಯದ ಸುತ್ತಲಿನ ಕಂದಕ ಮತ್ತು ಈ ದೇವಾಲಯವನ್ನು ಕಟ್ಟಿರುವ ಪೀಠಭೂಮಿ ಹರಡುವ ಅಡವಿಗೆ ಪ್ರತಿಬಂಧ ಕವಾಗಿರಬೇಕು. ಹೆನ್ರಿ ಮಹೋತರು ಆ್ಯಂಕರ್ ನೋಡಿದಾಗ ಕಟ್ಟಡಗಳು ಹೇಗಿದ್ದವೆಂಬುದರ ಕಲ್ಪನೆ ತರಲು ಸರಕಾರದ ಪ್ರಾ–ಖಾನ್ ಮತ್ತು ತಾ–ಸೋವ್ ದೇವಾಲಯಗಳನ್ನು ಹಾಗೆಯೇ ಉಳಿಸಿದೆ. ಇಲ್ಲಿಯ ಮರಗಳನ್ನು ತೆಗೆಯಲು ಪ್ರಯತ್ನಿಸಿದರೆ ಆಲಯಗಳು ನೆಲಸಮವಾಗುತ್ತವೆ. ತಾಸೋಂನ ಹೆಬ್ಬಾಗಿಲ ಮೇಲಿರುವ ಪರಶಿವನ ತಲೆಯ ಮೇಲೆ ಬೆಳೆದ ದೈತ್ಯ ವೃಕ್ಷ ಆ ದೇವನ ತಲೆಗೆ ಜಟೆಯಂತೆ ಕಾಣಿಸುತ್ತದೆ.

ಈ ದೇವಾಲಯವು ನಾಲ್ಕು ಪ್ರಾಕಾರಗಳನ್ನು ಒಳಗೊಂಡಿದೆ. ಮಧ್ಯ ದಲ್ಲಿ ಸ್ತೂಪಾಕಾರದ ಶಿಲ್ಪದ ಮೇಲೆ ತ್ರಿಕೂಟ ದೇವಾಲಯವನ್ನು ನಿರ್ಮಿಸಿ ದ್ದಾರೆ. ಈ ಮಧ್ಯದ ಕಟ್ಟಡವನ್ನು ಮೇರು ಪರ್ವತವೆಂದು ಕರೆಯುತ್ತಾರೆ. ದೇವಾಲಯ ಸುತ್ತಲೂ ನಾಗಗಳಿಂದ ರಕ್ಷಿಸಲ್ಪಟ್ಟಿದೆ. ನಾಲ್ಕೂ ಪ್ರಾಕಾರ ಗಳು ನಾಲ್ಕೂ ಖಂಡಗಳೆಂದೂ, ಮೇರುಪರ್ವತ ಭೂಮಿಯ ಕೇಂದ್ರ ವೆಂದೂ ಇಲ್ಲಿ ವ್ಯಾಖ್ಯಾನಿಸಲಾಗಿದೆ. ದೇವಾಲಯದ ಹೊರ ಪ್ರಾಕಾರದ ಸುತ್ತಲೂ ಕಂದಕವಿದೆ. ಮೂರನೆಯ ಪ್ರಾಕಾರಕ್ಕೂ ನಾಲ್ಕನೆಯ ಪ್ರಾಕಾರಕ್ಕೂ ಮಧ್ಯೆ ವಿಶಾಲವಾದ ಬಯಲಿದೆ. ಮೂರನೆಯ ಪ್ರಾಕಾರದ ಹೊರ ಗೋಡೆಗಂಟಿದಂತೆ ಛಾವಣಿ ಹಾಕಲಾಗಿದೆ. ಈ ಗೋಡೆಯ ಮೇಲೆ ಸುತ್ತಲೂ ಕೆತ್ತನೆಯನ್ನೂ ಮಾಡಲಾಗಿದೆ. ಒಂದು ಕಡೆಯ ಗೋಡೆಯ ಮೇಲೆ ರಾಮಾಯಣ ಕಥಾನಕವನ್ನು, ಇನ್ನೊಂದು ಗೋಡೆಯ ಮೇಲೆ ಮಹಾ ಭಾರತ ಪ್ರಸಂಗಗಳನ್ನು, ಮತ್ತೊಂದು ಕಡೆ ಕೃಷ್ಣ ಕಥೆಯನ್ನು, ಇನ್ನೊಂದು ಕಡೆ ಕಾಂಭೋಜರ ಇತಿಹಾಸವನು ಸ್ಪಷ್ಟವಾಗಿ ಕೆತ್ತಿದ್ದಾರೆ. ಹನುಮಂತನಿಗೆ ಗರುಡನಿಗೆ ಈ ಕೆತ್ತನೆಗಳಲ್ಲಿ ಅಗ್ರಸ್ಥಾನ ನೀಡಲಾಗಿದೆ. ಒಂದು ಮೂಲೆಯ ಕಮಾನಿನಲ್ಲಿ ಸಮುದ್ರಮಥನವನ್ನೂ, ರಾವಣನು ಕೈಲಾಸವನ್ನೆತ್ತಿದ ಪ್ರಸಂಗ ವನ್ನೂ ವಾಲಿಸುಗ್ರೀವರ ಕಾಳಗವನ್ನೂ ಕಾಮದಹನದ ಅಂಕವನ್ನೂ ಬಾಲ

ಕೃಷ್ಣನಲೀಲೆಯನ್ನೂ ಕೆತ್ತಲಾಗಿದೆ. ಮತ್ತೊಂದು ಕಡೆ ಸೂರ್ಯವರ್ಮನು ಗರುಡ ವಾಹನ ಗೋವಿಂದನ ಜೊತೆಗೆ ಕಾಂಭೋಜ ಸೈನ್ಯವನ್ನು ವೈರಿನಾಶಕ್ಕೆ ಮುನ್ನಡೆಸುತ್ತಿರುವುದು ರೂಪಿಸಲ್ಪಟ್ಟಿದೆ. ಕಾಂಭೋಜರು ಕೊಡಲಿಯನ್ನು ಆಯುಧವಾಗಿ ಧರಿಸಿದ್ದಾರೆ. ಸೈನ್ಯದ ಮುಂದೆ ಬ್ರಾಹ್ಮಣರು ದಿವ್ಯಾಗ್ನಿಯನ್ನು ಹಿಡಿದು ಹೊರಟಿದ್ದಾರೆ. ಕಾಂಭೋಜದ ಜೊತೆಗೆ ಕಾಡು ಜನಾಂಗವಾಗಿದ್ದ ಸಯಾಮಿ ಸೈನಿಕರೂ ಇದ್ದಾರೆ. ಪೂರ್ವದಿಕ್ಕಿನಲ್ಲಿ ಯಮನ ಆಸ್ಥಾನವನ್ನೂ, ನರಕ ಶಿಕ್ಷೆಗಳನ್ನೂ ಚಿತ್ರಿಸಲಾಗಿದೆ. ಒಂದು ಕಡೆ ಬಾಣಾಸುರನ ವಧೆಯನ್ನೂ ಚಿತ್ರಿಸಿದ್ದಾರೆ. ಪ್ರಜಾವತ್ಸಲ ಜಯವರ್ಮನ ಓಲಗವನ್ನು ಅತ್ಯಂತ ಆಟ್ಟಹಾಸದಿಂದ ಕೆತ್ತಿದ್ದಾರೆ. ಈ ಚಿತ್ರವನ್ನು ನೋಡಿದ ಕೂಡಲೆ ಅಜಂತಾದ ಪುಲಕೇಶಿಯ ಓಲಗವು ನೆನಪಿಗೆ ಬರುತ್ತದೆ. ಅದೇ ರೀತಿ, ಅದೇ ಕಳೆ.

ಈ ದೇವಾಲಯದಲ್ಲಿ ಅನೇಕ ಪಾಳೀ ಭಾಷೆಯ ಮತ್ತು ಸಂಸ್ಕೃತದ ಶಿಲಾಶಾಸನಗಳಿವೆ. ೧೩-೧೪ ನೇ ಶತಮಾನದ ಒಂದು ಶಾಸನದಲ್ಲಿ ಶಿವ ಸಂಕೀರ್ತನೆಯನ್ನೂ ಹತ್ತು ಮಂದಿ ಆಚಾರ್ಯರ ಕೀರ್ತನೆಯನ್ನೂ ಮಾಡಲಾಗಿದೆಯಂತೆ. ಇಲ್ಲಿಯ ಮಹತ್ವದ ಅಂಶವೆಂದರೆ ಅಲಂಕಾರವು ವಾಸ್ತುವಿನ ಮೇಲುಗೈಯಾಗದಂತೆ ನೋಡಿಕೊಂಡಿರುವುದು. ಒಟ್ಟಾರೆ ಗುಡಿಯ ಆಕರ್ಷಕ ಸಂವಿಧಾನ ಶ್ರೇಷ್ಠವಾದ ರೀತಿಯಲ್ಲಿ ಸೃಜಿಸಲ್ಪಟ್ಟಿದೆ. ನೋಡಿದಷ್ಟೂ ನೋಡಬೇಕೆಂಬ ಆಸೆಯನ್ನು ಬೆಳೆಸುತ್ತದೆ. ದೂರದ ನಾಡಿನಲ್ಲಿ ಭಾರತೀಯ ಸಂಸ್ಕೃತಿಯ ಕುರುಹಾಗಿ ನಮ್ಮ ಪುರಾತನರು ನಿರ್ಮಿಸಿದ ಈ ವಾಸ್ತು ನಿಜಕ್ಕೂ ಪ್ರಪಂಚದ ಅದ್ಭುತಗಳಲ್ಲಿ ಒಂದಾಗಿದೆ.

ಆ್ಯಂಕರ್ ಥಾಮ್ (ಕೇಂದ್ರ ನಗರ) : ಮೂಲವಾಗಿ ಕೇಂದ್ರ ನಗರವೆಂದು ಅರಸು ಯಶೋಧರಪುರವೆಂಬ ಹೆಸರಿನಲ್ಲಿ ಸುಮಾರು ೯ನೇ ಶತಮಾನದ ಅಂತ್ಯದಲ್ಲಿ ಇದನ್ನು ಸ್ಥಾಪಿಸಿದನು. ಇದೊಂದು ದೊಡ್ಡ ಕೋಟೆ. ಈ ಕೋಟೆಗೆ ನಾಲ್ಕು ದಿಕ್ಕಿಗೆ ನಾಲ್ಕು ಬಾಗಿಲುಗಳಲ್ಲದೇ ವಿಜಯದ ಬಾಗಿಲೆಂದು ದಿಗ್ವಿಜಯಕ್ಕೆ ಸೇನೆ ಹೊರಡುವಾಗ ತೆರೆಯಲ್ಪಡುತ್ತಲಿದ್ದ ಐದನೆಯ ಬಾಗಿಲೊಂದಿದೆ. ಕೋಟೆಯ ಸುತ್ತಲೂ ವಿಶಾಲವಾದ ಕಂದಕವಿದೆ.

ಪ್ರತಿದ್ವಾರಕ್ಕೆ ಎದುರಾಗಿ ಶಿಲೆಯ ಸೇತುವೆಗಳಿವೆ. ದ್ವಾರಗಳು ಆನೆಗಳು ಸಲೀಸಾಗಿ ದಾಟಿ ಬರುವಂತೆ ದೊಡ್ಡ ಪ್ರಮಾಣದಲ್ಲಿ ನಿರ್ಮಿಸಲ್ಪಟ್ಟಿವೆ. ದ್ವಾರದ ಮೇಲೆ ಚತುರ್ಮುಖ ಬ್ರಹ್ಮನನ್ನೂ (ಬರೀ ಶಿರೋಭಾಗ ಮಾತ್ರ) ನಿರ್ಮಿಸಿದ್ದಾರೆ. ಬೌದ್ಧಧರ್ಮ ಬಂದಮೇಲೆ ಅವನನ್ನೇ ಚತುರ್ಮುಖ ಅವಲೋಕಿತೇಶ ಎಂದೂ ಕರೆದರು. ಎಲಿಫೆಂಟಾ ಗುಹೆಯಲ್ಲಿರುವ ತ್ರಿಮೂರ್ತಿಯನ್ನು ಹೋಲುವ ಈ ಶಿಲ್ಪಗಳನ್ನು ಪ್ರತಿದ್ವಾರದ ಮೇಲೂ ನಿರ್ಮಿಸಿದ್ದಾರೆ. ದ್ವಾರ ಸೇತುವೆಯ ಇಕ್ಕೆಲಗಳಲ್ಲಿ ವಾಸುಕಿಯನ್ನು ಹಿಡಿದು ಸಮುದ್ರಮಥನ ಮಾಡುವ ದೇವದಾನವರನ್ನೂ ರೂಪಿಸಿದ್ದಾರೆ.

ಈ ಕೋಟೆಯ ಒಳಗಡೆ ಅನೇಕ ದೇವಾಲಯಗಳೂ ರಾಜಮನೆತನದ ನಿವಾಸಗಳೂ ಪ್ರಭುಮನೆಯೂ ಇದ್ದವು. ದೇವಾಲಯಗಳು ಭಗ್ನ ಸ್ಥಿತಿಯಲ್ಲಾದರೂ ಉಳಿದಿವೆ. ಆದರೆ ಅರಮನೆ ನಾಶವಾಗಿದೆ. ಹಂಪೆಯ ಮಹಾನವಮಿ ದಿಬ್ಬದಂತೆ ಕಾಣುವ ದಿಬ್ಬಗಳಿವೆ. ಈಜುಕೊಳವಿದೆ. ಈ ಆವರಣದ ಪ್ರಮುಖ ದೇವಾಲಯ, ಬಯೋನ್. ಈ ದೇವಾಲಯವನ್ನು ನಿರ್ಮಿಸಿದ ಉದ್ದೇಶ ಇನ್ನೂ ತಿಳಿದುಬಂದಿಲ್ಲ. ಈ ಆವರಣದ ಕೇಂದ್ರಬಿಂದುವಾಗಿ ನಿಂತಿರುವ ಈ ಮಂದಿರವನ್ನು ಏಳನೆಯ ಜಯವರ್ಮನು ಹನ್ನೆರಡನೆಯ ಶತಮಾನದಲ್ಲಿ ನಿರ್ಮಿಸಿರಬೇಕೆಂದು ಊಹೆ. ಈ ಪ್ರಭುವು ಬೌದ್ಧ ಮತಾವಲಂಬಿಯಾದ ಕಾರಣ ಈ ದೇವಾಲಯವನ್ನು ಅವಲೋಕಿತೇಶನಿಗೇ ನಿರ್ಮಿಸಿರಬೇಕೆಂದು ಹಲವರ ಅಭಿಪ್ರಾಯ. ಉನ್ನತ ಸ್ಥಾನದಲ್ಲಿರುವ ಮೂಲ ಗರ್ಭಗುಡಿ, ಅದಕ್ಕೆ ನೇರವಾಗಿ ಇರುವ ಏಳು ಬಾಗಿಲುಗಳು, ಮಧ್ಯದ ಗರ್ಭಗುಡಿಗೆ ನಾಲ್ಕುದಿಕ್ಕಿನಲ್ಲಿ ನಾಲ್ಕು ಮರಿಗುಡಿಗಳು, ಮಧ್ಯದಲ್ಲಿ ಅತಿ ಎತ್ತರದ ಶಿಖರ. ಅನಂತರ ನಾಲ್ಕು ಕೊಂಚ ಕಡಿಮೆ ಎತ್ತರದ ಶಿಖರಗಳು. ಈ ಶಿಖರದಲ್ಲಿ ಚಿತ್ರಿತವಾಗಿರುವ ಚತುರ್ಮುಖಗಳು ಇದೊಂದು ಹಿಂದೂ ದೇವಾಲಯವೆಂದೇ ನಂಬಿಕೆ ಹುಟ್ಟಿಸುತ್ತವೆ. ಹೊರಗಿನಾವರಣದ ಗೋಡೆಯ ಮೇಲೆ ಜಯವರ್ಮನ ದಿಗ್ವಿಜಯಗಳನ್ನು ಕೊರೆಯಲಾಗಿದೆ. ಅತ್ಯಂತ ಅದ್ಭುತವೂ, ಕಲೆ ಮತ್ತು ಇತಿಹಾಸಧರ್ಮಗಳ ದೃಷ್ಟಿಯಿಂದ ಮಹತ್ವದ್ದೂ ಆದ ಈ ದೇವಾಲಯದ ಮೇಲೆ ಪ್ರಕೃತಿ ವಿಪರೀತ ದಾಳಿಮಾಡಿತ್ತು. ಸದ್ಯ ಎಲ್ಲವನ್ನೂ ಪುನರ್‌ವ್ಯವಸ್ಥೆಗೊಳಿಸಿದ್ದಾರೆ.

ಬ್ಯಾಂಟೆ ಶ್ರೀ (BANTEY SREI) ಅಸಮಾನ ಶಿಲ್ಪ ; ೧೯೧೪ ರಲ್ಲಿ ಫ್ರೆಂಚ್ ಲೆಫ್ಟಿನೆಂಟ್ ಮರೆಸ್ ಪ್ರಥಮತಃ ಈ ದೇವಾಲಯವನ್ನು ಪತ್ತೆ ಹಚ್ಚಿದರು. ೧೯೨೩ರಲ್ಲಿ ಮಾರ್ಷಲ್ ಎಂಬ ಮಹನೀಯರು ಸ್ವಯಂ ತನಿಖೆಯಲ್ಲಿ ಇದನ್ನು ಜೀರ್ಣೋದ್ಧಾರ ಮಾಡಿಸಿದರು. ಇಲ್ಲಿ ರುವ ಶಾಸನಗಳ ಪ್ರಕಾರ ಪರಮ ಶಿವಭಕ್ತನಾದ ಐದನೆಯ ಜಯವರ್ಮನು ತನ್ನ ಇಷ್ಟದೈವ ಶಿವನಿಗಾಗಿ ಈ ಸುಂದರ ಮಂದಿರವನ್ನು ನಿರ್ಮಿಸಿದನು. ಈ ಸ್ಥಳಕ್ಕೆ ಈಶ್ವರಪುರವೆಂದು ನಾಮಕರಣ ಮಾಡಿದನು. ಈ ದೇವಾಲ ಯದ ಪ್ರಾಂಗಣವು ಆಯತಾಕಾರವಾಗಿದೆ. ಕೂಟಗರ್ಭಗುಡಿಗಳಲ್ಲಿ ಪ್ರಧಾನ ವಾಗಿ ಮಧ್ಯಮಂದಿರದಲ್ಲಿ ಲಿಂಗವನ್ನು, ಬಲಗಡೆಗೆ ವಿಷ್ಣುವನ್ನು ಎಡಗಡೆಗೆ ಮೂರ್ತಿಮಂತ ಶಿವನನ್ನೂ ಪ್ರತಿಷ್ಠಾಪಿಸಿದ್ದರಂತೆ. ಈ ದೇವಾಲಯದಲ್ಲಿ ದೊರೆತ ಶಿವಪಂಚಾಯತನ ಶಿಲ್ಪ ನಾಂಪೆನ್ ಮ್ಯೂಜಿಯಂ ಸೇರಿದೆ. ಈ ದೇವಾಲಯದ ಗೋಪುರ ಶಿಲ್ಪ, ಗರ್ಭಗುಡಿಯ ಪೀಠದ ಶಿಲ್ಪ ಮತ್ತು ನಯವಾದ ಕುಸುರಿನ ಕೆತ್ತನೆಯ ಕೆಲಸ, ಸೋಮನಾಥಪುರದ ಕೇಶವ ದೇವಾಲಯವನ್ನು ನೆನಪಿಗೆ ತರುತ್ತವೆ.

ಬಾಗಿಲು ಚೌಕಟ್ಟಿನ ಸುಳುವಿನ ಕೆಲಸ, ಬೋದಿಗೆಯ ಮೇಲೆ ಮಾಡಿ ರುವ ಚಿತ್ತಾರ ಅಪೂರ್ವವಾಗಿದೆ.

ರಾಮಾಯಣದ ಕಥಾನಕಗಳನ್ನೂ ಸ್ಕಂದನನ್ನೂ ಗಣಪತಿಯನ್ನೂ ಅನೇಕ ರಾವಣಾದಿ ಶಿವಭಕ್ತರನ್ನೂ ಕೊರೆದಿದ್ದಾರೆ. ಗರ್ಭಗುಡಿಯ ಬಾಗಿ ಲಲ್ಲೆ ವೀರಮುಂಡೆ ಹಾಕಿ ಕುಳಿತ ಭಜರಂಗಬಲಿ, ಹನುಮಂತ ಮತ್ತು ಗೌಡರು ಯಾರನ್ನಾದರೂ ಆಕರ್ಷಿಸುತ್ತಾರೆ. ಶಿವಪುರಾಣದ ಅನೇಕ ಪ್ರಸಂಗಗಳನ್ನು ಒಂದು ಕಡೆಗೆ ಕೆತ್ತಿದ್ದಾರೆ. ಕಂಸವಧೆಯ ಪ್ರಸಂಗವನ್ನೂ ಮತ್ತೊಂದು ಕಡೆ ಕೆತ್ತಿದ್ದಾರೆ. ಈ ದೇವಾಲಯದ ಮುಂಭಾಗದ ಗೋಪುರ ಗಳು ಐಹೊಳೆಯ ಮಾದರಿಯಾಗಿವೆ. ಇಲ್ಲಿಯ ಮುಖ್ಯ ಅಂಶವೆಂದರೆ ಶಿವನ ಈ ದೇವಾಲಯದಲ್ಲಿ ವಿಷ್ಣುವಿಗೂ ಸ್ಥಾನ ನೀಡಿದ್ದಾರೆ. ಶಿವಕಥೆಯ ಪಕ್ಕದಲ್ಲಿ ಕೃಷ್ಣಕಥೆಯನ್ನು ಚಿತ್ರಿಸಿದ್ದಾರೆ. ಈ ಸಂಗಮ, ಈ ಏಕತೆ ಹೃದ ಯಂಗಮವಾಗಿದೆ.

ಭಾರತೀಯ ಆಲಯಶಿಲ್ಪ ಮತ್ತು ಶಿಲ್ಪಕಲೆಯ ಪ್ರಬುದ್ಧ ಕುಸುಮ ಈ ದೇವಾಲಯ. ಜಕಣಾಚಾರಿಯ ಶಿಲ್ಪದಂತೆಯೇ ತೋರುವ ಈ ಮಂದಿರ ಆಶ್ಚರ್ಯಕರವಾಗಿ ಕುಂದಿಲ್ಲದೆ ರೂಪಗೊಂಡಿದೆ.

ಶಿವನ ಬಂಟ ನಂದಿ ಘಾಸಿಯಾಗಿದ್ದಾನೆ. ಎದುರಿನ ಧ್ವಜಸ್ತಂಭ ಎಲ್ಲಿಗೋ ಪಯಣಿಸಿದೆ. ಬಾಗಿಲುವಾಡಗಳು ತಲೆತಗ್ಗಿಸಿ ನಡೆವಷ್ಟು ಚಿಕ್ಕ ವಾಗಿವೆ. ಆದರೆ ಸೊಬಗಿನಲ್ಲಿ ಈ ದೇವಾಲಯ ಕಿರಿದಾದರೂ ಹಿರಿಮೆ ಯನ್ನು ಪಡೆದಿದೆ. ಸುತ್ತಲಿನ ವನರಾಶಿ, ಪಕ್ಷಿಸಂಕುಲ, ನಿರ್ಜನ ನೀರವತೆ, ಈ ಶಿಲ್ಪದ ಅಚ್ಚ ಭಾರತೀಯತೆ, ನಮಗೆ ಕಾಂಭೋಜವನ್ನು ನಮ್ಮ ನಾಡೆನಿಸುವಂತೆ ಮಾಡುತ್ತನೆ.

ಅ್ಯಂಕರ್‌ವಾಟ್ ದೇವಾಲಯದ ಅಂಗಳದಲ್ಲಿ ವಾರಕ್ಕೆ ಮೂರು ಬಾರಿ ಸರಕಾರದವರು ನೃತ್ಯಕಾರ್ಯಕ್ರಮ ಏರ್ಪಡಿಸುತ್ತಾರೆ. ಇಂತಹ ಒಂದು ಕಾರ್ಯಕ್ರಮವನ್ನು ನೋಡುವ ಸುಸಂಧಿ ನನಗೆ ದೊರೆಯಿತು. ಅರಮನೆಗೆ ಸೇರಿದ ರಾಯಲ್ ಬ್ಯಾಲೆ ಶಿಕ್ಷಣಕೇಂದ್ರದಲ್ಲಿ ಚಿಕ್ಕಮಕ್ಕಳಿಗೆ ಪುಕ್ಕಟೆ ತರಬೇತಿ ನೀಡಲಾಗುತ್ತದೆ. ನೃತ್ಯವ್ಯವಸಾಯದಿಂದ ವಿರಾಮ ಪಡೆದ ಹೆಂಗಳೆಯರು ಶಿಕ್ಷಣ ನೀಡುತ್ತಾರೆ. ಕಾಂಭೋಜ ನೃತ್ಯ ಸಂಪ್ರದಾಯದಲ್ಲಿ ಗಂಡು ಪಾತ್ರಧಾರಿಗಳು ಪಾತ್ರಕ್ಕೆ ತಕ್ಕಂತಹ ಮುಖವಾಡಗಳನ್ನು ಧರಿಸು ತ್ತಾರೆ. ಸ್ತ್ರೀ ಪಾತ್ರಧಾರಿಗಳು ವೈಭವಯುತವಾಗಿ ಅಲಂಕರಿಸಿಕೊಳ್ಳುತ್ತಾರೆ. ನೃತ್ಯಗಾರರಿಗೆ ಬಹುಬೆಲೆಯ ದುಕೂಲಗಳನ್ನು, ಸುವರ್ಣಕಿರೀಟಾದಿ ಆಭರಣಗಳನ್ನು ತಯಾರಿಸುತ್ತಾರೆ. ಇವರ ವಾದ್ಯಮೇಳದಲ್ಲಿ ಅನೇಕ ಚೀನೀ ವಾದ್ಯಗಳಿವೆ. ಜಲತರಂಗದಂತೆ ನಾದ ಹೊಮ್ಮಿಸುವ ಬಿದರಿನ ಚೀನೀ ವಾದ್ಯವೇ ಪ್ರಮುಖವಾದುದು.

ಭಾರತೀಯ ವಾದ್ಯಗಳಾದ ತಾಳ ಕೊಳಲು ಢಕ್ಕೆ ಉಪಯೋಗದಲ್ಲಿವೆ. ಯಕ್ಷಗಾನ ಬಯಲಾಟದಲ್ಲಿ ಹಿಮ್ಮೇಳದವರು ನಿಧಾನವಾಗಿ ಹಾಡಿದಂತೆ ಆಗಾಗ್ಗೆ ಬಹುನಿಧಾನವಾದ ರಾಗದಲ್ಲಿ ಕಥಾಭಾಗವನ್ನು ರೂಪಿಸುತ್ತಾರೆ. ಅ್ಯಂಕರ್‌ದಲ್ಲಿ ದೇವತೆಗಳನ್ನೂ ರಾಕ್ಷಸರನ್ನೂ ಹನುಮಗರುಡಾದಿಗಳನ್ನೂ ರಾಮಕೃಷ್ಣರನ್ನೂ ರಾಜಮಹಾರಾಜರನ್ನೂ ಕಿನ್ನರ ಕಿಂಪುರುಷ ಅಪ್ಸರೆಯ

ರನ್ನೂ ಯಾವ ರೀತಿ ಶಿಲ್ಪದಲ್ಲಿ ಮೂಡಿಸಿರುವರೋ ಅದೇ ರೀತಿ ಪಾತ್ರ ಗಳಿಗೆ ಅಲಂಕಾರ ಮಾಡುತ್ತಾರೆ.

ಪ್ರಮುಖವಾಗಿ ಭರತನಾಟ್ಯ ಮತ್ತು ಕಥಕ್ಕಳಿಯ ಪ್ರಭಾವ ಈ ನೃತ್ಯ ಗಳ ಮೇಲೆ ಎದ್ದು ಕಾಣುತ್ತದೆ. ನೃತ್ಯದ ಮೊದಲಿಗೆ ಸುಸ್ವಾಗತ ಮತ್ತು ರಂಗಪೂಜೆ. ಆದರೆ ತಾಳ ಮತ್ತು ಗತಿ ಬಹು ನಿಧಾನ. ಮುದ್ರೆಗಳು ಸನಾತನವಾಗಿರುವುದರಿಂದ, ಅದರ ಮೇಲೆ ಯಾವ ಕಲಾವಿದನೂ ಪ್ರಯೋ ಗಕ್ಕೆ ಕೈಹಾಕದಿರುವುದರಿಂದ ಭರತನಾಟ್ಯದ ಮುದ್ರೆಗಳಂತೆ ವೈವಿಧ್ಯಮಯ ವಾಗಿ ಪ್ರಸ್ಫುಟವಾಗಿ ಇಲ್ಲ. ಇವರ ಹಿಮ್ಮೇಳ ಸಂಗೀತದ ಧಾಟಿ, ಕರ್ನಾ ಟಕದ ಅನೇಕ ಜಾನಪದ ಮಟ್ಟುಗಳನ್ನು ಹೋಲುತ್ತದೆ. ಪ್ರತಿಯೊಂದು ನೃತ್ಯಕಾರ್ಯಕ್ರಮದಲ್ಲಿ ರಾಮಾಯಣದ ಒಂದು ಪ್ರಸಂಗ, ಕಿನ್ನರಿಯ ಒಂದು ಕಥೆ, ಕಾಂಬೋಡಿಯಾಕ್ಕೆ ಆಗಮಿಸಿದ ಪ್ರಥಮ ಹಿಂದು ಮುಂತಾದ ಕಾರ್ಯ ಕ್ರಮಗಳಿರುತ್ತವೆ.

ರಾಮಾಯಣದ ವಾಲಿ ಸುಗ್ರೀವರ ಕದನಪ್ರಸಂಗವನ್ನು ಹತ್ತು ಹದಿನೈದು ವರ್ಷದ ಹೈದರು ಅದ್ಭುತವಾಗಿ ಅಭಿನಯಿಸಿದರು. **"ಕಾಂಭೋ ಜಕ್ಕೆ ಆಗಮಿಸಿದ ಮೊದಲ ಹಿಂದು"** ಪ್ರಸಂಗವಂತೂ ಮರೆಯಲು ಸಾಧ್ಯವಿಲ್ಲ. ಪಂಚೆಯುಟ್ಟು ಅರ್ಧ ತೋಳಿನ ಮೇಲಂಗಿ ಹಾಕಿ ಕೈಯಲ್ಲಿ ಮೃದಂಗ ಹಿಡಿದು ಧೃತ ತಾಳ ಗತಿಯಿಂದ ನರ್ತಿಸುತ್ತಾ ಕೆಳಗಿಳಿದನಂತೆ. ಅವನ ಜೊತೆಗಾರರು ತಾಳ, ಕೊಳಲು ಮೃದಂಗ ಧರಿಸಿ, ಮುಖವಾಡ ಧರಿಸಿ ಮಾಡಿದ ನೃತ್ಯ ನಿಜಕ್ಕೂ ಭಾರತೀಯವೇ ಆಗಿತ್ತು.

ಸರಕಾರದ ಪ್ರವಾಸೀ ವಿಭಾಗದವರು ಒಂದೆರಡು ಪ್ರಚಾರ ಸಿನಿಮಾ ತೋರಿಸಿದರು. ಕಾಂಭೋಜದಲ್ಲಿ ಮೊದಲ ಮಳೆಯಾಗಿ ಭೂಮಿಯನ್ನು ಹದ ವಾಗಿ ಮಾಡುವ ಕಾಲ ಸಂಧಿಸಿದಾಗ ಶುಭ ಮಹೋತ್ಸವದಲ್ಲಿ ಅರಸ ಬಹಿರಂಗಸಭೆಯಲ್ಲಿ ನೇಗಿಲಪೂಜೆ ಮಾಡಿ, ಒಂದು ಸುತ್ತು ಉತ್ತು ವ್ಯವ ಸಾಯಾರಂಭಕ್ಕೆ ದಾರಿ ತೋರುತ್ತಾನೆ. ಈ ಸಮಾರಂಭದ ವಿಶೇಷ ಚಿತ್ರ ವನ್ನು ನೋಡಿದೆವು. ಅರಸು ನರದೊಂ ಸಿಹನೋಕ್ ಧರಿಸಿದ ವೇಷ ಭೂಷಣ ಮತ್ತು ಶಿರಸ್ತ್ರಾಣ ನಮ್ಮ ಪಾಂಡ್ಯ ಅರಸರನ್ನು ಹೋಲುತ್ತಿ

ದ್ದವು. ಅವರ ನೇಗಿಲಪೂಜೆ, ಮೈಸೂರು ಅರಮನೆಯ ಆಯುಧಪೂಜೆಯ ಸಮಾರಂಭವನ್ನು ನೆನಪಿಗೆ ತರುತ್ತಿತ್ತು.

ಕಾಂಭೋಜರ ಭಾಷೆ ಪಾಲಿಯಿಂದ ಜನ್ಮವಾದುದೆಂದು ತೋರುತ್ತದೆ. ಆದರೆ ದ್ರಾವಿಡ ಭಾಷೆಗಳ ಪ್ರಖರ ಪ್ರಭಾವ ಅದರ ಮೇಲಾಗಿದೆ. ಅಕ್ಷರ ಮಾಲೆಯ ಅನೇಕ ಶಬ್ದಗಳು ತಮಿಳು ಮತ್ತು ಮಳೆಯಾಳದಂತೆ ತೋರುತ್ತವೆ, ಪೆನ್–ಪೆಣ್ ಎಂದೇ ಅವರ ಭಾಷೆಯ ಅರ್ಥ. ಸ್ರಾಸ್-ಸರಸ್-ಕೊಳ. ಅನೇಕ ದ್ರಾವಿಡ ಭಾಷಾ ಪದಗಳು ಅಪಭ್ರಂಶಗೊಂಡು ಸೇರಿವೆ. ಎಲ್ಲಕ್ಕಿಂತ ದುರ ದೃಷ್ಟಕರ ಸಂಗತಿ ಎಂದರೆ ಈ ದೇಶದಲ್ಲಿ ನಾನಾಕಡೆ ನಶಿಸಿ ಹೋಗುತ್ತಿ ರುವ ಅನೇಕ ಅಮೂಲ್ಯ ಶಿಲಾಶಾಸನಗಳು (ಸಂಸ್ಕೃತ ಮತ್ತು ಪಾಲಿ) ಇನ್ನೂ ಓದಿಲ್ಲ. ಸಮರ್ಥ ಭಾರತೀಯ ವಿದ್ವಾಂಸರು ಇವನ್ನು ಅಭ್ಯಸಿಸಿ ಅರ್ಥೈಸಿದರೆ ಭಾರತೀಯ ಮತ್ತು ಕಾಂಭೋಜದ ಐತಿಹಾಸಿಕ ಪರಂಪರೆಯ ನಿಜವಾದ ಎತ್ತರ ಬಿತ್ತರಗಳು ತಿಳಿದಾವು. ಅನೇಕ ದೇವಾಲಯಗಳನ್ನು ಮತ್ತು ಐತಿಹಾಸಿಕ ಸ್ಮಾರಕಗಳನ್ನು ಫ್ರೆಂಚ್ ತಜ್ಞರ ಸಹಾಯದಿಂದ ಪುನ ರುಜ್ಜೀವನಗೊಳಿಸಿದ್ದಾರೆ. ಭಾರತೀಯ ದರ್ಶನದ ಅಜ್ಞಾನದಿಂದ ಈ ಮಹನೀಯರುಗಳು ಈ ದೇವಾಲಯಗಳಿಗೆ ಚಿತ್ರವಿಚಿತ್ರ ಹೆಸರಿಟ್ಟದ್ದಾರೆ. ಅನೇಕ ಬಾರಿ ಈ ಹೆಸರುಗಳಿಗೆ ಅರ್ಥವೇ ಇಲ್ಲ. ಪ್ರತಿಯೊಂದು ಸ್ಥಳಕ್ಕೆ ಸರಕಾರ ಆಯಾ ಸ್ಥಳದ ಪುರಾತನವಾದ-ನಿಜವಾದ-ಹೆಸರನ್ನೇ ಕರೆಯ ಬೇಕು. ವಿಜಯವಿಠ್ಠಲನ ಗುಡಿಗೆ ಆ ಹೆಸರಿನ ಬದಲು ಸ್ಟೋನ್‌ಕಾರ್ ಟೆಂಪಲ್ ಎಂದಾಗಲೀ, ಪುರಂಧರ ಮಂಟಪಕ್ಕೆ ರಿವರ್‌ಸೈಡ್ ಪೆವಿಲಿಯನ್ ಎಂದಾಗಲೀ. ಕರೆದರೆ ವಾಕರಿಕೆ ಬರುವುದಿಲ್ಲವೇ ? ಅನೇಕ ಸ್ಥಳಗಳಲ್ಲಿ ಅತಿಜರೂರಾಗಿ ಜೀರ್ಣೋದ್ಧಾರ ಕಾರ್ಯ ಜರುಗಬೇಕಾಗಿದೆ.

ಸರಕಾರ ಪಕ್ಕದ ಥಾಯ್‌ಲ್ಯಾಂಡ್ ಮತ್ತು ದಕ್ಷಿಣ ವಿಯೆಟ್ನಾಂ ಜೊತೆಗೆ ಸೌಹಾರ್ದವಾಗಿಲ್ಲದ ಕಾರಣ ಸೈನ್ಯಕ್ಕೆ ಹೇರಳವಾಗಿ ಖರ್ಚು ಮಾಡುತ್ತಿದೆ. ಯಾವತ್ ಪ್ರಪಂಚದ ಕಲಾಭಂಡಾರಕ್ಕೆ ಸೇರಿದ ಮತ್ತು ಮಾನವತೆಯ ಮಹತ್ವದ ಐಶ್ವರ್ಯಭಾಗವಾದ ಈ ದೇವಾಲಯಗಳನ್ನು

ಕೂಡಲೇ ರಕ್ಷಿಸಲು ಯುನೆಸ್ಕೋದಂತಹ ಸಂಸ್ಥೆಗಳಾದರೂ ಮುಂದೆಬರ ಬೇಕು. ಇಲ್ಲವಾದರೆ ಈಗಾಗಲೇ ನೆಲಸಮವಾಗಿರುವ ಅನೇಕ ಸ್ಥಳಗಳಂತೆ ಇವೂ ಆಗುತ್ತವೆ.

ಕಾಂಭೋಜ ಜನಾಂಗ ತೀರ ಸರಳರು. ಮನೆಮನೆಯಲ್ಲಿ ಕೈಗಾರಿಕೆ, ಕಲೆ ರಕ್ತಗತವಾಗಿ ಬಂದಿವೆ. ಬಿದಿರು, ಎಮ್ಮೆಯಕೋಡು, ಉಕ್ಕು ಮತ್ತು ಕಲ್ಲಿನಲ್ಲಿ ಅನೇಕ ವಸ್ತುಗಳನ್ನು ಮಾಡುತ್ತಾರೆ. ದೇವಾಲಯದ ಗೋಡೆಯ ಅದ್ಭುತ ಬೊಂಬೆಗಳ ಪಡಿಯಚ್ಚು ತೆಗೆದು 'ರಬ್ಬಿಂಗ್ಸ್' ಮಾಡುತ್ತಾರೆ ವಿಧವಿಧವಾದ ವರ್ಣಗಳಲ್ಲಿ ತೆಗೆದ ಈ ಪಡಿಯಚ್ಚುಗಳು ಮೋಹಕವಾಗಿರು ತ್ತವೆ. ಇಂತಹ ಉಪಯೋಗದಿಂದ ಕಾಲಾಂತರದಲ್ಲಿ ಶಿಲ್ಪದ ಸ್ಫುಟತೆ ಮಾಯವಾಗಬಹುದು. ಸರಕಾರ ಇದನ್ನು ಯೋಚಿಸಿಲ್ಲ. ಈ ಜನ ತುಂಬಾ ಸ್ನೇಹಪರರು. ಇವರ ಜೀವನ ಆಹಾರ, ವಿಹಾರ, ಹಬ್ಬ ಹುಣ್ಣಿಮೆ ಭಾರತೀ ಯರ ಪ್ರಭಾವಕ್ಕೆ ಒಳಗಾಗಿದೆ. ಕಾಂಬೋಡಿಯಾದ ಅತಿ ಪ್ರಿಯವಾದ ವಾಹನ ಸೈಕಲ್ ಮತ್ತು ಅತಿಪ್ರಿಯವಾದ ಆಹಾರ ಅಕ್ಕಿ.

ಈ ದೇಶದ ರಾಜರು ಎಂದಿನಿಂದಲೂ ಜನಾನುರಾಗಿಗಳಾಗಿದ್ದಾರೆ. ದೇಶದ ನಾಣ್ಯವಾದ 'ರೀಲ್' ಬೆಲೆಯನ್ನು ಕೃತಕವಾಗಿ ಮೇಲೇರಿಸಿದ್ದಾರೆ. ರೀಲ್‌ದ ಸರಕಾರೀ ಬೆಲೆ ಒಂದು ಅಮೇರಿಕನ್ ಡಾಲರ್‌ಗೆ ಮೂವತ್ನಾಲ್ಕು. ಆದರೆ ಪ್ರವಾಸಿಗರಿಗೆ ಬೋನಸ್ ಎಂದು ೨೫ ಸೇರಿಸಿ ಸುಮಾರು ೫೯ ನೀಡು ತ್ತಾರೆ. ಪ್ರಪಂಚದಲ್ಲಿ ಈ ದೇಶದಲ್ಲಿ ಮಾತ್ರ ನಾಣ್ಯಗಳೇ ಇಲ್ಲ. ಬರೀ ಕಾಗದದ ಹಣ. ರೀಲ್ ವಿಕ್ಕರೆ ಮರುಪಾವತಿ ಮಾಡಿ ಡಾಲರ್ ಪಡೆ ವುದು ಸಾಧ್ಯವೇ ಇಲ್ಲ. ಈ ದೇಶದಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ಪ್ರವೇಶ ವಿಲ್ಲ. ಸರಕಾರದ ವಿದೇಶ ನೀತಿ ಒಮ್ಮೊಮ್ಮೆ ವಿಚಿತ್ರವೆನಿಸುತ್ತದೆ. ಆದರೆ ದೇಶದ ಸುತ್ತಲೂ ಸಂದಿಗ್ಧ ಮತ್ತು ಸಾಂಕ್ರಾಮಿಕ ವಾತಾವರಣ ಈ ಎಲ್ಲ ನಿರ್ಬಂಧಗಳಿಗೆ ಕಾರಣವಾಗಿರಬೇಕು. ಪ್ರತಿಯೊಂದರಲ್ಲಿ ಪ್ರವಾಸಿ ಗಳಿಂದ ಚೆನ್ನಾಗಿ ಹಣ ಮಾಡುತ್ತಾರೆ.

ಸಿಯಂ ರೀಪ್‌ನಿಂದ (SEAM REAP) ನಾಂಪೆನ್‌ಗೆ ಬಂದವನು ರೂಮಿನಲ್ಲಿ ಸಾಮಾನೆಲ್ಲಾ ಇಳಿಸಿ ನರೋತ್ತಮ ಅರಮನೆ ನೋಡಲು ತೆರಳಿದೆ.

ನಾಂಪೆನ್ ತುಂಬಾ ಸುಂದರ ನಗರ, ವಿಶಾಲವಾದ ಬೀದಿಗಳು, ಬೀದಿಯು ಮಧ್ಯೆ ಹಸಿರು ಹುಲ್ಲಿನ ಹಾಸು. ಬೀದಿಗಳನ್ನು ವೀಧಿ ಎಂದು ಕರೆಯುತ್ತಾರೆ. ದೊಡ್ಡ ರಸ್ತೆಗಳನ್ನು ಮಹಾವೀಧಿ ಎಂದು ಕರೆಯುತ್ತಾರೆ ಪಂಡಿತ ಜವಾಹರಲಾಲ್ ನೆಹರೂರವರ ಹೆಸರಿನ ವೀಧಿಯೊಂದಿದೆ. ಪುರಾತನ ಅರಸರಾದ ಜಯುವರ್ಮ ಮತ್ತು ಸೂರ್ಯವರ್ಮರ ಹೆಸರಿನ ವೀಧಿಗಳಿವೆ. ಆಧುನಿಕ ವಿಶ್ವವಿದ್ಯಾಲಯವನ್ನು ಕಟ್ಟಿದ್ದಾರೆ. ಅರಮನೆಯ ಆವಾರದಲ್ಲಿ ಅನೇಕ ಕಟ್ಟಡಗಳಿವೆ. ಈಗಿನ ಅಧಿಪತಿಯಾದ ನರೋದಮ್ ಸಿಹನೋಕರು ಪ್ರತ್ಯೇಕವಾದ ಆಧುನಿಕ ಅರಮನೆಯಲ್ಲಿ ವಾಸಿಸುತ್ತಾರೆ. ಇಲ್ಲಿಯ ಅರಮಾನೆಯಲ್ಲಿ ರಾಜಮಾತೆ ವಾಸಿಸುತ್ತಾರೆ. ರಾಜವಾಡೆಯ ಒಂದು ಬದಿಗೆ ಅನೇಕ ಸ್ತೂಪಗಳಿವೆ. ಮೊದಲಿನ ರಾಜರ ಭಸ್ಮ ಮತ್ತು ಅಸ್ಥಿಗಳನ್ನು ಈ ಸ್ತೂಪಗಳಲ್ಲಿ ಇರಿಸಿದ್ದಾರೆ. ಇನ್ನೊಂದು ಕಡೆಯ ಎರಡು ಕಟ್ಟಡಗಳಲ್ಲಿ ಬ್ಯಾಲೆ ನೃತ್ಯ ಕಲಿಸುತ್ತಾರೆ. ಮಧ್ಯವರ್ತಿಯಾಗಿರುವ ಕಟ್ಟಡವೇ ದರ್ಬಾರ್ ಹಾಲು. ಇಲ್ಲಿಯೇ ಕಾಂಭೋಜರ ಸಿಂಹಾಸನವಿದೆ. ಪಟ್ಟಾಭಿಷೇಕದ ಕಾಲದಲ್ಲಿ ಮಾತ್ರ ರಾಜನು ಈ ಸಿಂಹಾಸನವನ್ನು ಏರುತ್ತಾನೆ. ಉಳಿದಂತೆ ಬೇರೊಂದು ಆಸನವನ್ನು ಉಪಯೋಗಿಸುತ್ತಾರೆ. ಈ ಭವನದ ಮುಚ್ಚಿನಲ್ಲಿ ರಾಮಾಯಣವನ್ನು ತೈಲ ವರ್ಣದಲ್ಲಿ ಚಿತ್ರಿಸಿದ್ದಾರೆ. ದೇಶದ ಅಟ್ಟಹಾಸಕ್ಕೆ ತಕ್ಕಂತೆ ವೈಭವಪೂರಿತವಾಗಿದೆ ಈ ಭವನ.

ಇನ್ನೊಂದು ಭಾಗದಲ್ಲಿ ರಾಜವಾಡೆಯ ದೇವಾಲಯವಿದೆ. ಈ ದೇವಾಲಯದಲ್ಲಿ ಗಣೇಶನ ಮೋಹಕ ವಿಗ್ರಹವಿದೆ. ಆತನ ಹಿಂದೆ ಅನೇಕ ಹಿಂದೂ ದೇವರುಗಳಿವೆ. ಇವರಿಗೆ ಸದಾ ಬೆಳಗುವ ಮಂಗಳ ದೀಪವನ್ನು ವ್ಯವಸ್ಥೆ ಮಾಡಿದ್ದಾರೆ. ರಾಜಮನೆತನದ ಪೌರೋಹಿತ್ಯಕ್ಕೆ ಕಾಶಿಯಿಂದ ಸಕಲ ಶಾಸ್ತ್ರ ವಿಶಾರದರು ನೇಮಿತರಾಗಿದ್ದಾರೆ.

ಇಲ್ಲಿಯೇ ಇರುವ ಚಿಕ್ಕ ವಸ್ತುಸಂಗ್ರಹಾಲಯುವಲ್ಲಿ ರಾಜಮನೆತನಕ್ಕೆ ಸೇರಿದ ಆಭರಣಗಳಿವೆ. ಆ್ಯಂಕರದಲ್ಲಿ ದೊರೆತ ಅಮೂಲ್ಯವಾದ ರಾಜಖಡ್ಗವಿದೆ. ರತ್ನಖಚಿತವಾದ ಈ ಸುವರ್ಣ ಕರವಾಲವನ್ನು ಕಾಂಭೋಜ ದೇಶದ ಹೆಮ್ಮೆಯ ಗುರುತೆಂದೂ ಗೌರವವೆಂದೂ ಇತಿಹಾಸದ ಕುರುಹೆಂದೂ ಪವಿತ್ರ

ಸಂಪ್ರದಾಯದ ಚೇತನವೆಂದೂ ಅಮೂಲ್ಯ ಆಸ್ತಿಯೆಂದೂ ತಿಳಿಯಲಾಗುತ್ತದೆ. ಕಾಂಬೋಡಿಯಾದ ಹಿಂದಿನ ಅರಸರಿಗೆ ಪ್ರಪಂಚದ ಅನೇಕ ಕಡೆಯಿಂದ ಬಂದ ಒಸಗೆಗಳು ಕೂಡಾ ಇಲ್ಲಿವೆ. ಅರಸರಿಗೆ ಸೋಮವಾರ ಪವಿತ್ರ ದಿನ– ಪೂಜೆಯ ದಿನ.

ಇಲ್ಲಿಯ ಸೈಕಲ್ ರಿಕ್ಷಾ ತುಂಬಾ ಅನುಕೂಲ ವಾಹನ. ನಮ್ಮಲ್ಲಿ ಸವಾರಿ ರಿಕ್ಷಾವಾಲನ ಹಿಂದೆ ಕುಳಿತರೆ, ಇಲ್ಲಿ ರಿಕ್ಷಾವಾಲನ ಮುಂದೆ ಕುಳಿತು ಕೊಳ್ಳುವಂತೆ ಈ ವಾಹನವನ್ನು ನಿರ್ಮಿಸಿದ್ದಾರೆ. ಕುರ್ಚಿಯಂತಿರುವ ಈ ಆರಾಮಾಸನದಲ್ಲಿ ಕುಳಿತು ಗಂಟೆಗೆ ಸುಮಾರು ರೂಪಾಯಿ ಕೊಟ್ಟು ಊರೆಲ್ಲಾ ತಿರುಗಿದೆ. ಜನತೆ ಎಲ್ಲ ಪೂರ್ವೀದೇಶಗಳಂತೆ ಬಡತನದಲ್ಲಿದೆ. ಸೋಮಾರಿಯಾಗಿದೆ. ನಿರ್ವಾಸಿತರಾಗಿ ಓಡಿಬಂದ ಚೈನೀಯರು ವ್ಯಾಪಾರ ಮಾಡಿ, ಸಾಕಷ್ಟು ಗಳಿಸಿದ್ದಾರೆ.

ಕಡೆಗೊಮ್ಮೆ ಏರ್ ವಿಯಟ್ನಾಂ ಕಂಪನಿಯ ವಿಮಾನದಲ್ಲಿ ನಾಂಪೆನ್‌ಗೆ ಪ್ರಣಾಮ ಮಾಡಿ ಸಯಾಮದ ರಾಜಧಾನಿ ಬಾಂಕಾಕ್‌ಗೆ ಪಯಣಿಸಿದೆ. ಭಾರತಕ್ಕೆ ಹತ್ತಿರ ಬಂದಂತೆ ಮನಸ್ಸು ಮನೆಯ ಕಡೆ ಓಡುತ್ತದೆ. ಆದಷ್ಟು ಬೇಗನೇ ಮನೆ ಸೇರಬೇಕೆಂಬ ಆಸೆ ಪ್ರಬಲವಾಗುತ್ತದೆ. ಸಯಾಮ್ ಅಥವಾ ಥಾಯ್‌ಲ್ಯಾಂಡ್ ಕೂಡಾ ಪ್ರಬಲವಾಗಿ ಭಾರತೀಯ ಪ್ರಭಾವಕ್ಕೆ ಒಳಗಾದ ದೇಶ. ಈ ದೇಶಗಳಿಗೆ ಹೃದಯವಂತಿಕೆಯನ್ನು ನೀಡಿದ ನಾಡು ನಮ್ಮದು. ಬದುಕಿನ ಹವಣವನ್ನು ಅರಿಯದೆ ಬಳಲುತ್ತಿದ್ದ ಅನೇಕ ಜನಾಂಗಗಳಿಗೆ ದಾರಿ ತೋರಿದ ಆ ನಮ್ಮ ಸ್ಥೈರ್ಯ ಮತ್ತೆ ಪ್ರಜ್ವಲಿಸೀತೆ ?

೧೩/ ಬ್ಯಾಂಕಾಕ್

ನಾಂಪೆನ್‌ನಿಂದ ಸುಮಾರು ಒಂದು ಗಂಟೆಯ ಪಯಣದ ನಂತರ ಬ್ಯಾಂಕಾಕ್ ಸೇರಿದೆವು. ವಿಮಾನವು ಸುಮಾರು ಹತ್ತು ಸಾವಿರ ಅಡಿ ಎತ್ತರ ದಲ್ಲಿ ಮಾತ್ರ ಯಾನ ಮಾಡಿದುದರಿಂದ ನಾವು ಮೇಘಾಲಯದಲ್ಲಿಯೇ ಹಾದು ಬಂದೆವು. ಕೆಳಗೆ ಕಣ್ಣು ಕಾಣುವವರೆಗೆ ಭತ್ತದ ಗದ್ದೆಗಳು. ಚಿತ್ರವಿಚಿತ್ರ ವಾಗಿ ಹರಿದಿರುವ ಥಾಯ್‌ಲ್ಯಾಂಡ್‌ದ ಗಂಗಾ—ಮೆಕೊಂಗ್, ಭರಪೂರ ಮಳೆ ಯಿಂದ ಮೆಕೊಂಗ್ ಕೆಲವೆಡೆ ದಂಡೆಯೊಡೆದು ಹರಿದಿತ್ತು. ಬೇಸಗೆಯಲ್ಲಿ ಇಲ್ಲಿಯ ಹಿಮಾಲಯದಲ್ಲಿಯ ಹಿಮ ಕರಗಿ ಮ್ಯೂಂ ನದಿ ತುಂಬಿ ಬರುತ್ತದೆ. ಈ ನದಿಯಿಂದ ಮತ್ತು ಇದರ ಉಪನದಿಗಳಿಂದ ಕಾಂಬೋಡಿಯಾ ಮತ್ತು ಥಾಯ್‌ಲ್ಯಾಂಡ್ ದೇಶದ ನೆಲ ನೀರುಣ್ಣುತ್ತದೆ.

ಬ್ಯಾಂಕಾಕ್ ವಿಮಾನ ತಾಣದಿಂದ ಒಂದೂವರೆ ತಾಸು ಪಯಣಿಸಿ ನ್ಯೂರೋಡ್‌ನ ಪ್ರಿನ್ಸೆಸ್ ಹೋಟೆಲ್ ಸೇರುವ ಹೊತ್ತಿಗೆ ಸಾಕಾಯಿತು. ಬ್ಯಾಂಕಾಕ್ ಅತಿ ಪುರಾತನ ರಸ್ತೆ ಈ ನ್ಯೂರೋಡ್. ಆ ಕಾಲದಲ್ಲಿ ಮೊದಲಿಗೆ ಹಾಕಿದ ರಸ್ತೆಯಾದ ಕಾರಣ ನ್ಯೂರೋಡ್ ಎಂದು ಕರೆಯ ಲ್ಪಟ್ಟಿತು. ಸುಮಾರು ಒಂದು ಕೋಟಿಯ ಜನಸಂಖ್ಯೆಯ ಥಾಯ್‌ಲ್ಯಾಂಡಿಗೆ

ಚಕ್ರವಂಶದ ಒಂಬತ್ತನೆಯ ರಾಮ, ಭೂಮಿಪಾಲದೇವ ಅರಸು. ಮೂವತ್ತು ವರುಷಗಳ ಕೆಳಗೆ ಅರಸೊತ್ತಿಗೆ ರಾಜ್ಯಘಟನೆಗೆ ಒಳಪಟ್ಟು ರಾಜಮಕುಟ ದೇಶದ ಚಿಹ್ನೆಯಾಗಿ ಮತ್ತು ಐತಿಹಾಸಿಕತೆಯ ಕುರುಹಾಗಿ ಉಳಿದರು. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಇಲ್ಲಿ ರಾಜ್ಯ ವ್ಯವಸ್ಥೆ ನಡೆದಿದೆ.

ಥಾಯ್‌ಲ್ಯಾಂಡ್ ಬುದ್ಧನ ನಾಡು. ಈ ನಾಡಿನ ರಾಜಧಾನಿ ಮೊದಲಿಗೆ ಸುಖೋದಯ, ಅನಂತರ ಅಯೋಧ್ಯೆ ಮತ್ತೆ ಕೊನೆಗೆ ಬ್ಯಾಂಕಾಕಿಗೆ ಸ್ಥಳಾಂತರಿಸಲ್ಪಟ್ಟಿದೆ. ಈ ದೇಶದ ಜನರಿಗೆ ಬೌದ್ಧ ಧರ್ಮ, ಜಾತಕಕತೆಗಳು ಮತ್ತು ರಾಮಾಯಣ ಕಾವ್ಯ ಅಸ್ತಿಭಾರವೆನಿಸಿವೆ. ಒಂದನೆಯ ಮತ್ತು ಎರಡನೆಯ ರಾಮದೊರೆಗಳು ಸ್ವಯಂ ಥಾಯಿ ಭಾಷೆಯಲ್ಲಿ ರಾಮಾಯಣ ರಚಿಸಿದ್ದಾರೆ. ನೂರಕ್ಕೆ ಎಂಬತ್ತರಷ್ಟು ಜನ ಬುದ್ಧನ ಅನುಯಾಯಿಗಳು. ಬ್ಯಾಂಕಾಕ್‌ನಲ್ಲಿ ಮಾತ್ರ ಚೀನೀಯರು ಮತ್ತು ಇತರರು ಇದ್ದಾರೆ. ಬರೀ ಬ್ಯಾಂಕಾಕ್ ನಗರದಲ್ಲಿ ಐನೂರಕ್ಕೂ ಮಿಕ್ಕು ಬುದ್ಧದೇವಾಲಯಗಳಿವೆ. ೨೫೦೦೦ ಬುದ್ಧ ಭಿಕ್ಷುಗಳಿದ್ದಾರೆ. ಪ್ರತಿ ಹುಡುಗ ೨೦ ವರ್ಷ ಪ್ರಾಪ್ತಿಸುತ್ತಲೇ ಮೂರು ತಿಂಗಳ ಕಾಲ ವಿಹಾರವೊಂದರಲ್ಲಿ ಬೌದ್ಧಭಿಕ್ಷುವಾಗಿ ಧಾರ್ಮಿಕ ತರಪೇತಿ ಪಡೆಯಬೇಕು. ಈ ಭಿಕ್ಷುಗಳು ವಿಹಾರಗಳಲ್ಲಿಯೇ ವಾಸಿಸುತ್ತಾರೆ. ಪ್ರತಿ ಬೆಳಗಿನಲ್ಲಿ ಮನೆ ಮನೆಗೆ ಭಿಕ್ಷಾಂದೇಹಿ ಎಂದು ಭಿಕ್ಷೆಬೇಡುತ್ತಾರೆ. ಥಾಯಿಗಳು ಬೆಳಗಿನಲ್ಲಿಯೇ ಎದ್ದು ಮೊದಲು ಇವರಿಗಾಗಿ ಅಡಿಗೆ ಮಾಡುತ್ತಾರೆ. ಕಡುಬಡವರಾದ ಹುಡುಗರು ಈ ಭಿಕ್ಷುಗಳಿಗೆ ಸಹಾಯ ಮಾಡುತ್ತಾರೆ ಮತ್ತು ಅವರೊಡನೆ ಉಣ್ಣುತ್ತಾರೆ. ಬೆಳಗಿನ ಹನ್ನೊಂದು ಗಟೆಯೊಳಗೆ ಒಂದಾವರ್ತಿ ಇವರು ಭುಜಿಸುತ್ತಾರೆ. ಅನಂತರ ಏನೂ ಸ್ವೀಕರಿಸುವುದಿಲ್ಲ. ಎಲ್ಲ ವಿಹಾರಗಳಲ್ಲಿ ಬಡ ಮಕ್ಕಳಿಗಾಗಿ ಪುಕ್ಕಟೆ ಶಾಲೆಗಳಿವೆ ಈ ಶಾಲೆಗಳನ್ನು ಭಿಕ್ಷುಗಳ ಸಹಾಯದಿಂದ ಸರಕಾರ ನಡೆಸುತ್ತದೆ. ಶಾಲೆಗಳಲ್ಲಿ ಇಂಗ್ಲಿಷ್ ಎರಡನೆಯ ಭಾಷೆ ಎಂದು ಕಲಿಸಲ್ಪಡುತ್ತದೆ. ಎಲ್ಲ ವಿಷಯಗಳನ್ನು ಥಾಯ್ ಭಾಷೆಯಲ್ಲಿ ಕಲಿಸುತ್ತಾರೆ. ಬುದ್ಧಭಿಕ್ಷುಗಳು ತಮ್ಮ ಧಾರ್ಮಿಕ ಪ್ರಸಂಗಗಳನ್ನು ಥಾಯಿಭಾಷೆಯಲ್ಲಿಯೇ ಮಾಡುತ್ತಾರೆ. ಪ್ರಾರ್ಥನೆಯನ್ನು ಪಾಲಿ ಮತ್ತು ಸಂಸ್ಕೃತ ಪುಸ್ತಕಗಳಿಂದ ಪಠಿಸುತ್ತಾರೆ. ಪ್ರತಿಯೊಂದು ಪಗೋಡ ಮತ್ತು ವಿಹಾರಗಳಲ್ಲಿ ಧಾರ್ಮಿಕ ಗ್ರಂಥದ ಗ್ರಂಥಾಲಯವಿರುತ್ತದೆ. ಎಲ್ಲವೂ ಪುರಾತನ ತಾಳೆಯೋಲೆ ಗ್ರಂಥಗಳೇ. ಇವರು ಬುದ್ಧನ ಎದುರಿಗೆ ನೇರ ಕುಳಿತು ಪ್ರಾರ್ಥಿಸದೆ ಭಾರತದ

ಕಡೆ (ಪಶ್ಚಿಮ) ಮುಖ ಮಾಡಿ ಪ್ರಾರ್ಥಿಸುತ್ತಾರೆ. ಬುದ್ಧನ ನಾಡಾದ ಭಾರತಕ್ಕೆ ಅವರ ಪ್ರಾರ್ಥನೆ.

ಹಿಂದೆ ಇಲ್ಲಿಯು ದ್ವಾರಾವತಿ ಎಂಬ ಸ್ಥಳದಲ್ಲಿ ದೊಡ್ಡ ವಿಶ್ವವಿದ್ಯಾಲಯವಿತ್ತಂತೆ. ಬಾಂಕಾಕಿನ ಮಧ್ಯದಲ್ಲಿಯ ವನವನ್ನು ಲುಂಬಿನೀ ವನವೆಂದು ಕರೆಯುತ್ತಾರೆ. ಈ ನಗರದಲ್ಲಿ ನಾಲ್ಕು ಮುಖ್ಯ ದೇವಾಲಯಗಳಿವೆ. ಮೊದಲನೆಯದಾಗಿ ೫½ ಟನ್ ಭಾರದ ಅಖಂಡ ಸುವರ್ಣ ಬುದ್ಧನ ದೇವಾಲಯ ಥಾಯ್‌ಲ್ಯಾಂಡಿನ ಉತ್ತರ ಪೀಠಭೂಮಿಯಲ್ಲಿದ್ದ ಮೊದಲ ರಾಜಧಾನಿಯಾದ ಸುಖೋದಯದಲ್ಲಿ ಉತ್ಖನನ ನಡೆಸಿದಾಗ ಈ ಮಹಾಬಲ ಸ್ವಾಮಿ ದೊರೆತನಂತೆ. ಈ ಸುವರ್ಣ ಮೂರ್ತಿಗೆ ಭದ್ರ ಕವಚವಾಗಿ ಪ್ಲಾಸ್ಟರಿನ ಹೊರಾವರಣವಿತ್ತಂತೆ. ಅದರ ಕೆಲ ತುಣುಕುಗಳನ್ನು ಇಟ್ಟಿದ್ದಾರೆ. ಕಣ್ಣುಗಳನ್ನು ಮುತ್ತಿನಿಂದ ಮಾಡಿದ್ದಾರೆ. ಅರ್ಧನಿಮೀಲಿತ ಕರುಣಾಮಯ ದೃಷ್ಟಿಯ ಈ ದೇವನನ್ನು ಯಾವ ಭಕ್ತನು ಮಾಡಿಸಿದ ಎಂಬುದು ಇದುವರೆಗೆ ತಿಳಿದುಬಂದಿಲ್ಲ. ಥಾಯಿಗಳು ಈ ಮೂರ್ತಿಗೆ ತಕ್ಕುದಾದ ಗುಡಿಯನ್ನು ಕಟ್ಟಿಲ್ಲ. ಆಲಯ ತೀರ ಚಿಕ್ಕದಿದೆ.

ಎರಡನೆಯದಾಗಿ ಐದನೆಯ ರಾಮದೊರೆಯಿಂದ ನಿರ್ಮಿಸಲ್ಪಟ್ಟ ಅನಂತಶಯನ ಬುದ್ಧ. ತಿರುವೇಂಡ್ರಂನ ಅನಂತಪದ್ಮನಾಭನಂತೆ ಉತ್ತರ ಮತ್ತು ದಕ್ಷಿಣ ಧ್ರುವಗಳಿಗೆ ತಾನೇ ತಾನಾಗಿ ಮಲಗಿದಂತೆ ತೋರುವ ಈ ಬುದ್ಧ ಅದ್ಭುತವಾಗಿದ್ದಾನೆ. ತೇಗದ ಮರದಿಂದ ಮೂರ್ತಿಯನ್ನು ಮಾಡಿ ಅದಕ್ಕೆ ಪ್ಲಾಸ್ಟರ್ ಮೆತ್ತಿ ಅನಂತರ ಸುವರ್ಣಪತ್ರದಿಂದ ಅಲಂಕರಿಸಿದ್ದಾರೆ (ಹೊದಿಸಿದ್ದಾರೆ). ಈ ಮೂರ್ತಿಯ ಬೃಹತ್ ಆಲಯದ ಗೋಡೆ ಮತ್ತು ಕವಾಟಗಳ ಮೇಲೆಲ್ಲ ಶಂಖದ ಇನ್‌ಲೇ ಕೆಲಸ ಮಾಡಿದ್ದಾರೆ. ಹೊರಗಿನ ಗೋಪುರ ಮತ್ತು ಛಾವಣಿಯನ್ನೆಲ್ಲಾ ಚೈನೀ ಪಿಂಗಾಣಿಯ ವಿವಿಧಾಕೃತಿಗಳಿಂದ ಸಿಂಗರಿಸಿದ್ದಾರೆ. ಈ ದೇವಾಲಯದ ಪಕ್ಕದಲ್ಲಿ ೧, ೨, ೩ ಮತ್ತು ೪ನೆಯ ಆರಾಮದೊರೆಗಳ ಚಿತಾಭಸ್ಮವನ್ನೊಳಗೊಂಡ ಸ್ತೂಪಗಳಿವೆ. ದೇವಾಲಯದ ಆರಣದ ಮಧ್ಯೆ ಬೋಧಿವೃಕ್ಷವಿದೆ. ದೇವಾಲಯದ ಪ್ರಾಕಾರದ ತುಂಬಾ ೩೯೪ ವಿವಿಧಾಕೃತಿಯ ಬುದ್ಧನ ಮೂರ್ತಿಗಳಿವೆ. ತಪಶ್ಚರ್ಯೆಯಾಗಿರುವ

ಅನೇಕ ಚೈನೀ ಶಿಲ್ಪಗಳಿವೆ. ಮೊತ್ತ ಮೊದಲಿಗೆ ಚೈನಾ ಸಂದರ್ಶಿಸಿದ ಪಾಶ್ಚಾತ್ಯ ಸಾಹಸಿ ಮಾರ್ಕೊಪೋಲೋ ವಿಗ್ರಹವನ್ನು ಚೀನೀಯರು ಸೃಷ್ಟಿಸಿದ್ದಾರೆ. ಬುದ್ಧಮತಕ್ಕೆ ಸಂಬಂಧಿಸಿದ ವಸ್ತುಸಂಗ್ರಹಾಲಯದಂತಿರುವ ಈ ದೇವಾಲಯ ಅಮೂಲ್ಯವಾಗಿದೆ.

ಐದನೆಯ ರಾಮದೊರೆ ಕಟ್ಟಿಸಿದ ಸಂಗಮಾರಮರಿ (ಚಂದ್ರಕಾಂತ) ಶಿಲೆಯ ಬೌದ್ಧಾಲಯ ಅತಿ ನವೀನ ದೇವಾಲಯವಾಗಿದೆ. ಅರಮನೆಗೆ ಅತಿ ಸಮೀಪದಲ್ಲಿ ಇದನ್ನು ನಿರ್ಮಿಸಿದ್ದಾರೆ. ಬೌದ್ಧರಿಗೆ ಇದೊಂದು ಪವಿತ್ರ ಕ್ಷೇತ್ರವಾಗದೆ. ವಿಶೇಷವೆಂದರೆ ಬುದ್ಧದೇವಾಲಯದಲ್ಲಿ ಕೂಡಾ ಗರುಡನೇ ರಕ್ಷಕ ದೇವ. ಅರಸರ ಚಿಹ್ನೆ ಮಾನವಾಕೃತಿಯ ಗರುಡ. ಈ ವಂಶದ ಚಿಹ್ನೆ ಚಕ್ರಾಂತರ್ಗತ ತ್ರಿಶೂಲ. ಶೈವ, ವೈಷ್ಣವ ಮತ್ತು ಬೌದ್ಧ ಧರ್ಮಗಳ ಸಂಗಮ ಈ ಹವಣು. ಈ ದೇವಾಲಯದಲ್ಲಿ ಥಾಯ್‌ಲ್ಯಾಂಡಿನಲ್ಲಿ ದೊರೆತ ವಿವಿಧ ರೀತಿಯ ಬುದ್ಧ ಮೂರ್ತಿಗಳಲ್ಲದೆ ಚೀನೀ, ಲಾವೋಷಿಯನ್, ಇಂಡೋ ಚೈನೀ, ಕೊರಿಯನ್ ಮತ್ತು ಜಪಾನೀಸ್ ಮಾದರಿಯ ಬುದ್ಧನ ಮೂರ್ತಿಗಳಿವೆ. ನಲವತ್ತು ದಿನಗಳವರೆಗೆ ದೇಹ ದಂಡಿಸಿ ತಪಗೈದಾಗ ಬುದ್ಧ ಹೇಗಾಗಿದ್ದ ಎಂಬ ಶಿಲ್ಪ ಹೃದಯವಿದ್ರಾವಕವಾಗಿದೆ.

ಶಿನೇ ರಾಮದೊರೆಯು ಮೊದಲಬಾರಿಗೆ ಪಶ್ಚಿಮ ಪ್ರವಾಸ ಮಾಡಿ ಮರಳಿದ ಮೇಲೆ ಥಾಯ್‌ಲ್ಯಾಂಡಿಗೆ ವಿದ್ಯುಚ್ಛಕ್ತಿ ಮತ್ತು ರೈಲು ಪ್ರವೇಶಿಸಿದವು. ದೊರೆಗಳು ಹಳೆಯ ಸಯಾಮಿ ಉಡುಪನ್ನು ತೊರೆದು ಪಾಶ್ಚಾತ್ಯ ಮಿಲಿಟರಿ ಉಡುಗೆ ಧರಿಸಿದರು. ಇಟಾಲಿಯನ್ ಶೈಲಿಯಲ್ಲಿ ನವೋನವವಾದ ಅರಮನೆ ನಿರ್ಮಾಣವಾಯಿತು. ಆದರೆ ಕಾಲಾಂತರದಲ್ಲಿ ಈ ಅರಮನೆ ಕೂಡಾ ರಾಜಮನೆತನಕ್ಕೆ ಬೇಡವೆನಿಸಿ ಚಿಕ್ಕದಾದ ಯೂರೋಪಿಯನ್ ಸ್ಟೈಲ್ ವಿಲ್ಲಾದಲ್ಲಿ ಅರಸು ಈಗ ವಾಸಿಸುತ್ತಾನೆ. ಬೋಸ್ಟನ್‌ನಲ್ಲಿ ಜನಿಸಿ ಅಲ್ಲಿಯೇ ವಿದ್ಯಾಭ್ಯಾಸ ಮಾಡಿದ ಈ ದೊರೆಗೆ ಸಾಕಷ್ಟು ಆಸ್ತಿ ಪಾಸ್ತಿ ಇದೆ. ಅಲ್ಲದೆ ಸರಕಾರದಿಂದ ತಿಂಗಳಿಗೆ ೨೫೦೦–೦೦ ರೂಪಾಯಿ ಜೀವನಭತ್ಯ ದೊರೆಯುತ್ತದೆ. ಇಟಾಲಿಯನ್ ಶೈಲಿಯ ಭವ್ಯ ಅರಮನೆ ಇಂದು ಅತಿಥಿ ಸತ್ಕಾರಕ್ಕೆ ಮತ್ತು ರಾಜಬೇಟೆಗೆ ಉಪಯೋಗಿಸಲಾಗುತ್ತದಲ್ಲದೆ ಸಾಂಪ್ರದಾಯಿಕ

ಉತ್ಸವ, ಹಬ್ಬ ಹರಿದಿನ ಇಲ್ಲಿಯೇ ನಡೆಯುತ್ತವೆ. ಈ ಅರಮನೆಯ ಪಕ್ಕದಲ್ಲಿಯೇ ಪ್ರತ್ಯೇಕ ರಾಜಾತಿಥಿಗೃಹವಿದೆ. ಈ ಅರಮನೆಯ ಮಹಡನ್ನು ಹೊತ್ತು ನಿಂತ ಸುವರ್ಣ ಗರುಡರು ಅದ್ಭುತವಾಗಿದ್ದಾರೆ. ಚಕ್ರ ತ್ರಿಶೂಲ ಕಣ್ಣಿಗೆ ಕಟ್ಟುವಂತೆ ಚಿತ್ರಿಸಲ್ಪಟ್ಟಿವೆ.

ಅರಮನೆಯ ಮಹಾರದಲ್ಲಿ ರತ್ನಬುದ್ಧ(ಎಮೆರಾಲ್ಡ್ ಬುದ್ಧ)ನ ದೇವಾಲಯವಿದೆ. ಪುರಾಣ ಕಾಲದಲ್ಲಿ ಪಾಟಲೀಪುತ್ರದ ನಾಗಸೇನನೆಂಬ ಭಕ್ತನಿಗೆ ದೇವತೆಗಳು ಈ ರತ್ನಬುದ್ಧನನ್ನು ಅನುಗ್ರಹಿಸಿದರಂತೆ. ಈ ಬುದ್ಧನನ್ನು ಯಾವ ಭಕ್ತನೋ ಲಾವೋಸ್ ದೇಶಕ್ಕೆ ತಂದನು. ಅಲ್ಲಿಂದ ಬಾಂಕಾಕಿಗೆ ಪ್ರಯಾಣ ಬೆಳೆಸಿತು. ಸುಮಾರು ಎರಡೂವರೆ ಅಡಿ ಎತ್ತರದ ಅಖಂಡ ರತ್ನದ ಈ ಬುದ್ಧನಿಗಾಗಿ ಲಾವೋಸ್ ಮತ್ತು ಥಾಯ್‌ಲ್ಯಾಂಡ್ ಎರಡು ಕದನಗಳನ್ನೇ ಮಾಡಿದವಂತೆ. ಕೊನೆಗೆ ಜಯಶಾಲಿಯಾದ ಥಾಯ್‌ಲ್ಯಾಂಡಿನಲ್ಲಿ ಈ ದೇವರು ನೆಲೆಸಿದ್ದಾನೆ. ಅರಮನೆಗೆ ಮಾತ್ರ ಮೀಸಲಾಗಿದ್ದ ಈ ದೇವಾಲಯವನ್ನು ಐದನೆ ರಾಮದೊರೆ ಎಲ್ಲ ಜನರಿಗಾಗಿ ಮೂವತ್ತು ವರ್ಷಗಳ ಕೆಳಗೆ ಮುಕ್ತಮಾಡಿದನಂತೆ. ಋತು ಬದಲಿಸಿದಂತೆ ಋತುಮಾನಕ್ಕೆ ತಕ್ಕಂತೆ. ಬಂಗಾರದ ಉಡುಗೆಯನ್ನು ಭೂಮಿಪಾಲ ರಾಜನೇ ತೊಡಿಸುತ್ತಾನೆ. ಜಯವನ್ನೂ ಯಶಸ್ಸನ್ನೂ ನೀಡುವ ಆಲಯವೆಂದು ಇದು ಪ್ರಸಿದ್ಧವಾಗಿದೆ. ಕಾರ್ಯ, ಪ್ರವಾಸ, ಉದ್ಯಮ ಇತ್ಯಾದಿಗಳಾರಂಭದಲ್ಲಿ ಈ ಬುದ್ಧನಿಗೆ ಮೊರೆಹೋಗುತ್ತಾರೆ. ದೇವಾಲಯದ ಹೊರಗಡೆ ವಿಶೇಷ ಕುಸುರಿನ ಕೆಲಸ ಮಾಡಿದ್ದಾರೆ. ಆಕರ್ಷಕ ಕಿನ್ನರಿಯರೂ ದುಷ್ಟಭಯಂಕರ ಗರುಡರೂ ರಾಕ್ಷಸ ದಮನ ಮಾಡುವ ದ್ವಾರಪಾಲಕರೂ ಆಲಯವನ್ನು ರಕ್ಷಿಸುತ್ತಾರೆ. ಭಗವಾನ್ ಬುದ್ಧನ ಅಮೂಲ್ಯ ಅಸ್ಥಿಯನ್ನೊಳಗೊಂಡ ಬೃಹತ್ ಸುವರ್ಣ ಪಗೋಡ ಇಲ್ಲಿಯೇ ಇದೆ. ಕಾಂಭೋಜದ ಅಂಕರ್‌ವಾಟಿನ ಸುಂದರ ಶಿಲ್ಪ ಪ್ರತಿಕೃತಿ (REPLICA) ಇಲ್ಲಿಯೇ ಇದೆ. ಹೊರಮಹಾರದ ಒಳಗೋಡೆಯ ಮೇಲೆ ರಾಮಾಯಣದ ದಿವ್ಯಕಥೆಯನ್ನು ವಿಸ್ತಾರವಾಗಿ ಚಿತ್ರಿಸಿದ್ದಾರೆ. ಸಾವಿರಾರು ವರ್ಷ ಹಳೆಯದಾದರೂ ಈ ಚಿತ್ರಗಳು ನೂತನ ಮಲ್ಲರಾಗಿದ್ದಾರೆ. ಥಾಯ್ ಶೈಲಿಯ ವರ್ಣಚಿತ್ರಗಳಿಗೆ ಇವು ಶ್ರೇಷ್ಠ ಆಧಾರವೆನಿಸಿವೆ.

ಫಕಾವಾಲಿ ರಂಗಮಂದಿರದಲ್ಲಿ ಥಾಯಿ ನೃತ್ಯ ಕಾರ್ಯಕ್ರಮವಿತ್ತು. ಈ ರಂಗಮಂದಿರದವರು ಪ್ರಪಂಚದಾದ್ಯಂತ ತಿರುಗಿ ಪ್ರದರ್ಶನಗಳನ್ನು ನೀಡಿ ಬಂದಿದ್ದಾರೆ. ಚಿಕ್ಕದಾದ ಏರ್ ಕಂಡೀಷನ್ಡ್ ರಂಗಮಂದಿರ, ದೊಡ್ಡ ವಾದ್ಯಗೋಷ್ಠಿ, ಸಂಪ್ರದಾಯದಂತೆ ಮೊದಲಿಗೆ ರಂಗಪೂಜೆ, ಸುಸ್ವಾಗತ ನಡೆಯಿತು. ಅನಂತರ ಮನೋಹರಿ ಎಂಬ ಕಿನ್ನರಿಯ ಕಥೆ-ಜಾನಪದ ಶೈಲಿಯ ನೃತ್ಯ. ಕಿನ್ನರಿಯಾದ ಮನೋಹರಿ ದುರದೃಷ್ಟವಶಾತ್ ವ್ಯಾಧನ ಕೈಗೆ ಸಿಕ್ಕುತ್ತಾಳೆ. ಅವಳನ್ನು ಕಂಡ ರಾಜಕುವರ ಅವಳನ್ನು ವರಿಸುತ್ತಾನೆ. ಇದು ರಾಜಪುರೋಹಿತರಿಗೆ ಗ್ರಾಹ್ಯವಾಗಲಿಲ್ಲ. ಸಮಯ ಸಾಧಿಸುತ್ತಿದ್ದ ಅವರು ರಾಜಕುವರನು ಯುದ್ಧದಲ್ಲಿ ತೊಡಗಿದಾಗ ರಾಜ್ಯದ ಎಲ್ಲಾ ಅನಿಷ್ಟ ಗಳಿಗೆ ಮನೋಹರಿಯೇ ಕಾರಣ, ಅವಳನ್ನು ಸಜೀವ ದಹಿಸಿದರೆ ರಾಜ್ಯ ದೇವತೆಗೆ ಶಾಂತಿಯಾಗುತ್ತದೆ ಎಂದು ಸಕಲರನ್ನೂ ಒಪ್ಪಿಸುತ್ತಾರೆ. ಸಜೀವ ದಹನಕ್ಕೆ ಮುಂಚೆ ದೇವತೆಗಳನ್ನು ಕುರಿತು ಪ್ರಾರ್ಥನೆಯ ನೃತ್ಯ ಮಾಡಲು ಕಿನ್ನರಿ ಅನುಮತಿ ಬೇಡಿದಳು, ದೈವ ಪ್ರಾರ್ಥನೆಯ ನೃತ್ಯ ಮಾಡುತ್ತಾ ಮಾಡುತ್ತಾ ಮನೋಹರಿ ಕಿನ್ನರ ಲೋಕಕ್ಕೆ ಹಾರಿಹೋಗುವ ಸಂದರ್ಭವೇ ಈ ನೃತ್ಯದ ಅಡಿಪಾಯ. ಏಕಪಾತ್ರನೃತ್ಯವಾದ ಇದನ್ನು ಕಿಶೋರಿಯೋರ್ವಳು ಅಪೂರ್ವವಾಗಿ ಅಭಿನಯಿಸಿದಳು. ಅನಂತರ ಶೂರ್ಪಣಖಾಪ್ರಸಂಗ, ಈ ಪ್ರಸಂಗ ಸಮಕಾಲೀನ ಭಾರತೀಯ ಗೇಯನಾಟಕಕ್ಕೆ ತೀರ ಹತ್ತಿರವಾಗಿತ್ತು.

ಥಾಯಿ ವೀಶೆಷಗಳಾದ ನೆಲ್ಲು ಒಕ್ಕುವ ಕುಣಿತದಲ್ಲಿ ವಿಶೇಷವೆಂದರೆ ನೆಲ್ಲು ಬಡಿವ ಉದ್ದನೆಯ ಕೋಲುಗಳನ್ನೆ ಇಲ್ಲಿ ವಾದ್ಯಕ್ಕೆ ಬಳಸಲಾಗುತ್ತದೆ. ನೆಲದ ಮೇಲೆ ಕುಳಿತು ಕೋಲಿನಿಂದ ಕೋಲಿಗೆ ಬಡಿದು ನೆಲ್ಲು ಬಡಿವಾಗ ಒಂದು ರೀತಿಯ ತಾಳ ಮತ್ತು ಲಯ ತಂತಾನೇ ಉಂಟಾಗುತ್ತದೆ. ಆಗ ರೈತಕನ್ಯೆಯರು ಹೊರೆಗಳನ್ನು ತಂದು ಹಾಕುತ್ತಾ ತುಂಟತನದಿಂದ ಬಡಿಗೆಗಳ ಮಧ್ಯದಲ್ಲಿ ಆಗಾಗ ಕಾಲಿರಿಸುತ್ತಾ, ಚಾಕಚಕ್ಯತೆಯಿಂದ ತಪ್ಪಿಸಿಕೊಳ್ಳುತ್ತಾ ಕುಣಿಯುತ್ತಾರೆ. ಥಾಯಿ ಮೇಳದಲ್ಲಿ ಶಹನಾಯಿಯನ್ನು ಉಪಯೋಗಿಸುತ್ತಾರೆ.

ಕರವಾಳ ನೃತ್ಯವೆಂಬುದು ಯಥಾವತ್ ಕತ್ತಿಯುದ್ಧ. ಶಹನಾಯಿ ಮತ್ತು ಢಕ್ಕೆಯ ಮೇಳದೊಂದಿಗೆ ರಭಸದ ಕತ್ತಿಯುದ್ಧ ಮಾಡುತ್ತಾರೆ.

ಮುಂದೆ ಬಂದ ಮೃದಂಗನೃತ್ಯ ಮತ್ತು ರನಾದ ಎಂಬ ವಾದ್ಯನೃತ್ಯ ಸಾಮಾನ್ಯವಾಗಿತ್ತು. ಥಾಯಿ ಜನರು ಕಾಂಭೋಜರಿಗಿಂತ ಭಾರತೀಯ ಸಂಪ್ರದಾಯಕ್ಕೆ ಹತ್ತಿರ ಹತ್ತಿರ ಬರುತ್ತಾರೆ. ಇವರ ನೃತ್ಯದಲ್ಲಿ ವೇಗ, ಭಾವಸ್ಪಷ್ಟತೆ ಹೆಚ್ಚು. ಇವರ ಸಂಗೀತದಲ್ಲಿ ವೈವಿಧ್ಯ ಮತ್ತು ಧ್ವನಿ ಹೆಚ್ಚು. ಕಾರ್ಯಕ್ರಮದ ಕೊನೆಗೆ ಅರಸರ ಗೀತೆಯನ್ನು ನುಡಿಸುತ್ತಾರೆ.

ಟಿಮ್‌ಲ್ಯಾಂಡ್ (TIMLAND) ಎಂಬುದೊಂದು ಉದ್ಯಾನವನ ಅಲ್ಲಿ ಉತ್ತರ ಥಾಯ್‌ಲ್ಯಾಂಡ್‌ನಲ್ಲಿ ಆನೆಗಳ ಸಹಾಯದಿಂದ ಯಾವ ರೀತಿ ಕಟ್ಟಿಗೆಯ ರವಾನೆ ಮಾಡುತ್ತಾರೆಂಬುದನ್ನು, ಥಾಯಿ ರೈತ ಕೋಣದ ಸಹಾಯ ದಿಂದ ಯಾವ ರೀತಿ ಬೇಸಾಯ ಮಾಡುವನೆಂಬುದನ್ನು, ಹಾವಿನ ಫಾರ್ಮ್‌ಗಳಲ್ಲಿ ಯಾವ ರೀತಿ ಹಾವುಗಳನ್ನು ಸಾಕಿ ವಿಷ ತೆಗೆದು ಉಪಯುಕ್ತ ಕೆಲಸಗಳಿಗೆ ವಿಷವನ್ನು ಉಪಯೋಗಿಸುತ್ತಾರೆಂಬುದನ್ನು ತೋರಿಸುತ್ತಾರೆ. ಥಾಯ್ ಲ್ಯಾಂಡ್‌ದ ಕುಂಬಾರನ ಜೀವನ, ಕೊಟ್ಟಣದ ಅಕ್ಕಿಯ ತಯಾರಿ, ಕೋಳಿ ಪಂದ್ಯ, ಕತ್ತಿವರಸೆ, ಬಾಕ್ಸಿಂಗ್, ದಂಡವರಸೆ ಎಲ್ಲ ನೋಡಬಹುದು. ಪಾಶ್ಚಾತ್ಯ ಪ್ರವಾಸಿಗರಿಗಾಗಿ ಸ್ಥಾಪಿಸಿದ ಕೇಂದ್ರವಿದು.

ಥಾಯಿ ಜನರಿಗೆ ಭಾರತೀಯರ ಮೇಲೆ ಮೇರೆಯಿಲ್ಲದ ಅಕ್ಕರೆ. ಕಮ್ಯು ನಿಸ್ಟರೆಂದರೆ ಅವರಿಗೆ ಆಗದು. ಅಮೇರಿಕೆಯೊಂದಿಗೆ ಸೀಟೋ(SEATO) ಮುಂತಾದ ಸೈನಿಕ ಕೂಟಗಳಲ್ಲಿ ಈ ದೇಶ ಸೇರಿದೆ. ಅಮೇರಿಕೆಯ ಸೈನಿ ಕರು ಹೇರಳವಾಗಿ ಕಾಣಬರುತ್ತಾರೆ. ವಿಯಟ್ನಾಂನಿಂದ ರಜೆಯ ಮೇಲೆ ಬರುವ ಅನೇಕ ಅಮೇರಿಕನ್ ಸೈನಿಕರು ಇಲ್ಲಿ ಯಥೇಚ್ಛ ಖರ್ಚು ಮಾಡು ತ್ತಾರೆ. ಇವರ ವಿಲಾಸೀ ಮನೋಭಾವದಿಂದ ಇಲ್ಲಿಯ ಜೀವನ ಕಲುಷಿತ ವಾಗಿದೆ. ವೇಶ್ಯಾವಾಟಿಕೆಗಳು ಹೆಚ್ಚಿವೆ. ಸಾಯಂಕಾಲ ಸಮಯದಲ್ಲಿ ಹೊರ ಹೊರಟರೆ ನಿಮಗೆ ಹುಡುಗಿ ಬೇಕೇ, ಎಕ್ಸೈಟಿಂಗ್ ಹುಡುಗಿ ಬೇಕೇ ಎಂದು ಫೋಟೋಗಳೊಂದಿಗೆ ಬೆನ್ನು ಹತ್ತುತ್ತಾರೆ, ಟಿಂಲ್ಯಾಂಡ್‌ಗೆ ಬಂದ ಅನೇಕ ಅಮೇರಿಕನ್ನರು, ಥಾಯ್ ಹುಡುಗಿಯರನ್ನು ಬಗಲಿಗಿರಿಸಿಕೊಂಡು ಬಂದಿದ್ದರು. ಸ್ವೋವಿಯಲ್ಲಿ ದೊರೆವುದೆಂದು ಈ ಜನ (ಅಮೇರಿಕನ್) ಕಂಡದ್ದು ಕೊಳ್ಳು ತ್ತಾರೆ. ಕಂಠಮಟ್ಟ ಕುಡಿಯುತ್ತಾರೆ. ಸೂಳೆಗೇರಿಗಳಲ್ಲಿ ತಿರುಗುತ್ತಾರೆ. ಅನೇಕ

ಅಮೇರಿಕನ್ ಸೈನಿಕರ ಮೇಲೆ ಹತ್ಯೆಯ ದೂರುಗಳು ಪೇಪರಿನಲ್ಲಿ ಬರು ತ್ತವೆ. ದೇಶದಲ್ಲಿ ಶ್ರೀಮಂತ ವಿದೇಶೀ ಸೈನಿಕರ ವಾಸ್ತವ್ಯದಿಂದ ಉಂಟಾ ಗುವ ದುಷ್ಪರಿಣಾಮಗಳಿವು. ಆದರೆ ಥಾಯ್‌ಲ್ಯಾಂಡಿಗೆ ಇವರಿಂದ ವಿಶೇಷ ಲಾಭವಿದೆ. ವಿದೇಶೀ ದ್ರವ್ಯ ಸೈನಿಕ ರಕ್ಷೆ ಎಲ್ಲವೂ ದೊರೆಯುತ್ತದೆ,

ಮೂರು ದಿನಗಳ ವಾಸ್ತವ್ಯದ ನಂತರ ಸಂತೃಪ್ತ ಮನಸ್ಸಿನಿಂದ ಬ್ಯಾಂಕಾ ಕ್‌ಗೆ ನಮಸ್ತೆ ಹೇಳಿ ಟ್ರಾನ್ಸ್‌ವರ್ಲ್ಡ್ ಏರ್‌ಲೈನ್ಸ್‌ರವರ ಸಾರಿಗೆಯಲ್ಲಿ ಕೊಲಂಬೋಕ್ಕೆ ಪಯಣಿಸಲು ಸಿದ್ಧನಾದೆ. ಇನ್ನೇನು ನಾಲ್ಕು ದಿನಗಳಲ್ಲಿ ಮರಳಿ ನನ್ನ ನಾಡು ಸೇರುವೆನೆಂಬ ಆತುರ ಹೃದಯವನ್ನು ಹಗಲೂ ರಾತ್ರಿ ಹಿಂಡುತ್ತದೆ. ಮನೆಗೆ ಹತ್ತಿರ ಬಂದಂತೆ ಓಟ ಹೆಚ್ಚಲ್ಲವೆ? ದಾರಿ ಸುಲಭ ವಾಗಿ ಸಾಗುತ್ತದೆ. ಸಮಯ ಹಕ್ಕಿಯಂತೆ ಹಾರುತ್ತದೆ.

೧೪ ಸಿಂಹಳ - ಮುಂಬಯಿ - ಮನೆ

ಸ್ಟ ಜೆಗತ್ತಲಿನ ಉಡ್ಡಾಣದಲ್ಲಿ ಟ್ರಾನ್ಸ್‌ವರ್ಲ್ಡ್ ಏರ್‌ಲೈನ್ಸ್ ಕಂಪೆನಿಯ ವಿಮಾನದಲ್ಲಿ ಬಾಂಕಾಕ್‌ನಿಂದ ಸಿಂಹಳಕ್ಕೆ ಪಯಣಿಸಿದೆ. ನಾವು ಕೊಲಂಬೊ ಏನ ಕಟುನಾಯಕೆ ವಿಮಾನತಾಣವನ್ನು ತಲಪಿದಾಗ ರಾತ್ರಿ ೧೦ ಗಂಟೆಯ ಮೇಲಾಗಿತ್ತು. ಭಾರವಾದ ಕೈಚೀಲ, ಕೆಮೆರಾ ವಗೈರೆ ಹೊತ್ತುಕೊಂಡು ಮೆಲ್ಲಮೆಲ್ಲನೆ ಗೇಟ್ಸ್ ಕಡೆ ನಡೆದೆ. ಹೆಲ್ತ್‌ಚೆಕ್ ಆದಮೇಲೆ ವೀಸಾ ಕಿಟಕಿಗೆ ಹೋದೆವು. ಅನೇಕ ಅಮೆರಿಕನ್, ಕೆನಡಿಯನ್ ಇತ್ಯಾದಿಯರಿಗೆಲ್ಲಾ ಕೆಲಸ ತ್ವರೆಯಿಂದ ನಡೆಯಿತು. ನನ್ನ ಸರತಿ ಬಂತು. ನನ್ನ ಪಾಸ್‌ಪೋರ್ಟ್ ನೋಡಿದ ಆ ಆಫೀಸರ್, ನಾನು ವಿಮಾನತಾಣದಲ್ಲೆ ವೀಸಾ ಕೇಳಿದ್ದನ್ನು ನೋಡಿ ಅಚ್ಚರಿಗೊಂಡು "Indian? A South Indian? You have come without a Visa? Impossible!"

ನನಗೆ ಈಗ ಪೂರ್ಣ ಎಚ್ಚರವಾಯಿತು. ಬೇರೆ ನಾಲ್ಕಾರು ಜನ ಆಫೀಸರುಗಳು ನನ್ನನ್ನು ಬೇರೊಂದು ಕೊಠಡಿಗೆ ಕರೆದೊಯ್ದರು. ಅಲ್ಲಿ ನನಗೆ ಅನೇಕ ರೀತಿಯ ಪ್ರಶ್ನೆಗಳನ್ನು ಹಾಕಲಾಯಿತು. ಬೇರೆ ಬೇರೆ ಅಪ್ಲಿಕೇಶನ್ ತುಂಬಿಸಿಕೊಳ್ಳಲಾಯಿತು. ಆದರೆ ಮೇಲಧಿಕಾರಿಗಳು ನನ್ನನ್ನು

ದೇಶದ ಒಳಗಡೆಗೆ ಬಿಡಲು ಸಾಧ್ಯವಿಲ್ಲ ಎಂದರು. ನನ್ನ ಮನಸ್ಸಿಗೆ ಅತೀವ ನೋವಾಯಿತು. ನೆರೆಯ ಮಿತ್ರ(ದೊಡ್ಡ) ರಾಷ್ಟ್ರದ ಸ್ನೇಹೀ ನಾಗರಿಕ ನೋರ್ವನಿಗೆ ಕನಿಷ್ಠ ೭೨ ಗಂಟೆಗಳ ವೀಸಾ ಕೂಡಾ ನಿರಾಕರಿಸುವಷ್ಟು ನಮ್ಮ ಅವರ ಸಂಬಂಧ ಉತ್ತಮವಾಗಿದೆಯೇ? ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ತಿರುಗಾಡಿ, ಕೊನೆಯ ಹಂತವಾಗಿ ಸಿಂಹಳದಲ್ಲಿ ನಾನೊ ಭಾರತೀಯನೆಂಬ ಕಾರಣದಿಂದ ಈ ರೀತಿ ಆದುದು ತೀರಾ ವಿಡಂಬನೀಯವೆನಿಸಿತು.

ಇಲ್ಲಿ ಕೊಂಚ ವಿವರಣೆ ಆಗತ್ಯವೆನಿಸುತ್ತದೆ. ನಾನು ವಾಂಕೂವರ್ ಬಿಡುವಾಗ ನನ್ನ ಪ್ರಯಾಣದ ವಹಿವಾಟನ್ನು ಅಲ್ಲಿಯ ಮೆಸರ್ಸ್ ಥಾಮಸ್ ಕ ಕ್ ಅಂಡ್ ಸನ್ಸ್ ಅವರು ನೋಡಿಕೊಂಡರು. ಕಾಮನ್‌ವೆಲ್ತ್ ದೇಶದ ಪ್ರಜೆಯಾದ ನನಗೆ ಕಾಮನ್‌ವೆಲ್ತ್ ದೇಶವಾದ ಸಿಂಹಳದಲ್ಲಿ ವಾಸ್ತವ್ಯಕ್ಕೆ ವೀಸಾ ಬೇಕಿಲ್ಲ ಎಂದು ಅವರು ತಿಳಿಸಿದರು. ಅಲ್ಲದೇ ಬಾಂಕಾಕ್‌ನಲ್ಲಿ ಮೂರು ದಿನ ಉಳಿದಾಗ ನಾನು ಟಿ.ಡಬ್ಲ್ಯು.ಎ. ಕಛೇರಿಗೆ ಎರಡು ಬಾರಿ ಹೋಗಿ ಬಂದಿದ್ದೇನೆ, ನನ್ನ ಕಾಗದ ಪತ್ರಗಳನ್ನು ಪರಿಶೀಲಿಸಿದ ಅವರು ನನಗೆ ಸಿಂಹಳ-ಭಾರತ ವಿಶೇಷ ವ್ಯವಸ್ಥೆಯನ್ನು ತಿಳಿಸಬೇಕಿತ್ತು. ಕೊನೆಯ ಪಕ್ಷ ಬೋರ್ಡಿಂಗ್ ಪಾಸ್ (ವಿಮಾನ ಹತ್ತಲು) ಕೊಡುವಾಗಲಾದರೂ ಈ ವಿಷಯ ಗಮನಿಸಿ ತಿಳಿಸಿದ್ದರೆ ನಾನು ಮತ್ತೊಂದು ದಿನ ಬಾಂಕಾಕ್‌ನಲ್ಲಿಯೇ ಉಳಿದು ಅಲ್ಲಿಯೇ ಇದ್ದ ಸಿಂಹಳದ ದೌತ್ಯ ಕಛೇರಿಗೆ ತೆರಳಿ ವೀಸಾ ಪಡೆಯಬಹುದಿತ್ತು. ಈ ವಿಷಯದ ಮೇಲೆ ಟಿ.ಡಬ್ಲ್ಯು ಎ. ಕಛೇರಿಗೆ ಪತ್ರ ವ್ಯವಹಾರ ನಡೆಸಿದರೆ ಬರಿ ಹೊಣೆ ಹಾರಿಸಿಕೊಳ್ಳುವ ಸಮಾಧಾನ ಮಾಡುವ ಮಾತಷ್ಟೇ ದೊರೆತದ್ದು.

ಕಟುನಾಯಕೆ ವಿಮಾನ ಬಂದರಿನಲ್ಲಿ ಕೆಲಸಮಾಡುತ್ತಿದ್ದ ಭಾರತೀಯ ತಮಿಳುಬಂಧುಗಳು ಕೊಂಚ ಸಾಂತ್ವನಪರವಾಗಿಯೇ ಮಾತನಾಡಿ, ಸಾಧ್ಯವಿದ್ದ ಎಲ್ಲ ಪ್ರಯತ್ನ ಮಾಡಿದರು. ನನ್ನ ಪರವಾಗಿ ಟಿ.ಡಬ್ಲ್ಯು.ಎ. ವಿಮಾನದ ಕಪ್ತಾನನು ಸೆಕ್ಯುರಿಟಿ ಬರೆದುಕೊಡಲು ತಯಾರಾದನು. ಆದರೆ ಇಮಿಗ್ರೇಶನ್ ವಿಭಾಗದ ಮುಖ್ಯ ಅಧಿಕಾರಿ, ಗುರುರತ್ನೆ "No, No, No. Put him back on board" ಎಂದಾಗ ಮರುಮಾತಿಲ್ಲದೆ TWA ದವರು ನನ್ನನ್ನು ಮತ್ತೆ ವಿಮಾನಕ್ಕೆ ಕರೆದೊಯ್ದರು. ನಾನು "Where are you

taking me ?" ಎಂದಾಗ ಅವರು "To Bombay, our next stop, We would have taken you to any place, even if it is New York, if there was no stop at Bombay" ಎಂದಾಗ ನನಗೊಂದು ರೀತಿಯ ರೋಮಾಂಚನವೆನಿಸಿತು. ಟಿಕೆಟಿಲ್ಲದೇ ಮುಂಬೈಗೆ ವಿಮಾನಯಾನ, ಸರಿ, ಇದೊಂದು ರೀತಿಯ ಅನುಭವ ಪಕ್ಕದ ಪ್ರಯಾಣಿಕರೆಲ್ಲ ಪ್ರಶ್ನೆ ಕೇಳಿದ್ದೇ ಕೇಳಿದ್ದು: ಲಂಕೆಯ ಕಟು ನೀತಿಯನ್ನು ಬೈದದ್ದೇ ಬೈದದ್ದು. ವಿಮಾನದ ವಿರಾಮಾಸನದಲ್ಲಿ ಒರಗಿ ನನ್ನ ಮನಸ್ಸು ಮದರಾಸಿನ ಕಡೆಗೆ ಓಡಿತು. ಮೂರು ದಿನಗಳಲ್ಲಿ ಮದರಾಸ್ ಸೇರುತ್ತಿದ್ದ ನನ್ನನ್ನು ಸ್ವಾಗತಿಸಲು ನನ್ನ ಹೆಂಡತಿ, ನನ್ನ ತಮ್ಮ ಮದರಾಸ್‌ಗೆ ಈಗಾಗಲೇ ಪಯಣಿಸಿರಬಹುದೆ ? ಅವರಿಗಾಗುವ ನಿರಾಶೆಯ ಅಗಾಧತೆ ಎಷ್ಟಾದೀತು ? ಯೋಚನೆಯ ಮಡಿಲಲ್ಲಿರುವಾಗಲೇ ಸಾಂತಾಕ್ರುಜ್ ಬಂದಿತು. ಜನನೀ ಜನ್ಮಭೂಮಿ ಸ್ವರ್ಗಕಿಂತ ಮೇಲು ಅಲ್ಲವೇ ? ಇಲ್ಲಿ ಸುನಾಯಾಸ ಒಳಗೆ ಹೋಗಬಹುದು. ಏಕೆಂದರೆ ಇದು ನನ್ನ ದೇಶ, ನನ್ನ ಮಾತೃಭೂಮಿ

ರಾತ್ರಿಯ ಮೂರು ಗಂಟೆಯ ಸಮಯಕ್ಕೆ ಮುಂಬಯಿ ಸಾಂತಾಕ್ರುಜ್ ಒಳಗೆ ಬಂದೆವು. ಇಲ್ಲಿ ಸುಂಕದ ಅಧಿಕಾರಿಗಳ ತಪಾಸಣೆ ಒಂದು ದೊಡ್ಡ ತಲೆನೋವು. ನಾನು ತಂದ ಕೆಲ ಸಾಮಾನುಗಳಿಗೆ ಡ್ಯೂಟಿ ಹಾಕಿದರು. ಅಸಿಸ್ಟೆಂಟ್ ಕಲೆಕ್ಟರ್ ಕಡೆಗೆ ನಾನು ಮಾಡಿದ ಅಪೀಲು ಉಪಯೋಗಕ್ಕೆ ಬರಲಿಲ್ಲ. ಅವರು ಕೇಳಿದಷ್ಟು ಸುಂಕ ತೆತ್ತೆ. ಈ ಸಂಕದ ಅಧಿಕಾರಿಗಳ ವರ್ತನೆ ಮಾತ್ರ ಅತಿ ಒರಟು. ಯಾವ ಪ್ರಶ್ನೆಗೂ ಸರಿಯಾಗಿ ಉತ್ತರ ಸಿಗುವುದಿಲ್ಲ. ವಿಮಾನ ತಾಣದ ಲೌಂಜಿಗೆ ಬಂದವನೇ ಊರಿಗೆ ಫೋನು ಮಾಡಿದೆ. ನನ್ನ ತಮ್ಮ ಮತ್ತು ನನ್ನ ಹೆಂಡತಿ ಮದ್ರಾಸಿಗೆ ಒಂದು ದಿನ ಮುಂಚೆಯೇ ಪಯಣ ಬೆಳೆಸಿದ ವಿಷಯ ತಿಳಿಯಿತು. ವಿಧಿಯಿಲ್ಲ. ಅವರಿಗೆ ನಿರೀಕ್ಷೆ, ನಿರಾಶೆ ಕಟ್ಟಿಟ್ಟದ್ದು. ಮುಂಬಯಿಯಲ್ಲಿ ಬಂಧುಗಳಾದ ಶ್ರೀ ದೀಪಾಲಿ ಅವರಲ್ಲಿ ಒಂದು ದಿನ ಉಳಿದು ಅನಂತರ ಬೆಳಗಾವಿಗೆ ವಿಮಾನದಲ್ಲಿ ತೆರಳಿ ಆಗಸ್ಟ ೨೬, ೧೯೬೯ ಹೊಸಪೇಟೆ ಸೇರಿದೆ. ಆಗಸ್ಟ ೨೮, ೧೯೬೯ ರಂದು ಮದ್ರಾಸಿನಿಂದ ವಾಪಸಾದವರನ್ನು ನಾನೇ ಹೊಸಪೇಟೆ ರೈಲುತಾಣದಲ್ಲಿ ಎದುರ್ಗೊಂಡೆ.

ಸುಮಾರು ತೊಂಬತ್ತು ದಿನಗಳ ಪರ್ಯಂತ ಭೂಮಿಯ ಒಂದು ಪ್ರದಕ್ಷಿಣೆ ಮಾಡಿಬಂದ ನನ್ನ ಮನಸ್ಸು ಅನುಭವ ಭಾರದಿಂದ ಬೀಗಿತ್ತು. ತಾಯಿ ವಸುಂಧರೆ ಒಂದೊಂದು ಕಡೆ ಒಂದೊಂದು ರೂಪು ತೋರಿದ್ದಾಳೆ. ಆದರೆ ಆಕೆಯ ಅಮಲ ಅಂತಃಕರಣ ಎಲ್ಲೆಡೆ ಅನಂತವಾಗಿ ಹೊರಹೊಮ್ಮಿದೆ. ಆ ಸಾಗರಗಳು, ಆ ಪರ್ವತ ಶ್ರೇಣಿಗಳು, ಆ ವನಾಂತರಗಳು, ಆ ಮಾನವ ಜನಾಂಗಗಳು ಒಂದೊಂದನ್ನೇ ನೆನೆದಾಗ ಮನಸ್ಸು ಭಾವ ಉಕ್ಕುತ್ತದೆ. ಅಂತೆಯೇ ದ್ರಷ್ಟಾರರು "ಬಹುರತ್ನಾ ವಸುಂಧರಾ ಬಹುರೂಪಾ ವಸುಂಧರಾ! ಎಂದು ಕರೆದರು.

ಹಿನ್ನುಡಿ

ನನ್ನ ಈ ಪ್ರಪಂಚ ಪ್ರವಾಸದ ಹಿನ್ನೆಲೆಯಲ್ಲಿ ಭಾರತೀಯರಿಗೆ ಬರುವ ಕೆಲ ತೊಂದರೆಗಳನ್ನು ಗಮನದಲ್ಲಿಟ್ಟುಕೊಂಡು ಕೆಲ ವಿಷಯಗಳನ್ನು ಮುಂದಿನ ಜಗತ್ಪ್ರವಾಸಿಗಳ ಅನುಕೂಲಕ್ಕೆಂದು ಬರೆಯುತ್ತಿದ್ದೇನೆ.

೧. ನಾವು ತಟಸ್ಥ ದೇಶಸ್ಥರಾದ ಕಾರಣ ನಮಗೆ ಜಗತ್ತಿನಲ್ಲಿ ನಿಜ ನುಡಿಯಬೇಕೆಂದರೆ ಸ್ನೇಹಿತರು ಕಡಿಮೆ ಬಡರಾಷ್ಟ್ರವಾದ ಕಾರಣ ಇಂದಿಲ್ಲ ನಾಳೆ ಈ ತಟಸ್ಥತೆ ಕಮ್ಯುನಿಸಂ ಕಡೆಗೆಯೇ ವಾಲುತ್ತದೆ ಎಂದು ಅನೇಕರ ಖಚಿತ ಅಭಿಪ್ರಾಯ, ತತ್ಪರಿಣಾಮವಾಗಿ ಅನೇಕ ದೇಶಗಳ ಪ್ರವೇಶಕ್ಕೆ ಮುಂಚೆಯೇ ಆಯಾ ದೇಶಗಳ ವೀಸಾ ಬೇಕು. ಸರಕಾರದ ಪ್ರವಾಸೀ ಕಛೇರಿಗಳು ಈ ವಿಷಯದ ಕುರಿತು ಅಜ್ಞಾನದಿಂದ ತುಂಬಿವೆ. ಏರ್ ಇಂಡಿಯಾ ಸಂಸ್ಥೆಯೇ ಸಹಾಯ ಮಾಡಬೇಕು.

೨. ಪಾಶ್ಚಾತ್ಯ ದೇಶಗಳಲ್ಲಿಯಂತೆ ಪ್ರವಾಸಿಗರ ಸಕಲ ಅನುಕೂಲಕ್ಕೆಂದು ಅತ್ಯುತ್ಕೃಷ್ಟ ಹೋಟೆಲ್‌ಗಳ ಜಾಲವನ್ನು ನಮ್ಮಲ್ಲಿ ನಿರ್ಮಿಸಬೇಕು. ಈ ಹೋಟೆಲ್‌ಗಳಲ್ಲಿ ವಿದೇಶೀ ಪ್ರವಾಸಿಗಳಿಗೆ ಎಲ್ಲ ಅನುಕೂಲಗಳೂ ದೊರೆಯಬೇಕು. ಆಯಾ ನಗರ, ರಾಜ್ಯಗಳ ಪ್ರೇಕ್ಷಣೀಯ ಸ್ಥಳಗಳ ಸಂದರ್ಶನ ಸುಲಭವೂ ಸುಖಮಯವೂ ಆಗಬೇಕು. ನಮ್ಮಲ್ಲಿಂದ ಹೊರಡುವ ಪ್ರವಾಸಿಗರು ಹೋಟೆಲ್ ವಗೈರಾ ಏರ್ಪಾಡು ಮಾಡಿಕೊಂಡೇ ಹೋಗಬೇಕು.

೩. ಪ್ರಪಂಚದ ಎಲ್ಲಾ ಭಾಗಗಳಲ್ಲಿ ಭಾರತೀಯ ಕಲಾವಸ್ತುಗಳಿಗೆ ಬೇಡಿಕೆ ಇರುವುದು ಕಾಣುತ್ತದೆ. ಈ ಅವಕಾಶವನ್ನು ಉಪಯೋಗಿಸಿಕೊಂಡು ಸರಕಾರವು ಎಲ್ಲಾ ದೇಶಗಳಲ್ಲಿ ನಮ್ಮ ಮಳಿಗೆಗಳನ್ನು ತೆರೆಯಬೇಕು. ಇಂತಹ ಮಳಿಗೆಗಳಲ್ಲಿ ಎಲ್ಲಾ ರೀತಿಯ ಭಾರತೀಯ ಕಲಾವಸ್ತುಗಳೂ ಅಲ್ಲದೆ–ಕೈಮಗ್ಗದ ಬಟ್ಟೆಗಳೂ, ರೇಶ್ಮೆಯ ವಸ್ತ್ರಗಳೂ ಇತ್ಯಾದಿ ಇತ್ಯಾದಿ ಎಲ್ಲಾ ಭಾರತೀಯ ವಸ್ತುಗಳೂ ದೊರೆಯಬೇಕು. ಇಂತಹ ಮಳಿಗೆಗಳಲ್ಲಿ ಭಾರತೀಯ ಮಾದರಿಯ ತಿಂಡಿ ಊಟ ದೊರೆಯುವಂತಾಗಬೇಕು.

೪. ಪ್ರವಾಸಿಗರ ಅನುಕೂಲಕ್ಕೆಂದು ಅಮೇರಿಕನ್ ಎಕ್ಸ್‌ಪ್ರೆಸ್ ಅಥವಾ ಡೈನರ್ಸ್ ಕ್ಲಬ್ ಮಾದರಿಯ ಸಂಸ್ಥೆಗಳನ್ನು ಪ್ರಾರಂಭಿಸಬೇಕು. ಇದರಿಂದ ನಗದು ಹಣ ತೆಗೆದುಕೊಂಡು ಹೋಗುವ ಕಷ್ಟವು ತಪ್ಪುತ್ತದೆ. ಪ್ರವಾಸಕ್ಕೆ ಒಮ್ಮೆಗೇ ಹಣ ಜೋಡಿಸಬೇಕೆಂಬ ತಾಪತ್ರಯವೂ ತಪ್ಪುತ್ತದೆ. ಪ್ರತಿಯೊಂದು ಪ್ರೇಕ್ಷಣೀಯ ಸ್ಥಳದಲ್ಲಿ ಸಾಕಷ್ಟು ಫೋಟೋಗಳೂ ಸ್ಲೈಡ್‌ಗಳೂ ಪುಸ್ತಕಗಳೂ ಮಾರಾಟಕ್ಕೆ ದೊರೆಯಬೇಕು. ಇಂಗ್ಲಿಷ್ ಬಲ್ಲ ಮಾರ್ಗದರ್ಶಿಗಳು ಬೇಕು.

೫. ವಿಶ್ವದಾದ್ಯಂತ ಇರುವ ವ್ಯಾಪಾರೀ ಮತ್ತು ರಾಜಕೀಯ ದೂತಾವಾಸಗಳು ನಮಗೆ ಬೇಕಾದ ಮತ್ತು ವಿದೇಶೀ ಪ್ರವಾಸಿಗಳಿಗೆ ಬೇಕಾದ ಮಾಹಿತಿಯನ್ನು ನೀಡಲು ಸಮರ್ಥವಾಗಬೇಕು.

ಅನೇಕ ವಿಷಯಗಳನ್ನು ನಾವು ಬೇರೆಬೇರೆ ಜನಾಂಗಗಳಿಂದ ಕಲಿತು ಅಳವಡಿಸಿಕೊಳ್ಳಬೇಕು. ಅಲ್ಲದೆ ನಮ್ಮತನದಲ್ಲಿರುವ ಒಳಿತನ್ನು ಗಾಂಭೀರ್ಯದಿಂದ ತೋರ್ಪಡಿಸಬೇಕು. ರಾಷ್ಟ್ರೀಯ ಪ್ರಜ್ಞೆ, ಮತ್ತು ಅಭಿಮಾನಗಳುಳ್ಳ ಜನ, ದೂತಾವಾಸಗಳಿಗೆ ನೇಮಿಸಲ್ಪಡಬೇಕು. ಸಂಪದ್ಭರಿತ ಭವ್ಯ ಭಾರತದ ನಿಜರೂಪವನ್ನು ತೋರಿಸಲು ನಾವು ಸಮರ್ಥರಾದಾಗ ಮಾತ್ರ ಜಗತ್ತು ನಮಗೆ ಗೌರವ ನೀಡುತ್ತದೆ. ಗೌರವವೇ ರಾಷ್ಟ್ರದ ಬದುಕು.